ಶೀ:- ಗಾಜಿನ ಮನೆ



ಲೇ:- ಅ. ನ. ಕೃಷ್ಣರಾಯರು



1955

1955

ಅಶೋಕ ಸಾಹಿತ್ಯ ಪ್ರಕಾಶಕರು

ಬೆಂಗಳೂರು

# ಗಾಜಿನಮನೆ

ಅ. ನ. ಕೃ




ಅಶೋಕ ಸಾಹಿತ್ಯ-ಪ್ರಕಾಶಕರು-ಬೆಂಗಳೂರು

# ಮುನ್ನುಡಿ

**‘ಸಾಹಿತ್ಯರತ್ನ’** ಕಾದಂಬರಿ ೧೯೪೩ ರಲ್ಲಿ ನಾನು ಪ್ರಕಟಿಸಿದ ಮೇಲೆ ಅದರ ಉತ್ತರಾರ್ಧವಾಗಿ **‘ಗಾಜಿನಮನೆ’** ಪ್ರಕಟಿಸಬೇಕೆಂದು ಸಂಕಲ್ಪ ಮಾಡಿದೆ. ೧೯೫೩ ರಲ್ಲಿ ಅರ್ಧ ಅಚ್ಚಾದ ‘ಗಾಜಿನಮನೆ’ ಕಾರಣಾಂತರಗಳಿಂದ ಅಪೂರ್ಣವಾಗಿ ಉಳಿಯಿತು. ಅದರ ಮುಂದಿನ ಭಾಗ **‘ಕನ್ನಡಮ್ಮನ ಗುಡಿಯಲ್ಲಿ’** ೧೯೫೪ ರಲ್ಲಿ ಪ್ರಕಟವಾಯಿತು. ಅಪೂರ್ಣವಾಗಿ ಉಳಿದಿದ್ದ **‘ಗಾಜಿನಮನೆ’** ಪೂರ್ಣವಾಗಿ ಈಗ ಪ್ರಕಟವಾಗುತ್ತಿರುವುದು ನನಗೆ ಸಂತೋಷ ವನ್ನುಂಟು ಮಾಡಿದೆ.

ಗುರಿಬದ್ಧವಾದ ಜೀವನದ ಎದುರು ಬರುವ ಸಮಸ್ಯೆಗಳು, ಅಡ್ಡಿ ಆತಂಕ ಗಳನ್ನು ಒಬ್ಬ ಸಾಹಿತಿ ಹೇಗೆ ಎದುರಿಸಿದ ಎನ್ನುವುದೇ ಈ ಕಾದಂಬರಿ ಮಾಲೆಯ ವಸ್ತು. **‘ಸಾಹಿತ್ಯರತ್ನ’**ದಲ್ಲಿ ಸಾಹಿತಿಯ ಜನನವನ್ನು ಚಿತ್ರಿ ಸಿದ್ದೇನೆ; **‘ಗಾಜಿನಮನೆ’**ಯಲ್ಲಿ ಅವನು ಪತ್ರಿಕೋದ್ಯಮಿಯಾದುದನ್ನು ಚಿತ್ರಿಸಿದ್ದೇನೆ; **‘ಕನ್ನಡಮ್ಮನ ಗುಡಿಯಲ್ಲಿ’** ಅವನ ಸಾಹಿತ್ಯ ಜೀವನದ ಏರು ಪೇರುಗಳನ್ನು ವಿವರಿಸಿದ್ದೇನೆ. ಕೊನೆಯ ಭಾಗವಾದ **‘ದೀಪಾರಾಧನೆ’**ಯಲ್ಲಿ ಮೂರು ಭಾಗಗಳ ಕಥೆಯನ್ನು ಸಮಾರೋಪಗೊಳಿಸುತ್ತೇನೆ.

ಸಮಕಾಲಿನ ಸಾಹಿತ್ಯ, ಪತ್ರಿಕೋದ್ಯಮಗಳ ಸ್ಥಿತಿಗತಿಗಳನ್ನರಿಯಲು ಈ ನಾಲ್ಕು ಗ್ರಂಥಗಳು ಸಹಾಯವಾಗುವುದೆಂಬ ಭರವಸೆ ನನಗಿದೆ.

**‘ಗಾಜಿನಮನೆ’**ಯಲ್ಲಿ ನಾನು ತಂದಿರುವ ವ್ಯಕ್ತಿಗಳು ನಿಜಜೀವನದ ಅನುರಣನವೇ ವಿನಾ ಅನುಕರಣವಲ್ಲ. ಪತ್ರಿಕಾ ಪ್ರಪಂಚದ ಆಗುಹೋಗು ಗಳು, ಪತ್ರಿಕೋದ್ಯಮದ ಮೇಲೆ ಬೀಳುತ್ತಿರುವ ಬಗೆಬಗೆಯ ಪ್ರಭಾವಗಳನ್ನು ಚಿತ್ರಿಸುವುದಷ್ಟೇ ನನ್ನ ಉದ್ದೇಶ.

ಕನ್ನಡ ಪತ್ರಿಕೋದ್ಯಮ ಉನ್ನತ .ಮಟ್ಟದಲ್ಲಿದ್ದು ದೇಶದ ಪ್ರಗತಿಗೆ ನೆರ ವಾಗಬೇಕೆಂದು ಈ ಲೇಖಕನೂ ಬಯಸುತ್ತಾನೆ. ಪತ್ರಿಕೋದ್ಯಮದ ಬಗ್ಗೆ ಲೇಖಕನಿಗಿರುವ ಸೌಹಾರ್ದ ಭಾವನೆಯಿಂದಲೇ ಅದರ ಓರೆಕೋರೆಗಳನ್ನು ನಿರ್ದೇಶಿಸಿ, ಅವುಗಳ ಸುಧಾರಣೆಯ ಹಾದಿಯನ್ನೂ ಸೂಚಿಸಿದ್ದಾನೆ.

**‘ಗಾಜಿನಮನೆ’**ಯನ್ನು ಬೆಳಕಿಗೆ ತಂದ ಅಶೋಕ ಸಾಹಿತ್ಯ ಪ್ರಕಾಶಕ ರಿಗೆ ನನ್ನ ನೆನಕೆ ಸಲ್ಲುತ್ತದೆ.

ಬೆಂಗಳೂರು
೨೪-೪-೧೯೫೫

**ಅ. ನ. ಕೃ**

K. Srinivasa Rao
Hospet

# ಗಾಜಿನಮನೆ

# ಗಾಜಿನ ಮನೆ

## ೧

ಮುಂಬಯಿ ವಾಸ ಕಾಲಕ್ರಮೇಣ ಮನೆಯಲ್ಲಿ ಎಲ್ಲರಿಗೂ ಮೈಗಂಟುತ್ತ ಬಂದಿತ್ತು. ಪ್ರಸಾದ್, ಲಲಿತಮ್ಮ ಇಬ್ಬರಿಗೂ ಮುಂಬಯಿಯ ಜೀವನ, ವಾತಾವರಣ ಒಗ್ಗಿತ್ತು. ಆದರೆ ಗೌರಮ್ಮನವರಿಗೆ ಮಾತ್ರ ಕೆಲವು ದಿನ ದಿಗ್ಭ್ರಮೆಯಾಯಿತು. ಗನ್‌ಬೋ ಬೀದಿಯ ಮನೆಯ ಮೇಲಟ್ಟದಿಂದ ಕೆಳಗೆ ನೋಡಿದರೆ ಇರುವೆ ಸಾಲಿನಂತೆ ಕಾಣುತ್ತಿದ್ದ ಜನಸಂದಣಿ. ಕ್ಷಣ ವಿರಾಮವಿಲ್ಲದೆ ಓಡಿಯಾಡುತ್ತಿದ್ದ ಕಾರುಗಳು, ಬಸ್ಸುಗಳು, ಟ್ರಾಮುಗಳು—ಅವುಗಳ ಭಯಂಕರ ಶಬ್ದ.

ಶಬ್ದ ! ಎಲ್ಲಿ ನೋಡಿದರೂ ಶಬ್ದ !

ಜನ ! ಎಲ್ಲಿ ನೋಡಿದರೂ ಜನ !

ಯಾರಿಗೂ ಪುರಸತ್ತಿಲ್ಲ – ಯಾರಿಗೂ ವಿಶ್ರಾಂತಿಯಿಲ್ಲ !

ಇಷ್ಟೆಲ್ಲ ಆತುರ - ವೇಗ - ಯಾಂತ್ರಿಕ ಚಲನವಲನವೇತಕ್ಕೆ ? ಹೊಟ್ಟೆ ತುಂಬುವುದಕ್ಕಲ್ಲವೇ ?

ಮನುಷ್ಯ ಬದುಕಬೇಕಾದರೆ ಪ್ರತಿಕ್ಷಣವೂ ಸಾವನ್ನೆದುರಿಸುತ್ತಿರಲೇ ಬೇಕು. ಬೆಳಿಗ್ಗೆ ಮನೆಬಿಟ್ಟು ಹೋದ ಮನೆಯ ಯಜಮಾನ, ಸಂಜೆಗೆ ಮನೆಗೆ ಹಿಂದಿರುಗಿ ಬಂದಾನೆಂಬ ಧೈರ್ಯವಿಲ್ಲ.

ಮಂತ್ರಮುಗ್ಧಳಂತೆ ಕುಳಿತಿರುತಿದ್ದ ತಾಯಿಯನ್ನು ಕಂಡು ಲಲಿತಾ ಪರಿಹಾಸ್ಯಮಾಡುತ್ತಿದ್ದಳು. 'ನೀನು ಶುದ್ಧ ಹಳೆಯ ಕಾಲದ ಗೊಡ್ಡು ಕಣಮ್ಮ' ಎನ್ನುತ್ತಿದ್ದಳು. ಗೌರಮ್ಮನವರು ಮಗಳ ಮಾತಿಗೆ ಪ್ರತಿಹೇಳುತ್ತಿರಲಿಲ್ಲ. ತಲೆಯಲ್ಲಾಡಿಸುತ್ತಾ 'ಏನು ಬೊಂಬಾಯಮ್ಮ ಇದು - ಮನುಷ್ಯ ಮಾತ್ರದವರು ಇಲ್ಲಿರಲು ಸಾಧ್ಯವಿಲ್ಲ.'

"ಇಲ್ಲಿರುವ ಇಷ್ಟುಮಂದಿ ಯಾವ ಗಣಕ್ಕೆ ಸೇರಿದವರು ?"

"ದೇವಗಣ - ಇಲ್ಲವೆ ರಾಕ್ಷಸಗಣಕ್ಕೆ ಸೇರಿರಬೇಕು."

"ಬೊಂಬಾಯಿಗೆ ಏಕೆ ಬಂದೆ ಎನ್ನಿಸುತ್ತಿದೆಯಲ್ಲವೇ ?"

"ಖಂಡಿತವಾಗಿ. ಆದರೆ ನಿನ್ನ ಬಿಟ್ಟು ಎಷ್ಟು ದಿನ ಒಬ್ಬಳೇ ದೂರ ಇರಲಿ ?"

"ನನಗೂ ನಿನ್ನನ್ನು ಬಿಟ್ಟಿರುವುದು ಕಷ್ಟವಾಗಿತ್ತಮ್ಮ."

"ಬೊಂಬಾಯಿವಾಸವೇ ನಮಗೆ ಗಟ್ಟಿಯೇನು ?"

"ಹಾಗೇನಿಲ್ಲ - ಬೆಂಗಳೂರಿಗೇ ಹಿಂದಿರುಗಬೇಕೆಂಬ ಪ್ರಬಲ ಆಕಾಂಕ್ಷೆ ಅವರ ಮನಸ್ಸಿನಲ್ಲಿದೆ. ಆದರೆ..........."

"ಆದರೆ..........."

"ಪ್ರಾಯಶಃ ಹಿಂದೆ ನಡೆದ ಘಟನಾವಳಿಗಳನ್ನು ಜ್ಞಾಪಿಸಿಕೊಂಡು ಮನಸ್ಸು ಒಲ್ಲೆಯೆನ್ನುತ್ತದೆ."

"ಅವರಿಗಿಂತ ಹೆಚ್ಚಾಗಿ ನಿನಗೇ ಬೆಂಗಳೂರಿಗೆ ಹೋಗಲು ಇಷ್ಟವಿಲ್ಲ!"

"ನಿಜ. ಆದರೆ ಅವರಿಗಾಗಿ ಬೆಂಗಳೂರಿಗೆ ಹಿಂದಿರುಗಲು ಕಾತರಳಾಗಿದ್ದೇನೆ."

"ಅವರಿಗಾಗಿಯೆಂದರೆ !"

"ಇಲ್ಲಿ ಬರೀ ದುಡಿದು ದುಡಿದು ಬೆಂಡಾಗುವುದೊಂದೇ ಲಾಭ. ಯಾವ ಕೆಲಸಕ್ಕೆ ಅವರ ಜೀವ ಮುಡಿಪಾಗಿದೆಯೋ ಅದು ತಟಸ್ಥವಾಗಿದೆ. ಈ ಪತ್ರಿಕೆ ಅವರ ಭಾಗಕ್ಕೆ 'ಕಾಲರಾಕ್ಷಸ'ನಾಗಿದೆ."

"ಏನೋಮ್ಮ - ನಮ್ಮ ದೇಶಕ್ಕೆ ನಾವು ಹೋಗಿರುವುದೇ ಒಳ್ಳೆಯದು" ಎಂದು ಹೇಳಿದರು.

ಈ ಬೇಸರ, ಭಯ ವರ್ಷ ಕಳೆಯುವುದರೊಳಗಾಗಿ ವ್ಯತ್ಯಾಸಹೊಂದಿತು. 'ಸೆಂಚುರಿ' ಪತ್ರಿಕೆಯ ಸ್ಥಿತಿ ಯಥಾಸ್ಥಿತಿಯಾಗಿತ್ತು. ಪ್ರಸಾದನ ದುಡಿಮೆಗೂ ವಿರಾಮ ಸಿಕ್ಕಿರಲಿಲ್ಲ. ಆದರೆ ಗೌರಮ್ಮನವರು ಹರಕು ಮುರುಕು ಮರಾಟಿ, ಗುಜರಾತಿ ಮಾತನಾಡುವುದನ್ನು ಕಲಿತುಕೊಂಡು ನೆರೆಹೊರೆಯವರಲ್ಲಿ ಬಳಕೆ ಬೆಳಸಿಕೊಂಡರು. ಪಕ್ಕದ ಮನೆಯ ಮಂಗೂಭಾಯ್ ತಾಯಿಗೂ ಗೌರಮ್ಮನವರಿಗೂ ಸ್ನೇಹ ಬೆಳೆಯಿತು.

ಮಂಗೂಭಾಯ್‌ಗೆ ಕಾಲ್ಬಾದೇವಿಯಲ್ಲಿ ದಳ್ಳಾಳಿ ಅಂಗಡಿಯಿತ್ತು. ಬೆಳಿಗ್ಗೆ ಎದ್ದವನೇ ಚಹಾ ಕುಡಿದು, ಸ್ನಾನಮಾಡಿ, ರೋಟಿ ಭಾಜಿ ತಿಂದು ಅವನು ಅಂಗಡಿಗೆ ಹೋಗಿಬಿಟ್ಟರೆ ಹಿಂದಿರುಗುತ್ತಿದ್ದುದು ರಾತ್ರಿ ಹನ್ನೆರಡು ಅಥವಾ ಒಂದು ಗಂಟೆಗೆ. ಬೆಳಿಗ್ಗೆ ಒಂಭತ್ತು ಗಂಟೆಯಿಂದ ರಾತ್ರಿ ಹನ್ನೆರಡು ಗಂಟೆಯವರೆಗೆ ಹೊತ್ತುಗಳೆಯುವುದೇ ಭದ್ರಾಬೆನ್‌ಗೂ ಅವರ ಸೊಸೆ ನಿರ್ಮಲಾದೇವಿಗೂ ಸಮಸ್ಯೆಯಾಗಿತ್ತು. ಗೌರಮ್ಮನವರ ಗೆಳೆತನ ಸಮಸ್ಯೆಯನ್ನು ತಕ್ಕಮಟ್ಟಿಗೆ ಪರಿಹರಿಸಿತು. ಮಗ ಅಂಗಡಿಗೆ ಹೋದ ಕೂಡಲೆ ಭದ್ರಾಬೆನ್ ಗೌರಮ್ಮನವರ ಮನೆಗೆ ಬಂದು ಕೂಡುತ್ತಿದ್ದಳು. ಒಂದೊಂದು ದಿನ ಗೌರಮ್ಮನವರನ್ನು ತನ್ನ ಮನೆಗೇ ಕರೆದುಕೊಂಡು ಹೋಗಿ ಕೂರಿಸಿಕೊಳ್ಳುತ್ತಿದ್ದಳು.

ತಮ್ಮ ಲಾಲ ಮಂಗೂ ವಿಷಯ ಎಷ್ಟು ಹೇಳಿದರೂ ಭದ್ರಾಬೆನ್‌ಗೆ ತೃಪ್ತಿಯಿಲ್ಲ. ಮಂಗೂ ಸಂಪಾದನೆ ವಿಷಯ ದಿನಕ್ಕೆ ನಾಲ್ಕಾರು ಸಲವಾದರೂ ಹೇಳಲೇಬೇಕು. ಒಬ್ಬ ತಾಯಿ ಇನ್ನೊಬ್ಬ ತಾಯಿಯ ಅಕ್ಕರೆಯ ಮಾತುಗಳನ್ನೂ ಬೇಸರವಾದರೂ ಕೇಳಿಕೊಳ್ಳುತ್ತಿದ್ದಳು.

ಉದ್ದಕ್ಕೂ ಗುಜರಾತಿಯಲ್ಲಿ ಮಾತನಾಡಬೇಕು – ಗೌರಮ್ಮನವರು ತಡೆತಡೆದು ಮಾತುಗಳನ್ನು ಜೋಡಿಸಿಕೊಂಡು ಒಂದು ಪ್ರಶ್ನೆಕೇಳಬೇಕು. ಅದಕ್ಕೆ ಭದ್ರಾಬೆನ್ ದೀರ್ಘವಾದ ಉತ್ತರಕೊಡಬೇಕು. ಭಾಷೆಯ ಬಂಧನದಿಂದ ಗೌರಮ್ಮನವರು ಮಾತುಗಾರಿಕೆಯನ್ನೆಲ್ಲಾ ಭದ್ರಾಬೆನ್‌ಗೆ ಒಪ್ಪಿಸಿದ್ದಾಗಿತ್ತು.

ಒಂದು ದಿನ ಗೌರಮ್ಮನವರು ಕನ್ನಡದಲ್ಲಿ ಯೋಚಿಸಿಕೊಂಡು, ಶಬ್ದಗಳನ್ನು ಗುಜರಾತಿಗೆ ಅನುವಾದಮಾಡಿಕೊಂಡು ಕೇಳಿದರು

"ನಿಮ್ಮ ಮಗ ಪ್ರತಿದಿನವೂ ಹನ್ನೆರಡು, ಒಂದು ಗಂಟೆಗೆ ಬರುತ್ತಾರೆಯೇ ?"

"ಹೂ"

"ಅಷ್ಟುಹೊತ್ತಿನಲ್ಲಿ ಒಬ್ಬರೇ ಹೇಗೆ ಬರುತ್ತಾರೆ."

"ಒಬ್ಬನೇ ಬರುವುದಿಲ್ಲ. ಸ್ನೇಹಿತರು ಕಾರಿನಲ್ಲಿ ಕರೆದುಕೊಂಡು ಬಂದು ಬಿಡುತ್ತಾರೆ."

"ರಾತ್ರಿ ಹನ್ನೆರಡರವರೆಗೂ ಅದೇನಮ್ಮ ಕೆಲಸ."

"ಅಂಗಡಿ ಎಂಟುಗಂಟೆಗೇ ಹಾಕಿಬಿಡುತ್ತಾನೆ. ಅಲ್ಲಿಂದ ನೇರವಾಗಿ ಸಟ್ಟಾ ಮಾರ್ಕೆಟ್ಟಿಗೆ ಹೋಗುತ್ತಾನೆ. ಅಲ್ಲಿನ ಕೆಲಸ ಮುಗಿಸಿಕೊಂಡು ಬರಬೇಕಾದರೆ ಮಧ್ಯರಾತ್ರಿಯಾಗುತ್ತದೆ."

"ಸಟ್ಟಾ ಎಂದರೇನು ?"

ಅರ್ಧಗಂಟೆಯ ಕಾಲ ಪೂರ್ಣ ವಿರಾಮ, ಅರ್ಧ ವಿರಾಮ ಒಂದನ್ನೂ ಲಕ್ಷಿಸದೆ ಭದ್ರಾಬೆನ್ ಸಟ್ಟಾ ವಿಷಯ ವರ್ಣಿಸಿದಳು. ಗೌರಮ್ಮನವರಿಗೆ ಆಕೆ ಯಾಡಿದ ಮಾತಿನ ಒಂದು ಶಬ್ದವೂ ಅರ್ಥವಾಗಲಿಲ್ಲ. ಅರ್ಥವಾಗಲಿಲ್ಲ ವೆಂದರೆ ಪುನಃ ಎಲ್ಲಿ ಭಾಷಣ ಆರಂಭವಾಗುವುದೋ ಎಂದು ಹೆದರಿ

"ಓಹೊ! ಹಾಗೇನೇ" ಎಂದು ತಲೆದೂಗಿದರು.

ಪೂಜೆ, ಪುರಸ್ಕಾರ, ಉಪವಾಸ ಮೊದಲಾದ ಕಟ್ಟು ಕಟ್ಟಳೆಗಳನ್ನಾ ಚರಿಸುವುದರಲ್ಲಿ ಭದ್ರಾಬೆನ್ ಗೌರಮ್ಮನವರಿಗೆ ಕಡಿಮೆಯಾಗಿರಲಿಲ್ಲ. ಅವರಿಬ್ಬ ರಲ್ಲಿ ಸ್ನೇಹ ಎಷ್ಟೇ ಬೆಳೆದರೂ ಊಟ ಉಪಚಾರದವರೆಗೆ ಹೋಗಲಿಲ್ಲ. ಹಾಲು ಹಣ್ಣನ್ನು ಸ್ವೀಕರಿಸುವುದೇ ಕಷ್ಟವಾಗಿತ್ತು.

ಭದ್ರಾಬೆನ್ ಸ್ನೇಹೋಪಜೀವಿಯಾಗಿದ್ದಂತೆ ಆಕೆಯ ಸೊಸೆ ನಿರ್ಮಲಾ ಆಗಿರಲಿಲ್ಲ. ಭದ್ರಾಬೆನ್ ಮನೆಗೆ ಗೌರಮ್ಮನವರು ಹೋದಾಗ, ನಿರ್ಮಲನನ್ನು ಕರೆದು ಹತ್ತಿರ ಕೂಡಿಸಿಕೊಂಡು ಮಾತನಾಡಿಸುತ್ತಿದ್ದರು. ಕೇಳಿದ ಪ್ರಶ್ನೆಗಳಿಗೆ ನಿರ್ಮಲಾ ಕ್ಲಿಪ್ತವಾಗಿ ಉತ್ತರಕೊಟ್ಟು ಪಾರಾಗುತ್ತಿದ್ದಳು. ಗೌರಮ್ಮನವರು ಮಾತು ಬೆಳೆಸುತ್ತಿರಲಿಲ್ಲ. ಒಂದು ದಿನ ಹರಟೆ ಕೊನೆಮೊದಲಿಲ್ಲದಂತೆ ಬೆಳೆದು ನಿರ್ಮಲನ ವಿಷಯಕ್ಕೆ ಬಂದಿತ್ತು. ಗೌರಮ್ಮನವರು ಮೆಲ್ಲನೆ

"ಭದ್ರಾಬೆನ್, ನಿಮ್ಮ ಮಗನಿಗೆ ಮದುವೆಯಾಗಿ ಎಷ್ಟು ವರ್ಷ ಗಳಾದವು?" ಎಂದು ಕೇಳಿದರು.

"ಎಂಟು ವರ್ಷದ ಮೇಲೇ ಆಗಿರಬಹುದು."

"ಎಂಟು ವರ್ಷವಾದರೂ ನೀವು ಮೊಮ್ಮಗನನ್ನು ಎತ್ತಿಕೊಂಡಿಲ್ಲವಲ್ಲ!"

ಭದ್ರಾಬೆನ್ ನಿಟ್ಟುಸಿರುಬಿಟ್ಟು

"ಅದೇ ನನ್ನ ಮನಸ್ಸಿಗೆ ದೊಡ್ಡ ಕೊರಗಮ್ಮ. ಮಗ ಬೆಳಿಗ್ಗೆಯಿಂದ ರಾತ್ರಿಯವರೆಗೂ ದುಡಿಯುತ್ತಾನೆ. ಕೈತುಂಬ ಸಂಪಾದಿಸುತ್ತಾನೆ. ಅದನ್ನು ಅನುಭವಿಸುವುದು ನನ್ನ ಹಣೆಯಲ್ಲಿ ಬರೆದಿಲ್ಲ."

"ಸುಮ್ಮನೆ ವ್ಯಸನಪಟ್ಟರೇನಮ್ಮ ಪ್ರಯೋಜನ. ಭಗವಂತ ಕಣ್ಣು ಬಿಟ್ಟು ನೋಡಬೇಕು. ನಿಮ್ಮ ಸೊಸೆಯ ಮನಸ್ಸಿನಲ್ಲಿಯೂ ಇದೇ ದುಃಖ ತುಂಬಿರುವಂತಿದೆ. ಹುಡುಗಿ ನಗುನಗುತ್ತಾ ಸಂತೋಷವಾಗಿದ್ದುದನ್ನು ನಾನು ಕಂಡೇ ಇಲ್ಲ."

"ಸರಿ ಅವಳ ವಿಷಯ ಏನು ಹೇಳುತ್ತೀರಿ ಬಿಡಿ. ಅದೊಂದು ಅನಿಷ್ಟ ಗೂಬೆ."

"ಯಾಕ್ರೀ ಹೀಗನ್ನುತ್ತೀರಿ. ನಿರ್ಮಲಾ ಗಟ್ಟಿಯಾಗಿ ಮಾತನಾಡಿದುದು ಕೂಡ ನಾನು ಕೇಳಿಲ್ಲ."

"ನಮ್ಮ ಮನೆಗೆ ಈ ಹುಡುಗಿ ತಂದುಕೊಳ್ಳುವುದಕ್ಕೆ ನನಗೆ ಸ್ವಲ್ಪವೂ ಇಷ್ಟವಿರಲಿಲ್ಲ ಗೌರಿಬಹೆನ್. ತಮ್ಮ ಸಂಬಂಧದ್ದು ಎನ್ನುವ ಅಭಿಮಾನದಿಂದ ನಮ್ಮ ಯಜಮಾನರು ಈ ಬಾಂಧವ್ಯ ಬೆಳೆಸಿದರು."

"ಅದು ಹಳೆಯ ಮಾತಾಯಿತು. ಬಾಂಧವ್ಯ ಬೆಳಸಿದ್ದಾಯಿತು. ನಿರ್ಮಲಾ ಈಗ ನಿಮ್ಮ ಸೊಸೆ."

"ಹೌದು ಹೌದು ?

ಎಂದಷ್ಟೇ ಹೇಳಿ ಭದ್ರಾಬಹೆನ್ ಮಾತು ಮುಗಿಸಿದಳು.

ಭದ್ರಾಬಹೆನ್ ಗ್ರಹಕೃತ್ಯದಲ್ಲಿದ್ದ ಘರ್ಷಣೆಯ ಬಗ್ಗೆ ರಾತ್ರಿ ಗೌರಮ್ಮ ನವರು ಮಗಳೊಂದಿಗೆ ಪ್ರಸ್ತಾಪಿಸಿದರು. ಲಲಿತಾ ತಾಯಿಯ ವರದಿ ಕೇಳಿ

"ಹೌದಮ್ಮ– ನಾನೂ ಗಮನಿಸಿದ್ದೇನೆ. ನಿರ್ಮಲಾ ಮನಸ್ಸಿನಲ್ಲಿ ಅಪಾರ ದುಃಖ ತುಂಬಿರುವ ಹಾಗಿದೆ. ಅವಳೊಂದಿಗೆ ಮಾತನಾಡಿ ಕಾರಣ ತಿಳಿದುಕೊಳ್ಳಬೇಕು. ನೀನೇ ಮಾತಾಡಿ ನೋಡು." ಎಂದಳು.

"ನಾನು ಹೇಗೆ ಮಾತನಾಡಲಿ ಲಲಿತಾ. ಭದ್ರಾಬಹೆನ್ ನನ್ನ ಬಿಟ್ಟು ಕದಲುವುದಿಲ್ಲ. ನಿರ್ಮಲಾ ಒಬ್ಬಳನ್ನೇ ಮಾತನಾಡಿಸಲು ಸಾಧ್ಯವೇ ಇಲ್ಲ ವಾಗಿದೆ. ನೀನೇ ಯಾವಾಗಲಾದರೂ ಅವಳನ್ನು ಹೊರಗೆ ಕರೆದುಕೊಂಡು ಹೋಗಿ ಮಾತನಾಡಿಸಿ ನೋಡು."

'ಆಗಲಿ' ಎಂದೇನೋ ಲಲಿತಾ ಹೇಳಿದಳು. ಆದರೆ ಅವಳ ಕೆಲಸದ ಒತ್ತಡದಲ್ಲಿ ನಿರ್ಮಲನನ್ನು ಅನುಲಕ್ಷಿಸುವುದು ಸಾಧ್ಯವಾಗಲಿಲ್ಲ.

ಒಂದು ಮಧ್ಯಾನ್ಹ ಗೌರಮ್ಮನವರು ಊಟ ಮುಗಿಸಿಕೊಂಡು

ತೋಳನ್ನೇ ತಲೆದಿಂಬು ಮಾಡಿಕೊಂಡು ನೆಲದಮೇಲೆ ಪವಡಿಸಿದ್ದರು. ಆಗಸ್ಟ್ ತಿಂಗಳ ಕೆಟ್ಟ ಹವ ಮುಂಬಯಿಯನ್ನು ವ್ಯಾಪಿಸಿತ್ತು. ಮನೆಯೊಳಗೆ ಸಹಿಸ ಲಾಗದಷ್ಟು ಶಖೆ. ತಲೆಯಿಂದ ಕಾಲಿನವರೆಗೆ ಬೆವರು ಧಾರಾಕಾರವಾಗಿ ಸುರಿಯುತ್ತಿತ್ತು. ಹೊರಗಡೆ ನಿಂತು ನಿಂತು ಬರುತ್ತಿದ್ದ ಮಳೆ. ಮಳೆ ಬಂತೆಂದು ಛತ್ರಿ ತೆಗೆಯುವಲ್ಲಿ ಮಳೆ ನಿಂತು ಹೋಗುತ್ತಿತ್ತು. ಮಳೆ ಬೀಳುತ್ತಿದ್ದರೂ ಹೊಟ್ಟೆಯೊಳಗೆ ಅಸಹನೀಯ ವೇದನೆ. ಶಖೆಯೆಂದು ಮೈಯನ್ನು ಗಾಳಿ ಗೊಡ್ಡಿದರೆ ನ್ಯೂಮೋನೀಯಾ ಕಟ್ಟಿಟ್ಟ ಮುಡಿಪಾಗುತ್ತಿತ್ತು.

ಗೌರಮ್ಮನವರಿಗೆ ನಿದ್ರೆ ಬಂದಿರಲಿಲ್ಲ. ಶಖೆಯ ಹೊಡೆತಕ್ಕೆ ಸಿಕ್ಕಿ ಅವರ ದೇಹ ತತ್ತರಿಸುತ್ತಿತ್ತು. ತಣ್ಣನೆಯ ನೆಲದ ಮೇಲೆ ಹೊರಳಾಡುತ್ತಿದ್ದರು. ಆಗಾಗ್ಗೆ ನಿದ್ರೆಯ ಮಂಪರು ಹಿಡಿಯುತ್ತಿತ್ತು. ಕಣ್ಣೆವೆ ಮುಚ್ಚಿಕೊಂಡು ಬರುವುದರೊಳಗಾಗಿ ಶಖೆಗಾಳಿ ಬೀಸಿ ಎಚ್ಚರಗೊಳಿಸುತ್ತಿತ್ತು.

ಸುಮಾರು ಮೂರು ಗಂಟೆಯಿರಬಹುದು. ಯಾರೋ ಹೊರಬಾಗಿಲನ್ನು ಮೃದುವಾಗಿ ತಟ್ಟಿದಂತಾಯಿತು. ಗೌರಮ್ಮನವರು ಮಲಗಿದ್ದ ಸ್ಥಳದಿಂದಲೇ ಯಾರು' ಎಂದರು. ಉತ್ತರ ಬರದಿರಲು 'ಗಾಳಿಯಿರಬಹುದು' ಎಂದು ಕೊಂಡರು. ಮತ್ತೆ ಬಾಗಿಲು ತಟ್ಟಿದ ಶಬ್ದ ಕೇಳಿಬಂತು. ಗೌರಮ್ಮನವರು ಕ್ಷಣಕಾಲ ಆಲೈಸಿ, ಯಾರೋ ಬಾಗಿಲು ತಟ್ಟುತ್ತಿದ್ದಾರೆಂಬುದನ್ನು ಖಚಿತ ಮಾಡಿಕೊಂಡು ಎದ್ದುಹೋಗಿ ಬಾಗಿಲು ತೆಗೆದರು.

"ನಿರ್ಮಲಾ!"

ನಿರ್ಮಲಾ ಒಳಗೆ ಬಂದು ಬಾಗಿಲು ಹಾಕಿಕೊಂಡಳು.

"ಇದೇನು ನಿರ್ಮಲಾ! ಅತ್ತೆಯವರೆಲ್ಲಿ?"

"ಅವರು ಬಂಧುಗಳ ಮನೆಗೆ ದಾದರಿಗೆ ಹೋದರು."

"ಎಷ್ಟು ಹೊತ್ತಿಗೆ ಹಿಂದಿರುಗುತ್ತಾರೆ."

"ರಾತ್ರಿಯಾಗಬಹುದು."

"ನಿನಗೆ ಹೇಗೆ ಗೊತ್ತು."

"ನಮ್ಮ ಅತ್ತೆಯ ದಾದರ್ ಬಂಧುಗಳು ಬಂದು ಹೋಗುತ್ತಿದ್ದರು. ಅತ್ತೆ ಅವರೊಂದಿಗಾಡುತ್ತಿದ್ದ ಗುಸಗುಸ, ಪಿಸಪಿಸ ಮಾತುಗಳನ್ನು ಕೇಳಿಸಿ ಕೊಂಡಿದ್ದೆ."

"ಹೋಗಲಿಬಿಡು - ಕುಳಿತುಕೋ. ನನಗೂ ನಿನ್ನ ಜತೆ ತುಂಬ ಮಾತನಾಡಬೇಕೆಂದು ಇಷ್ಟವಿತ್ತು. ನಿಮ್ಮತ್ತೆ ಬೇಸರಪಟ್ಟುಕೊಂಡಾರು ಎಂದು ಸುಮ್ಮನಿದ್ದೆ."

"ನಮ್ಮತ್ತೆ ಏಕೆ ಹೋಗಿದ್ದಾರೆ ಗೊತ್ತೇ ದೀದಿ ?"

"ನನಗೆ ಹೇಗೆ ಗೊತ್ತು ?"

"ನಿಮಗೂ ಹೇಳಲಿಲ್ಲವೇ ?"

"ಇಲ್ಲ."

"ತಮ್ಮ ಮಗನಿಗೆ ಹೆಣ್ಣು ನೋಡುವುದಕ್ಕೆ............ನನಗೆ ಮಕ್ಕಳಾಗಲಿಲ್ಲವೆಂದು ಮಗನಿಗೆ ಎರಡನೆಯ ಮದುವೆಮಾಡುವ ಪ್ರಯತ್ನಮಾಡುತ್ತಿದ್ದಾರೆ."

ನಿರ್ಮಲನ ಕಣ್ಣುತುಂಬ ಹನಿಕೂಡಿತು.

"ಅತ್ತೆಗೂ ನಿನಗೂ ಏಕೆ ಇಷ್ಟು ವಿರಸ ನಿರ್ಮಲಾ ?"

"ನಿಜವಾಗಿಯೂ ನಾನು ಕಾರಣವೇನೆಂಬುದನ್ನರಿಯೆ. ಒಂದು ದಿನವೂ ನಾನು ಅತ್ತೆಗೆ ವಿರೋಧವಾಗಿ ನಡೆದುಕೊಂಡವಳಲ್ಲ."

"ಗಂಡ ನಿನ್ನಲ್ಲಿ ವಿಶ್ವಾಸವಾಗಿದ್ದಾನೆಯೇ ?"

ನಿರ್ಮಲ ಉತ್ತರಕೊಡಲಿಲ್ಲ. ತಮ್ಮ ಪ್ರಶ್ನೆಗೆ ಉತ್ತರವನ್ನು ಗೌರಮ್ಮನವರು ಅವಳ ಕಣ್ಣೀರಿನಲ್ಲಿ ಕಂಡುಕೊಳ್ಳಬೇಕಾಯಿತು.

"ಮಕ್ಕಳಾಗಲಿಲ್ಲವೆಂದು ನಿನ್ನ ಗಂಡನಿಗೂ ಕೋಪವೇ ?"

"ದೀದಿ – ನಿಮ್ಮನ್ನೇ ನಾನು ತಾಯಿಯೆಂದುಕೊಂಡಿದ್ದೇನೆ. ನಾನು ಆಡುವ ಮಾತುಗಳು ಯಾವದನ್ನೂ ಅತ್ತೆಗೆ ತಿಳಿಸುವುದಿಲ್ಲವಷ್ಟೆ ?"

"ಛೆ! ನಾನೇಕೆ ತಿಳಿಸಲಿ. ಅತ್ತೆ ಸೊಸೆ ನಿಮ್ಮಿಬ್ಬರಿಗೆ ವ್ಯಾಜ್ಯ ತಂದಿಟ್ಟು ನಾನು ಯಾವ ನರಕಕ್ಕೆ ಹೋಗಲಿ."

"ನನಗೆ ಮಕ್ಕಳಾಗುವುದಿಲ್ಲ ದೀದಿ."

"ಕೆಟ್ಟ ಮಾತಾಡಬೇಡ ಸುಮ್ಮನಿರು. ಬಂಗಾರದ ಗೌರಮ್ಮ ಇದ್ದ ಹಾಗಿದ್ದೀ, ನಿನಗೆ ಮಕ್ಕಳಾಗುವುದಿಲ್ಲವೆಂದರೆ ಯಾರಾದರೂ ನಕ್ಕಾರು. ಕೆಲವರಿಗೆ ಸ್ವಲ್ಪ ಬೇಗ ಆಗುತ್ತದೆ – ಕೆಲವರಿಗೆ ಸ್ವಲ್ಪ ತಡವಾಗಿ ಆಗುತ್ತದೆ."

"ನನಗೆ ಮಕ್ಕಳಾಗುವುದಿಲ್ಲ ದೀದಿ."

"ಡಾಕ್ಟರಿಗೆ ತೋರಿಸಿ ಔಷಧ ತೆಗೆದುಕೊಳ್ಳಬೇಕಾಗಿತ್ತು."

"ತೋರಿಸಿದ್ದಾಯಿತು. ನನ್ನಲ್ಲಿ ಏನೂ ದೋಷವಿಲ್ಲವೆಂದರು."

"ನಿನ್ನಲ್ಲಿ ದೋಷವಿಲ್ಲ– ಆದರೂ ಮಕ್ಕಳಾಗುವುದಿಲ್ಲ. ದೋಷ ಯಾರದು - ನಿನ್ನ ಗಂಡನದೋ ?"

"ಹಾಗೆಂದು ಡಾಕ್ಟರು ಅಭಿಪ್ರಾಯಪಟ್ಟರು."

"ಎಂಥ ಅನ್ಯಾಯಾಮ್ಮ ಇದು. ತಪ್ಪು ತಮ್ಮಲ್ಲಿಟ್ಟುಕೊಂಡು ನಿನ್ನನ್ನು ಆಕ್ಷೇಪಿಸುವುದೇ ?"

"ಮಗನಿಗೆ ಇರುವ ಹೆಂಡತಿ ಸಾಲದೆಂದು ಅತ್ತೆಯವರು ಎರಡನೆಯ ಮದುವೆ ಮಾಡಿಸಲು ಹೊರಟಿದ್ದಾರೆ."

"ನಿಮ್ಮತ್ತೆ ನನ್ನ ಮೇಲೆ ಕೋಪಮಾಡಿಕೊಂಡರೂ ಚಿಂತೆಯಿಲ್ಲ; ನಾನು ಬುದ್ಧಿ ಹೇಳುತ್ತೇನೆ."

"ಅತ್ತೆ ಯಾರ ಮಾತೂ ಕೇಳುವವರಲ್ಲ ದೀದಿ – ನನಗೊಂದು ಮಾರ್ಗ ತೋರಿಸಿಕೊಡಿ. ಲಲಿತಾಬಹೆನ್‌ಗೆ ಹೇಳಿ ಅವರ ಕಛೇರಿಯಲ್ಲಿ ಕೆಲಸಮಾಡಿಸಿ ಕೊಡಿ."

"ಎಲ್ಲಿಯವರೆಗೆ ಓದಿದ್ದೀ ನಿರ್ಮಲಾ ?"

"ಮಾಧ್ಯಮಿಕ ಶಾಲೆಯವರೆಗೆ."

"ನಿನ್ನ ತೌರುಮನೆಯವರು ಹೇಗಿದ್ದಾರೆ ?"

"ತೌರುಮನೆಯ ಕಡೆ ನನಗೆ ಯಾರೂ ದಿಕ್ಕಿಲ್ಲ. ತಂದೆಗೆ ನಾನೊಬ್ಬಳೇ ಮಗಳು. ಅವರ ಆಸ್ತಿಗೆ ಆಸೆಪಟ್ಟೇ ಇವರು ನನ್ನ ಲಗ್ನವಾದುದು."

"ಮುಂದೇನು ಮಾಡಬೇಕೆಂದಿರುವೆ ?"

"ಈ ಮನೆಯಲ್ಲಿ ನಾನು ಸವತಿ ಜತೆ ಬಾಳುವುದಿಲ್ಲ. ಎಲ್ಲಿಯಾದರೂ ಕೂಲಿನಾಲಿ ಮಾಡಿಕೊಂಡು ಜೀವನ ಮಾಡುತ್ತೇನೆ."

ಎಂದು ಬಿಕ್ಕಳಿಸಿ ಅಳಲಾರಂಭಿಸಿದಳು. ಗೌರಮ್ಮನವರಿಗೆ ಅವಳನ್ನು ಸಮಾಧಾನಪಡಿಸುವುದು ಸಾಧ್ಯವಾಗಲಿಲ್ಲ.

"ಯಾವದೂ ದುಡುಕಬೇಡ – ನಿರ್ಮಲಾ. ಒಂದು ವೇಳೆ ನಿನ್ನ ಗಂಡನ ಕೈಹಿಡಿಯುವವಳು ನಿನ್ನ ಹಾಗೇ ಒಳ್ಳೆಯವಳೇ ಆಗಿದ್ದರೆ..........."

"ಅವಳೇಂಥವಳೇ ಆಗಿದ್ದರೂ ಅವಳ ಜತೆ ನಾನಿರುವುದಿಲ್ಲ ದೀದಿ"

ಎಂದು ಹೇಳಿ ಎದ್ದು ಹೊರಟುಹೋದಳು.

ಜೇಗೆಯ ಪ್ರಚಂಡತಾಪದೊಂದಿಗೆ ನಿರ್ಮಲನ ಜೀವನ ವೃತ್ತಾಂತದ ದಗೆಯೂ ಬೆರೆತು ಗೌರಮ್ಮನವರಿಗೆ ಅಸಹನೀಯ ವೇದನೆಯಾಯಿತು.

ಅಲ್ಲಕಲ್ಲೋಲವಾಗಿದ್ದ ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಳ್ಳಲು ಒಲೆ ಹೊತ್ತಿಟ್ಟು ತಿಂಡಿ ತೀರ್ಥ ಮಾಡಲುಪಕ್ರಮಿಸಿದರು. ಉಪ್ಪಿಟ್ಟು, ಕಾಫಿ ಸಿದ್ಧವಾಯಿತು.

ಕಛೇರಿ ಕೆಲಸ ಮುಗಿಸಿಕೊಂಡು ಬಂದ ಲಲಿತೆಗೆ ತಿಂಡಿ, ಕಾಫಿ ಕೊಟ್ಟು

"ಅವರು ಬರಲಿಲ್ಲವೇ?"

"ಇಲ್ಲಮ್ಮ. ಪತ್ರಿಕೋದ್ಯಮಿ ಸಂಘದ ಮೀಟಿಂಗಿತ್ತು - ಅವರು ಹೊರಟು ಹೋದರು."

ನಿರ್ಮಲನ ಕರುಣ ಕಥೆಯನ್ನು ಲಲಿತೆಗೆ ಹೇಳುವವರೆಗೂ ಗೌರಮ್ಮ ನವರಿಗೆ ಸಮಾಧಾನವಿಲ್ಲ.

ತಾಯಿಯ ನಿರೂಪಣೆ ಕೇಳಿ ಲಲಿತಾ ಅವಾಕ್ಕಾದಳು. ಅರ್ಧಕ್ಕರ್ಧ ದಷ್ಟು ಉಪ್ಪಿಟ್ಟನ್ನು ತಟ್ಟೆಯಲ್ಲಿಯೇ ಬಿಟ್ಟು ಕಾಫಿ ಕುಡಿದು

"ಇದಕ್ಕೇನಮ್ಮ ಪರಿಹಾರ?" ಎಂದು ಕೇಳಿದಳು.

"ನಿರ್ಮಲಾ ನಿನ್ನ ಆಫೀಸಿನಲ್ಲಿ ಕೆಲಸಮಾಡಲು ಸಿದ್ಧಳಾಗಿದ್ದಾಳೆ."

"ನಮ್ಮ ಆಫೀಸಿನಲ್ಲಿ ಅವಳೇನು ಕೆಲಸಮಾಡಲು ಸಾಧ್ಯ? ಬೆಳಿಗ್ಗೆ ಯಿಂದ ಸಂಜೆಯವರೆಗೆ ಕೆಲಸಕ್ಕೆ ಅಲೆಯುವವರ ತಂಡ ನೋಡಿದರೆ ಏನು ಹೇಳುವೆಯೋ?"

"ಲಲಿತೂ, ಈ ಹುಡುಗಿಗೆ ಏನಾದರೂ ಒಂದು ದಾರಿ ತೋರಿಸಬೇಕು ಕಣೇ."

"ಅಮ್ಮಾ, ನಿರ್ಮಲನಂಥ ನೂರಾರು ಹೆಣ್ಣುಮಕ್ಕಳು ದಾರಿ ಹುಡುಕು ತ್ತಿದ್ದಾರೆ. ಅವಳನ್ನು 'ಅಬಲಾಶ್ರಮ' ಸೇರಿಸುವುದೊಂದೇ ಮಾರ್ಗ. – ಈ ಮದುವೆ ನೀನು ನಿಲ್ಲಿಸಲಾರೆಯಾ?"

"ಭದ್ರಾಬಹೆನ್ ಯಾರು ಮಾತೂ ಕೇಳುವವರಲ್ಲವೆಂದು ನಿರ್ಮಲನೇ ಹೇಳಿದ್ದಾಳೆ."

"ಒಬ್ಬ ಮುರ್ಖ ಮುದುಕಿಯ ಹಟಮಾರಿತನದಿಂದ ಎರಡು ಜೀವಗಳು ನಾಶವಾಗುತ್ತವೆ."

"ಯೋಚನೆ ಮಾಡು – ನಿಮ್ಮ ಯಜಮಾನರನ್ನೂ ಕೇಳಿ ನೋಡು. ಈ ಹುಡುಗಿಯನ್ನು ಕಾಡುಪಾಲು ಮಾಡುವುದಕ್ಕೆ ನನ್ನ ಮನಸ್ಸು ತುಂಬ ಮರುಗುತ್ತಿದೆ."

ಯಾರೋ ಹೊರಬಾಗಿಲಿನ ಗಂಟೆಯ ಶಬ್ದಮಾಡಿದರು. ಲಲಿತಮ್ಮ ಎದ್ದು ಹೋಗಿ ಬಾಗಿಲು ತೆಗೆದಳು. ಯಾರೋ ಅಪರಿಚಿತಸ್ಥರು

"ಪ್ರಸಾದರಿಲ್ಲವೇ ?" ಎಂದು ಕೇಳಿದರು.

"ಅವರಿನ್ನೂ ಮನೆಗೆ ಬಂದಿಲ್ಲ."

"ನೀವು ಲಲಿತಮ್ಮನವರಲ್ಲವೇ ?"

"ಹೌದು – ಒಳಗೆ ಬನ್ನಿ,"

ಅಪರಿಚಿತಸ್ಥರು ಬಂದು ಒಳಗೆ ಕುಳಿತು

"ನನ್ನ ಪರಿಚಯ ನಿಮಗಿಲ್ಲ" ಎಂದರು.

"ಇಲ್ಲ."

"ನಾನು ಮೈಸೂರು ಅಸೋಸಿಯೇಷನ್ ಕಾರ್ಯದರ್ಶಿ. ನನ್ನ ಹೆಸರು ನರಸಿಂಹಮೂರ್ತಿ."

"ತಮ್ಮ ಹೆಸರು ಕೇಳಿದ್ದೇನೆ."

"ಏನಮ್ಮ, ನೀವು ನಮ್ಮವರಾಗಿ ನಮ್ಮಿಂದ ಇಷ್ಟುದೂರವಿರುವುದೇ ?"

"ನಾವು ಇಲ್ಲಿರುವ ವಿಷಯ ನಿಮಗೆ ಹೇಗೆ ಗೊತ್ತಾಯಿತು ?"

"ನಿಮ್ಮ ಯಜಮಾನರ ಕೀರ್ತಿ ಕರ್ನಾಟಕವೆಲ್ಲೆಲ್ಲಾ ವ್ಯಾಪಿಸಿದೆ. ಬೆಂಗಳೂರಿನಿಂದ ಬಂದವರೊಬ್ಬರು ನಿಮ್ಮ ವಿಳಾಸ ತಂದರು. ಅವರು ನಿಮ್ಮ ಯಜಮಾನರನ್ನು ಕಾಣಬೇಕಂತೆ!"

ಲಲಿತಮ್ಮನ ಎದೆ ಧಸಕ್ಕೆಂದಿತು. ಯಾವ ಗಂಡಾಂತರ ಒದಗಿತೋ ಎಂದುಕೊಂಡು

"ಯಾರವರು ?"

"ನೀವು 'ಜನಜೀವಾಳ' ಎಂಬ ಹೆಸರಿನ ಕನ್ನಡವಾರ ಪತ್ರಿಕೆ ನೋಡಿರಬಹುದು."

"ನೋಡಿದ್ದೇನೆ."

"ಅದರ ಮಾಲಿಕರು ಗೋಪಾಲಶೆಟ್ಟರು."

"ನಮ್ಮ ಯಜಮಾನರನ್ನು ಅವರೇಕೆ ನೋಡಬೇಕಂತೆ!"

"ಆ ವಿಷಯ ನಾನು ಹೇಗೆ ವಿಚಾರಿಸಲಿ. ಯಜಮಾನರು ಬರುವುದು ಇನ್ನೂ ತಡವಾಗುತ್ತದೆಯೇ?"

"ಗೊತ್ತಿಲ್ಲ. ಜರ್ನಲಿಸ್ಟ್ ಅಸೋಷಿಯೇಷನ್ನಿನಲ್ಲಿ ಲೂಯಿ ಫಿಷರ್ ಸಂದರ್ಶನವಿದೆ (Interview) ಯೆಂದು ಹೇಳಿಹೋದರು. ಜೇಗ ಬರ ಬಹುದು - ಅವರನ್ನು ನೋಡಬೇಕಾಗಿತ್ತೇ?"

"ಹೂ – ಅಸೋಸಿಯೇಷನ್ನಿನಿಂದ ಗೋಪಾಲಶೆಟ್ಟರಿಗೆ ಸತ್ಕಾರಕೂಟ ಏರ್ಪಡಿಸಿದ್ದೇವೆ. ಪ್ರಸಾದರೇ ಅಧ್ಯಕ್ಷತೆ ವಹಿಸಬೇಕೆಂದು ನಮ್ಮೆಲ್ಲರ ಆಕಾಂಕ್ಷೆ."

"ಅದಕ್ಕವರು ಒಪ್ಪುವ ಸಂಭವವಿಲ್ಲ ಮೂರ್ತಿಯವರೇ?"

"ನೀವು ಒಪ್ಪಿಸಬೇಕಮ್ಮ. ಗೋಪಾಲಶೆಟ್ಟರು ಯಾವದೋ ವ್ಯವ ಹಾರದ ವಿಷಯ ಪ್ರಸಾದರಲ್ಲಿ ಪ್ರಸ್ತಾಪಿಸಬೇಕೆಂದಿರುವ ಹಾಗೆ ಕಾಣುತ್ತದೆ. ಈ ಸತ್ಕಾರಕೂಟದಿಂದ ಅವರ ಪರಿಚಯವಾಗಲಿ ಎಂದು ನಮ್ಮ ಆಸೆ."

"ನಿಮ್ಮ ಉಪಕಾರಕ್ಕೆ ನಾವು ಋಣಿಗಳಾಗಿದ್ದೇವೆ. ಸತ್ಕಾರಕೂಟ ಎಂದು?"

"ನಾಳೆ."

"ಹಾಗಾದರೆ ಅವರು ಬರುವವರೆಗೆ ನೀವು ಇದ್ದು ಮಾತನಾಡಿಕೊಂಡು ಹೋಗುವುದು ಒಳ್ಳೆಯದು."

"ಆಗಬಹುದು."

ಎಂದು ನರಸಿಂಹಮೂರ್ತಿ ಪರಿಷ್ಕಾರವಾಗಿ ಕುಳಿತು

"ಏನಮ್ಮ– ಇಷ್ಟು ದಿನಸ ನೀವು ಮುಂಬಯಿಯಲ್ಲಿದ್ದರೂ ನಮಗೆ ಗೊತ್ತೇ ಆಗಲಿಲ್ಲವಲ್ಲ."

"ಸೆಂಚುರಿ ಪತ್ರಿಕೆಯ ಜವಾಬ್ದಾರಿಯೆಲ್ಲಾ ಯಜಮಾನರ ಮೇಲೆ ಬಿದ್ದಿದೆ. ಎಲ್ಲಿಗೆ ಹೋಗಿಬರುವುದಕ್ಕೂ ನಮಗೆ ಪುರಸತ್ತೇ ಇಲ್ಲ ಮೂರ್ತಿ ಗಳೇ."

"ನಮ್ಮವರೊಬ್ಬರು ಮುಂಬಯಿಯಲ್ಲಿ ಇಷ್ಟು ಖ್ಯಾತಿ ಗಳಿಸಿರುವುದು ತುಂಬ ಅಭಿಮಾನಾಸ್ಪದ."

ಅವರು ಮಾತನಾಡುತ್ತ ಕುಳಿತಿದ್ದಂತೆ ಗೌರಮ್ಮನವರು ಎರಡು ಕಪ್ ಕಾಫಿ ಮಾಡಿ ತಂದಿಟ್ಟರು.

"ಈಗೇಕಮ್ಮ ಕಾಫಿ."

"ಇರಲಿ ತೆಗೆದುಕೊಳ್ಳಿ. ಅವರು ಎಷ್ಟು ಹೊತ್ತಿಗೆ ಬರುತ್ತಾರೋ?"

ಎಂದರು. ಕಾಫಿ ಮುಗಿದ ಲೋಕಾಭಿರಾಮನಾಗಿ ಮಾತು ಸಾಗಿತ್ತು. ಅರ್ಧಗಂಟೆ ಕಳೆದ ಮೇಲೆ ಪ್ರಸಾದನೂ ಬಂದ. ಲಲಿತಮ್ಮನೇ ಪ್ರಸಾದನಿಗೆ ಮೂರ್ತಿಯವರ ಪರಿಚಯಮಾಡಿಕೊಟ್ಟಳು.

ಮೂರ್ತಿ ಪ್ರಸಾದನನ್ನು ಬಾಯಿತುಂಬ ಹೊಗಳಿ, ತನ್ನ ಕೆಲಸವನ್ನು ನಿವೇದಿಸಿದ.

"ನಾನು ಸಾರ್ವಜನಿಕ ಸಮಾರಂಭಗಳಿಗೆ ಬರುವ ಅಭ್ಯಾಸವನ್ನೇ ಇಟ್ಟು ಕೊಂಡಿಲ್ಲ ಮೂರ್ತಿಗಳೇ"

"ಇವಕ್ಕೆ ತಾವು ತಪ್ಪಿಸಿಕೊಳ್ಳುವ ಹಾಗಿಲ್ಲ ಸರ್. ಮುಖ್ಯ ಅತಿಥಿಗಳೇ ತಮ್ಮ ಹೆಸರನ್ನು ಸೂಚಿಸಿದ್ದಾರೆ."

"ಈ ಉತ್ಸವಕ್ಕೆ ಯಾರಾದರೂ ಶ್ರೀಮಂತರನ್ನು ಕರೆಯಬೇಕು. ಬಂಡವಳಿಗರ ಸನ್ಮಾನಕ್ಕೆ ಶ್ರಮಜೀವಿ ಅಧ್ಯಕ್ಷನಾಗುವುದು ವಿಪರ್ಯಾಸದಂತೆ ಕಾಣುತ್ತದೆ."

"ಗೋಪಾಲಶೆಟ್ಟರೂ ಶ್ರಮಜೀವಿಗಳೇ ಸರ್. ಅವರ ದುಡಿಮೆ ನೋಡಿದರೆ ತಾವು ಆಶ್ಚರ್ಯಪಡುವಿರಿ. 'ಸ್ವಯಂಕೃತ ಮಾನವ'ರ (Self-made man) ವರ್ಗಕ್ಕೆ ಶೆಟ್ಟರು ಸೇರಿದವರು. ನಾನು ಕಂಡ ಹಾಗೆ ಶೆಟ್ಟರು ಬೆಂಗಳೂರಿಗೆ ಬರಿಗೈಯಲ್ಲಿ ಬಂದರು."

"ಶೆಟ್ಟರು ಬೆಂಗಳೂರಿನವರಲ್ಲವೇನು?"

"ಅಲ್ಲ ಸರ್. ಅವರು ಮದರಾಸಿನವರು. ತಮಿಳು ಅವರ ಮಾತೃಭಾಷೆ. ಮದರಾಸಿನಲ್ಲಿ ಕೆಲವು ತಮಿಳು ಪತ್ರಿಕೆಗಳಲ್ಲಿ ಮ್ಯಾನೇಜರಾಗಿ ಕೆಲಸಮಾಡಿದ್ದರು. ಸ್ವತಂತ್ರವೃತ್ತಿ ಕಲ್ಪಿಸಿಕೊಳ್ಳಲು ಬೆಂಗಳೂರಿಗೆ ಬಂದರು. ಅವರು ಬೆಂಗಳೂರಿಗೆ ಬಂದ ತರುಣದಲ್ಲಿ ಅವರಿಗೆ ಒಂದು ಶಬ್ದ ಕನ್ನಡ

ಬರುತ್ತಿರಲಿಲ್ಲ. ಪತ್ರಿಕೋದ್ಯೋಗಿಗಳಾದ ರಂಗಪ್ಪನವರ ಸಹಾಯ ತೆಗೆದು ಕೊಂಡು ಸಣ್ಣ ಪ್ರಮಾಣದಲ್ಲಿ 'ಜನಜೀವಾಳ' ವಾರಪತ್ರಿಕೆ ಆರಂಭಿಸಿದರು. ಮೂರು ನಾಲ್ಕು ವರ್ಷ ಈ ಪತ್ರಿಕೆಗಾಗಿ ಅವರು ಪಟ್ಟ ಕಷ್ಟ ಹೇಳತೀರದು. ಅವರ ಏಕಮನಸ್ಕತೆಯನ್ನು ಕಂಡೇ ಭಗವಂತನ ಅನುಗ್ರಹವಾಯಿತೆಂದು ಕಾಣುತ್ತದೆ. ಬೆಂಗಳೂರಿನಲ್ಲಿ ಗಣೇಶನ ಗಲಭೆಯಾಯಿತು ನೋಡಿ – ಅಲ್ಲಿಂದ ಶೆಟ್ಟರ ಅದೃಷ್ಟ ಬೆಳೆಯಿತು. ಪತ್ರಿಕೆಕೊಳ್ಳುವವರ ಸಂಖೆ ೩೦೦೦ ದಿಂದ ೧೨೦೦೦ ಕ್ಕೇರಿತು. ದೊಡ್ಡ ದೊಡ್ಡ ಇಂಗ್ಲಿಷ್ ಕಂಪೆನಿಯವರ ಜಾಹೀರಾತು ಗಳೂ, ಸರ್ಕಾರದ ಜಾಹೀರಾತುಗಳೂ ದೊರೆತವು. ಯಂತ್ರೋಪಕರಣ ಗಳಿಗಾಗಿಯೇ ೩೦,೦೦೦ ರೂಪಾಯಿಗಳ ವರೆಗೆ ಶೆಟ್ಟರು ಖರ್ಚುಮಾಡಿದ್ದಾರೆ. ಈ ಹತ್ತು ವರ್ಷಗಳಲ್ಲಿ ಪತ್ರಿಕೆಕೊಳ್ಳುವವರ ಸಂಖ್ಯೆ ೨೮,೦೦೦ ಕ್ಕೆ ಮುಟ್ಟಿದೆ."

"ಇದು ನಿಜವಾದ ಸಾಹಸವೇ. ಮುಂಬಯಿಯಂಥ ಪಟ್ಟಣದಲ್ಲಿ ನಮ್ಮ ಪತ್ರಿಕೆಯ ಸರ್‌ಕ್ಯುಲೇಷನ್ ಐದಾರು ಸಾವಿರ ದಾಟಿಲ್ಲದಿರುವಾಗ ಕನ್ನಡ ಪತ್ರಿಕೆ ೨೮,೦೦೦ ಕ್ಕೆ ಮುಟ್ಟಿರುವುದು ಆಶ್ಚರ್ಯಕರವಾಗಿದೆ."

"ಶೆಟ್ಟರು ಪ್ರತಿವರ್ಷ ಇಲ್ಲಿಗೆ ಬಂದು ಜಾಹೀರಾತುದಾರರನ್ನು ಕಂಡು ಹೋಗುತ್ತಾರೆ. ಕನ್ನಡಕ್ಕೆ ಅವರು ಮಾಡಿರುವ ಮಹೋಪಕಾರಕ್ಕೆ ಕೃತಜ್ಞತೆ ಸಮರ್ಪಿಸಲು ನಾವು ಮೈಸೂರು ಅಸೋಸಿಯೇಷನ್ ಆಶ್ರಯದಲ್ಲಿ ಸಭೆ ಕರೆದಿದ್ದೇವೆ."

"ನೀವು ಹೇಳುವುದೆಲ್ಲಾ ಸರಿ ಮೂರ್ತಿಗಳೇ. ಆದರೆ ಈ ಸಭೆಗೆ ಅಧ್ಯಕ್ಷ ನಾಗುವ ಯೋಗ್ಯತೆ ನನಗಿಲ್ಲ."

"ತಾವು ಏನು ಹೇಳಿದರೂ ನಾನು ಕೇಳುವ ಹಾಗಿಲ್ಲ ಸರ್. ತಾವು ಒಪ್ಪಿಗೆಯಿತ್ತರೆ ನಾನು ಬೆಳಿಗ್ಗೆಯ ಪತ್ರಿಕೆಗಳಿಗೆ (Morning papers) ಫೋನ್‌ಮಾಡಿ ಸುದ್ದಿ ತಿಳಿಸುತ್ತೇನೆ."

"ಎಂದು ನಿಮ್ಮ ಸಮಾರಂಭ."

"ನಾಳೆ ಸಂಜೆಗೆ."

ಪ್ರಸಾದ್ ಕ್ಷಣಕಾಲ ಯೋಚನೆಮಾಡಿ ಲಲಿತಮ್ಮನ ಮುಖ ನೋಡಿದ.

ಲಲಿತಮ್ಮ ತನ್ನ ಸಹಾಯಕ್ಕೆ ಬರುತ್ತಾಳೆಂದು ಅವನ ನಿರೀಕ್ಷಣೆಯಾಗಿತ್ತು. ಲಲಿತಮ್ಮ ನಯವಾಗಿ

"ಒಪ್ಪಿಕೊಳ್ಳಿ. ಅವರು ಬಹಳ ಹೇಳುತ್ತಿದ್ದಾರೆ. ಮೂರ್ತಿಯವರು ಇಲ್ಲಿಯವರೆಗೆ ಬಂದು, ಒಂದು ಗಂಟೆಯಮೇಲೆ ನಿಮಗಾಗಿ ಕಾದಿದ್ದಾರೆ."

ಎಂದುಬಿಟ್ಟಳು. ಪ್ರಸಾದ್ ನಸುನಗುತ್ತಾ

"ಇನ್ನೇನು ಮೂರ್ತಿಗಳೇ, ಸುಪ್ರೀಮ್‌ಕೋರ್ಟ್ ಆರ್ಡರ್ ಬಂದು ಬಿಟ್ಟಿತಲ್ಲಾ" ಎಂದ.

ಮೂರ್ತಿಗಳಿಗೆ ಪರಮಸಂತೋಷವಾಯಿತು.

"ನಾಳೆ ಐದು ಗಂಟೆಗೆ ಟ್ಯಾಕ್ಸಿ ಕಳಿಸಿಕೊಡುತ್ತೇನೆ ಸರ್."

"ಆಗಬಹುದು."

ಎಂದು ಹೇಳಿ ಮೂರ್ತಿಗಳನ್ನು ಬೀಳ್ಕೊಟ್ಟು

"ಒಳ್ಳೆಯ ಕೈಕೊಟ್ಟೆಯಲ್ಲಾ ಲಲಿತಾ" ಎಂದ.

"ನಾನೇನು ಮಾಡಿದೆ."

"ತಪ್ಪಿಸಿಕೊಳ್ಳುವುದಕ್ಕೆ ಸಹಾಯಮಾಡುತ್ತೀ ಎಂದು ನಿನ್ನ ಕಡೆ ನೋಡಿದ್ದೇ ತಪ್ಪಾಯಿತು."

"ನೀವು ತಪ್ಪಿಸಿಕೊಳ್ಳುವುದು ನನಗೆ ಇಷ್ಟವಿರಲಿಲ್ಲ. ಬೂದಿಯನ್ನು ಕೊಡವಿಕೊಂಡು ಕೆಂಡ ಹೊರಗೆ ಬರಬೇಕು."

"ಕೆಂಡ ಮುಟ್ಟಿದರೆ ಕೈ ಸುಡುತ್ತದೆ."

"ಇಕ್ಕಳದಲ್ಲಿ ಹಿಡಿದುಕೊಳ್ಳಬಹುದು."

ಅವಳ ಮಾತಿನ ಧ್ವನಿಯನ್ನು ಗ್ರಹಿಸಿ ಪ್ರಸಾದ್ ಗಹಗಹಿಸಿ ನಕ್ಕ.

"ಇವತ್ತು ನಿಮ್ಮ 'ಸಂದರ್ಶನ' ಹೇಗಾಯಿತು. ಲೂಯಿ ಫಿಷರ್ ಏನು ಹೇಳಿದರು."

"ಗೊತ್ತೇ ಇದೆಯಲ್ಲಾ. ಮೀಟಿಂಗಿಗೆ ಹೋಗದಿದ್ದರೂ ಅವರು ಹೇಳುವುದನ್ನು ಊಹಿಸಬಹುದಾಗಿತ್ತು. ಇವತ್ತು ಭೂಲೋಕ ಸ್ವರ್ಗವೆಂದರೆ ಸೋವಿಯಟ್ ರಷ್ಯಾ. ಅಲ್ಲಿ ಬಡತನವಿಲ್ಲವಂತೆ - ಭಿಕ್ಷುಕರಿಲ್ಲವಂತೆ - ಮತಾಚಾರ್ಯರ ಹಾವಳಿಯಿಲ್ಲವಂತೆ - ಪ್ರತಿಯೊಬ್ಬ ಪ್ರಜೆಯೂ ಉಂಡುಟ್ಟು ಸುಖ

ವಾಗಿರುವನಂತೆ - ಸ್ಟಾಲಿನ್ ತಂದೆಯ ಹಾಗೆ ಎಲ್ಲರನ್ನೂ ಏಕಪ್ರಕಾರವಾಗಿ ನಡಸಿಕೊಳ್ಳುತ್ತಿರುವನಂತೆ!"

"ಹಾಗೇ ಇರಬಾರದೇಕೆ ?"

"ಸ್ಟಾಲಿನ್ ಮಂತ್ರವಾದಿ ಎಂದು ಒಪ್ಪಿಕೊಂಡರೆ ಫಿಷರ್ ಅವರ ಚಿತ್ರ ನಂಬಬಹುದು. ಸಹಸ್ರಾರು ವರ್ಷಗಳ ಅಜ್ಞಾನ, ಅಂಧಕಾರ, ದಾರಿದ್ರ್ಯ ವನ್ನು ಒಂದೆರಡು ದಶಕಗಳಲ್ಲಿ ಸ್ಟಾಲಿನ್ ತೊಡೆಮು ಹಾಕಿದ್ದಾನೆಂದರೆ ಯಾರು ನಂಬಲು ಸಾಧ್ಯ."

"ಫಿಷರ್ ಸುಳ್ಳು ಹೇಳುತ್ತಿದ್ದಾರೆಯೇ ?"

"ಇದನ್ನು ರಾಜಕೀಯ ವರ್ತುಲಗಳಲ್ಲಿ 'ಸುಳ್ಳು' ಎಂದು ಕರೆಯುವು ದಿಲ್ಲ - ಡಿಪ್ಲೊಮ್ಯಾಟಿಕ್ ಸ್ಟೇಟ್‌ಮೆಂಟ್ (Diplomatic Statement) ಎಂದು ಕರೆಯುತ್ತಾರೆ. ಫಿಷರ್ ರಷ್ಯಾ ಹೊಗಳದಿದ್ದರೆ ಅವರು ಉಳಿಯುವ ಹಾಗೇ ಇಲ್ಲ. ರಷ್ಯಾ ಒಳಗೆ ಅವರನ್ನು ಸೇರಿಸುವುದಿಲ್ಲ. ಅಲ್ಲದೆ ರಷ್ಯಾ ಹೊರಗಿನ ಕಮ್ಯುನಿಸ್ಟರು ಅವರನ್ನು ಬಾಳಗೊಡುವುದಿಲ್ಲ. — ಈ ರಷ್ಯಾ ಆರಾಧನೆ ಬಹಳ ದಿವಸ ನಿಲ್ಲುವುದಿಲ್ಲ."

"ಹಾಗೆಂದರೆ............"

"ಯಾರು ಇಂದು ರಷ್ಯಾದೇಶವನ್ನು 'ಸಾಮ್ಯವಾದೀ ಆರನೆಯ ಸ್ವರ್ಗ' ವೆಂದು ವರ್ಣಿಸುತ್ತಿದ್ದಾರೆಯೋ ಅವರೇ ನಾಳೆ ವಿರೋಧಾಭಿಪ್ರಾಯ ವ್ಯಕ್ತ ಪಡಿಸುತ್ತಾರೆ. ಸುಳ್ಳು ಚಿರಾಯುವಲ್ಲ."

"ರಷ್ಯಾ ಕೈಗೊಂಡಿರುವ ಪ್ರಯತ್ನ ಫಲಕಾರಿಯಾಗಬೇಕೆಂದು ನೀವು ಬಯಸುವುದಿಲ್ಲವೇ ?"

"ಮನಃಪೂರ್ವಕವಾಗಿ ಬಯಸುತ್ತೇನೆ. ಆದರದು ಸಾಧ್ಯವಿಲ್ಲ."

"ಹೇಗೆ ಸಾಧ್ಯವಿಲ್ಲ ?"

"ರಷ್ಯಾ ಮಾರ್ಕ್ಸ್ - ವಾದದ (Marxism) ವ್ಯಕ್ತಸ್ವರೂಪವೆಂದಲ್ಲವೇ ಜನ ತಿಳಿದಿರುವುದು."

"ಹೌದು."

"ಲೋಕದ ಶಾಂತಿಯನ್ನು ಕಾಪಾಡಿ, ಲೋಕವನ್ನು ಸೌಖ್ಯದ ಹೆಬ್ಬಾ ಗಿಲಿಗೆ ನಡಸುವ ಚೇತನವೇ ಮಾರ್ಕ್ಸ್ - ವಾದಕ್ಕಿಲ್ಲ. ಹಿಂಸೆಯ ಅಸ್ತಿಭಾರದ

ಮೇಲೆ ಅಹಿಂಸೆಯ ಕಟ್ಟಡ ಕಟ್ಟಲು ಸಾಧ್ಯವೇ? ವಿಚಾರದಾಸ್ಯದ ಅಸ್ತಿಭಾರದ ಮೇಲೆ ವಿಚಾರಸ್ವಾತಂತ್ರಸೌಧವನ್ನು ಕಟ್ಟಲು ಸಾಧ್ಯವೇ? ಮನುಷ್ಯನ ಉನ್ನತ ಪ್ರೇರಣೆಗಳನ್ನು ನಾಶಮಾಡಿ ಅವನನ್ನು ವಿಶ್ವಮಿತ್ರನನ್ನಾಗಿ ಮಾಡಲು ಸಾಧ್ಯವೇ? ಮಾನವನ ಸಹಜಗುಣಗಳನ್ನು ಮೆಟ್ಟಿ ಮಾರ್ಕ್ಸ್‌ವಾದ ಅವನಿಗೊಂದು ಕೃತಕ ಪ್ರಪಂಚ ನಿರ್ಮಿಸಿಕೊಡಲು ಪ್ರಯತ್ನಿಸುತ್ತಿದೆ."

"ಉನ್ನತಾದರ್ಶದ ಮಾತಂತಿರಲಿ. ಇಂದು ರಷ್ಯಾದಲ್ಲಿ ಎಲ್ಲರಿಗೂ ಹೊಟ್ಟೆಯ ತುಂಬ ಆಹಾರ, ಮೈತುಂಬ ಬಟ್ಟೆ ಸಿಕ್ಕುತ್ತಿದೆಯಲ್ಲ – ಅಷ್ಟು ಸಾಲದೇ? ವರ್ಗಗಳನ್ನು ನಿರ್ಮೂಲಮಾಡಿರುವುದು ರಷ್ಯಾಕ್ಕೆ ಕೀರ್ತಿತರುವ ವಿಷಯವಲ್ಲವೇ?"

"ರಷ್ಯಾದಲ್ಲಿ ಎಲ್ಲರಿಗೂ ಆಹಾರ, ವಸ್ತ್ರ, ವಸತಿಗಳ ಸೌಕರ್ಯವಿದೆಯೆಂದು ಹೇಳುತ್ತಿರುವವರು ಯಾರು - ರಷ್ಯಾ ಸರ್ಕಾರದವರು. ಇಂದಿಗೂ ರಷ್ಯಾದಲ್ಲಿ ಬಡವರಿದ್ದಾರೆ, ಭಿಕ್ಷುಕರಿದ್ದಾರೆ, ಚಳಿತಡೆಯಲಾಗದೆ ಬೀದಿಯಲ್ಲಿ ಬಿದ್ದು ಸಾಯುವ ನಿರ್ಭಾಗ್ಯರೂ ಇದ್ದಾರೆ. ರಷ್ಯಾದಲ್ಲಿ ವರ್ಗಗಳಿಲ್ಲವೇ? ರಷ್ಯಾದ ಮಹಾಕ್ರಾಂತಿ ಜಾರ್‌ಶಾಹಿಯನ್ನು ನಿರ್ಮೂಲಮಾಡಿತು. ಶ್ರೀಮಂತರ, ಹಾಗೂ ರಾಜವರ್ಗದವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿತು. ಶ್ರೀಮಂತ, ಬಡವ ಎನ್ನುವ ಭೇದವನ್ನು ತೊಡೆದು ಹಾಕುವುದಾಗಿ ಸಾರಿತು. ಹಿಂದೆ ರಷ್ಯಾದಲ್ಲಿ ಜಾರ್‌ಶಾಹಿ ಆಕ್ರಮಿಸಿದ್ದ ಸ್ಥಾನವನ್ನು ಇಂದು ಕಮ್ಯುನಿಸ್ಟರು ಆಕ್ರಮಿಸಿಕೊಂಡಿದ್ದಾರೆ. ಪೊಲಿಟ್ ಬ್ಯೂರೋ (Polit Bureau) ಸದಸ್ಯರೇ ಇಂದಿನ ರಷ್ಯಾದ ಶ್ರೀಮಂತರು (Aristocracy) — ಅವರ ಕೈ, ಬಾಯಿಗೆ ಅಡ್ಡಿಯೇ ಇಲ್ಲ; ಎರಡನೆಯ ಸ್ಥಾನ ಕಮ್ಯುನಿಸ್ಟ್ ಪಾರ್ಟಿಯ ಇತರ ಅಧಿಕಾರಿಗಳಿಗೆ; ಮೂರನೆಯ ಸ್ಥಾನ ಕಮ್ಯುನಿಸ್ಟ್ ಪಾರ್ಟಿಯ ಸಾಮಾನ್ಯ ಸದಸ್ಯರಿಗೆ. ಉಳಿದ ಪ್ರಜಾವರ್ಗ ಯಃಕಶ್ಚಿತ. ಅವರನ್ನು ಕೇಳುವವರೇ ಇಲ್ಲ. ಹಳೆಯ ವರ್ಗಗಳು ಹೊಸ ವರ್ಗಗಳಿಗೆ ಎಡೆಕೊಟ್ಟಿವೆ – ರಕ್ತದ ಹೊನಲು ಹರಿಸಿ."

"ಇದಕ್ಕೆ ಲೂಯಿ ಫಿಷರ್ ಏನನ್ನುತ್ತಾರೆ."

"ರಷ್ಯಾದ ರಾಜಕೀಯ ಧೋರಣೆಗೆ ಒಪ್ಪಿಗೆಯಾಗದುದನ್ನೆಲ್ಲಾ

'ಟ್ರಾಟ್ಸ್ಕಿ ಗುಂಪಿನ ಅಪಪ್ರಚಾರ'ವೆನ್ನುತ್ತಾರೆ. ಹೊಸದಾಗಿ ಮತಾಂತರ ಹೊಂದಿರುವವರಿಗೆ ಧರ್ಮಶ್ರದ್ಧೆ ಬಹಳವಂತೆ!"

"ನೀವು ಹೇಳುವುದು ನೋಡಿದರೆ ಭಾರತಕ್ಕೆ ಕಮ್ಯೂನಿಸಂ ಒಗ್ಗುವುದಿಲ್ಲ ವೆಂದು ಕಾಣುತ್ತದೆ."

"ನಿಸ್ಸಂದೇಹವಾಗಿ. ಕಮ್ಯುನಿಸಂ ನಮ್ಮ ಪರಂಪರೆ ಹಾಗೂ ಸಂಸ್ಕೃತಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಕಮ್ಯುನಿಸಂ ಪಾಶ್ಚಾತ್ಯ ಜಗತ್ತಿನ ಅಸಹನೆಯ ಶಿಶು. ಭಾರತದ ನಾಶ ಬಯಸುವವರು ಮಾತ್ರ ಈ ಟ್ರೋಜನ್ ಕುದುರೆಯನ್ನು (Trojan Horse) ಭಾರತದೊಳಗೆ ಬಿಟ್ಟುಕೊಳ್ಳಬೇಕು."

"ಭಾರತಕ್ಕೆ ಸಾಮ್ಯವಾದ ಬೇಡವೆನ್ನುವಿರಾ?"

"ಭಾರತಕ್ಕೆ ಬೇಕಾದ್ದೇ ಸಾಮ್ಯವಾದ. ಭಾರತ ಹುಟ್ಟಿ ಬೆಳೆದಿರುವುದೇ ಸಾಮ್ಯವಾದದ ತಳಹದಿಯ ಮೇಲೆ. ನಾವು ಸಾಮ್ಯವಾದವನ್ನು ಮಾರ್ಕ್ಸ್ ನಿಂದಾಗಲಿ, ಲೆನಿನ್‌ನಿಂದಾಗಲಿ, ಸ್ಟಾಲಿನ್‌ನಿಂದಾಗಲಿ ಕಲಿಯಬೇಕಾಗಿಲ್ಲ. ಉಪನಿಷತ್ತಿನ ಋಷಿಗಳು, ಗೌತಮ ಬುದ್ಧ, ಮಹಾತ್ಮಗಾಂಧಿ ವಿಶ್ವಶಾಂತಿಯನ್ನು ಸ್ಥಾಪಿಸುವ ಸಾಮ್ಯವಾದವನ್ನು ಬೋಧಿಸಿದ್ದಾರೆ – ಅದನ್ನು ಕಾರ್ಯೋನ್ಮುಖ ಮಾಡಿದ್ದಾರೆ. ರಷ್ಯಾದ 'ರಿವಾಲ್ವರ್ ಸಾಮ್ಯವಾದ' (Revolver Socialism) ಮಾತ್ರ ನಮಗೆ ಅಗತ್ಯವಿಲ್ಲ. ಸತ್ಯಕ್ಕೆ ಬೆಲೆಗೊಡದ ವಾದ ವಾದವಾಗಿ ಉಳಿಯುತ್ತದೆಯೇ ವಿನಾ ಧರ್ಮವಾಗುವುದಿಲ್ಲ."

"ನಿಮ್ಮ ಅಭಿಪ್ರಾಯಗಳನ್ನು ಕಂಡು ನನಗೆ ಹೆದರಿಕೆಯಾಗುತ್ತದೆ ದೊರೆ."

"ಏಕೆ?"

"ನಮ್ಮ ಕಮ್ಯುನಿಸ್ಟ್ ಮಿತ್ರರು ನಿಮ್ಮ ಮೇಲೆ ಅಪಪ್ರಚಾರದ ಬಿರುಗಾಳಿಯನ್ನೇ ಎಬ್ಬಿಸಿಬಿಡುತ್ತಾರೆ."

"ಯಾವ ಅಪಪ್ರಚಾರವೂ ಹಗಲನ್ನು ರಾತ್ರಿ ಮಾಡುವುದಕ್ಕಾಗುವುದಿಲ್ಲ! ರಾತ್ರಿಯನ್ನು ಹಗಲು ಮಾಡುವುದಕ್ಕಾಗುವುದಿಲ್ಲ."

"ಇನ್ನು ಊಟ ಮಾಡೋಣವೋ?"

"ಓಹೋ! ಪಾಪ ಗೌರಮ್ಮನವರು ನಮಗಾಗಿ ಕಾಯುತ್ತಿದ್ದಾರೆ."

ಊಟ ಮುಗಿಸಿಕೊಂಡು ರೂಮ್ ಸೇರಿದ ಮೇಲೆ ಪ್ರಸಾದ್ ಅಂದಿನ

ಪತ್ರಿಕೆಗಳನ್ನು ಮುಗುಚಿಹಾಕುತ್ತ ಕುಳಿತ. ಲಲಿತಮ್ಮ ತಾಯಿಗೆ ನೆರವಾಗಿ, ಅಡಿಗೆಯ ಮನೆಯ ಕೆಲಸ ಮುಗಿಸಿಕೊಂಡು ಬಂದು.

"ನಾನು ಮಾತನಾಡಿದರೆ ನಿಮ್ಮ ಓದಿಗೆ ಅಡ್ಡಿಯಾಗುತ್ತದೆಯೇ?"

"ಇಲ್ಲ ಹೇಳು - ದಿನ ಪತ್ರಿಕೆಗಳನ್ನು ನೋಡುತ್ತಿದ್ದೆ."

"ನಿಮಗೊಂದು ವಿಷಯ ಹೇಳಬೇಕಾಗಿದೆ."

"ಯಾರ ವಿಷಯ?"

"ನಮ್ಮ ಪಕ್ಕದ ಮನೆಯ ಮಂಗೂಭಾಯ್ ಸಂಸಾರದ ಕಥೆ."

"ಅದನ್ನು ನಾವು ಚರ್ಚಿಸುವುದು ನ್ಯಾಯವೇ?"

"ಕಂಡವರ ಸಂಸಾರದ ವಿಷಯ ಚರ್ಚಿಸಲು ನಾನೂ ಉತ್ಸುಕಳಲ್ಲ. ಆದರೆ ಈ ಕಥೆಯಲ್ಲಿ ನಮ್ಮ ಸಾಮಾಜಿಕ ಜೀವನದ ಒಂದು ಮಹಾಸಮಸ್ಯೆ ಅಡಕವಾಗಿದೆ – ಅದಕ್ಕಾಗಿ ನಿಮ್ಮಲ್ಲಿ ಹೇಳಲು ಆತುರಳಾಗಿದ್ದೇನೆ."

"ಹಾಗಾದರೆ ಹೇಳು."

ಲಲಿತಮ್ಮ ಗಂಡನಿಗೆ ಮಂಗೂಭಾಯ್, ನಿರ್ಮಲಾ ಅವರ ಕಥೆಯನ್ನು ಕೂಲಂಕಷವಾಗಿ ವಿವರಿಸಿದಳು. ಪ್ರಸಾದ್ ಚಿಂತಾಪರವಶನಾದ. ನಿರ್ಮಲನ ದುರಂತ ಜೀವನ ಅವನ ಅಂತಃಕರಣವನ್ನು ಅಲುಗಾಡಿಸಿತ್ತು. ಮನಸ್ಸು ಅವಳ ದುರ್ವಿಧಿಯನ್ನು ನೆನೆದು ಮರುಕಗೊಂಡಿತು.

"ಇದು ನಿರ್ಮಲಾ ಒಬ್ಬಳ ಕಥೆಯೂ ಅಲ್ಲ, ಸಮಸ್ಯೆಯೂ ಅಲ್ಲ ಲಲಿತಾ. ಮುಂಬಯಿಯ ವ್ಯಾಪಾರಿಗಳ ಮನೆಯಲ್ಲೆಲ್ಲಾ ಒಬ್ಬ ನಿರ್ಮಲಾ ಇದೇ ಸಮಸ್ಯೆಯನ್ನೆದುರಿಸುತ್ತಿದ್ದಾಳೆ. ಹಣ ಗುಣಿಸುವ ಯಂತ್ರಗಳಾಗಿರುವ ವ್ಯಾಪಾರಿಗಳು ನಮ್ಮ ರಾಷ್ಟ್ರೀಯ ಹಾಗೂ ಸಾಮಾಜಿಕ ಜೀವನದ ಅಸ್ತಿಭಾರವನ್ನೇ ಅಲುಗಾಡಿಸುತ್ತಿದ್ದಾರೆ. — ಕೆಲವು ತಿಂಗಳ ಹಿಂದೆ ನಾನು 'ಸೆಂಚುರಿ'ಯಲ್ಲಿ '**ಮುಂಬಯಿಯ ರಾತ್ರಿ ಜೀವನ**'ದ ಬಗ್ಗೆ ಕೆಲವು ಲೇಖನಗಳನ್ನು ಬರೆದುದು ಜ್ಞಾಪಕವಿರಬಹುದು."

"ಇದೆ."

"ಆ ಲೇಖನ ಮಾಲೆಗೆ ವಿಷಯ ಸಂಗ್ರಹಿಸಲು, ವಿಜಿಲೆನ್ಸ್ ಡಿಪಾರ್ಟ್‌ಮೆಂಟಿನ (Vigilence Department) ಅಧಿಕಾರಿಗಳು ಬೈಂದೂರ್ ಅವರ ಜತೆ ತಿರುಗಾಡಬೇಕಾಯಿತು. ಬೈಂದೂರ್ ನನ್ನನ್ನು ಹಲವು ವೇಶ್ಯಾವಾಟ

ಗಳಿಗೆ ಕರೆದೊಯ್ದರು – ಫ್ರೆಂಚ್, ಅಮೆರಿಕನ್, ಇಂಗ್ಲಿಷ್, ಟರ್ಕಿ, ಪರ್ಶಿಯ, ಜಪಾನಿ, ಚೀಣಿ ವೇಶ್ಯಾಗೃಹಗಳನ್ನೂ ನೋಡಿಬಂದೆ. ಗ್ರ್ಯಾಂಟ್ ರೋಡ್, ಬಲ್ಲಾರ್ಡ್ ಎಸ್ಟೇಟ್, ಚರ್ಚ್‌ಗೇಟ್, ಫೋರ್ಟ್ ಭಾಗಗಳಲ್ಲಿ. ಮರಾಟಿ, ಗುಜರಾತಿ, ಕರ್ನಾಟಕ ರಜಪುತಾಣ ದೇಶೀಯರ ವೇಶ್ಯಾಗೃಹ ಗಳಿಗೂ ಹೋಗಿ ಬಂದೆ ಗಿರ್ಗಾಮ್, ಫರಾಸ್ ರೋಡ್, ದಾದರ್, ಸಾಂತಾ ಕ್ರೂಸ್ ಮೊದಲಾದ ಕಡೆಗಳಲ್ಲಿ. ಅವರಲ್ಲಿ ಬಹುಮಂದಿಯನ್ನು ಪೋಷಿಸು ತ್ತಿರುವವರು ವ್ಯಾಪಾರಿಗಳು. – ಫರಾಸ್ ರೋಡಿನಲ್ಲಿ ವೇಶ್ಯಾಗೃಹಗಳ ಒಂದು ಸಾಲಿದೆ. ಅಲ್ಲಿ ಪ್ರತಿರಾತ್ರಿ ಗಾಯನ ವಾದನಗಳಾಗುತ್ತವೆ. ವ್ಯಾಪಾರಿಗಳು ಅಂಗಡಿ ಮುಚ್ಚಿಕೊಂಡು ಅಲ್ಲಿ ಸೇರುತ್ತಾರೆ. ಅವರಲ್ಲಿ ಬಹುಮಂದಿ ಸದ್ಗೃಹ ಸ್ಥರು. ಈ ಊರಿನ ಮಂಗೂಭಾಯ್‌ಗಳೆಲ್ಲಾ ಅಲ್ಲಿ ಸಿಕ್ಕುತ್ತಾರೆ!"

"ಸಮಸ್ಯೆ ನಾನು ತಿಳಿದುಕೊಂಡಿದ್ದುದಕ್ಕಿಂತಲೂ ಗಾಢವಾಗಿದೆ"

"ಇದೊಂದು ವಿಷವ್ಯೂಹ - ವ್ಯಾಪಾರಿಗಳು ಅಂಗಡಿ ಮುಚ್ಚಿಕೊಂಡು ಮನೆಗೆ ಹೋಗುವ ಅಭ್ಯಾಸಮಾಡಿಕೊಂಡರೆ ಸಮಸ್ಯೆ ಸ್ವಲ್ಪ ಪರಿಹಾರವಾಗು ತ್ತದೆ. ರಾತ್ರಿ ಹನ್ನೆರಡರ ವರೆಗೆ ಸಟ್ಟಾ ಮಾರ್ಕೆಟ್ಟಿನಲ್ಲಿ ಸಾಯುವ ಅವರಿಗೆ ಮನೆಯ ನೆನಪು ಹೇಗೆ ಬರಬೇಕು. ಸಟ್ಟಾದಲ್ಲಿ ಸಂಪಾದನೆಯಾದ ಸಂತೋ ಷಕ್ಕೆ ವೇಶ್ಯಾಗೃಹ ಸೇರುತ್ತಾರೆ; ಸಟ್ಟಾದಲ್ಲಿ ಕಳೆದುಕೊಂಡರೆ ಆ ದುಃಖ ಮರೆಯುವುದಕ್ಕೆ ವೇಶ್ಯಾಗೃಹ ಸೇರುತ್ತಾರೆ."

"ಇದರಲ್ಲಿ ವೇಶ್ಯೆಯರ ಜವಾಬ್ದಾರಿ ಏನೂ ಇಲ್ಲವೇ? ಅವರು ದೇಹಾ ಕರ್ಷಣೆ ಮಾಡುವುದರಿಂದಲೇ ಅಲ್ಲವೆ ಹಲವರು ದಾರಿಬಿಟ್ಟು ಹೋಗುವುದು."

"ನಾನು ಹಲವು ವೇಶ್ಯೆಯರೊಡನೆ ಮಾತನಾಡಿ ಈ ವಿಷಯ ಚರ್ಚಿಸಿ ದ್ದೇನೆ. ಒಬ್ಬಾಕೆ – ವಿಜಾಪುರ ಜಿಲ್ಲೆಯವಳು – ವಿಜಾಪುರ ಬರಗಾಲಕ್ಕೆ ಪ್ರಸಿದ್ಧವಾದ ಜಿಲ್ಲೆ. ಅಲ್ಲಿ ಪ್ರತಿವರ್ಷ ಕ್ಷಾಮ - ಪ್ರತಿಯೊಂದು ಕ್ಷಾಮವೂ ವೀರಕ್ಷಾಮವೇ. ಈ ಹೆಣ್ಣುಮಗಳು ಬಡತನದಲ್ಲಿಯೇ ಮರ್ಯಾದೆ ಯಾಗಿ ಸಂಸಾರಮಾಡಿಕೊಂಡಿದ್ದಳು. ನಾಲ್ಕು ವರ್ಷಗಳ ಕೆಳಗೆ ಒಂದು ಹನಿ ಮಳೆ ಬೀಳಲಿಲ್ಲ. ಸಾವಿರಾರು ಜನ ಊರುಬಿಟ್ಟು ವಲಸೆ ಹೋದರು. ಈ ಹೆಣ್ಣುಮಗಳು ಊರಿಗೇ ಕಚ್ಚಿಕೊಂಡಿದ್ದಳು. ಆಕೆಯ ಮೂರು ಮಕ್ಕಳು ಹಸಿವಿನ ಬಾಧೆ ತಾಳಲಾರದೆ ಸತ್ತರು. ಗಂಡನೂ ಸತ್ತ. ಉಳಿದಿದ್ದ ಮಗು

ವನ್ನೆತ್ತಿಕೊಂಡು ಮುಂಬಯಿಗೆ ಬಂದಳು. ಕೆಲಸ ಹುಡುಕಿದಳು – ಕೆಲಸ ಸಿಗಲಿಲ್ಲ; ಭಿಕ್ಷೆ ಬೇಡಿದಳು - ಭಿಕ್ಷೆಯಿಂದ ಹೊಟ್ಟೆ ತುಂಬುತ್ತಿರಲಿಲ್ಲ ; ಕೊನೆಗೆ ಫರಾಸ್ ರೋಡ್ ಸೇರಿದಳು. 'ಈಗ ಸುಖವಾಗಿದ್ದೀಯಾ ತಾಯಿ' ಎಂದು ಕೇಳಿದೆ. ಕಣ್ಣುತುಂಬ ನೀರು ತಂದುಕೊಂಡು 'ಏನು ಸುಖ ಅಣ್ಣಾ. ನಾಯಿಗಿಂತ ಕಡೆ ನನ್ನ ಜನ್ಮ. ಈ ಮಗುವಿಗೋಸ್ಕರ ಬದುಕಿರಬೇಕಾಗಿದೆ' ಎಂದಳು. — ರಜಪುತ್ರಾಣದ ಒಬ್ಬ ಹೆಣ್ಣುಮಗಳ ಜತೆ ಮಾತನಾಡಿದೆ. ಅವಳೂ ಅವಳ ಮನೆಯವರೂ ಒಬ್ಬ ದೊಡ್ಡ ಜಮೀನುದಾರನ ಒಕ್ಕಲುಮಕ್ಕಳು. ಜಮೀನುದಾರನ ಮಗ ಶುದ್ಧ ಪಟಿಂಗ. ಅವಿವಾಹಿತೆಯಾಗಿದ್ದ ಈ ಹುಡುಗಿಯನ್ನು ಕೆಡಿಸಿದ. ಊರಿನ ಜನ ಪಂಚಾಯಿತಿ ಮಾಡಿ ತಪ್ಪನ್ನು ಹೆಣ್ಣುಮಗಳ ಮೇಲೆ ಹೊರಿಸಿ ಅವಳನ್ನು ಊರಿನಿಂದ ಆಚೆಗಟ್ಟಿದರು. ಮುಂಬಯಿಯ ಫರಾಸ್ ರೋಡೇ ಅವಳ ಆಶ್ರಯಸ್ಥಾನವಾಯಿತು. - ಗಿರ್ಗಾಮಿನ ವೇಶ್ಯೆಯರ ವರ್ಗ ಇದಕ್ಕಿಂತ ಸ್ವಲ್ಪ ಮೇಲ್ತರಗತಿಯದು. ಅಲ್ಲಿ ಒಬ್ಬ ಘಾಟಿಯಾ ಹೆಣ್ಣುಮಗಳ ಜತೆ ಮಾತನಾಡಿದೆ. ಅವಳೊಮ್ಮೆ ಪಂಡರಾಪುರಕ್ಕೆ ಯಾತ್ರೆ ಹೋಗಿದ್ದಳಂತೆ. ಯಾತ್ರೆಯ ಗಲಭೆಯಲ್ಲಿ ಅವಳಿಗೂ ಅವಳ ಮನೆಯುವರೂ ಬೇರೆ ಬೇರೆಯಾದರು. ಅವಳ ನಿಸ್ಸಹಾಯಕ ಸ್ಥಿತಿ ಕಂಡು ಒಬ್ಬ ಮುದುಕಿ ಆಶ್ರಯ ಕೊಟ್ಟಳು. ಯಾತ್ರಿಕರ ಆತಿಥ್ಯಮಾಡುವುದೇ ಮುದುಕಿಯ ಕಸುಬು. ಈ ಘಾಟಿಯಾ ಹೆಣ್ಣುಮಗಳೂ ಕೆಲದಿನಗಳಲ್ಲಿಯೇ ವೃತ್ತಿ ಕೈಗೊಳ್ಳಬೇಕಾಯಿತು. ಒಂದು ವರ್ಷದ ತರುವಾಯ ವೇಶ್ಯಾ ವ್ಯಾಪಾರಿಗಳಿಗೆ ಮುದುಕಿ ಹೆಣ್ಣುಮಗಳನ್ನು ಮಾರಿದಳು. ಅವಳನ್ನು ಮುಂಬಯಿಗೆ ಕರೆತಂದು ಗಿರ್ಗಾಮಿನಲ್ಲಿ ವ್ಯಾಪಾರಿಗಳು ಸ್ಥಾಪಿಸಿದರು. — ಸಾಕೋ ಇನ್ನೂ ಹೇಳಲೋ ?"

"ಸಾಕು ಸಾಕು" ಎಂದಳು ಲಲಿತಾ.

ಅವಳ ಕಣ್ಣುಗಳು ಕಂಬನಿಯ ಕೊಳಗಳಾಗಿದ್ದವು.

"ಇದಕ್ಕೇನು ಪರಿಹಾರ ?"

"ರಾಷ್ಟ್ರ, ಸಮಾಜ, ವ್ಯಕ್ತಿಯ ಜಾಗೃತಿ."

"ಅಲ್ಲಿಯವರೆಗೆ !"

"ನಿತ್ಯನರಕ."

"ನಿರ್ಮೂಲನನ್ನೇನು ಮಾಡುವಿರಿ ?"

"ಅವಳು ನಿರಾಶ್ರಿತೆಯಾದಾಗ ನಮ್ಮಲ್ಲಿ ಬಂದಿರಲಿ. ನಮ್ಮ ಅನ್ನದಲ್ಲಿ ಅವಳಿಗೂ ಒಂದು ತುತ್ತು ಇಟ್ಟರಾಯಿತು."

ಗಂಡನ ಮಾತು ಲಲಿತಮ್ಮನಿಗೆ ವಿಶೇಷ ತೃಪ್ತಿಯನ್ನಿತ್ತಿತು. ಆ ರಾತ್ರಿ ಅವಳು ಕಣ್ಣುಮುಚ್ಚಲಿಲ್ಲ. ನಿರ್ಮಲನ ದುರಂತ ಜೀವನ ಹಾಗೂ ನಿರ್ಭಾಗ್ಯ ಹೆಣ್ಣುಮಕ್ಕಳ ಕರುಣ ಕಥೆ ಅವಳಿಗೆ ತಳಮಳವನ್ನುಂಟುಮಾಡಿತು.

ಶಖೆಯೂ ಸಹಿಸಲಸಾಧ್ಯವಾಗಿತ್ತು.

ಮಲಗಿದ್ದ ಹಾಸಿಗೆಯೂ ಕಾದು ಬಿಸಿಯಾಗಿತ್ತು.

ಲಲಿತ ಎದ್ದು ಒಂದು ಗ್ಲಾಸ್ ನೀರು ಕುಡಿದು ಕಿಟಕಿಯನ್ನೊರಗಿ ನಿಂತಳು. ಅಲ್ಲಿಯೂ ಗಾಳಿಯ ಸುಳಿವಿಲ್ಲ.

ಮುಂಬಯಿ ಪ್ರಶಾಂತವಾಗಿತ್ತು. ಟ್ರಾಮು ಕಾರುಗಳ ಓಡಾಟವಿರಲಿಲ್ಲ. ರಸ್ತೆಯಲ್ಲಿ ಬೀಟಿನ ಪೋಲೀಸಿನವರನ್ನುಳಿದು ಯಾರೂ ತಿರುಗುತ್ತಿರಲಿಲ್ಲ.

'ಶಾಂತಿ - ಶಾಂತಿ - ಶಾಂತಿ ಎಲ್ಲೆಲ್ಲಿಯೂ ಶಾಂತಿ.'

ಆದರೆ

'ಅದರಡಿಯಲ್ಲಿ ಎಂಥ ಅಶಾಂತಿ! ಎಂಥ ಕ್ರಾಂತಿ! ಎಂಥ ಶೋಷಣೆ.'

'ಈ ನಡುರಾತ್ರಿಯಲ್ಲಿ ಎಂಥೆಂಥ ಕೃತ್ಯಗಳು ನಡೆಯುತ್ತಿವೆಯೋ?'

'ಎಷ್ಟು ಸಂಸಾರಗಳು ನಾಶವಾಗುತ್ತಿವೆಯೋ?'

'ಎಷ್ಟು ಜನ ನಿರ್ಮಲರು ಕೊರಗುತ್ತಿರುವರೋ?'

'ಸುತ್ತ ನಾಲ್ಕು ಕಡೆಯಿಂದ ಶೋಷಿತರ ಚೀತ್ಕಾರ – ಶೋಷಕರ ನಿರ್ಲಜ್ಜ ರಾಕ್ಷಸೀ ಅಟ್ಟಹಾಸ!'

'ಇದು ಮನುಷ್ಯರ ಜಗತ್ತೆ!?'

'ಇದು ಜೀವನವೇ?'

೨

ಆಮದು, ರಫ್ತು ವ್ಯಾಪಾರವಮಾಡುತ್ತಿದ್ದ 'ಇಂಡೋ - ಬ್ರಿಟಿಷ್ ಟ್ರೇಡಿಂಗ್ ಕಂಪೆನಿ'ಯ (Indo – British Trading Company) ಗುಮಾಸ್ತರಾಗಿ ಕೆಲಸಕ್ಕೆ ಸೇರಿದ ನರಸಿಂಹಮೂರ್ತಿ ಹತ್ತು ವರ್ಷಗಳಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಪದವಿಗೇರಿದ್ದರು. ಕಂಪೆನಿಯ ಮ್ಯಾನೇಜರ್ ಕಿಂಬರ್ಲಿಯವರಿಗೂ, ಮ್ಯಾನೇಜಿಂಗ್ ಡೈರೆಕ್ಟರ್ ಯಂಗ್ ಅವರಿಗೂ ನರಸಿಂಹಮೂರ್ತಿ ಎಂದರೆ ಅಪಾರ ಗೌರವ, ನಂಬಿಕೆ. ಅವರ ಗೌರವ, ನಂಬಿಕೆಗೆ ನರಸಿಂಹಮೂರ್ತಿ ಎಲ್ಲ ರೀತಿಯಿಂದಲೂ ಅರ್ಹರಾಗಿದ್ದರು. ಕಂಪೆನಿ ಕೆಲಸಕಾರ್ಯಗಳಲ್ಲಿ ಅವರು ತೋರಿಸಿದ್ದ ದಕ್ಷತೆಯನ್ನೇ ಸ್ವಂತ ಉದ್ಯಮದಲ್ಲಿ ತೋರಿದ್ದರೆ ಬೇಕಾದಷ್ಟು ಹಣ ಗಳಿಸಬಹುದಾಗಿತ್ತು. ಕಂಪೆನಿಯ ಹಿತಕ್ಕೆ ಯಾವ ರೀತಿಯಲ್ಲಿಯೂ ಧಕ್ಕೆ ಬಾರದಂತೆ ನರಸಿಂಹಮೂರ್ತಿ ಅಲ್ಪಸ್ವಲ್ಪ ಸ್ವಂತ ವ್ಯವಹಾರ ಮಾಡಿಕೊಂಡು, ಹತ್ತಾರು ಸಾವಿರ ರೂಪಾಯಿ ಗಳಿಸಿಕೊಂಡಿದ್ದರು. ಕಂಪೆನಿಯೂ ಕೈತುಂಬ ಆರುನೂರು ರೂಪಾಯಿ ಸಂಬಳ ಕೊಡುತ್ತಿತ್ತು.

ನರಸಿಂಹಮೂರ್ತಿಯವರ ದಕ್ಷತೆ, ಸೇವಾಕಾಂಕ್ಷೆ, ವ್ಯವಹಾರಶೀಲಗಳನ್ನು ಪರಿಗಣಿಸಿಯೇ 'ಮೈಸೂರು ಅಸೋಸಿಯೇಷನ್' ಸದಸ್ಯರು ಅವರ ಕೊರಳಿಗೆ ಕಾರ್ಯದರ್ಶಿ ಪಟ್ಟಕಟ್ಟಿದ್ದರು. ಎರಡು ವರ್ಷ ಕಾರ್ಯದರ್ಶಿಗಳಾಗಿದ್ದು ವಿಶ್ರಾಂತಿ ಪಡೆಯಲು ಅವರು ಬಯಸಿದರೂ ಬಿಡದೆ ಸದಸ್ಯರು ಮೂರನೆಯ ವರ್ಷವೂ ಅವರನ್ನೇ ಕಾರ್ಯದರ್ಶಿಗಳನ್ನಾಗಿ ಚುನಾಯಿಸಿದ್ದರು.

ಬೆಳಿಗ್ಗೆ ಹತ್ತು ಗಂಟೆಯ ವೇಳೆಗೆ – ತಾವು ಆಫೀಸಿಗೆ ಬಂದಕೂಡಲೆ ನರಸಿಂಹಮೂರ್ತಿ ಸೆಂಚುರಿ ಕಾರ್ಯಾಲಯಕ್ಕೆ ಫೋನ್‌ಮಾಡಿ ಪ್ರಸಾದನಿಗೆ ಸಂಜೆಯ ಕಾರ್ಯಕ್ರಮವನ್ನು ಜ್ಞಾಪಿಸಿ

"ಐದು ಗಂಟೆಗೆ ಟ್ಯಾಕ್ಸಿ ಕಳಿಸಿಕೊಡುತ್ತೇನೆ" ಎಂದರು.

"ಕಾರ್ಯಕ್ರಮ ಆರೂವರೆಗಲ್ಲವೇ ?"

"ಹೌದು. ಸ್ವಲ್ಪ ಮುಂಚೆ ಬರುವುದೊಳ್ಳೆಯದು. ಕಾರ್ಯಕ್ರಮಕ್ಕೆ ಮುಂಚೆ ಟೀ ಇಟ್ಟುಕೊಂಡಿದ್ದೇವೆ."

"ಆಗಬಹುದು. ನಾನು ಐದು ಗಂಟೆಗೆ ಸಿದ್ಧವಾಗಿರುತ್ತೇನೆ."

"ತಮ್ಮ ಶ್ರೀಮತಿಯವರನ್ನೂ ಕರೆದುಕೊಂಡು ಬರಬೇಕು."

"ಅವರ ಅನುಕೂಲ ಹೇಗಿದೆಯೆನ್ನುವುದನ್ನು ವಿಚಾರಿಸಿ ತಿಳಿಸುತ್ತೇನೆ – ಸ್ವಲ್ಪ ತಡೆಯಿರಿ"

ಎಂದು ಫೋನ್ ಕೈಯಲ್ಲಿ ಹಿಡಿದುಕೊಂಡು ಲಲಿತಮ್ಮನನ್ನು ಕರೆದು

"ಸಂಜೆ ನೀನೂ ಬರಬೇಕೆಂದು ನರಸಿಂಹಮೂರ್ತಿಯವರು ಹೇಳುತ್ತಿದ್ದಾರೆ."

"ನಾನು ಸಂತೋಷವಾಗಿ ಬರುತ್ತಿದ್ದೆ. ಆದರೆ..........."

"ಏನಾದರೂ ಕೆಲಸವಿದೆಯೇ ?"

"ನಿರ್ಮಲನನ್ನು ಹೊರಗೆ ಕರೆದುಕೊಂಡು ಹೋಗುವ ಎಂದುಕೊಂಡಿದ್ದೆ."

"ಹಾಗೇಮಾಡು. ಶೆಟ್ಟರ ಸನ್ಮಾನಕ್ಕಿಂತಲೂ ಮುಖ್ಯವಾದ ಕೆಲಸ ಅದು."

ಎಂದು ಹೇಳಿ ಫೋನ್ ಕಿವಿಯ ಬಳಿ ಇಟ್ಟುಕೊಂಡು

"ಹಲೋ - ನರಸಿಂಹಮೂರ್ತಿಗಳೇ..........."

"ಸರ್."

"ಶ್ರೀಮತಿಯವರು ಬರಲು ಸಾಧ್ಯವಿಲ್ಲವೆಂದು ತಿಳಿಸುತ್ತಾರೆ. ಅವರಿಗೆ ಬೇರೆ 'ಎಂಗೇಜ್‌ಮೆಂಟ್' (Engagement) ಇದೆಯಂತೆ. ನಾನು ಸಿದ್ಧವಾಗಿರುತ್ತೇನೆ."

"ಹಾಗೇ ಆಗಲಿ ಸರ್"

ಪ್ರಸಾದ್ ಫೋನನ್ನು ಅದರ ನಿಲುವಿನಲ್ಲಿಟ್ಟು

"ನಿರ್ಮಲಾ ಮನೆಬಿಟ್ಟು ಹೊರಗೆ ಬರುವ ಹಾಗೇ ನಿಲ್ಲ - ಅತ್ತೆಯ ಸರ್ಪಕಾವಲು."

"ಬೆಳಿಗ್ಗೆ ಭದ್ರಾಬಹೆನ್ ಬಂದು ಮಗನ ಎರಡನೆಯ ಮದುವೆಯ ಸುದ್ದಿ ನಿರ್ಮಲನಿಗೆ ತಿಳಿಸುವ ಜವಾಬ್ದಾರಿ ಅಮ್ಮನಿಗೆ ವಹಿಸಿ ಹೋಗಿದ್ದಾಳೆ. ಅಮ್ಮ ಅದನ್ನು ನನಗೆ ಒರಗಿಸಿದ್ದಾಳೆ."

"ಭದ್ರಾಬಹೆನ್ ಮನಸ್ಸು ಗಟ್ಟಿಮಾಡಿರುವ ಹಾಗೆ ಕಾಣುತ್ತದೆ."

"ನಿರಕ್ಷರತೆ, ಅಜ್ಞಾನ ಎರಡು ಕೂಡಿದ ಮೇಲೆ ಪುಣ್ಯಕ್ಕೆ ಎಣೆಯುಂಟೇ ?"

"ಪಾಪ! ನೀನೇನು ಮಾಡಬಲ್ಲೆ !"

"ನಮ್ಮ ಮನೆಯಲ್ಲಿ ಸ್ಥಳವಿದೆಯೆಂದು ನಿರ್ಮಲನಿಗೆ ತಿಳಿಸುತ್ತೇನೆ."

"ಜಗತ್ತಿನ ಎಲ್ಲ ನಿರ್ಮಲರಿಗೂ ನನ್ನ ಮನೆಯಲ್ಲಿ ಸ್ಥಳ ಮಾಡಿಕೊಡುವ ಅನುಕೂಲ ಭಗವಂತ ನನಗೆ ಕೊಡಬಾರದೇ ?"

"ಕೊಟ್ಟಿದ್ದಾನೆ ಡಿಯರ್ (Dear) - ನಿಮ್ಮ ಮನೆಯಲ್ಲಿ ಅಲ್ಲದಿದ್ದರೂ ನಿಮ್ಮ ಮನದಲ್ಲಿ."

ಆಫೀಸಿನ ಆಳು ಒಂದು ಹೊರೆ ಪ್ರೂಫ್ ಹಾಳೆಗಳನ್ನು ತಂದು ಪ್ರಸಾದನ ಮೇಜಿನ ಮೇಲಿಟ್ಟ. ಲಲಿತಮ್ಮ ಮಾತನಾಡದೆ ಆ ಸ್ಥಳ ಬಿಟ್ಟಳು.

ಪ್ರಸಾದ್ ಆಫೀಸ್ ಬಿಟ್ಟ ಮನೆಗೆ ಬರಬೇಕಾದರೆ ನಾಲ್ಕು ಗಂಟೆ ಹೊಡೆದಿತ್ತು. ಮನೆಗೆ ಬಂದವನು ಮುಖಕ್ಷೌರಮಾಡಿಕೊಂಡು ಸ್ನಾನ ಮುಗಿಸಿದ. ಲಲಿತಾ ಕಾಫಿ, ತಿಂಡಿ ತಂದಿತ್ತಳು. ಹೊರಗೆ ಹೊರಡಲು ಅವಳೂ ಅಲಂಕರಿಸಿಕೊಂಡು ಸಿದ್ಧಳಾಗಿದ್ದಳು.

"ಪಿಕ್ಚರಿಗೆ ಹೋಗುವಿರಾ" ಎಂದು ಪ್ರಸಾದ್ ಕೇಳಿದ.

"ಇಲ್ಲ. ಚೌಪಾತಿ ಕಡೆ ಹೋಗಿಬರುತ್ತೇವೆ."

"ಕೈಯಲ್ಲಿ ಸಾಕಷ್ಟು ದುಡ್ಡಿದೆಯೇ ?"

"ಹತ್ತು ರೂಪಾಯಿ ಇದೆ - ಸಾಕು."

"ಸಾಲದು. ಇನ್ನೊಂದು ಇಪ್ಪತ್ತು ತೆಗೆದುಕೊಂಡು ಹೋಗು. ನಿರ್ಮಲನಿಗೆ ಏನುಬೇಕಾದರೂ ಕೊಡಿಸು."

"ನನಗೆ..........."

"ಅದಕ್ಕೆ ನನ್ನನ್ನು ಕೇಳಬೇಕೇ ?"

"ನನಗೆ ಬೇಕಾದ್ದು ನಾನು ತೆಗೆದುಕೊಂಡದ್ದಾಗಿದೆ."

"ಹೀಗೆ ಮಾತನಾಡುವವರನ್ನು ಹುಚ್ಚರು ಎನ್ನುತ್ತಾರೆ."

"ನನಗೆ ಆ ನಾಮಕರಣವಾಗಿ ಬಹಳ ದಿವಸವಾಯಿತು."

"ಟ್ಯಾಕ್ಸಿ ಬಂದಿರಬಹುದು."

"ಎಲ್ಲಿಗೆ ಬರಹೇಳಿದ್ದೀರಿ."

"ಆಫೀಸಿಗೆ ಕಳಸುವುದಾಗಿ ನರಸಿಂಹಮೂರ್ತಿ ಹೇಳಿದರು."

ಪ್ರಸಾದ್ ಆಫೀಸಿಗೆ ಹೋಗಿ ಐದು ನಿಮಿಷ ಕೂಡುವಲ್ಲಿ ಟ್ಯಾಕ್ಸಿ ಬಂದಿತು. ಟ್ಯಾಕ್ಸಿಯ ಜತೆಯಲ್ಲಿ ನರಸಿಂಹಮೂರ್ತಿ ಜಯರಾಮ್ ಅವರನ್ನು ಕಳಿಸಿಕೊಟ್ಟಿದ್ದರು. ಜಯರಾಮ್ ತಮ್ಮ ಪರಿಚಯ ತಾವೇ ಮಾಡಿ ಕೊಟ್ಟರು.

"ನಾನು ಮಾತುಂಗ ಹೈಸ್ಕೂಲಿನಲ್ಲಿ ಉಪಾಧ್ಯಾಯನಾಗಿದ್ದೇನೆ ಸರ್. ಟ್ಯಾಕ್ಸಿ ಮಾಡಿಕೊಂಡು ತಮ್ಮನ್ನು ಕರೆದುಕೊಂಡು ಬರುವಂತೆ ನರಸಿಂಹ ಮೂರ್ತಿಗಳು ಹೇಳಿದರು."

"ಬಹಳ ಸಂತೋಷ. ನರಸಿಂಹಮೂರ್ತಿಗಳು ಈಗ ಎಲ್ಲಿದ್ದಾರೆ."

"ಇವತ್ತು ಅವರು ಆಫೀಸಿಗೆ ಹೋಗಲಿಲ್ಲ ಸರ್. ಅಸೋಸಿಯೇಷನ್ನಿ ನಲ್ಲೇ ಇದ್ದಾರೆ."

"ತುಂಬ ಶ್ರದ್ಧಾಳುಗಳು. ಸಾರ್ವಜನಿಕ ಸೇವೆಯಲ್ಲಿ ಇಂಥ ಶ್ರದ್ಧೆ ತೋರುವುದು ಹಿರಿಯಗುಣ."

"ಸರಿಯಾಗಿ ಹೇಳಿದಿರಿ ಸರ್. ಮೂರ್ತಿಗಳು ಕಾರ್ಯದರ್ಶಿಯಾದ ಮೇಲೆ ಅಸೋಸಿಯೇಷನ್ ತುಂಬ ಅಭಿವೃದ್ಧಿಗೆ ಬಂದಿತು. ಅಸೋಸಿಯೇಷ ನ್ನಿನ ದುಂದುವೆಚ್ಚ ನಿಲ್ಲಿಸಿ, ಉಳಿತಾಯದ ಹಣದಿಂದ ಆರು ವಿದ್ಯಾರ್ಥಿಗಳಿಗೆ ಅನ್ನ ಹಾಕಿಸುತ್ತಿದ್ದಾರೆ. ಅಸೋಸಿಯೇಷನ್ನಿನ 'ಮಹಿಳಾ ವಿಭಾಗ' ಕೇವಲ ಹರಟೆ ಚಾವಡಿಯಾಗಿತ್ತು. ಅಸೋಸಿಯೇಷನ್ನಿನ ಪುಸ್ತಕ ಭಂಡಾರ ಸುಧಾರಿಸಿ ಮನೆ ಮನೆಗೂ ಪುಸ್ತಕಗಳನ್ನು ಕಳಿಸಿಕೊಡುತ್ತಾರೆ. ಪ್ರತಿ ಶನಿವಾರ ಹೆಣ್ಣುಮಕ್ಕಳಿಗಾಗಿಯೇ ವಿಶೇಷ ಕಾರ್ಯಕ್ರಮಗಳನ್ನೂ ಏರ್ಪಡಿಸು ತ್ತಾರೆ. ಮೂರ್ತಿಗಳು ಕಾರ್ಯದರ್ಶಿಯಾದ ಮೇಲೆ ಅಸೋಸಿಯೇಷನ್ನಿಗೆ ಸಾಂಸ್ಕೃತಿಕ ಸ್ವರೂಪ ಬಂದಿತು."

"ಮೂರ್ತಿಯವರ ಸುಧಾರಣೆಗಳು ನಿಮ್ಮ ಅಸೋಸಿಯೇಷನ್ನಿನ ಸದಸ್ಯರಿಗೆಲ್ಲಾ ಒಪ್ಪಿಗೆಯಾಗಿದೆಯೇ ?"

"ಇಲ್ಲ – ಕೆಲವರು ಗೊಣಗುತ್ತಿದ್ದಾರೆ. ಮಹಿಳಾ ವಿಭಾಗದ ಕಾರ್ಯ ಕ್ರಮವಿದ್ದ ದಿನ ಇಸ್ಪೇಟ್ ಕ್ಲಬ್ ನಡಸಲು ಅವಕಾಶವಿಲ್ಲ. ಶನಿವಾರ ಸಂಜೆ ಇಸ್ಪೇಟ್ ಹಿಡಿದು ಕುಳಿತು, ಸೋಮವಾರ ಬೆಳಿಗ್ಗೆ ಮೇಲಕ್ಕೇಳುತ್ತಿದ್ದ ಒಂದು

ತಂಡಕ್ಕೆ ಮೂರ್ತಿಯವರ ಮೇಲೆ ಮಹದಾಗ್ರಹ ಬಂದಿದೆ...........ಆಗಾಗ್ಗೆ ಅಸೋಸಿಯೇಷನ್ ಕಡೆ ಬನ್ನಿ ಸಾರ್."

"ನನಗೆ ಇಸ್ಪೇಟ್ ಆಡಲು ಬಾರದಲ್ಲಪ್ಪಾ" ಎಂದ.

ಟ್ಯಾಕ್ಸಿ ಮಾತುಂಗದಲ್ಲಿದ್ದ 'ಮೈಸೂರ್ ಅಸೋಸಿಯೇಷನ್' ಮಹಾದ್ವಾರದ ಮುಂದೆ ನಿಂತಿತು. ನರಸಿಂಹಮೂರ್ತಿ, ಅಸೋಸಿಯೇಷನ್ ಅಧಿಕಾರಿಗಳು ಬಂದು ಸ್ವಾಗತ ಬಯಸಿದರು.

"ಮುಖ್ಯ ಅತಿಥಿಗಳು ಬಂದಿದ್ದಾರೆಯೇ ?"

"ಬಂದಿದ್ದಾರೆ ಸರ್. ಒಳಗಿದ್ದಾರೆ."

ಎಂದು ನರಸಿಂಹಮೂರ್ತಿ, ಪ್ರಸಾದನನ್ನು ಒಳಕ್ಕೆ ಕರೆದೊಯ್ದು. ಅಸೋಸಿಯೇಷನ್ನಿನ ಹಜಾರದಲ್ಲಿ ಉಪಾಹಾರದ ವ್ಯವಸ್ಥೆಯಾಗಿತ್ತು.

ಮೂರ್ತಿ ಪ್ರಸಾದನನ್ನು ಅತಿಥಿಗಳ ಮೇಜಿನ ಬಳಿಗೆ ಕರೆದೊಯ್ದು ಸಂಘದ ಅಧ್ಯಕ್ಷರು, ಮುಖ್ಯ ಅತಿಥಿಗಳ ಪರಿಚಯಮಾಡಿಕೊಟ್ಟರು.

ಶೆಟ್ಟರು ಹಾರ್ದಿಕವಾಗಿ ಪ್ರಸಾದನ ಕೈಕುಲುಕಿ

"ತಮ್ಮನ್ನು ನೋಡಬೇಕೆಂದು ಬಹಳ ದಿವಸಗಳಿಂದ ಬಯಸುತ್ತಿದ್ದೆ. ಇಂದು ನನ್ನ ಆಸೆ ಈಡೇರಿತು."

"ನನಗೂ ತುಂಬ ಸಂತೋಷ ಶೆಟ್ಟರೇ. ನೀವು 'ಜನಜೀವಾಳ' ಪತ್ರಿಕೆಯನ್ನು ಯಶಸ್ವಿಮಾಡಿ ಕನ್ನಡ ಪತ್ರಿಕಾವೃತ್ತಿಗೇ ಉಪಕಾರಮಾಡಿರುವಿರಿ."

"ನಮ್ಮದೆಂಥಾ ಪತ್ರಿಕೆ ಸರ್. ನಿಮ್ಮ 'ಸೆಂಚುರಿ' ನೋಡಿದ ಮೇಲೆ ನಮ್ಮದೂ ಒಂದು ಪತ್ರಿಕೆ ಎಂದು ಹೇಳಿಕೊಳ್ಳುವುದಕ್ಕೇ ನಾಚಿಕೆಯಾಗುತ್ತದೆ."

"ಸೆಂಚುರಿ ಕ್ರಮವಾಗಿ ನೋಡುತ್ತಿರುವಿರಾ ?"

"ಒಂದು ಸಂಚಿಕೆಯನ್ನೂ ಬಿಟ್ಟಿಲ್ಲ, ಹಳೆಯ ಸಂಚಿಕೆಗಳನ್ನು ಬೈಂಡ್ ಮಾಡಿಸಿಬಿಟ್ಟಿದ್ದೇನೆ."

ಮೂರ್ತಿಗಳು ಬಂದು 'ಉಪಹಾರ ಸ್ವೀಕರಿಸಬೇಕು' ಎಂದರು. ಪ್ರಸಾದನ ಕಣ್ಣುಗಳು ಮೇಜಿನ ಮೇಲಿದ್ದರೂ ಅವನ ದೃಷ್ಟಿಯೆಲ್ಲಾ ಶೆಟ್ಟರ ಮೇಲೇ ಇತ್ತು.

ಶೆಟ್ಟರ ರೂಪ, ವೇಷ, ಭೂಷಣ, ಮಾತುಕತೆ ಎಲ್ಲವೂ ಪ್ರಸಾದನ ನಿರೀಕ್ಷಣೆಗೆ ಬಲವಾದ ಪೆಟ್ಟುಕೊಟ್ಟಿದ್ದವು.

'ಮೂರು ನಾಮ ಹಾಕಿಕೊಂಡು, ನಿಲುವಂಗಿ ಅದರ ಮೇಲೆ ಜರತಾರಿ ಕೆಂಪು ರೇಷ್ಮೆಯ ಉತ್ತರೀಯ ಧರಿಸಿ, ತಲೆಯ ಮೇಲೆ ದಪ್ಪ ಸಿಂಬಿಯಿಟ್ಟು ಕೊಂಡು, ಕೈಗೆ ಕಪ್ಪ, ಕಿವಿಗೆ ವಜ್ರದೋಲೆ ಹಾಕಿಕೊಂಡಿರಬಹುದು ಶೆಟ್ಟರು ಎಂದುಕೊಂಡಿದ್ದೆ.'

ಆದರೆ

'ಖಾದಿ ದಟ್ಟಿ, ಜುಬ್ಬ, ವೇಸ್ಟ್‌ಕೋಟ್ ಧರಿಸಿ ಈ ವ್ಯಕ್ತಿ ಬರುತ್ತಾನೆಂದು ನಿರೀಕ್ಷಿಸಿರಲಿಲ್ಲ.'

ಶೆಟ್ಟರಿಗೆ

'ದುಡ್ಡಿನ ಭಾಷೆಬಿಟ್ಟು ಬೇರೆ ಭಾಷೆ ಬರುವುದಿಲ್ಲವೆಂದಿದ್ದೆ.'

ಈತ

'ಸೊಗಸಾಗಿ ಇಂಗ್ಲಿಸ್, ಕನ್ನಡ ಮಾತನಾಡುತ್ತಾನೆ.'

ಎಂದು ತನ್ನಲ್ಲಿಯೇ ವಿಚಾರಮಾಡುತ್ತ ಕುಳಿತ.

ಕಾಫಿ ಮುಗಿದ ಮೇಲೆ ಎಲ್ಲರೂ ಮಹಡಿಯ ಮೇಲೆ ಸಭೆಗೆ ಹೋಗಬೇಕಾಗಿತ್ತು.

ವೇದಿಕೆಯ ಮೇಲೆ ಸಂಘದ ಅಧ್ಯಕ್ಷರು, ಸಭಾಧ್ಯಕ್ಷರು, ಮುಖ್ಯ ಅತಿಥಿಗಳು ಕುಳಿತ ಮೇಲೆ ಅಂದಿನ ಕಾರ್ಯಕ್ರಮ ಆರಂಭವಾಯಿತು.

'ಮಹಿಳಾ ವಿಭಾಗ'ದ ಹೆಣ್ಣುಮಕ್ಕಳು ಅರ್ಧ ಗಂಟೆ 'ವಾದ್ಯಗೋಷ್ಠಿ' ಸಂಗೀತ ನಡಸಿದರು. ತರುವಾಯ ಕಾರ್ಯದರ್ಶಿಗಳು ಅಂದಿನ ಅತಿಥಿಗಳ, ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಪ್ರಸಾದ್ ಪ್ರಾಸ್ತಾವಿಕವಾಗಿ ನಾಲ್ಕು ಮಾತು ಆಡಿದ ಮೇಲೆ ಮುಖ್ಯ ಅತಿಥಿಗಳಿಗೆ 'ಮಾನಪತ್ರ ಸಮರ್ಪಣ' ವಾಯಿತು. ತರುವಾಯ ಮುಖ್ಯ ಅತಿಥಿಗಳಾದ ಗೋಪಾಲಶೆಟ್ಟರು ಭಾಷಣ ಮಾಡಿದರು. ಅವರು ಇಂಗ್ಲಿಷಿನಲ್ಲಿ ಮಾತನಾಡುತ್ತಾರೆಂದು ನಿರೀಕ್ಷಿಸಿದ್ದ ಇಂಗ್ಲಿಷ್‌ಪ್ರೇಮಿಗಳಿಗೆ ನಿರಾಶೆಯಾಯಿತು. ಶೆಟ್ಟರು ಕನ್ನಡದಲ್ಲಿಯೇ ಆರಂಭಿಸಿದರು :

"ಸ್ವಂತ ಕೆಲಸಕ್ಕೆ ಮುಂಬಯಿಗೆ ಬಂದ ನನ್ನನ್ನು ಹಿಡಿದುಕೊಂಡು ಬಂದು ಮೈಸೂರು ಅಸೋಸಿಯೇಷನ್ನಿನ ಕಾರ್ಯದರ್ಶಿಗಳು ಶ್ರೀಮಾನ್ ನರಸಿಂಹಮೂರ್ತಿಗಳು ಈ ಗೌರವ ಸಲ್ಲಿಸಿದ್ದಾರೆ. ಕನ್ನಡದಲ್ಲಿ ಒಂದು ಪತ್ರಿಕೆ ನಡೆಸುವುದನ್ನು ಬಿಟ್ಟು, ನಾನು ಕನ್ನಡಕ್ಕೆ ಬೇರೆ ಯಾವ ಸೇವೆಯನ್ನೂ ಸಲ್ಲಿಸಿಲ್ಲ. ಇನ್ನುಮುಂದೆ ಹಲವು ಬಗೆಯಲ್ಲಿ ಕನ್ನಡ ಸೇವೆ ಮಾಡಬೇಕೆಂದು ನಿರ್ಧಾರಮಾಡಿಕೊಂಡಿದ್ದೇನೆ. ಅದಕ್ಕೆ ತಮ್ಮೆಲ್ಲರ ನೆರವು, ಆಶೀರ್ವಾದ ಅತ್ಯಗತ್ಯ."

ನಮ್ಮ ಇಂದಿನ ಅಧ್ಯಕ್ಷರು ಶ್ರೀಮಾನ್ ಪ್ರಸಾದರ ಪರಿಚಯವಾದುದು ನನ್ನ ಭಾಗ್ಯ. ಇವರ ಪರಿಚಯ ಮಾಡಿಕೊಳ್ಳಲು ನಾನು ಬಹಳ ತವಕ ಪಡುತ್ತಿದ್ದೆ. ತಮ್ಮದೇ ಆದ 'ಸೆಂಚುರಿ' ಪತ್ರಿಕೆಯಲ್ಲಿ ಇವರು ಬರೆಯುವ ಉಜ್ವಲ ಲೇಖನಗಳನ್ನು ಓದಿ ವಿಸ್ಮಯಗೊಂಡಿದ್ದೇನೆ. ಆಳವಾದ ಪಾಂಡಿತ್ಯ, ಪ್ರಖರವಾದ ವಿಚಾರಶಕ್ತಿಗಳ ಜತೆಗೆ ಅನ್ಯಾದೃಶ ಮಾನವಪ್ರೇಮ ಶ್ರೀ ಪ್ರಸಾದರ ಎಲ್ಲ ಬರವಣಿಗೆಗಳ ಮೇಲೂ ಅಚ್ಚೊತ್ತಿದಂತೆ ಕಂಡುಬರುತ್ತದೆ. ಶ್ರೀಯುತರ ಹೆಸರು ಕನ್ನಡ ನಾಡಿನಲ್ಲಿ ಮನೆಮಾತಾಗಿದೆ. ಅವರ ಕಾದಂಬರಿ ಗಳನ್ನು ಓದದವರೇ ಇಲ್ಲ. ಅವರ ಒಂದು ಕಾದಂಬರಿ 'ಗಿಣಿಯ ಪಂಜರ' ವನ್ನು ನಾನು ತಮಿಳಿಗೆ ಅನುವಾದ ಮಾಡಬೇಕೆಂದು ಪ್ರಯತ್ನಿಸಿದೆ. ಅದು ತಮಿಳಿಗೂ ಹಾಗೂ ಇತರ ದೇಶ ಭಾಷೆಗಳಿಗೆ ಅನುವಾದವಾಗಬೇಕು. ಇಂಗ್ಲಿಷ್, ಫ್ರೆಂಚ್ ಮೊದಲಾದ ಐರೋಪ್ಯ ಭಾಷೆಗಳಿಗೂ ಅನುವಾದವಾಗ ಬೇಕು. ಇಂಥ ಪ್ರತಿಭಾವಂತ ಸಾಹಿತಿಗಳ ಸೇವೆ ಕನ್ನಡಕ್ಕೆ ಅಲಭ್ಯವಾಯಿ ತಲ್ಲಾ ಎಂದು ನಾನು ಬಹಳ ಮರುಗಿದ್ದೇನೆ. ಶ್ರೀ ಪ್ರಸಾದರು ಮತ್ತೆ ಕನ್ನಡ ಸೇವೆ ಕೈಗೊಳ್ಳುವ ಸುದಿನ ಬೇಗ ಬರಲಿ ಎಂದು ನಾನು ಹಾರೈಸುತ್ತೇನೆ.

ತಮ್ಮೆಲ್ಲರ ವಿಶ್ವಾಸಕ್ಕೆ ಮತ್ತೊಮ್ಮೆ ಕೃತಜ್ಞತೆ ಅರ್ಪಿಸಿ ನನ್ನ ಭಾಷಣ ಮುಗಿಸುತ್ತೇನೆ."

ಅಧ್ಯಕ್ಷರ ಸಮಾರೋಪ ಭಾಷಣ ಮಾಡಲು ಪ್ರಸಾದ್ ಎದ್ದುನಿಂತ. ಅವನ ಮುಖ ಗಂಭೀರವಾಗಿತ್ತು. ಮನಸ್ಸಿನಲ್ಲಿ ಏನೋ ಒಂದು ತೆರನ ದುಗುಡ, ಚಿಂತೆ, ಸಂಕಟ ಮೂಡಿತ್ತು. ಕ್ಷಣಕಾಲ ಸುಮ್ಮನೆ ನಿಂತು ಸ್ಥೈರ್ಯ ತಂದುಕೊಂಡು

"ಶ್ರೀಮಾನ್ ಗೋಪಾಲಶೆಟ್ಟರ ಭಾಷಣ ಕೇಳಿ ನಾನು ಅವಾಕ್ಕಾಗಿದ್ದೇನೆ. ನನ್ನ ಬಾಯಲ್ಲಿ ಮಾತೇ ಹೊರಡದಾಗಿದೆ. ಅವರ ಭಾಷಣ ನನ್ನ ಪಾಲಿಗೆ ಕನ್ನಡತಾಯಿಯ ಸಂದೇಶವಾಗಿದೆ. ಕರ್ತವ್ಯವಿಮುಖನಾಗಿದ್ದ ನನ್ನನ್ನು ಶೆಟ್ಟರು ಹೊಡೆದೆಬ್ಬಿಸಿದ್ದಾರೆ.

ಈಚೆಗೆ ನಾನು ಕಾರ್ಯಗೌರವದಿಂದ ಕನ್ನಡದಲ್ಲಿ ಬರೆಯಲಾಗಿಲ್ಲ. ನನ್ನ 'ಸೆಂಚುರಿ' ಬಡವರ ಪತ್ರಿಕೆ. ಇವನ್ನು ನಡಸುತ್ತಿರುವವರು, ಓದುತ್ತಿರುವವರು ಎಲ್ಲರೂ ಬಡವರೇ. ಕನ್ನಡವನ್ನು ತೀರ ದುರ್ಲಕ್ಷಿಸದೆ ಈ ಪತ್ರಿಕೆಯ ಮೂಲಕ ನಾನು ಅಲ್ಪ ಸ್ವಲ್ಪ ಕನ್ನಡ ಸೇವೆಮಾಡಿಕೊಂಡು ಬರುತ್ತಿದ್ದೇನೆ.

ಶ್ರೀ ಶೆಟ್ಟರು ತಮಿಳರಾದರೂ ಕನ್ನಡನಾಡಿನಲ್ಲಿ ಮನೆ ಮಾಡಿಕೊಂಡಿದ್ದಾರೆ. ತಮ್ಮ ವಿಶಿಷ್ಟ ಪ್ರತಿಭೆಯಿಂದ ಪಂಡಿತ ಪಾಮರ ರಂಜಕವಾದ ಉತ್ತಮವರ್ಗದ ವಾರಪತ್ರಿಕೆ ನಡಸುತ್ತಿದ್ದಾರೆ. ಸಹಸ್ರಾರು ಕನ್ನಡಿಗರಿಗೆ ಕನ್ನಡದ ಮೇಲೆ ಮಮತೆ ಹುಟ್ಟಲು 'ಜನಜೀವಾಳ' ಕಾರಣವೆಂದರೆ ಅತಿಶಯೋಕ್ತಿಯಲ್ಲ. ಇನ್ನುಮುಂದೆ ನಾನಾರೂಪದಲ್ಲಿ ಕನ್ನಡ ಸೇವೆ ಮಾಡುವುದಾಗಿ ಆಶ್ವಾಸನವಿತ್ತಿದ್ದಾರೆ. ಶ್ರೀ ಶೆಟ್ಟರ ಉದ್ಯಮ ಯಶಸ್ವಿಯಾಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸಿ, ತಮ್ಮೆಲ್ಲರಿಗೂ ನನ್ನ ನೆನಕೆ ಸಲ್ಲಿಸಿ ಭಾಷಣ ಮುಗಿಸುತ್ತೇನೆ."

ರೂಢಿಯ ಪ್ರಕಾರ ವಂದನಾರ್ಪಣೆ, ರಾಷ್ಟ್ರಗೀತೆಯಾದ ಮೇಲೆ ಸಭೆ ವಿಸರ್ಜನೆಯಾಯಿತು. ನರಸಿಂಹಮೂರ್ತಿಗಳು ಉಭಯ ಅತಿಥಿಗಳಿಗೂ ಖಾಸಗಿಯಾಗಿ ವಂದನೆ ಸಲ್ಲಿಸಿದರು.

ನರಸಿಂಹಮೂರ್ತಿಗಳು ಟ್ಯಾಕ್ಸಿ ತರಲು ಸಂಘದ ಗುಮಾಸ್ತನಿಗೆ ಹೇಳಿದರು. ಪಕ್ಕದಲ್ಲಿದ್ದ ಶೆಟ್ಟರು

"ಅವರು ಎಲ್ಲಿಗೆ ಹೋಗಬೇಕು" ಎಂದು ಕೇಳಿದರು.

"ಗನ್‌ಬೋ ಸ್ಟ್ರೀಟಿಗೆ."

"ನಾನು ಕರೆದುಕೊಂಡು ಹೋಗಿ ಬಿಡುತ್ತೇನೆ."

"ತಮಗೇಕೆ ತೊಂದರೆ."

ಎಂದು ಪ್ರಸಾದ್ ಹೇಳಲು

"ನಾನು ಮೆಜೆಸ್ಟಿಕ್ ಹೊಟೇಲಿನಲ್ಲಿ ಇಳಿದುಕೊಂಡಿದ್ದೇನೆ. ನನಗೇನೂ ತೊಂದರೆಯಿಲ್ಲ. ಅಲ್ಲದೆ ತಮ್ಮ ಜತೆ ಸ್ವಲ್ಪ ಮಾತನಾಡಬೇಕಾಗಿದೆ. ಬನ್ನಿ ಜತೆಯಲ್ಲಿ ಹೋಗೋಣ" ಎಂದರು.

ಹೊಟೇಲ್ ಟ್ಯಾಕ್ಸಿ ಅವರಿಬ್ಬರನ್ನೂ ಕರೆದುಕೊಂಡು ಬಂದು ಹೊಟೇಲಿನಲ್ಲಿ ಬಿಟ್ಟಿತು.

"ಬನ್ನಿ ಸರ್ ಒಳಗೆ. ಸ್ವಲ್ಪ ವಿರಾಮವಿದೆ ತಾನೇ."

"ಇದೆ." ಎಂದು ಪ್ರಸಾದ್ ಶೆಟ್ಟರನ್ನು ಹಿಂಬಾಲಿಸಿದ.

ಶೆಟ್ಟರು ಹೊಟೇಲಿನಲ್ಲಿ ಸಾಕಷ್ಟು ವೈಭವಯುತವಾಗಿಯೇ ಬಿಡಾರ ಮಾಡಿದ್ದರು. ಮೂರು ರೂಮ್‌ಗಳ ಒಂದು 'ಸೂಟ್'ನಲ್ಲಿ (Suit) ಅವರ ವಾಸ.

'ಪ್ರಸಾದ್ ಕುಳಿತುಕೊಂಡ ಮೇಲೆ ಶೆಟ್ಟರು

"ಇಲ್ಲಿಯೇ ಊಟಮಾಡಿ" ಎಂದರು.

"ಕ್ಷಮಿಸಿ. ಮನೆಯಲ್ಲಿ ಕಾದಿರುತ್ತಾರೆ. ನೀವು ಊಟಮಾಡಿ."

"ನಾನು ಸ್ವಲ್ಪಹೊತ್ತು ಬಿಟ್ಟು ಊಟ ಮಾಡುತ್ತೇನೆ. ಕಾಫಿ ತೆಗೆದುಕೊಳ್ಳಬಹುದಷ್ಟೆ."

"ಅಗತ್ಯವಿಲ್ಲ. ನೀವು ತೆಗೆದುಕೊಳ್ಳಬೇಕೆಂದರೆ ತೆಗೆದುಕೊಳ್ಳುತ್ತೇನೆ."

ಶೆಟ್ಟರು ಕರೆಗಂಟೆ (Calling Bell) ಶಬ್ದಮಾಡಿ, ಹೊಟೇಲ್ ಬಾಯ್‌ಗೆ ಕಾಫಿ ತರಹೇಳಿದರು.

ಪ್ರಸಾದನ ಕಣ್ಣುಗಳು ಮೇಜಿನ ಮೇಲಿದ್ದ ಪುಸ್ತಕಗಳ ಕಡೆ ಹೋಯಿತು. ಅವುಗಳನ್ನು ಕೈಗೆತ್ತಿಕೊಂಡು ನೋಡಿದ :

"ಮ್ಯಾನ್ ದಿ ಅನ್‌ನೋನ್ - ಅಲೆಕ್ಸಿ ಕ್ಯಾರಲ್ (Man the unknown - Alexis Carrell); ಸ್ಟ್ರೇಟ್ ಈಸ್ ದಿ ಗೇಟ್ - ಆಂದ್ರೆ ಜೀಡ್ (Strait is the gate - Andre Gide) – ಕಿನ್ಸೆ ರಿಪೋರ್ಟ್ (Kinsey Report) – ವೇದಾಂತ ಅಂಡ್ ದಿ ವೆಸ್ಟ್ರನ್ ವರ್ಲ್ಡ್ - ಕ್ರಿಸ್ಟೋಫರ್ ಈಷರ್‌ವುಡ್ (Vedanta and the Westren world - Ed. Christopher Isherwood)—ಮತ್ತು ಎರ್ಸ್‌ಕಿನ್ ಕಾಲ್ಡ್‌ವೆಲ್ಲರ (Erskine Caldwell) ಎಲ್ಲ ಕಾದಂಬರಿಗಳು."

ಪ್ರಸಾದನ ಆಶ್ಚರ್ಯ ಹೆಚ್ಚಿತು.

"ಇವುಗಳನ್ನು ಇಲ್ಲಿ ಕೊಂಡಿರಾ ?"

"ಹೂ - ಪುಸ್ತಕಗಳನ್ನು ಕೊಳ್ಳುವುದೊಂದು ನನ್ನ ಚಟ."

"ನಿಮ್ಮಲ್ಲಿ ಸೊಗಸಾದ ಪುಸ್ತಕ ಭಂಡಾರವಿರಬೇಕು."

"ತಕ್ಕಮಟ್ಟಿಗೆ ಸಂಗ್ರಹಿಸಿದ್ದೇನೆ."

"ಓದುವುದಕ್ಕೆ ನಿಮಗೆ ಪುರಸತ್ತೆಲ್ಲಾಗುತ್ತದೆ ಶೆಟ್ಟರೇ."

"ಪ್ರಯಾಣ ಮಾಡುವಾಗ. ಮನೆಯಲ್ಲಿಯೂ ನಾನು ಪ್ರತಿನಿತ್ಯ ನಾಲ್ಕು ಗಂಟೆಗಳಾದರೂ ಓದದೆ ಮಲಗುವುದಿಲ್ಲ."

"ನಾಲ್ಕೈದು ಗಂಟೆಗಳಿಗಿಂತ ಹೆಚ್ಚಾಗಿ ನೀವು ನಿದ್ರಿಸುವಂತೆ ಕಾಣುವುದಿಲ್ಲ."

"ನಿಜ - ನನಗೆ ನಿದ್ರೆ ತುಂಬ ಕಡಿಮೆ."

ಹೊಟೇಲ್ ಬಾಯ್ ಕಾಫಿ ಟ್ರೇ ತಂದಿಟ್ಟು ಹೋದ. ಶೆಟ್ಟರೇ ಕಪ್ಪಿಗೆ ಕಾಫಿ ಹಾಕಿ ಪ್ರಸಾದನ ಕೈಗಿತ್ತರು. ಇಬ್ಬರೂ ಕಾಫಿ ಸೇವಿಸಿದ ಮೇಲೆ ಶೆಟ್ಟರು

"ಈ ಬಾರಿ ನಾನು ಒಂದು ಕೆಲಸದ ನಿಮಿತ್ತವಾಗಿಯೇ ಮುಂಬಯಿಗೆ ಬಂದೆ ಸರ್" ಎಂದರು.

"ಏನು ಕೆಲಸವೆಂದು ಕೇಳಬಹುದೇ ?"

"ತಮ್ಮನ್ನು ನೋಡುವುದು."

"ನನ್ನ ನೋಡುವುದೇ !"

"ಅಷ್ಟು ಮಾತ್ರವೇ ಅಲ್ಲ - ತಮ್ಮನ್ನು ಬೆಂಗಳೂರಿಗೆ ಕರೆದೊಯ್ಯಬೇಕೆಂದೇ ನಾನು ಬಂದುದು."

"ನಾನು ಅಸ್ವತಂತ್ರ ಶೆಟ್ಟರೇ."

"ಸ್ವತಂತ್ರರಾಗಬೇಕು."

"ಬೆಂಗಳೂರಿಗೆ ನಾನೇಕೆ ಬರಬೇಕು ?"

"'ಜನಜೀವಾಳ' ವಾರಪತ್ರಿಕೆ ಚೆನ್ನಾಗಿ ನಡೆಮುಕೊಂಡು ಹೋಗುತ್ತಿದೆ. ಅದರ ಬಗ್ಗೆ ನನಗೆ ಯೋಚನೆಯಿಲ್ಲ. ಈಗ ಒಂದು ದೈನಂದಿನ ಪತ್ರಿಕೆ ಮಾಡಬೇಕೆಂದಿದ್ದೇನೆ. ನೀವು ಬೆಂಗಳೂರಿಗೆ ದಯಮಾಡಿಸಿ ನನಗೆ

"ನಮ್ಮ ಪತ್ರಿಕೋದ್ಯಮಿಗಳಲ್ಲಿ ಈ ಬುದ್ಧಿ ಬೆಳೆದರೆ ಕನ್ನಡ ಪತ್ರಿಕೋದ್ಯಮ ಬದುಕಿಕೊಳ್ಳುತ್ತದೆ."

"ಪತ್ರಿಕೋದ್ಯಮದ ಬಗ್ಗೆ ನಿಮಗಿರುವ ತಿಳುವಳಿಕೆ ಅಸಾಧಾರಣವಾದುದು ಶೆಟ್ಟರೇ. ತಮ್ಮ ಶಿಕ್ಷಣ ಎಲ್ಲಿಯಾಯಿತು ?"

"ಅದೊಂದು ದೊಡ್ಡ ಕಥೆ ಸ್ವಾಮಿ. ತಂದೆ ತಾಯಿ ನಾನು ಬಹಳ ಸಣ್ಣವನಿರುವಾಗಲೇ ತೀರಿಕೊಂಡರು. ಅವರ ಮುಖದ ಗುರುತೂ ನನಗಿಲ್ಲ. ನನ್ನನ್ನು ಸಾಕಿದವರು ತಾಯಿಯ ತಂದೆ. ನಾನು ಹೈಸ್ಕೂಲ್ ಮುಗಿಸಿದೆ. ಶಾಲೆಯ ಶಿಕ್ಷಣ ಸಾಕು ಎಂದು ನನ್ನ ತಾತ ಹೇಳಿದರು. ಅವರಿಗೆ ಇಂಗ್ಲಿಷ್ ಶಿಕ್ಷಣವೆಂದರೆ ತುಂಬ ಭಯ. ಹಳೆಯ ಕಾಲದ ಮನುಷ್ಯ. ಬೆಳಿಗ್ಗೆಯಿಂದ ಸಂಜೆಯವರೆಗೆ ಪಾರಾಯಣ, ಪೂಜೆ, ಹರಿಕಥೆಗಳಲ್ಲಿ ಅವರು ಕಾಲತಳ್ಳುತ್ತಿದ್ದರು. ತಾತ ಒಂದು ಅನ್ನಛತ್ರ, ಒಂದು ಸಂಸ್ಕೃತ ಪಾಠಶಾಲೆ ನಡಸುತ್ತಿದ್ದರು. ನಾನು ಸಂಸ್ಕೃತ ಪಾಠಶಾಲೆ ಸೇರಿ ಅವರ ಜೀವನಕ್ರಮವನ್ನನುಸರಿಸಬೇಕೆಂದು ಅವರ ಆಕಾಂಕ್ಷೆಯಾಗಿತ್ತು. ನನಗೆ ಅವರ ಪುರಾಣ ಪ್ರವಚನ ಕೇಳಿ ಕೇಳಿ ಸಾಕಾಗಿತ್ತು. ನಾನು ಕಾಲೇಜ್ ಸೇರುವುದಕ್ಕೆ ತಾತ ಅಪ್ಪಣೆ ಕೊಡಲಿಲ್ಲ. ಅವರಿಗೂ ನನಗೂ ಬಿರುಸು ಮಾತುಕತೆಯಾಯಿತು. ನಾನು ಅಸಮಾಧಾನಪಟ್ಟುಕೊಂಡು ಮನೆ ಬಿಟ್ಟು ಹೊರಟುಹೋದೆ."

"ಎಲ್ಲಿಗೆ ?"

"ಎಲ್ಲಿಗೆ ಎಂದು ಯೋಚಿಸಲಿಲ್ಲ. ಅಲ್ಲಿ ಇಲ್ಲಿ ತಿರುಗಾಡಿಕೊಂಡು ನಾಲ್ಕೈದು ತಿಂಗಳ ತರುವಾಯ ಬೊಂಬಾಯಿ ಸೇರಿದೆ. ಆ ವೇಳೆಗೆ ಕೈಯಲ್ಲಿದ್ದ ಹಣ ತೀರಿಹೋಯಿತು. ಭಿಕ್ಷೆಬೇಡಿ ಹೊಟ್ಟೆ ಹೊರೆದುಕೊಳ್ಳುವ ಸ್ಥಿತಿ ಬಂದಿತು. ತಾತನಿಗೆ ಕಾಗದ ಬರೆದೆ. ಅವರು 'ಮರಾಸಿಗೆ ಹಿಂದಿರುಗಿ ನಾನು ಹೇಳುವ ಹಾಗೆ ಕೇಳಿದರೆ ಹಣ ಕಳಿಸಿಕೊಡುತ್ತೇನೆ' ಎಂದು ನಿಷ್ಠುರವಾಗಿ ಉತ್ತರವಿತ್ತರು. ಈ ವೇಳೆಗೆ ನನಗೆ ಫೋರ್ಟ್ ಹೊಟೇಲೊಂದರಲ್ಲಿ ಕೆಲಸಮಾಡುತ್ತಿದ್ದ ಭಂಡಾರಿಯ ಪರಿಚಯವಾಯಿತು. ನನ್ನನ್ನು ಭಂಡಾರಿ ತನ್ನ ಹೊಟೇಲಿಗೆ ಕರೆದುಕೊಂಡು ಹೋಗಿ ತಿಂಡಿ ತೀರ್ಥ ಕೊಡಿಸುತ್ತಿದ್ದ. 'ಇಲ್ಲೇ ಕೆಲಸಕ್ಕೆ ಸೇರು. ಉಪವಾಸ ಸಾಯುವುದು ತಪ್ಪುತ್ತದೆ' ಎಂದು ಹೇಳಿದ. 'ಹೊಟೇಲ್ ಮಾಣಿಯಾಗುವುದಕ್ಕಲ್ಲ ನಾನು ಬೊಂಬಾಯಿಗೆ

ಬಂದದ್ದು' ಎಂದು ಕಟುವಾಗಿ ಉತ್ತರಕೊಟ್ಟೆ. ಭಂಡಾರಿ ಒಳ್ಳೆಯ ಹುಡುಗ. ನನ್ನ ಕಟೂಕ್ತಿಯನ್ನು ಅವನು ಮನಸ್ಸಿಗೆ ತಂದುಕೊಳ್ಳಲಿಲ್ಲ. ಭಂಡಾರಿ ಬಹಳ ವಿಚಿತ್ರವ್ಯಕ್ತಿ ಸರ್."

"ಅವನಲ್ಲಿದ್ದ ವೈಚಿತ್ರ್ಯವೇನು?"

"ಅವನು ಸಂಜೆಯವರೆಗೆ ಹೊಟೇಲಿನಲ್ಲಿ ಪಾತ್ರೆ ತೊಳೆದು ಬಂದು, ರಾತ್ರಿ ಶಾಲೆಗೆ ಹೋಗುತ್ತಿದ್ದ. ನಾನು ಅವನಿಗೆ ಪಾಠ ಹೇಳಿಕೊಡುವುದೆಂದೂ, ಅವನು ನನಗೆ ಊಟ ತಿಂಡಿ ಕೊಡಿಸುವುದೆಂದು ನಾವು ಕರಾರುಮಾಡಿ ಕೊಂಡೆವು. ಒಂದು ದಿನ ನಾವಿಬ್ಬರೂ ಜುಹೂಬೀಚಿನ ಮರಳುಹಾಸಿನ ಮೇಲೆ ಭೇಲ್ ತಿನ್ನುತ್ತಾ ಕುಳಿತಿದ್ದೆವು. ನಮ್ಮೆದುರಿಗೆ ವಿಚಿತ್ರ ವೇಷ ತಳೆದಿದ್ದ ಒಬ್ಬರು ಯಾರ ಸಂಗಡಲೋ ಮಾತನಾಡಿಕೊಂಡು ಬರುತ್ತಿದ್ದರು. ಅವರು ಧರಿಸಿದ್ದುದು ಸ್ವಚ್ಛ ಖಾದಿ ಧೋತ್ರ, ಜುಬ್ಬ, ಚಪ್ಪಲಿ. ತಲೆಯ ಮೇಲೆ ಮಾತ್ರ ಬಿಳಿಯ ಪಿತ್‌ಹ್ಯಾಟ್. ಇಂಗ್ಲಿಷಿನವರಂತೆ ಕಾಣುತ್ತಿದ್ದರು."

'ಇವರು ಯಾರು ಭಂಡಾರಿ' ಎಂದು ಕೇಳಿದೆ.

'ಅವರೇ ಸುಪ್ರಸಿದ್ಧ ಬೆಂಜಮನ್ ಗಯ್ ಹಾರ್ನಿಮನ್ (Benjamin Guy Horniman), ಬಾಂಬೆ ಕ್ರಾನಿಕಲ್ ಪತ್ರಿಕೆಯ ಸಂಪಾದಕರು.' ಎಂದು ಹೇಳಿದ.

'ಇವರು ತುಂಬ ಒಳ್ಳೆಯವರಂತೆ. ನನಗೊಂದು ಕೆಲಸ ಕೊಡಿಸಲಾರರೇ' ಎಂದು ಕೇಳಿದೆ.

'ಕೆಲಸ - ಎಲ್ಲಿ ಕೆಲಸ?'

'ಅವರ ಕಛೇರಿಯಲ್ಲಿ!'

'ಕಂಡು ಮಾತನಾಡು' ಎಂದ.

'ಅವರ ಕಛೇರಿಯೆಲ್ಲಿದೆ?'

'ಫೋರ್ಟ್‌ನಲ್ಲಿ, ನಮ್ಮ ಹೊಟೇಲ್ ಹತ್ತಿರವೇ. ಆದರೆ ನೀನು ಅಲ್ಲಿಗೆ ಹೋದರೆ ಅವರ ದರ್ಶನ ಸಿಕ್ಕುವುದು ತುಂಬ ಕಷ್ಟ. ಯಾವಾಗ ನೊಡಿದರೂ ಜನಸಂದಣಿ ಅವರಿಗೆ ಮುಗಿಬಿದ್ದಿರುತ್ತದೆ. ನೋಡುವ ಹಾಗಿದ್ದರೆ ಈಗಲೇ ನೋಡು, ನಾನು ಪರಿಚಯಮಾಡಿಸಿಕೊಡುತ್ತೇನೆ.'

'ನಿನಗೆ ಅವರು ಗುರುತೇ ಭಂಡಾರಿ.'

'ಚೆನ್ನಾಗಿ ಗುರುತಿದೆ. ನಮ್ಮ ಹೊಟೇಲಿನಿಂದಲೇ ಅವರು ನಿತ್ಯ ಕಾಫಿ ಇಡ್ಲಿ ತರಿಸಿಕೊಳ್ಳುತ್ತಾರೆ. ನಾನೇ ತೆಗೆದುಕೊಂಡು ಹೋಗಿ ಕೊಡುತ್ತೇನೆ.'

ಎಂದು ಹೇಳಿದವನೇ ನನ್ನ ಕೈಹಿಡಿದುಕೊಂಡು ದರದರನೆ ಎಳೆದುಕೊಂಡುಹೋದ. ಮರಳು ಹಾಸಿನ ಮೇಲೆ ಶಥಪಥ ತಿರುಗುತ್ತಿದ್ದ ಹಾರ್ನಿಮನ್ನರು ಹಿಂದಿರುಗುತ್ತಿದ್ದರು. ಭಂಡಾರಿ ಧೈರ್ಯದಿಂದ ಹೋಗಿ ಅವರಿಗೆ ಕೈಮುಗಿದ. ಹಾರ್ನಿಮನ್ನರು ನಸುನಗುತ್ತಾ

'ಏನು ಭಂಡಾರಿ – ಇಲ್ಲಿ ಬಂದಿದ್ದೀ' ಎಂದರು.

'ನನ್ನ ಸ್ನೇಹಿತ ಬಂದಿದ್ದ ಸರ್. ಇಬ್ಬರೂ ವಾಕಿಂಗ್ ಬಂದಿದ್ದೆವು.'

'Relaxing - Good'

'ಸರ್. ನನ್ನ ಸ್ನೇಹಿತನಿಗೆ ತಮ್ಮ ಆಫೀಸಿನಲ್ಲಿ ಒಂದು ಕೆಲಸ ಮಾಡಿ ಕೊಡಬೇಕು. ಬಹಳ ಕಷ್ಟದಲ್ಲಿದ್ದಾನೆ.'

ಹಾರ್ನಿಮನ್ನರು ನನ್ನ ಕಡೆ ತಿರುಗಿ ನನ್ನ ಯೋಗಕ್ಷೇಮ, ಸ್ಥಿತಿಗತಿ, ಶಿಕ್ಷಣವೆಲ್ಲವನ್ನೂ ವಿಚಾರಿಸಿಕೊಂಡು

'ನಾಳೆ ಆಫೀಸಿಗೆ ಬಂದು ನೋಡು' ಎಂದರು.

ಭಂಡಾರಿ ಅತ್ಯಂತ ವಿನಯದಿಂದ

'ಆಫೀಸಿನಲ್ಲಿ ತಮ್ಮ ದರ್ಶನ ಸಿಕ್ಕುವುದು ಕಷ್ಟ ಸರ್' ಎಂದ.

ಹಾರ್ನಿಮನ್ ಮುಗುಳ್ನಗೆ ನಕ್ಕು ತಮ್ಮ ವ್ಯಾಲೆಟ್ (Wallet) ತೆಗೆದು, ಅದರಿಂದ ತಮ್ಮ ಕಾರ್ಡು ತೆಗೆದುಕೊಂಡು

'With Compliments: Please find a job for this boy. B. G. H.'

ಎಂದು ಬರೆದುಕೊಟ್ಟು

'ಇದನ್ನು ಮ್ಯಾನೇಜರಿಗೆ ಕೊಡು. ಅವರು ಯೋಗ್ಯ ವ್ಯವಸ್ಥೆ ಮಾಡುತ್ತಾರೆ.'

ಎಂದು ಹೇಳಿ ಹೊರಟುಹೋದರು. ನನ್ನ ಸಂತೋಷಕ್ಕೆ ಪಾರವುಂಟೇ? ಭಂಡಾರಿಯನ್ನು ತಬ್ಬಿಕೊಂಡು ಕುಣಿದಾಡಿಬಿಟ್ಟೆ.

ಮಾರನೆಯ ದಿನ ಭಂಡಾರಿಯನ್ನು ಕರೆದುಕೊಂಡೇ ಮ್ಯಾನೇಜರನ್ನು ನೋಡಲು ಹೋದೆ. ಅವರು ಗೌರವದಿಂದ ನನ್ನನ್ನು ಬರಮಾಡಿಕೊಂಡು

'ಸದ್ಯಕ್ಕೆ ಉಪಸಂಪಾದಕರ ಸಹಾಯಕನಾಗಿ ಕೆಲಸಮಾಡು. ಮುಂದೆ ನೋಡೋಣ' ಎಂದರು.

ಕೆಲಸಕ್ಕೆ ಸೇರಿದ್ದಾಯಿತು. ಉಪಸಂಪಾದಕರಿಗೆ ಪ್ರೂಫ್‌ಗಳನ್ನು ತಂದು ಕೊಡುವುದು, ಅವರು ತಿದ್ದಿಕೊಟ್ಟ ಪ್ರೂಫ್‌ಗಳನ್ನು ಪ್ರೆಸ್ಸಿಗೆ ಕೊಡುವುದು, ಅವರು ಹೇಳಿದ ಕೆಲಸ ಮಾಡುವುದು ನನ್ನ ಕರ್ತವ್ಯ ವಾಯಿತು. ಈ ಕೆಲಸವನ್ನು ಒಂದು ವರ್ಷಕಾಲ ತಿಂಗಳಿಗೆ ಮೂವತ್ತು ರೂಪಾಯಿ ಸಂಬಳ ತೆಗೆದುಕೊಂಡು ನಿಭಾಯಿಸಿದೆ. ವರ್ಷ ಕಳೆದ ಮೇಲೆ ನನ್ನನ್ನು ಪ್ರೂಫ್ ರೀಡರಾಗಿ ತೆಗೆದುಕೊಂಡರು. ಸಂಬಳ ಎಪ್ಪತ್ತೈದಕ್ಕೇರಿತು. ಆ ಕೆಲಸ ಹದಿನಾಲ್ಕು ತಿಂಗಳು ನಿರ್ವಹಿಸಿದ ಮೇಲೆ ನನ್ನನ್ನು ಉಪಸಂಪಾದಕ ನನ್ನಾಗಿ ತೆಗೆದುಕೊಂಡರು. ಸಂಬಳ ನೂರಕ್ಕೇರಿತು.

ನಾಲ್ಕುವರ್ಷ 'ಕ್ರಾನಿಕಲ್' ಕಛೇರಿಯಲ್ಲಿ ದುಡಿದೆ. ಆಗಾಗ್ಗೆ ಕ್ರಾನಿಕಲ್ ಪತ್ರಿಕೆಯ ಭಾನುವಾರದ ಸಂಚಿಕೆಗೆ ಲೇಖನಗಳನ್ನೂ ಬರೆಯು ತ್ತಿದ್ದೆ. ಐದನೆಯ ವರ್ಷದ ವೇಳೆಗೆ ನನ್ನ ಸಂಬಳ ನೂರ ಎಪ್ಪತ್ತೈದಕ್ಕೇರಿತು. ಆಗ ಒಂದು ವಿಶೇಷ ಸಂಗತಿ ಜರುಗಿತು. ಮುಂಬಯಿಯಲ್ಲಿ ನಡೆದ 'ಥಿಯೋ ಸೋಫಿಕಲ್ ಸಮ್ಮೇಳನ'ಕ್ಕೆ ಬಂದಿದ್ದ ಡಾ. ಆ್ಯನಿ ಬೆಸೆಂಟರು ನಮ್ಮ ಕಛೇರಿಗೆ ಭೇಟಿಯಿತ್ತರು. ಹಾರ್ನಿಮನ್ನರು ಅವರನ್ನು ನಮ್ಮೆಲ್ಲರಿಗೂ ಪರಿಚಯ ಮಾಡಿಕೊಟ್ಟರು. ಬೆಸೆಂಟರು ನನ್ನನ್ನು ಮಾತನಾಡಿಸಿ 'ನೀನು ಮದರಾಸಿ ನವನೇ' ಎಂದು ಕೇಳಿದರು. ಸಂಕ್ಷೇಪವಾಗಿ ನಾನು ನನ್ನ ಚರಿತ್ರೆ ಹೇಳ ಬೇಕಾಯಿತು. ಬೆಸೆಂಟರು ಹಾರ್ನಿಮನ್ನರೊಂದಿಗೆ ಮಾತನಾಡಿ ನನ್ನನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಲು ನಿಶ್ಚಯಿಸಿದರು.

ಒಂದು ವಾರದಲ್ಲಿ ನಾನು ಮದರಾಸ್ ಸೇರಿದೆ. ಬೆಸೆಂಟರ 'ನ್ಯೂ ಇಂಡಿಯಾ' ಕಛೇರಿಯಲ್ಲಿಯೇ ನನ್ನ ವಾಸ. ನನ್ನನ್ನು 'ಪ್ರಧಾನ ಉಪ ಸಂಪಾದಕ' (Chief Sub-Editor) ಮಾಡಿದರು. ಮದರಾಸಿನಲ್ಲಿದ್ದರೂ ನಾನು ಬಹಳ ದಿವಸ ಮನೆಯ ಕಡೆ ಹೋಗಲಿಲ್ಲ. ಒಂದು ವರ್ಷ ಕಳೆದ ಮೇಲೆ ನನ್ನ ಸ್ಥಾನ ಭದ್ರವಾದುದಲ್ಲದೆ, ಬೆಸೆಂಟರಿಗೆ ನಾನು ಅಚ್ಚುಮೆಚ್ಚಿನವ ನಾದೆ.

ಅವರಿಂದ ನನಗೆ ದೊರೆತ ಶಿಕ್ಷಣಕ್ಕೆ ನಾನೆಷ್ಟು ಋಣಿಯಾಗಿದ್ದರೂ ಸಾಲದು. ಆ ಮಹಾತಾಯಿಯ ಅಭಿಮಾನ, ಶ್ರದ್ಧೆ, ದುಡಿಮೆ ನೋಡಿ ನಾವು ನಾಚುತ್ತಿದ್ದೆವು. ಉಪಸಂಪಾದಕರೆಲ್ಲರೂ ಪತ್ರಿಕೋದ್ಯಮದ ಎಲ್ಲ ಶಾಖೆಗಳಲ್ಲಿಯೂ ಪ್ರಾವೀಣ್ಯ ಪಡೆದಿರಬೇಕೆಂಬುದು ಆ್ಯನಿ ಬೆಸೆಂಟರ ತತ್ತ್ವವಾಗಿತ್ತು. ಎರಡು ತಿಂಗಳಿಗೊಮ್ಮೆ ನಮ್ಮನ್ನು ಬೇರೆ ಶಾಖೆಗೆ ವರ್ಗಾಯಿಸುತ್ತಿದ್ದರು. ಸುದ್ದಿ ಸಂಗ್ರಹ, ಬಾತ್ಮಿಗಳು, ಲೇಖನ ವಿಭಾಗ, ಕಲಾವಿಭಾಗ, ಮಹಿಳಾವಿಭಾಗ, ಪ್ರಧಾನ ಲೇಖನ, ಸಂಪಾದಕೀಯ ಟಿಪ್ಪಣಿಗಳು ಎಲ್ಲ ಶಾಖೆಗಳಲ್ಲಿಯೂ ದುಡಿದು ನಾನು ತರಬೇತು ಪಡೆದುದಲ್ಲದೆ, ಊರೂರುಗಳಿಗೆ 'ವಿಶೇಷ ಪ್ರತಿನಿಧಿ'ಯಾಗಿಯೂ ಹೋಗಿ ಬಂದೆ. ಆ ಸಂದರ್ಭದಲ್ಲಿ ಬೆಂಗಳೂರು, ಕೊಯಿಮುತ್ತೂರು, ಮಧುರೆ, ತಿರುವನಂತಪುರ, ಬೆಜವಾಡ, ರಾಜಮಹೇಂದ್ರಿ, ಹೈದರಾಬಾದು ಮೊದಲಾದ ಊರುಗಳ ರಾಜಕೀಯ ಅರ್ಥವಾಯಿತು. ಸಾಮಾಜಿಕ, ರಾಜಕೀಯ, ಸಾಹಿತ್ಯ ಮುಖಂಡರ ಭೆಟ್ಟಿಮಾಡುವ ಅವಕಾಶವೂ ಸಿಕ್ಕಿತು.

ನಾವು ಮಾಡುತ್ತಿದ್ದ ಕೆಲಸದ ಸಂಪೂರ್ಣ ಕೀರ್ತಿಯನ್ನು ನಮಗೆ ಕೊಡುವುದರಲ್ಲಿ ಬೆಸೆಂಟರು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಒಂದು ಒಳ್ಳೆಯ ಲೇಖನ ಬರೆದರೆ ಸಾಕು - ಕೂಡಲೆ ಕರೆಸಿ ಮೆಚ್ಚುಗೆ ವ್ಯಕ್ತಮಾಡುತ್ತಿದ್ದರು.

ಒಂದು ದಿನ ಧೈರ್ಯಮಾಡಿಕೊಂಡು ಹೋಗಿ ತಾತನನ್ನು ಕಂಡೆ. ಅವರಿಗೂ ವಯಸ್ಸಾಗುತ್ತ ಬಂದಿತು. ಹಳೆಯ ಕಹಿನೆನಪು ಮಾಸಿಹೋಗಿತ್ತು. ನನ್ನನ್ನಪ್ಪಿಕೊಂಡು ಕಣ್ಣೀರು ಸುರಿಸಿದರು. ಇಷ್ಟು ವಿಶ್ವಾಸವ್ಯಕ್ತಮಾಡಿದರೂ ತಾತ ತನ್ನ ಹಟಬಿಡಲಿಲ್ಲ. ಒಂದು ಬಿಡುಗಾಸೂ ಬಿಚ್ಚಲಿಲ್ಲ.

ಎರಡು ವರ್ಷ 'ನ್ಯೂ ಇಂಡಿಯಾ' ಪತ್ರಿಕೆ ತಕ್ಕಮಟ್ಟಿಗೆ ನಡೆಯಿತು. ಅದರ ಸರ್ಕ್ಯುಲೇಷನ್ ಎಂಟು ಒಂಭತ್ತು ಸಾವಿರ ಮೀರಲಿಲ್ಲ. ಪ್ರತಿ ತಿಂಗಳೂ ಒಂದೂವರೆ, ಎರಡು ಸಾವಿರ ರೂಪಾಯಿಗಳಷ್ಟು ನಷ್ಟವಾಗುತ್ತಿತ್ತು. ಗುಣದ ದೃಷ್ಟಿಯಿಂದ ನಮ್ಮ ಪತ್ರಿಕೆ ಭಾರತದ ಅತ್ಯುತ್ತಮ ಪತ್ರಿಕೆಯಾಗಿತ್ತು ಎಂದು ಹೇಳಲು ಅಡ್ಡಿಯಿಲ್ಲ. ಆದರೆ ಅದರ ಆರ್ಥಿಕ ಸ್ಥಿತಿ ಸುಧಾರಿಸಲಿಲ್ಲ. ಎರಡು ವರ್ಷ ಕಳೆದ ಮೇಲೆ ಲೆಕ್ಕ ನೋಡುವಲ್ಲಿ ಪತ್ರಿಕೆಗೆ ಸುಮಾರು ಐವತ್ತು ಸಾವಿರ

ರೂಪಾಯಿ ನಷ್ಟವಾಗಿತ್ತು. ಬೆಸೆಂಟರು ಅತ್ಯಂತ ವಿಷಾದದಿಂದ ಪತ್ರಿಕೆ ನಿಲ್ಲಿಸಿಬಿಡಲು ನಿರ್ಧರಿಸಿದರು.

ಆದರೆ ಸಂಪಾದಕ ವರ್ಗದವರನ್ನು ಕೈಬಿಡಲಿಲ್ಲ. ಪ್ರತಿಯೊಬ್ಬರಿಗೂ ಒಂದೊಂದು ಕೆಲಸ ಕೊಡಿಸಿಕೊಟ್ಟರು. ನನಗೂ ಒಂದು ಕೆಲಸ ಕೊಡಿಸಲು ಸಿದ್ಧವಾಗಿದ್ದರು. 'ಪತ್ರಿಕಾವೃತ್ತಿಯಲ್ಲೀ ಮುಂದುವರಿಯಬೇಕೆಂದು ನನ್ನಾಸೆ. ಬೇರೆ ಕೆಲಸಮಾಡಲು ಇಷ್ಟವಿಲ್ಲ'ವೆಂದು ಹೇಳಿದೆ. ನನ್ನ ಮಾತಿಗೆ ತಲೆದೂಗಿ ಮೂರು ಸಾವಿರ ರೂಪಾಯಿಗಳಿಗೆ ಒಂದು ಚೆಕ್ ಬರೆದು ನನ್ನ ಕೈಗಿತ್ತು 'Wish you good - luck Son' ಎಂದು ಆಶೀರ್ವದಿಸಿದರು.

ಅವರು ಕೊಟ್ಟ ಮೂರು ಸಾವಿರ ರೂಪಾಯಿಯೇ ನನ್ನ ಬಂಡವಾಳ ವಾಯಿತು. ಮದರಾಸಿನಲ್ಲಿ ಉತ್ತಮವರ್ಗದ ಇಂಗ್ಲಿಷ್ ವಾರಪತ್ರಿಕೆಯನ್ನೋ ತಮಿಳು ವಾರಪತ್ರಿಕೆಯನ್ನೊ, ಆರಂಭಿಸಲು ಯೋಚಿಸಿದೆ. ಆದರೆ ಆಗಾಗಲೇ ದೊಡ್ಡ ದೊಡ್ಡ ಬಂಡವಾಳಗಾರರು ಪತ್ರಿಕಾವೃತ್ತಿಗೆ ಇಳಿಯಲಾರಂಭಿಸಿದ್ದರು. ಅವರ ಮುಂದೆ ನಾನು ಉಳಿಯಲಾರೆನೆಂಬುದು ಖಚಿತವಾಯಿತು. ಬೆಂಗಳೂರಿಗೆ ಬಂದೆ. ಕನ್ನಡದಲ್ಲಿ ಪತ್ರಿಕೆಗಳಿದ್ದರೂ ದೊಡ್ಡ ಪ್ರಮಾಣದ ಪತ್ರಿಕೆ ಇರಲಿಲ್ಲ. ಧೈರ್ಯವಾಗಿ 'ಜನಜೀವಾಳ' ಆರಂಭಿಸಿದೆ. ಆಗ ನನಗೆ ಕನ್ನಡ ಮಾತನಾಡು ವುದಕ್ಕೆ ಕೂಡ ಬರುತ್ತಿರಲಿಲ್ಲ. ಮೂರು ನಾಲ್ಕು ತಿಂಗಳಲ್ಲಿ ಮಾತನಾಡುವುದನ್ನು ಕಲಿತು, ಅಕ್ಷರಮಾಲೆ ಅಭ್ಯಾಸಮಾಡಿಕೊಂಡು ಓದುವುದನ್ನು ಕಲಿತೆ. ಒಂದು ವರ್ಷದಲ್ಲಿ ಸಂಪಾದಕೀಯ ಲೇಖನಗಳನ್ನು ನಾನೇ ಹೇಳಿ ಬರೆಯಿಸ ತೊಡಗಿದೆ. ಇಂದಿಗೂ ನನಗೆ ಕನ್ನಡ ಬರೆಯುವುದಕ್ಕೆ ಚೆನ್ನಾಗಿ ಬರುವುದಿಲ್ಲ. ಇಷ್ಟು ಸ್ವಾಮಿ ನನ್ನ ಚರಿತ್ರೆ."

ಪ್ರಸಾದನಿಗೆ ವಿಸ್ಮಯವಾಗಿತ್ತು. ಶೆಟ್ಟರ ಬಗ್ಗೆ ಹುಟ್ಟಿದ್ದ ಗೌರವ ಮತ್ತಷ್ಟು ಗಾಢವಾಯಿತು.

"ನೀವು ಅಸಾಧಾರಣ ವ್ಯಕ್ತಿಗಳು ಶೆಟ್ಟರೇ. ಸಾಹಸಜೀವನದ ಅಮರ ಗೀತೆ ನಿಮ್ಮ ಜೀವನ."

"ನನ್ನ ಬರೀ ಹೊಗಳಿ ಕಳಿಸಿಕೊಟ್ಟರೆ ತೃಪ್ತಿಯಾಗುವುದಿಲ್ಲ ಸ್ವಾಮಿ. ನನ್ನ ಕೆಲಸವೇನು ಮಾಡುತ್ತೀರಿ ?"

"ಯಾವದು – ಬೆಂಗಳೂರಿಗೆ ಬರುವ ವಿಷಯವೇ ?"

"ಹೊ! ನನ್ನ ದೈನಂದಿನ ಪತ್ರಿಕೆಗೆ ಸಂಪಾದಕರಾಗುವ ವಿಷಯ."

"ನಾನು ಕೂಡಲೆ ಒಪ್ಪಿಕೊಳ್ಳುವ ಸ್ಥಿತಿಯಲ್ಲಿಲ್ಲ. ಸ್ವಲ್ಪ ಕಾಲಾವಕಾಶ ಕೊಟ್ಟರೆ ಯೋಚಿಸಿ ತಿಳಿಸುತ್ತೇನೆ. ನನ್ನ ಸ್ನೇಹಿತರಿಗೆ ನಿಮ್ಮ ನಿಯೋಜನೆ ವಿಷಯ ತಿಳಿಸಿ ಅವರ ಸಲಹೆ ತೆಗೆದುಕೊಳ್ಳುತ್ತೇನೆ."

"ಹಾಗೇಮಾಡಿ. ನಾನಿನ್ನೂ ಇಲ್ಲಿ ಒಂದುವಾರ ಇರುತ್ತೇನೆ. ಅಡ್ವರ್ಟೈಸಿಂಗ್ ಏಜಂಟ್ಸ್ (Advertising Agents) ಕಾಣಬೇಕಾಗಿದೆ. ಅವರಿಗೆಲ್ಲಾ ಪಾರ್ಟಿ ಮಾಡಿಸಬೇಕಾಗಿದೆ. ಅವರ ಸಹಾಯ ನಿರೀಕ್ಷಿಸಿಕೊಂಡೇ ನಾನೀ ದೊಡ್ಡ ಸಾಹಸಕ್ಕೆ ಕೈಹಾಕಿರುವುದು."

"ನಿಮ್ಮ ಪ್ರಯತ್ನ ಸಫಲವಾಗಲಿ. ಇನ್ನು ಅಪ್ಪಣೆ ಕೊಟ್ಟರೆ ಹೊರಡುತ್ತೇನೆ" ಎಂದೆದ್ದ.

ಶೆಟ್ಟರು ಹೊಟೇಲ್ ಬಾಯನ್ನು ಕರೆದು ಟ್ಯಾಕ್ಸಿ ತರಲು ಕಳುಹಿಸಿ

"ಓದುವುದಕ್ಕೆ ಪುಸ್ತಕಗಳು ಬೇಕಾದರೆ ತೆಗೆದುಕೊಂಡು ಹೋಗಿ"

"ಬೇಡಿ - ಸಧ್ಯಃ ನನಗೆ ವಿರಾಮವೇ ಇಲ್ಲ."

"ಮತ್ತೆ ತಮ್ಮ ದರ್ಶನ"

"ಇವತ್ತು ಸೋಮವಾರ - ಗುರುವಾರ ನಮ್ಮ ಆಫೀಸಿಗೆ ಬರಲು ಸಾಧ್ಯವೇ ?"

"ಆಗತ್ಯ ಬರುತ್ತೇನೆ"

ಟ್ಯಾಕ್ಸಿ ಸಿದ್ಧವಾಗಿದೆಯೆಂದು ಬಾಯ್ ಬಂದು ತಿಳಿಸಿದ. ಶೆಟ್ಟರು ಟ್ಯಾಕ್ಸಿಯವರೆಗೆ ಬಂದು ಪ್ರಸಾದ್‌ನನ್ನು ಕಳಿಸಿಕೊಟ್ಟರು.

ಪ್ರಸಾದ್ ಮನೆಗೆ ಬರುವವೇಳೆಗೆ ಲಲಿತಮ್ಮ ಬಂದಿದ್ದಳು.

"ನೀನು ಬಂದು ಎಷ್ಟು ಹೊತ್ತಾಯಿತು ?" ಎಂದು ಕೇಳಿದ.

"ಸುಮಾರು ಎರಡು ಗಂಟೆಯಾಯಿತು. ಸನ್ಮಾನೋತ್ಸವ ಇಷ್ಟು ಹೊತ್ತಾಯಿತೆ ?"

"ಇಲ್ಲ. ಶೆಟ್ಟರು ತಮ್ಮ ಹೊಟೇಲಿಗೆ ಕರೆದುಕೊಂಡು ಹೋದರು. ಬಹಳ ಮಾತುಕತೆಯಾಯಿತು - ಹೋಗಿ ಊಟ ಮುಗಿಸಿಕೊಂಡು ಬಾ."

"ನೀವು."

"ನನಗೆ ಸಾಕಷ್ಟು ತಿಂಡಿಯಾಗಿದೆ. ಈಗತಾನೆ ಶೆಟ್ಟರು ಕಾಫಿ ಬೇರೆ ಕುಡಿಸಿಬಿಟ್ಟರು."

"ನನಗೂ ಹಸಿವಿಲ್ಲ - ನಿರ್ಮಲಾ ನಾನು ತುಂಬ ತಿಂಡಿ ತಿಂದೆವು. ಅಮ್ಮನಿಗೆ ಮಲಗಿಕೋ ಎಂದು ಹೇಳಿ ಬಂದುಬಿಡುತ್ತೇನೆ."

ಪ್ರಸಾದ್ ಭಟ್ಟೆ ಬದಲಾಯಿಸಿ, ಮುಖಮಾರ್ಜನೆ ಮುಗಿಸಿಕೊಂಡು ಕುಳಿತ. ಲಲಿತಮ್ಮ ಕೈಯಲ್ಲಿ ಹಾಲಿನ ಗ್ಲಾಸ್ ಹಿಡಿದುಕೊಂಡು ಬಂದಳು.

ಪ್ರಸಾದ್ ಹಾಲು ಕುಡಿಯಲೇಬೇಕೆಂದು ಲಲಿತಮ್ಮ ಹಟ ಹಿಡಿದಳು.

"ಈ ಹಾಲು ನೀನು ಕುಡಿದು ಬಿಡು. ನನಗೆ ಬೇರೆ ಹಾಲಿದೆ."ಎಂದ.

ಲಲಿತಾ ನಸುಮುನಿಸಿನಿಂದ ಅವನತ್ತ ನೋಡಿ ಹಾಲನ್ನು ಅವನಿಗೆ ಗಿಡಿದೇಬಿಟ್ಟಳು.

"ತಡಿ ತಡೀ - ಮೈಮೇಲೆ ಚೆಲ್ಲುತ್ತಿದೆ."

"ಚೆಲ್ಲಲಿ - ಕೆಟ್ಟ ಮಾತನಾಡಿದುದಕ್ಕೆ ಶಿಕ್ಷೆ."

ಹಾಲಿನ ಗ್ಲಾಸನ್ನು ಮೇಜಿನಮೇಲೆಟ್ಟು ಪ್ರಸಾದನ ಬಳಿ ಬಂದು ಕುಳಿತು

"ಏನಾಯಿತು ಹೇಳಿ - ಉತ್ಸವ ಹೇಗಾಯಿತು - ನೀವೇನು ಮಾತ ನಾಡಿದಿರಿ ?"

"ನನ್ನದು ದೊಡ್ಡ ಪುರಾಣ. ನೀನೂ ನಿರ್ಮಲಾ ಏನು ಮಾಡಿ ಕೊಂಡು ಬಂದಿರಿ ಮೊದಲು ಹೇಳು."

"ಮೊದಲು 'ಪುರೋಹಿತ್ ರೆಸ್ಟುರಾ'ಗೆ ಹೋಗಿ ಹೊಟ್ಟೇ ತುಂಬ ತಿಂಡಿ ತಿಂದು ಚೌಪಾತಿಗೆ ಹೋಗಿ ಕುಳಿತೆವು. ಮಂಗೂಭಾಯಿಯ ಎರಡ ನೆಯ ಮದುವೆಯ ವಿಷಯ ನಾನೇನೂ ಅವಳಿಗೆ ಹೇಳಬೇಕಾಗಿರಲಿಲ್ಲ. ಆ ಬಗ್ಗೆ ಮನಸ್ಸು ಕಲ್ಲುಮಾಡಿಕೊಂಡಿದ್ದಾಳೆ."

"ಏನಂದಳು ?"

"ಸಮುದ್ರದ ಕಡೆ ತೋರಿಸಿ 'ಅಗೋ ಅಲ್ಲಿದೆ ನನ್ನ ತೌರುಮನೆ' ಎಂದಳು. ನೀವು ಹೇಳಿದ ಮಾತು ಹೇಳಿದೆ."

"ಅದಕ್ಕೇನಂದಳು ?"

" 'ಅದು ಹೇಗೆ ಸಾಧ್ಯ ಬಹೆನ್. ಹಾಲಿನ ಹಾಗಿರುವ ನಿಮ್ಮ ಸಂಸಾರಕ್ಕೆ ನಾನು ಬಂದು ಹುಳಿ ಹಿಂಡಲೇ? ದೇವರು ಮಾಡಿಸಿದ್ದಾಗಲಿ ಸುಮ್ಮನಿರಿ - ಏಕೆ ಯೋಚನೆ ಮಾಡುವಿರಿ?' ಎಂದಳು."

"ಮಂಗೂಭಾಯ್ ಎರಡನೆಯ ಮದುವೆ ಮಾಡಿಕೊಂಡರೂ, ನಿರ್ಮಲ ನನ್ನ ಮನೆಯಿಂದ ಹೊರದೂಡುವುದಿಲ್ಲವಲ್ಲ."

"ನಿಜ. ಗಂಡ ಕೇವಲ ಅನ್ನಬಟ್ಟೆ ಒದಗಿಸುವ ಯಂತ್ರವಲ್ಲವಲ್ಲ. ಹೆಣ್ಣಿಗೂ............"

"ಹೌದು ಹೌದು"

ಎಂದೆನ್ನುತ್ತ ಪ್ರಸಾದ ಲಲಿತಮ್ಮನನ್ನಪ್ಪಿ ಮುಗುಳ್ನಗೆ ಬೀರಿದ.

"ಹೋಗಿ ದೊರೆ – ನನ್ನನ್ನು ಹಾಸ್ಯಮಾಡುತ್ತೀರಿ."

"ಇಲ್ಲ ಲಲ್ಲೂ............"

"ಛೀ! ಛೀ! ಲಲ್ಲೂ ಎಂದು ಮಾತ್ರ ಕರೆಯಬೇಡಿ."

"ಏಕೆ? ಆ ಹೆಸರೇನಾಗಿದೆ?"

"ಪ್ರಜಾಮತದ ಫಿಲಂ ಕ್ರಿಟಿಕ್ (Film Critic) ಸಿನೀಮಾ ನಟಿಯರ ನೆಲ್ಲಾ ಲಲ್ಲೂ - ಪದ್ದೂ - ರಾಜಿ - ಕುಮ್ಮಿ ಎಂದು ಕರೆಯಲಾರಂಭಿಸಿದ ಮೇಲೆ ಆ ಹೆಸರುಗಳ ಮೇಲೆ ನನಗೆ ಜಿಗುಪ್ಸೆ ಬಂದು ಬಿಟ್ಟಿದೆ."

"ಲಲಿತಮ್ಮವರೇ!"

"ಪ್ರಸಾದರಾಯರೇ!"

"ಅಯ್ಯೋ ಗಂಡನ ಹೆಸರು ಹೇಳಿಬಿಟ್ಟೆಯಲ್ಲೇ!"

"ನನ್ನ ಗಂಡನ ಹೆಸರು ನಾನು ಹೇಳಬಾರದೋ?"

"ಗಂಡನ ಹೆಸರು ಹೆಂಡತಿ ಹೇಳಿದರೆ ಅವನಿಗೆ ಆಯುಸ್ಸು ಕ್ಷೀಣ ವಾಗುವುದಂತೆ?"

ಲಲಿತ ಥಟಕ್ಕನೆ ಪ್ರಸಾದನ ಬಾಯಿಮುಚ್ಚಿದಳು. ಅವಳ ಮುಖಕ್ಕೆ ಕೆಂಪೇರಿತ್ತು. ಧ್ವನಿ ಗದ್ಗದವಾಗಿತ್ತು.

"ದೊರೆ - ಎಂದಿಗೂ ಆ ಮಾತನಾಡಬೇಡಿ."

"ನಾನು ಅಮರನೇ?"

"ಹೌದು - ನನ್ನ ಭಾಗಕ್ಕೆ ಅಮರರೇ?"

"ಅಸುರರಿಗೆ ಸಾವೇ ಇಲ್ಲವಲ್ಲ - ನೀನೇಕೆ ಭಯಪಡುವುದು."

"ನನಗೆ ಯುಕ್ತಿವಾದ ಮಾಡಲು ಬರದು."

"ಯುಕ್ತವಾದ!"

"ಹೆಣ್ಣಿನ ವಾದ ಯಾವಾಗಲೂ ಹೃದಯವಾದ."

"Woman - the eternal female."

"Man - the eternal.........."

"Brute ಎಂದು ಹೇಳಿಬಿಡು."

"ಛೆ! ಯಾವ ಬಾಯಲ್ಲಿ ಹೇಳಲಿ....ಹೀಗೇ ಹೊತ್ತು ಕಳೆಯುವಿರೋ, ನಿಮ್ಮ ವಿಷಯ ತಿಳಿಸುವಿರೋ?"

ಪ್ರಸಾದ್ ಉತ್ಸವವನ್ನು ವರ್ಣಿಸಿ, ಶೆಟ್ಟರು, ತಾನು ಮಾಡಿದ ಭಾಷಣ ವಿವರಿಸಿ, ಹೊಟೇಲಿನಲ್ಲಿ ನಡೆದ ಮಾತುಕತೆಯನ್ನು ಒಪ್ಪಿಸಿದ.

ಲಲಿತಮ್ಮ ಕ್ಷಣಕಾಲ ಯೋಚನೆಮಾಡಿ

"ಶೆಟ್ಟರಿಗೆ ಏನು ಹೇಳಿದಿರಿ?"

"ಅವರಿಗೆ ನಾನೇನೂ ಹೇಳಲು ಸಾಧ್ಯವಿಲ್ಲ. ಇದು ನಿನಗೆ, ನಾನಾ, ದಾವ್ಲೆ, ದಸ್ತೂರ್, ಮೇಥಾ ನಿಮಗೆ ಸೇರಿದ ವಿಷಯ. ನಾಳೆ ನಾಡಿದ್ದು ಕಛೇರಿಯಲ್ಲಿ ಒಂದು ಮೀಟಿಂಗ್ ಕರೆದು ವಿಷಯ ನಿಮ್ಮ ಮುಂದೆ ಇಡುತ್ತೇನೆ. ನೀವು ಹೇಗೆ ನಿರ್ಧರಿಸಿದರೆ ಹಾಗೆ ನಡೆದುಕೊಳ್ಳುವುದಷ್ಟೇ ನನ್ನ ಕೆಲಸ."

"ನಿಮ್ಮ ಮನಸ್ಸಿನಲ್ಲೇನಿದೆ ದೊರೆ."

"ಮುಂಬಯಿ ಬಿಡಬಾರದೆಂದು."

"ನಿಮ್ಮ ಕನ್ನಡನಾಡಿಗೆ ಹೋಗಲು ಇಷ್ಟಪಡುವುದಿಲ್ಲವೇ?"

"ಇಷ್ಟಪಡುತ್ತೇನೆ. ಆದರೆ 'ಸೆಂಚುರಿ'ಯನ್ನು ಹೇಗೆ ಬಿಡಲಿ. Dual loyalties ಮಧ್ಯೆ ಸಿಕ್ಕಿಕೊಂಡು ನನ್ನ ಮನಸ್ಸು ಅಸ್ತವ್ಯಸ್ತ ವಾಗಿದೆ....ನಿನ್ನ ಸಲಹೆಯೇನು?"

"ನನ್ನ ಸಲಹೆ ಗಾಳಿಗೆ ಹೋಗಬಾರದು."

ನಿನ್ನ ಯಾವ ಸಲಹೆ ಗಾಳಿಗೆ ಹೋಗಿದೆ."

"ದೊರೆ - ಇಲ್ಲಿ ನೀವು ಮಾಡುತ್ತಿರುವುದೇನು? ಹೊಟ್ಟೆ ಹೊರೆಯುವುದಕ್ಕಾಗಿ ಒಂದು ವಾರಪತ್ರಿಕೆಯಲ್ಲಿ ನೌಕರಿ. 'ಸೆಂಚುರಿ' ಗಂಟು ಬಿದ್ದಾರಭ್ಯ ಕನ್ನಡದಲ್ಲಿ ಒಂದು ಪಂಕ್ತಿ ಬರೆದಿರುವಿರಾ? ನಿಮ್ಮ ಭಕ್ತಿ, ತ್ಯಾಗ, ಪ್ರತಿಭೆ ಕನ್ನಡದ ಸೊತ್ತಲ್ಲವೆ? ಈಗ ಭಗವಂತನೇ ದಾರಿ ತೋರಿಸಿದ್ದಾನೆ. ಈ ಅವಕಾಶ ಕಳೆದುಕೊಳ್ಳುವುದು ನ್ಯಾಯವಲ್ಲ."

"ಶೆಟ್ಟರು ಮಾತನಾಡಿದಾಗ ನನಗೂ ಹಾಗೆಯೇ ತೋರಿತು. ನಾನಿಲ್ಲದಿದ್ದರೂ 'ಸೆಂಚುರಿ' ನಡೆಯುವ ವಿಷಯದಲ್ಲಿ ನನಗೆ ಭಯವಿಲ್ಲ. ಆದರೆ........"

"ಆದರೆಗೀವರೆ ಮಾತೇ ಇಲ್ಲ. ಸೆಂಚುರಿ ಗೆಳೆಯರನ್ನು ಒಪ್ಪಿಸುವ ಭಾರ ನನಗಿರಲಿ. ನೀವು ಮನಸ್ಸು ದೃಢಮಾಡಿಕೊಳ್ಳಿ."

"ಲಲಿತಾ ನೀನೇನು ಮಾಡುತ್ತಿರುವೆ ಗೊತ್ತಿದೆಯೇ?"

"ಏನು ಮಾಡುತ್ತಿರುವೆ?"

"ಜೇನುಗೂಡಿನೊಳಗೆ ಕೈಯಿಡುತ್ತಿರುವೆ."

"ಕೈಗಂಟಿದ ಜೇನನ್ನು ನೆಕ್ಕಿಕೊಂಡರಾಯಿತು."

"ಆ ಗೂಡಿನಲ್ಲಿ ಜೇನಿಲ್ಲ - ಬರೀ ವಿಷದ ಮುಳ್ಳಿನ ಹುಳುಗಳಿವೆ."

"ಸಾಕಿದ ಜೇನು ಕಡಿಯುವುದಿಲ್ಲ ದೊರೆ."

"ಸಾಕಿದ ಹಾವು ಕಡಿಯುತ್ತದೆ."

"ನನ್ನ ಮಾತಿರಲಿ – ನಿಮ್ಮ ವಿಕಾಸಕ್ಕಾಗಿ ನನ್ನ ಬಲಿದಾನವಾದರೇನು ನಷ್ಟ?"

"ನಿನ್ನ ಸಂತೋಷದಿಂದಲೇ ನನ್ನ ವಿಕಾಸ."

"ಬಲಿದಾನ ಮಾಡಿಕೊಳ್ಳುವವರು ವ್ಯಸನಪಡುವುದಿಲ್ಲ. ಅದು ಹುತಾತ್ಮರ ಲಕ್ಷಣವಲ್ಲ,"

"ಸಿಲುಬೆಗೆ ಹಾಕಿದಾಗ ಯೇಸು ಕಣ್ಣಿನಲ್ಲಿ ನೀರು ಬಂತು."

"ತ ಮ ಗಾ ಗಿ ಯ ಲ್ಲ ಸ್ವಾಮಿ ಕಣ್ಣೀರ್ಗರೆದುದು – ಲೋಕಕ್ಕಾಗಿ. ಸೊಕ್ರಟೀಸನ ಕೊನೆಯ ದಿನಗಳನ್ನು ಜ್ಞಾಪಿಸಿಕೊಳ್ಳಿ. ಮದ್ಯ ಕುಡಿಯುವಷ್ಟು ಸಂತೋಷವಾಗಿ ಹೆಮ್‌ಲಾಕ್ ವಿಷ ಆ ಮಹಾನುಭಾವ ಕುಡಿಯಲಿಲ್ಲವೇ?"

"ಕುಡಿದ ಲಲಿತಾ - ಮಹಾನುಭಾವ ಕುಡಿದ – ನೀನೂ ಕುಡಿಯಬಲ್ಲೆ. ಆದರೆ ನೀನು ವಿಷ ಕುಡಿದ ಮೇಲೆ ನನ್ನ ಗತಿಯೇನು ?"

ತನ್ನ ಬುಜದ ಮೇಲೆ ಒರಗಿದ ಪತಿಯನ್ನು ಅಕ್ಕರೆಯಿಂದ ಅಪ್ಪಿ ಸೇವರಿಸಿದಳು. ಮಧುರಯಾತನೆಯ ಅನುಭವದಲ್ಲಿ ಲಲಿತಮ್ಮ ಲೋಕವನ್ನೇ ಮರೆತಳು – ತನ್ನನ್ನೂ ಮರೆತಳು.

೩

ಮಂಗಳವಾರ ಸಂಜೆ ಐದು ಗಂಟೆಗೆ ಸರಿಯಾಗಿ 'ಸೆಂಚುರಿ' ಕಾರ್ಯಾಲಯದಲ್ಲಿ ಸಭೆ ಸೇರಿತು. ನಾನಾ, ಡಾವ್ನೆ, ದಸ್ತೂರ್, ಮೇಥಾ, ಲಲಿತಮ್ಮ ಬಂದಿದ್ದರು. ಸರ್ದಾರ್ ಮಾತ್ರ ಕಾರ್ಯಗೌರವದಿಂದ ಬರಲಾಗುವುದಿಲ್ಲ ವೆಂದು ವಿಷಾದ ಸೂಚಿಸಿ ಫೋನ್ ಮಾಡಿದ್ದ.

ಪ್ರಸಾದನೇ ಸಭೆಯ ಕಾರ್ಯಕ್ರಮ ಆರಂಭಿಸಿ

"ನಮ್ಮ ಪತ್ರಿಕೆ ಇನ್ನೂ ಸ್ವಯಂ - ಪೂರ್ಣವಾಗಿಲ್ಲ. ಜನಕ್ಕೆ ಇಂಥ ಒಂದು ಪತ್ರಿಕೆ ಬೇಡವೋ ಅಥವಾ ನಾವು ನಮ್ಮ ಕರ್ತವ್ಯ ಸರಿಯಾಗಿ ನಿಭಾಯಿಸುತ್ತಿಲ್ಲವೋ ಗೊತ್ತಿಲ್ಲ. ಇಷ್ಟ ಮಿತ್ರರನ್ನೆಲ್ಲಾ ನಾವು ಸುಲಿದಿದ್ದೇವೆ – ಪತ್ರಿಕೆಯ ಖರ್ಚು ಹುಟ್ಟಿಸಲು ಶಕ್ತಿಮೀರಿ ಪ್ರಯತ್ನಿಸಿದ್ದೇವೆ. ನಮ್ಮ ಪ್ರಯತ್ನ ಸಾಕಷ್ಟು ಸಫಲವಾಗಿಲ್ಲ."

"ಸ್ವಯಂಪೂರ್ಣ ಮಾಡುವುದಕ್ಕೆ ನಿಮ್ಮ ಸಲಹೆಯೇನು ಪ್ರಸಾದ್ ಬಾಯ್"

ಎಂದು ದಸ್ತೂರ್ ಕೇಳಿದ.

"ಕೆಲಸಗಾರರ ಸಂಖ್ಯೆಯನ್ನು ಕಡಮೆಮಾಡಬೇಕು. ಸಂಬಳ ಕಡಿಮೆ ಮಾಡಬೇಕು."

"ಅದಕ್ಕೆ ನಾನೊಪ್ಪಲಾರೆ. ಈಗಾಗಲೇ ನಮ್ಮ ಕೆಲಸಗಾರರಿಗೆ ನಾವು ಗಂಜಿಯೂಟ ಕೊಡುತ್ತಿದ್ದೇವೆ. ಉಪವಾಸವಿದ್ದು ಕೆಲಸಮಾಡಿ ಎಂದು ಅವರಿಗೆ ಹೇಳುವುದು ನ್ಯಾಯವಲ್ಲ"

ಎಂದು ಡಾವ್ನೆ ವಿರೋಧ ವ್ಯಕ್ತಪಡಿಸಿದ.

"ನಾನು ಹೇಳಿದ್ದು ತಂತ್ರವರ್ಗದ ಕೆಲಸಗಾರರ ವಿಷಯವಲ್ಲ ದಾವ್ಲೆ - ಸಂಪಾದಕ ಮಂಡಲಿಯ ವಿಷಯ."

"ಅವಶ್ಯಕವಾಗಿರುವಷ್ಟು ಹಣವನ್ನು ಕೂಡ ಯಾರೂ ತೆಗೆದುಕೊಳ್ಳದಿರುವಾಗ ಈ ಪ್ರಶ್ನೆ ಹೇಗೇಳುತ್ತದೆ ಪ್ರಸಾದ್"

ಎಂದು ನಾನಾ ಕೇಳಿದ.

ಹೇಳಬೇಕಾದ ವಿಷಯ ಹೇಳದೆ ಗುಂಗಿ ಹುಳುವಿನಂತೆ ಪ್ರಸಾದ್ ಸುತ್ತುತ್ತಿದ್ದುದನ್ನು ಕಂಡು ಲಲಿತಮ್ಮ ಶೆಟ್ಟರೊಂದಿಗೆ ನಡೆದಿದ್ದ ಸಂಭಾಷಣೆಯನ್ನು ವಿವರಿಸಿದಳು.

ಪ್ರಶಾಂತವಾಗಿದ್ದ ಕೊಳದಲ್ಲಿ ಯಾರೋ ಕಲ್ಲು ಒಗೆದಂತಾಯಿತು. ಎಲ್ಲರ ಮುಖದ ಮೇಲೆ ನೋವಿನ ಗೆರೆಗಳು ಸ್ಪಷ್ಟವಾಗಿ ಮೂಡಿದವು.

"ನೀವೇನು ಉತ್ತರವಿತ್ತಿರಿ ಪ್ರಸಾದ್"

ಎಂದು ದಸ್ತೂರ್ ಕೇಳಿದ.

"ಈ ವಿಷಯದಲ್ಲಿ ನಾನು ಉತ್ತರಕೊಡುವುದಕ್ಕೆ ಸಾಧ್ಯವಿಲ್ಲ. ನಿಮ್ಮ ನಿರ್ಧಾರವನ್ನು ಶೆಟ್ಟರಿಗೆ ತಿಳಿಸುವುದೊಂದೇ ನಾನು ಮಾಡುವ ಕೆಲಸ."

"ನಿಮ್ಮನ್ನು ಬಿಟ್ಟುಕೊಡಲು ಸಾಧ್ಯವಿಲ್ಲ"

ಎಂದು ದಾವ್ಲೆ ಖಂಡಿತವಾಗಿ ಹೇಳಿಬಿಟ್ಟ.

"ಕಷ್ಟವೋ ಸುಖವೋ ಎಲ್ಲರೂ ಒಟ್ಟಿಗೆ ಅನುಭವಿಸೋಣ ಪ್ರಸಾದ್"

ಎಂದು ನಾನಾ ಸೂಚಿಸಿದ.

ಮೇಥಾ ಯಾವ ಅಭಿಪ್ರಾಯವನ್ನೂ ವ್ಯಕ್ತಮಾಡಲಿಲ್ಲ.

ಲಲಿತಮ್ಮ ವಾದ ಮುಂದುವರಿಸಬೇಕಾಯಿತು.

"ಕನ್ನಡವನ್ನು ಕಡೆಗಾಣಿಸುತ್ತಿರುವೆನಲ್ಲಾ ಎಂದು ಪ್ರಸಾದರ ಮನಸ್ಸು ಕೊರಗುತ್ತಿದೆ. ಅವರ ಪ್ರತಿಭೆ ಕನ್ನಡದಲ್ಲಿ ಪ್ರಕಾಶಕ್ಕೆ ಬರುವಂತೆ ಇಂಗ್ಲಿಷಿನಲ್ಲಿ ಬರುವುದಿಲ್ಲ. ದೇಶದ ಹಿತವನ್ನು ಅನುಲಕ್ಷಿಸಿ ಅವರಿಗೆ ಹೋಗಲಪ್ಪಣೆ ಕೊಡಬೇಕು."

"ಹೊರಡುವ ವಿಷಯದಲ್ಲಿ ಅವರಿಗಿಂತ ನೀವೇ ಉತ್ಸುಕರಾಗಿರುವಂತಿದೆ ಸೋದರಿ."

ಎಂದು ದಾವ್ಲೆ ಟೀಕಿಸಿದ.

“ಹೌದು ದಾವ್ಲೆಭಾಯ್. ನಿಮ್ಮನ್ನು ಬಿಟ್ಟುಹೋಗಲು ಅವರಿಗೆ ಸ್ವಲ್ಪವೂ ಮನಸ್ಸಿಲ್ಲ. ಬೆಂಗಳೂರಿಗೆ ಹೋಗುವುದು ಅಗತ್ಯವೆಂದು ನಾನೇ ಅವರನ್ನು ಒತ್ತಾಯಮಾಡುತ್ತಿದ್ದೇನೆ. ದಯೆಯಿಟ್ಟು ನನ್ನ ಬಗ್ಗೆ ದುರಭಿಪ್ರಾಯ ತಳೆಯಬೇಡಿ. ನಿಮ್ಮಂಥ ಅಣ್ಣಂದಿರು ನನಗೆ ಎಲ್ಲಿ ಸಿಕ್ಕಬೇಕು. ವೈಯಕ್ತಿಕವಾಗಿ ಇದು ಪ್ರಸಾದರಿಗೂ ನನಗೂ ಪ್ರಿಯವಾದ ಕೆಲಸವಲ್ಲ. ಬೆಂಗಳೂರಿನಲ್ಲಿ ನನಗೆ ಹೂವಿನ ಸುಪ್ಪತ್ತಿಗೆ ಕಾದಿಲ್ಲ. ಕಣ್ಣು ತೆರೆದುಕೊಂಡೇ ಮುಳ್ಳಿನ ಹಾಸಿಗೆಯ ಮೇಲೆ ಮಲಗಲು ಹೋಗುತ್ತಿದ್ದೇನೆ. ನಮ್ಮ ಎಲ್ಲ ಸಂಕಟ ಸಮಯದಲ್ಲಿಯೂ ನಮ್ಮನ್ನು ಕಾಯುವುದು ನಿಮ್ಮ ನಿಷ್ಕಪಟ, ನಿರ್ವ್ಯಾಜ, ನಿರ್ಮಲ ಮೈತ್ರಿ.”

ಈವರೆಗೆ ಸುಮ್ಮನಿದ್ದ ಮೇಥಾ ಗಂಟಲು ಸರಿಮಾಡಿಕೊಂಡು

“ನಾನೊಂದು ಪರಿಹಾರ ಸೂಚಿಸುತ್ತೇನೆ ಬಹೆನ್. ಅದು ಎಲ್ಲರಿಗೂ ಸಮಂಜಸವಾಗಿ ಕಾಣಬಹುದು. ‘ಸೆಂಚುರಿ’ ಪತ್ರಿಕೆಯ ಗುಜರಾತಿ, ಮರಾಟಿ, ಕನ್ನಡ ಆವೃತ್ತಿಗಳನ್ನು ಪ್ರಕಟಿಸುವ ಯೋಜನೆ ಬಹಳ ದಿವಸಗಳಿಂದಲೂ ಯೋಜನೆಯಾಗಿಯೇ ಕುಳಿತಿದೆ. ಈಗ ಅದನ್ನು ಕಾರ್ಯೋನ್ಮುಖ ಮಾಡೋಣ – ಕನ್ನಡ ಆವೃತ್ತಿಯಿಂದಲೇ ಈ ಕೆಲಸ ಆರಂಭವಾಗಲಿ.”

“ಮೇಥಾ ನೀನು ಆದರ್ಶವಾದಿ. ‘ಸೆಂಚುರಿ’ಯ ಇಂಗ್ಲಿಷ್ ಆವೃತ್ತಿಯ ಖರ್ಚು ವೆಚ್ಚವನ್ನೇ ನಾವು ಪೂರೈಸಲಾಗಿಲ್ಲ – ಇನ್ನೂ ಈ ಹೊರೆಯನ್ನು ತಾಳಿಕೊಳ್ಳುವುದು ಹೇಗೆ? ಮುಂಬಯಿಯಿಂದ ನಾವು ಕನ್ನಡ ಪತ್ರಿಕೆ ತೆಗೆದರೆ ಕೇಳುವವರು ಯಾರು”

“ಖರ್ಚಿನ ವಿಷಯ ನನಗಿರಲಿ.”

“ಹಾಲು ಹಿಂಡುವ ಹಸುವಿನ ಕೆಚ್ಚಲು ಕೊಯ್ದ ಹಾಗಾಗುತ್ತದೆ. ನಿನ್ನ ಸಂಪೂರ್ಣ ಸಹಾಯ, ಸಹಕಾರ ‘ಸೆಂಚುರಿ’ಗೆ ಬೇಕು. ನಾನು ಇಲ್ಲಿರಲಿ – ಇಲ್ಲದಿರಲಿ ‘ಸೆಂಚುರಿ’ ಚಿರಕಾಲ ಬಾಳಿ ಬದುಕಬೇಕು. ಅದರ ಭದ್ರತೆಗೆ ಕಿಂಚಿತ್ತಾದ ಕುಂದೂ ಬರಬಾರದು.”

ಎಂದು ಪ್ರಸಾದ್ ಹೇಳಿದ. ದಾವ್ಲೆ, ನಾನಾ ಇಬ್ಬರೂ ಪ್ರಸಾದನ ಅಭಿಪ್ರಾಯವನ್ನು ಅನುಮೋದಿಸಿದರು.

ವಾದ ಮುಂದುವರಿಯಿತು. ಉಭಯ ಪಕ್ಷಗಳಲ್ಲಿ ಯಾರೂ ಸೋಲುವುದಕ್ಕೆ ಸಿದ್ಧವಾಗಿರಲಿಲ್ಲ. ತತ್ತ್ವಕ್ಕೂ ಅಂತಃಕರಣಕ್ಕೂ ಪ್ರಬಲ ಸಂಗ್ರಾಮ ಸಾಗಿತ್ತು.

ಮೇಥಾ ಬಹಳ ವಿಚಾರಮಾಡಿ ನಿರ್ಧಾರಕ್ಕೆ ಬಂದಂತೆ ತಲೆಕೊಡವಿ

"ಇಲ್ಲ ಪ್ರಸಾದ್. ನೀನು ಹೋಗಕೂಡದು. ಆಯಿ, ದಾದಾ, ವೀಣಾ ಸರ್ದಾರ್, ಸಂತೂಬಾಯ್ ಅವರಿಗೆ ಏನು ಹೇಳುತ್ತೀ? ನಮ್ಮನ್ನು ಬಿಟ್ಟು ನೀನು ಹೇಗಿರಬಲ್ಲೆ – ನಿನ್ನನ್ನು ಬಿಟ್ಟು ನಾವು ಹೇಗೆ ಇರಲು ಸಾಧ್ಯ?"

ಎಂದು ಹೇಳುತ್ತಿರುವಂತೆ ಅವನ ಕಣ್ಣುಗಳಿಂದ ಕೋಡಿ ಹರಿಯಿತು.

ಇನ್ನೂ ಸಭೆ ಮುಂದುವರಿಸಿ ಪ್ರಯೋಜನವಿಲ್ಲವೆಂದು ಎಲ್ಲರಿಗೂ ತೋರಿತು. ಯಾವ ನಿರ್ಧಾರಕ್ಕೂ ಬರಲಾಗದೆ ಸಭೆ ಚದುರಿತು.

ಮನೆಗೆ ಬಂದಮೇಲೆ ಲಲಿತಮ್ಮ ತಾಯಿಗೆ ಸಭೆಯಲ್ಲಿ ನಡೆದುದನ್ನು ವಿವರಿಸಿದಳು. ಗೌರಮ್ಮನವರು ವ್ಯಗ್ರತೆಯಿಂದ

"ಮಂಗಳವಾರ - ಇವತ್ತೇಕಮ್ಮ ಈ ಮಾತು ಆರಂಭಿಸಿದಿರಿ. ನಾಳೆ ಮಾತನಾಡಬಾರದಾಗಿತ್ತೇ?"

"ಗುರುವಾರ ಶೆಟ್ಟರಿಗೆ ಉತ್ತರ ಹೇಳಬೇಕಾಗಿದೆಯಮ್ಮ."

"ದಾದಾ, ನಾಸಾ, ದಾವ್ಲೆ, ಮೇಥಾ ಅವರನ್ನು ನೀನೇ ಒಪ್ಪಿಸಬೇಕು ಲಲಿತಾ. ಈ ಊರು ಬಿಡುವುದಕ್ಕೆ ನಿಮ್ಮ ಯಜಮಾನರಿಗೆ ಸ್ವಲ್ಪವೂ ಇಷ್ಟವಿಲ್ಲ."

"ಇದೆಲ್ಲಾ ನನ್ನದೇ ಕಿತಾಪತಿಯೆಂದು ಅವರೆಲ್ಲಾ ಕೋಪಮಾಡಿಕೊಂಡಿರುವರಮ್ಮ."

"ನೀನು ಮೇಥನನ್ನು ಒಪ್ಪಿಸಿದರೆ, ಉಳಿದವರನ್ನು ಅವನು ಒಪ್ಪಿಸುತ್ತಾನೆ."

ತಾಯಿಯ ಸಲಹೆ ಲಲಿತಮ್ಮನಿಗೆ ಯೋಗ್ಯವಾಗಿ ಕಂಡಿತು.

ಮಾರನೆಯ ದಿನ ಲಲಿತಮ್ಮ ಆಫೀಸಿನ ಫೋನ್ ತೆಗೆದುಕೊಂಡು ಮೇಥನ ಫೋನ್ ನಂಬರಿಗೆ 'ಡಯಲ್' ಮಾಡಿದಳು.

"ಹಲೋ - ಯಾರು?"

"ಯಾರು ಮಾತನಾಡುತ್ತಿರುವವರು - ಮೇಥಾಜಿ ಏನು?"

"ಹೌದು ಮೇಥ - ನೀವು ಯಾರು ?"

"ನಾನು ಭಯ್ಯಾ - ಲಲಿತಾ."

"ಓ ಲಲಿತಾ ಬಹೆನ್ ! ಏನು ಸಮಾಚಾರ."

"ನಿಮ್ಮಲ್ಲಿ ಸ್ವಲ್ಪ ಮಾತನಾಡಬೇಕಾಗಿತ್ತು."



"ನಿಮ್ಮ ಆಫೀಸಿಗೆ ಬರಲೇ ?"

"ಬೇಡಿ - ಆಫೀಸಿನಲ್ಲಿ ಮಾತನಾಡುವಂತಿಲ್ಲ."

"ನಾನು ಎಲ್ಲಿಗೆ ಬರಲಿ ಹೇಳಿ."

"ಪುರೋಹಿತ್ ರೆಸ್ಟುರಾದಲ್ಲಿ ಕುಳಿತು ಮಾತನಾಡುವ. ನೀವು ಚರ್ಚ್‌ಗೇಟ್ ಸ್ಟೇಷನ್ನಿಗೆ ಬಂದರೆ ನಾನು ಅಲ್ಲಿಗೆ ಬಂದಿರುತ್ತೇನೆ."

"ಆಗಬಹುದು. ಎಷ್ಟು ಹೊತ್ತಿಗೆ ಬರಲಿ."



"ಹನ್ನೊಂದು ಗಂಟೆಗೆ ಬರಲು ಸಾಧ್ಯವೇ ?"

"ಆಗಬಹುದು."

ಎಂದು ಹೇಳಿದ. ಲಲಿತಮ್ಮ ರಿಸೀವರ್ ಕೆಳಗಿಟ್ಟಳು.

ಪ್ರಸಾದ್ ತನ್ನ ಪತ್ರಿಕೆಯ ಕೆಲಸದಲ್ಲಿ ತಲ್ಲೀನನಾಗಿದ್ದ. ಲಲಿತಮ್ಮ ಹತ್ತು ಗಂಟೆಯ ವೇಳೆಗೆ ಅವನ ಮೇಜಿನ ಬಳಿ ಬಂದು

"ನಾನು ಸ್ವಲ್ಪ ಹೊರಗೆ ಹೋಗಿಬರುತ್ತೇನೆ" ಎಂದಳು.

"ಆಗಬಹುದು. ಎಷ್ಟು ಹೊತ್ತಿಗೆ ಹಿಂದಿರುಗುತ್ತೀ."

"ಹನ್ನೆರಡರ ವೇಳೆಗೆ ಬರುತ್ತೇನೆ."

"ಟ್ಯಾಕ್ಸಿ ತರಿಸಿಕೊಡಲೇ ?"

"ಬೇಡ ರೈಲಿನಲ್ಲಿ ಹೋಗುತ್ತೇನೆ."

ಎಂದು ಹೇಳಿದಳು.

ಲಲಿತಮ್ಮ ಚರ್ಚ್‌ಗೇಟ್ ಸ್ಟೇಷನ್ನಿನಲ್ಲಿ ರೈಲಿನಲ್ಲಿಳಿಯುವ ಹೊತ್ತಿಗೆ ಮೇಥಾ ಬಂದು ಕಾದಿದ್ದ. ಇಬ್ಬರೂ ಹೋಗಿ ಸಮೀಪದಲ್ಲಿದ್ದ 'ಪುರೋಹಿತ್ ರೆಸ್ಟುರಾ'ದಲ್ಲಿ ಕುಳಿತರು.

ಮೇಜಿನ ಮೇಲಿದ್ದ ಮೆನು ಕಾರ್ಡ್ (Menu Card) ತೆಗೆದುಕೊಂಡು ಲಲಿತಮ್ಮನ ಕೈಗಿತ್ತು

"ಏನು ತೆಗೆದುಕೊಳ್ಳುವಿರಿ ?" ಎಂದು ಕೇಳಿದ.

"ನನಗೇನೂ ಬೇಕಾಗಿಲ್ಲ. ಮನೆಗೆ ಹೋಗಿ ಊಟ ಮಾಡುತ್ತೇನೆ."

"ಏನಾದರೂ ತೆಗೆದುಕೊಂಡರೆ ಸ್ವಲ್ಪಹೊತ್ತು ಮಾತನಾಡುತ್ತ ಕುಳಿತು ಕೊಳ್ಳಬಹುದು."

"ಹಾಗಾದರೆ ಪೂರಿ ತೆಗೆದುಕೊಳ್ಳುತ್ತೇನೆ."

ಮೇಥಾ ಸರ್ವರನ್ನು (Server) ಕರೆದು ಪೂರಿ, ಭಾಜಿ, ಬಾಸುಂದಿ, ಚಹಾಗಳಿಗೆ ಆರ್ಡರ್ ಮಾಡಿದ.

ಸರ್ವರ್ ತಿಂಡಿತೀರ್ಥ ತಂದಿಟ್ಟು ಹೋಗುವವರೆಗೆ ಯಾರೂ ಬಾಯಿ ಬಿಡಲಿಲ್ಲ. ಲಲಿತಮ್ಮ ಕೇಳಿದಳು

"ನಿನ್ನೆ ನಾವು ಚರ್ಚೆಮಾಡಿದ ವಿಷಯ ಯೋಚನೆಮಾಡಿದಿರಾ ?"

"ರಾತ್ರಿಯೆಲ್ಲಾ ಅದೇ ಯೋಚನೆ. ಕಣ್ಣುಮುಚ್ಚಲಿಲ್ಲ. ಚಿಂತೆಯನ್ನು ನನ್ನಲ್ಲಿಯೇ ಹುದುಗಿಸಿಟ್ಟುಕೊಳ್ಳುವುದಕ್ಕಾಗಲಿಲ್ಲ. ಸಿಲೀನ್‌ಗೆ ಎಲ್ಲವನ್ನೂ ವಿವರಿಸಿದೆ."

"ಅವರು ಏನು ಹೇಳಿದರು ?"

"ನನ್ನ ಅಭಿಪ್ರಾಯವನ್ನೇ ಸಮರ್ಥಿಸಿದರು. ಯಾವ ಕಾರಣಕ್ಕೂ ಪ್ರಸಾದನನ್ನು ಮುಂಬಯಿಯಿಂದ ಕಳಿಸಿಕೊಡಬಾರದೆಂದು ಒತ್ತಾಯ ಮಾಡಿದರು."

"ನಿಮ್ಮೆಲ್ಲರ ಅಭಿಮಾನ ನನ್ನನ್ನು ಅರೆಮೂಕಳನ್ನಾಗಿದೆ. ನಿಮ್ಮೆಲ್ಲರಿಗೂ ಅಪ್ರಿಯವಾದ ಕೆಲಸ ನಾನು ನಿರ್ವಹಿಸಬೇಕಾಗಿದೆ."

"ಬೆಂಗಳೂರಿಗೆ ಹೋಗುವ ವಿಷಯದಲ್ಲಿ ನೀವೇಕೆ ಇಷ್ಟು ಹಟ ಹಿಡಿದಿರುವಿರಿ ಬಹೆನ್. ಪ್ರಸಾದ 'ಸೆಂಚುರಿ'ಯ ಕನ್ನಡ ಆವೃತ್ತಿ ಇಲ್ಲೇ ಆರಂಭಿಸಲಿ. ಆಗ ಪ್ರೆಸ್ಸನ್ನೂ ವಿಸ್ತರಿಸಬೇಕಾಗುತ್ತದೆ. ಕನ್ನಡದಲ್ಲಿಯೇ ಗ್ರಂಥ ಗಳನ್ನು ಬರೆಯಲಿ – ಸೆಂಚುರಿ ಕಾರ್ಯಾಲಯದಿಂದಲೇ ಪ್ರಕಟಿಸಲಿ."

"ನಿಮ್ಮ ಸಲಹೆ ಉತ್ತಮವಾಗಿದೆ ಮೇಥಾಜಿ. ಅವರ ಬಹುಮುಖ ಪ್ರತಿಭೆಯ ಪ್ರಕಾಶಕ್ಕೆ ಬೆಂಗಳೂರಿಗಿಂತ ಬೊಂಬಾಯಿಯೇ ಉತ್ತಮ ಸ್ಥಳ ವೆಂಬುದನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಇವರಲ್ಲಿ ಒಂದೆರಡು ಧರ್ಮ ಸೂಕ್ಷ್ಮಗಳು ಅಡಕವಾಗಿವೆ. ಅವಕ್ಕಾಗಿ ಬೆಂಗಳೂರಿಗೆ ಹೋಗುವ ವಿಷಯ ದಲ್ಲಿ ನಾನು ಆಸಕ್ತಿವಹಿಸಿದ್ದೇನೆ."

"ಆ ಧರ್ಮ ಸೂಕ್ಷ್ಮಗಳನ್ನು ನನಗೆ ತಿಳಿಸಬಹುದೇ ?"

"ನಿಮ್ಮಲ್ಲಿ ಮುಚ್ಚುಮರೆಯೇಕೆ? ಮೊದಲನೆಯದು ಕನ್ನಡದಲ್ಲಿ ಕೆಲಸ ಮಾಡಬೇಕಾದರೆ ಅದಕ್ಕೆ ತಕ್ಕ ವಾತಾವರಣಬೇಕು. ಬೆಂಗಳೂರಿನಲ್ಲಿ ಸಿಕ್ಕುವ ವಾತಾವರಣ ಮುಂಬಯಿಯಲ್ಲಿ ಸಿಕ್ಕಲಾರದು."

"ನಿಜ – ಒಪ್ಪಿಕೊಂಡೆ."

"ಅದಕ್ಕೂ ಗಹನವಾದ ಮತ್ತೊಂದು ಕಾರಣವಿದೆ"

ಎಂದು ಪ್ರಸಾದನ ಮೊದಲನೆಯ ಲಗ್ನದ ವಿಷಯ ತಿಳಿಸಿ

"ಗಂಡ ಹೆಂಡತಿಯನ್ನೂ ಈಗ ನಾನು ಅಗಲಿಸಿದಂತಾಗಿದೆ. ಅವರನ್ನು ಕೂಡಿಸಬೇಕೆಂಬುದು ನನ್ನ ಆಕಾಂಕ್ಷೆ."

"ಅವರ ಸ್ವಭಾವ ಹೇಗೆ ?"

"ಗಿರಿಜಮ್ಮ ಒಳ್ಳೆಯವರೇ. ತಿಳುವಳಿಕೆ ಸಾಲದು - ಇಂಥ ಗಂಡನನ್ನು ಹೇಗೆ ಬಾಳಿಸಬೇಕೆಂಬುದು ಗೊತ್ತಿಲ್ಲ. ಆಕೆಯ ತಂದೆ ದೊಡ್ಡ ಅಧಿಕಾರಿಗಳು. ದರ್ಪ, ಸಂಪತ್ತು, ಅಹಂಕಾರದ ತೊಟ್ಟಿಲಿನಲ್ಲಿ ಬೆಳೆದಿರುವ ಗಿರಿಜಮ್ಮನಿಗೆ ತನ್ನ ಗಂಡ ಅಲೌಕಿಕ ವ್ಯಕ್ತಿಯೆನ್ನುವುದು ತಿಳಿಯದು. ಯಾರಾದರೂ ಸರಿಯಾಗಿ ವಿವೇಕ ಹೇಳಿದರೆ ಆಕೆ ದಾರಿಗೆ ಬರಬಹುದು."

"ಈ ದಾಂಪತ್ಯ ಮತ್ತೆ ಕೂಡುತ್ತದೆಯೇ ?"

"ಕೂಡಿಸಬೇಕು. — ಲೋಕ ವಿನಾಕಾರಣ ನನ್ನನ್ನು ದೂರುತ್ತಿದೆ."

"ಲೋಕದ ದೂರಿನಿಂದ ನೀವು ತಪ್ಪಿಸಿಕೊಳ್ಳಲು ಪ್ರಸಾದನನ್ನು ಯಜ್ಞ ಪಶು ಮಾಡಬೇಕೆನ್ನುವಿರಾ ?"

"ಎಷ್ಟು ಕಠಿಣವಾಗಿ ಮಾತನಾಡುವಿರಿ ಮೇಥಾಜಿ. ಲೋಕ ನನ್ನನ್ನು ದೂರಿದರೇನು, ಅವರನ್ನು ದೂರಿದರೇನು - ಎರಡೂ ಒಂದೇ ಅಲ್ಲವೇ ? ತನ್ನ ಗೃಹಕೃತ್ಯವನ್ನೇ ಸರಿಪಡಿಸಿಕೊಳ್ಳಲಾಗದ ಪ್ರಸಾದ್ ಲೋಕಕ್ಕೆ ಉಪದೇಶ ಮಾಡುತ್ತಾನೆ ಎಂದು ಜನ ತೆಗಳುವುದಿಲ್ಲವೇ ?"

ಮೇಥಾ ತಿಂಡಿಯ ತಟ್ಟೆಯನ್ನು ಒತ್ತಟ್ಟಿಗೆ ತಳ್ಳಿ ಚಹಾ ಕುಡಿದು ಮುಗಿಸಿದ. ಯಾವದೋ ಅಸಹ್ಯವಾದ ಅಪ್ರಿಯವಾದ ಆದರೆ ಅನಿವಾರ್ಯವಾದ, ಅನುಲ್ಲಂಘ್ಯವಾದ ಕರ್ತವ್ಯಮಾಡುತ್ತಿರುವವನಂತೆ

"ಬಹೆನ್. ಈ ವಿಷಯ ನನ್ನ ವಿಚಾರಶಕ್ತಿಗೆ ಮಿೀರಿದುದಾಗಿದೆ. ನಿಮ್ಮ ನಿರ್ಧಾರವನ್ನು ನಾನು ಒಪ್ಪಿಕೊಳ್ಳಲು ಸಿದ್ಧನಾಗಿದ್ದೇನೆ. ಆದರೆ ಒಂದು ಕರಾರು..........."

"ಹೇಳಿ ಮೇಥಾಜಿ."

"ಪ್ರಸಾದನ ಸುಕೋಮಲ ಮನಸ್ಸು ಮುದುಡದಂತೆ ನೋಡಿಕೊಳ್ಳುವ ಜವಾಬ್ದಾರಿ ನಿಮ್ಮದು. ಯಾವ ಕಾರಣಕ್ಕಾಗಲಿ ಅವನಿಗೆ ಬೇಸರವಾದರೆ, ನೋವಾದರೆ, ದುಃಖವಾದರೆ ಕೂಡಲೆ ನೀವಿಬ್ಬರೂ ಇಲ್ಲಿಗೆ ಹೊರಟುಬರಬೇಕು. ಪ್ರಸಾದ್ ನಿರ್ವಿಣ್ಣನಾದರೆ ನಾವೆಲ್ಲ ಬದುಕಿರುವುದು ನಿಸ್ಸಾರ್ಥಕವಾಗುತ್ತದೆ."

ಲಲಿತಮ್ಮನ ಹೃದಯ ಕಟ್ಟೆಯನ್ನೊಡೆದುಕೊಂಡು ದುಃಖವುಕ್ಕಿ ಬಂದಿತು. ತೋಳಿನ ಮೇಲೆ ಮುಖವಿಟ್ಟು ಕಂಬನಿಗರೆದಳು.

"ದುಃಖಿಸಬೇಡಿ ಬಹೆನ್. ನಿಮಗೆ ಯಾವ ಅಗ್ನಿಪರೀಕ್ಷೆ ಕಾದಿದೆ ಯೆಂಬುದನ್ನು ನಾನು ಊಹಿಸಬಲ್ಲೆ. ಎಂಥ ಪ್ರಮೇಯ ಬಂದರೂ ಅಧೀರ ರಾಗಬೇಡಿ. ನಿಮ್ಮ ಕಷ್ಟ ಸುಖಗಳಲ್ಲಿ ತಾದಾತ್ಮ್ಯ ಹೊಂದಿರುವ ನಾಲ್ಕು ಜೀವಗಳು ಇಲ್ಲಿವೆ ಎಂಬುದನ್ನು ಮಾತ್ರ ಮರೆಯಬೇಡಿ."

"ಇಲ್ಲ ಮೇಥಾಜಿ. ಮರೆಯುವುದಿಲ್ಲ – ಎಂದೆಂದಿಗೂ ಮರೆಯುವು ದಿಲ್ಲ."

"ನಿಮ್ಮನ್ನು ಬೆಂಗಳೂರಿಗೆ ಕರೆದುಕೊಂಡು ಹೋಗುವ ಈ ಮನುಷ್ಯ ಎಂಥವರು ?"

"ತುಂಬ ಬುದ್ಧಿಶಾಲಿಗಳು, ಒಳ್ಳೆಯವರು ಎಂದು ಯಜಮಾನರು ಹೇಳಿದರು. ಶೆಟ್ಟರನ್ನು ನಾನಿನ್ನೂ ನೋಡಲಿಲ್ಲ."

"ಬೆಳ್ಳಗಿರುವುದೆಲ್ಲಾ ಪ್ರಸಾದನಿಗೆ ಹಾಲೇ. ಶೆಟ್ಟರು ಎಲ್ಲಿದ್ದಾರೆ ಬಹೆನ್ ?"

"ಏಕೆ ?"

"ನಾನೊಮ್ಮೆ ಅವರನ್ನು ನೋಡಿ ಮಾತನಾಡಬೇಕು."

"ಮೆಜೆಸ್ಟಿಕ್ ಹೊಟೇಲಿನಲ್ಲಿ ಇಳಿದುಕೊಂಡಿದ್ದಾರಂತೆ."

"ಬನ್ನಿ. ಅವರಿದ್ದರೆ ನೋಡಿಯೇ ಬಂದು ಬಿಡೋಣ."

"ಮೆಜೆಸ್ಟಿಕ್ ಹೊಟೇಲಿಗೆ ಫೋನ್ ಮಾಡಿ ನೋಡುತ್ತೇನೆ."

'ಆಗಬಹುದು' ಎಂದು ಮೇಥಾ ಹೇಳಿ ಲಲಿತಮ್ಮ ಫೋನ್ ಮಾಡಿ ಬರುವುದರೊಳಗಾಗಿ ಹೊಟೇಲ್ ಬಿಲ್ ಕೊಟ್ಟಿದ್ದ. ಲಲಿತಮ್ಮ ಹಿಂದಿರುಗಿದಳು.

"ಹೊಟೇಲಿನಲ್ಲಿ ಶೆಟ್ಟರು ಇದ್ದಾರೆ. ಈಗಲೇ ನಾವು ಹೋದರೆ ಸಿಕ್ಕುತ್ತಾರೆ."

ಮೇಥನ ಪೆಕಾರ್ಡ್ ಕಾರ್ ಸಿದ್ಧವಾಗಿತ್ತು. ಐದು ನಿಮಿಷಗಳಲ್ಲಿ ಇಬ್ಬರೂ ಹೊಟೇಲ್ ತಲುಪಿದರು. ಶೆಟ್ಟರು ಬಾಗಿಲಿನಲ್ಲಿಯೇ ಕಾದಿದ್ದು ಅವರಿಗೆ ಸ್ವಾಗತ ಬಯಸಿ ಒಳಕ್ಕೆ ಕರೆದುಕೊಂಡು ಹೋದರು. ಮೇಥನೇ ಸ್ವಯಂ ಪರಿಚಯ, ಲಲಿತಮ್ಮನ ಪರಿಚಯ ಮಾಡಿಕೊಟ್ಟ.

ಶೆಟ್ಟರು ಚಹಾ ತರಿಸುತ್ತೇನೆಂದರು. ಮೇಥಾ ಖಂಡಿತವಾಗಿ ಬೇಡ ವೆಂದು ಹೇಳಿ

"ನಿಮ್ಮ ದೈನಂದಿನ ಪತ್ರಿಕೆ ಆರಂಭವಾಗುವುದು ಯಾವಾಗ"

"ವಿಜಯದಶಮಿ ದಿವಸ ಮೊದಲನೆಯ ಸಂಚಿಕೆ ತರಬೇಕೆಂದು ಪ್ರಯತ್ನ ನಡೆಸಿದ್ದೇನೆ. ರೋಟರಿ ಖರೀದಿ ಮಾಡಿದ್ದಾಯಿತು."

"ಪ್ರಸಾದರು ಯಾವಾಗ ಬೆಂಗಳೂರಿಗೆ ಬರಬೇಕು ?"

"ನನ್ನ ಜತೆಯಲ್ಲಿಯೇ ಬಂದರೆ ಸಂತೋಷ. ಅಷ್ಟು ಬೇಗ ಹೊರಡಲು ಅವರಿಗೆ ಸಾಧ್ಯವಾಗದಿದ್ದರೆ ಒಂದು ತಿಂಗಳೊಳಗೆ ಬಂದು ಬಿಟ್ಟರಾಗುತ್ತದೆ. ಆ ವೇಳೆಗೆ ಪೂರ್ವಸಿದ್ಧತೆಯನ್ನೆಲ್ಲಾ ನಾನು ಮುಗಿಸಿರುತ್ತೇನೆ."

"ನಾನು ಒಂದೆರಡು ಸ್ಪಷ್ಟ ಮಾತುಗಳನ್ನಾಡಲು ಬಂದೆ ಮಿ. ಶೆಟ್ಟರೇ."

"ಹೇಳಿ ಸರ್."

"'ಸೆಂಚುರಿ' ಪತ್ರಿಕೆಯಲ್ಲಿ ಪ್ರಸಾದರಿಗಿರುವ ಸ್ಥಾನಮಾನಗಳನ್ನು ನೀವು ನೋಡಿರಬಹುದು. ಇದೇ ಸ್ಥಾನಮಾನ ಅವರಿಗೆ ನಿಮ್ಮ ಪತ್ರಿಯಲ್ಲಿ ದೊರೆಯಬೇಕು."

"ಅವರೇ ಪ್ರಧಾನ ಸಂಪಾದಕರು ಸರ್."

"ಅವರ ಜೀವನಕ್ಕೆ ತೊಂದರೆಯಾಗದಂತೆ ನೀವು ನೋಡಿಕೊಳ್ಳಬೇಕು."

"ಪ್ರೆಸ್ಸಿಗೋಸ್ಕರ ದೊಡ್ಡ ಬಂಗಲೆ ತೆಗೆದುಕೊಂಡಿದ್ದೇನೆ. ಅದರ ಆವರಣದಲ್ಲಿ ಒಂದು ಉಪಗೃಹವಿದೆ (Out-house). ಮುಂದೆ ವೆರಾಂಡ; ವೆರಾಂಡ ಪಕ್ಕದಲ್ಲಿ ರೂಮು; ಒಳಗೆ ಒಂದು ಹಜಾರ, ಒಂದು ದೊಡ್ಡ ರೂಮು; ಅದರ ಪಕ್ಕದಲ್ಲಿ ಅಡಿಗೆಯ ಮನೆ, ಸ್ನಾನದ ಮನೆ. ಚಿಕ್ಕ ಸಂಸಾರಕ್ಕೆ ಮನೆ ತುಂಬ ಅನುಕೂಲವಾಗಿದೆ.—ಆರಂಭದಲ್ಲಿ ತಿಂಗಳಿಗೆ ಮುನ್ನೂರು ರೂಪಾಯಿ ಸಂಬಳ ಕೊಡಲು ನಿರ್ಧರಿಸಿದ್ದೇನೆ."

"ದೈನಂದಿನ ಪತ್ರಿಕೆಯ ಸಂಪಾದಕರಿಗೆ ತಿಂಗಳಿಗೆ ಮುನ್ನೂರು ರೂಪಾಯಿ ಸಂಬಳ ತುಂಬ ಕಡಿಮೆಯಲ್ಲವೇ ವಿ. ಶೆಟ್ಟರೇ ?"

"ಒಂದು ವರ್ಷ ಅಷ್ಟು ತೆಗೆದುಕೊಳ್ಳಲಿ. ಎರಡನೆಯ ವರ್ಷದಿಂದ ಹೆಚ್ಚಿಸುತ್ತೇನೆ. ನಮ್ಮದೂ ದೊಡ್ಡ ವ್ಯವಹಾರ. ಫಲಾಫಲಗಳು ಏನಾಗುತ್ತದೋ ಗೊತ್ತಿಲ್ಲ."

"ಅವರು ಮುಂಬಯಿ ಬಿಟ್ಟು ಬೆಂಗಳೂರಿಗೆ ಬಂದು ಸೇರುವುದಕ್ಕೆ ಖರ್ಚು ಬರುತ್ತದೆ. ಅಲ್ಲಿಗೆ ಬಂದ ಕೂಡಲೆ ಮನೆಗೆ ಬೇಕಾದ ಸಾಮಾನುಗಳನ್ನೊದಗಿಸಿಕೊಳ್ಳಬೇಕು."

"ಆ ಖರ್ಚುಗಳಿಗಾಗಿ ಐದುನೂರು ರೂಪಾಯಿ ಕೊಡಲು ಸಿದ್ಧನಾಗಿದ್ದೇನೆ. ಪ್ರತಿ ತಿಂಗಳೂ ಐವತ್ತು ರೂಪಾಯಿನಂತೆ ಸಂಬಳದಲ್ಲಿ ಹಿಡಿಯುತ್ತ ಹೋದರೆ ಹತ್ತು ತಿಂಗಳಿನಲ್ಲಿ ತೀರಿಹೋಗುತ್ತದೆ."

"ಅಲ್ಲಿಗೆ ಪ್ರಸಾದರ ಕೈಗೆ ನಿಲುಕುವುದು ತಿಂಗಳಿಗೆ ಇನ್ನೂರೈವತ್ತು ರೂಪಾಯಿಗಳೇ. ಆ ಹಣದಲ್ಲಿ ಯಾರು ಸಂಸಾರ ಮಾಡುವುದಕ್ಕಾಗುತ್ತದೆ ಶೆಟ್ಟರೇ. ದೈನಂದಿನ ಪತ್ರಿಕೆಯ ಸಂಪಾದಕರು ಸ್ಥಾನಮರ್ಯಾದೆಗನುಗುಣವಾಗಿ ಇರಬೇಕಾಗುತ್ತದೆ."

"ಯಾವ ರೀತಿ ವ್ಯವಸ್ಥೆ ಮಾಡಿದರೆ ಅನುಕೂಲ ತಾವೇ ತಿಳಿಸಿಸ್ವಾಮಿ."

"ಈಗ ಪ್ರಸಾದರ ಕೈಗೆ ಸಾವಿರ ರೂಪಾಯಿ ಕೊಟ್ಟುಬಿಡಿ. ಅವರು ಬೆಂಗಳೂರಿಗೆ ಬಂದು ಮನೆಯ ವ್ಯವಸ್ಥೆ ನೋಡಿಕೊಳ್ಳಲನುಕೂಲವಾಗುತ್ತದೆ. ಸಂಬಳ ತಿಂಗಳಿಗೆ ನಾನೂರೆಂದು ಗೊತ್ತುಮಾಡಿ, ಮುಂಗಡವಾಗಿ ಕೊಟ್ಟ ಹಣ ಹತ್ತು ತಿಂಗಳಲ್ಲಿ ಹಿಂದಕ್ಕೆ ತೆಗೆದುಕೊಳ್ಳಿ."

ಶೆಟ್ಟರೂ ಮೇಥಾ ಹಿಗ್ಗಾಡಿ ಜಗ್ಗಾಡಿ ಕೊನೆಗೆ ನಿರ್ಧಾರಕ್ಕೆ ಬಂದರು.

ಪ್ರಸಾದನ ತಿಂಗಳ ಸಂಬಳ .... ೩೫೦ ರೂಪಾಯಿ.

ಮುಂಗಡವಾಗಿ ಕೊಡುವುದು .... ೧೦೦೦ ರೂಪಾಯಿ

ತೀರಿಸುವ ಬಗೆ .... ತಿಂಗಳಿಗೆ ೫೦ ರೂ ನಂತೆ ಇಪ್ಪತ್ತು ತಿಂಗಳ ಕಂತು.

ಎರಡನೆಯ ವರ್ಷದಿಂದ ಸಂಬಳ .... ೪೦೦ ರೂಪಾಯಿ.

"ನಾನು ಕರಾರು ಪತ್ರ ಸಿದ್ಧಪಡಿಸಿರುತ್ತೇನೆ. ಗುರುವಾರ ಸೇರುವುದೆಂದಾಗಿದೆ. ಅಂದೇ ಕರಾರು ಪತ್ರಕ್ಕೆ ಸಹಿಮಾಡಿ, ಮುಂಗಡದ ಹಣ ಪಾವತಿ ಮಾಡುತ್ತೇನೆ. ಪ್ರಸಾದರು ಮಾತ್ರ ನಾಲ್ಕು ವಾರಗಳಲ್ಲಿ ಬೆಂಗಳೂರಿಗೆ ಬಂದೇ ಬಿಡಬೇಕು. ತಡವಾದರೆ ನನ್ನ ವ್ಯವಸ್ಥೆ ಅವ್ಯವಸ್ಥೆಯಾಗುತ್ತದೆ."

"ಅವರನ್ನು ಸಕಾಲದಲ್ಲಿ ಕಳಿಸಿಕೊಡುವ 'ಜವಾಬ್ದಾರಿ' ನನಗಿರಲಿ."

ಶೆಟ್ಟರೂ, ಮೇಥಾ ಇಬ್ಬರೂ ತೃಪ್ತರಾದರು. ಥಟ್ಟನೆ ಜ್ಞಾಪಿಸಿಕೊಂಡು ಮೇಥಾ

"ನಾವು ಇಲ್ಲಿ ಬಂದಿದ್ದ ಸಂಗತಿ ದಯೆಯಿಟ್ಟು ಪ್ರಸಾದರ ಮುಂದೆ ಪ್ರಸ್ತಾಪಿಸಬೇಡಿ."

"ತಮ್ಮ ಇಷ್ಟ."

"ನೀವು ಊರಿಗೆ ಹೊರಡುವುದು ಯಾವಾಗ?"

"ಕರಾರು ಪತ್ರದ ಕೆಲಸ ಮುಗಿಸಿದ ಒಂದೆರಡು ದಿನಗಳಲ್ಲಿ ಹೊರಟು ಬಿಡುತ್ತೇನೆ."

"ನೀವು ಹೋಗುವ ಮುನ್ನ ನಮ್ಮ ಮನೆಗೆ ಬಂದು ಚಹಾ ತೆಗೆದುಕೊಂಡು ಹೋಗಬೇಕು.—ಗುರುವಾರ ಕರಾರು ಪತ್ರದ ಕೆಲಸ ಮುಗಿಸಿಕೊಂಡು ನಮ್ಮ ಮನೆಗೆ ಹೋಗೋಣ."

"ಹಾಗೇ ಆಗಬಹುದು."

ಎಂದು ಶೆಟ್ಟರು ಸಂತೋಷವಾಗಿ ಒಪ್ಪಿಗೆ ಸೂಚಿಸಿದರು.

ಮೇಥಾ, ಲಲಿತಮ್ಮ ಕಾರಿನಲ್ಲಿ ಕುಳಿತು ಹೊರಟರು. ಲಲಿತಮ್ಮನನ್ನು ಮನೆಗೆ ಮುಟ್ಟಿಸಿ ಹೋಗಲು ಮೇಥಾ ನಿಶ್ಚಯಿಸಿದ್ದ. ಲಲಿತಮ್ಮ ನಸುನಗುತ್ತಾ

"ಅಣ್ಣಾ, ನೀವಿಂಥ ವ್ಯವಹಾರಶೀಲರು ಎಂದು ನನಗೆ ಗೊತ್ತೇ ಇರಲಿಲ್ಲ" ಎಂದಳು.

"ಏಕೆ ಬಹೆನ್."

"ಶೆಟ್ಟರು ಹತ್ತಿರ ಎಷ್ಟು ಜಗ್ಗಾಡಿದಿರಿ."

"ನಾನು ಗುಜರಾತಿ ಬನಿಯಾ ಎನ್ನುವುದನ್ನು ಮರೆತಿರಾ ಬಹೆನ್. ರಕ್ತಗುಣ ಹೋಗುವುದಿಲ್ಲ."

"ನಿಮ್ಮ ಉಪಕಾರಕ್ಕೆ ನೆನಕೆ ಸಲ್ಲಿಸಬೇಕಾದುದು ನನ್ನ ಕರ್ತವ್ಯ."

"ನನ್ನ ಜತೆ ಜಗಳವಾಡಬೇಕೆಂದು ನಿರ್ಧರಿಸಿರುವಿರೇನು ?"

"ಇಲ್ಲ ಅಣ್ಣ ಕ್ಷಮಿಸಿ."

ಮೇಥಾ 'ಸೆಂಚುರಿ' ಕಛೇರಿಯ ತಿರುವಿನಲ್ಲಿಯೇ ಕಾರ್ ನಿಲ್ಲಿಸಿದ. ಲಲಿತಮ್ಮ ಕೆಳಗಿಳಿದು

"ಮನೆಗೆ ಬಂದು ಹೋಗುವುದಿಲ್ಲವೇ ?"

"ಈಗ ಬೇಡಿ – ನಮ್ಮ ಗುಟ್ಟೆಲ್ಲಾ ರಟ್ಟಾಗಿಬಿಡುತ್ತದೆ."

ಎಂದು ಹೇಳಿ ಕಾರ್ ಸ್ಟಾರ್ಟ್ ಮಾಡಿಸಿದ.

ಕ್ಷಣಕಾಲ ಲಲಿತಮ್ಮ ನಿಂತು ಮೇಥಾ ಹೋಗುವುದನ್ನೇ ನೋಡುತ್ತಿದ್ದಳು. ಅವಳ ಹೃದಯ 'God Bless you Brother' ಎಂದಿತು.

೪

ಅದೇ ಸಂಜೆ ಮೇಥಾ 'ಸೆಂಚುರಿ'ಯ ಆಧಾರಸ್ತಂಭಗಳಾಗಿದ್ದ ನಾನಾ, ದಾವ್ಲೆ, ದಸ್ತೂರ್ ಮೂವರನ್ನೂ ಕಂಡು ತನಗೂ ಶೆಟ್ಟರಿಗೂ ನಡೆದ ಮಾತುಕತೆಯನ್ನು ವಿವರಿಸಿದ. ದಸ್ತೂರ್ ಮುಖ ಗಂಟುಹಾಕಿಕೊಂಡು

"ಮದರಾಸಿಗಳು ತುಂಬಾ ಮೋಸಗಾರರೆಂದು ನಾನು ಕೇಳಿದ್ದೇನೆ ಮೇಥಾಜಿ." ಎಂದ

"ಕೆಲವರು ಮೋಸಗಾರರಾಗಿದ್ದರೆ ಎಲ್ಲರನ್ನೂ ಮೋಸಗಾರರು ಎನ್ನಲಾಗುವುದೇ" ಎಂದು ನಾನಾ ಉತ್ತರಿಸಿದ.

"ಮದರಾಸಿಗಳೂ ನಮ್ಮನ್ನು ಮೋಸಗಾರರೆಂದು ತಿಳಿದಿದ್ದಾರೆ ದಸ್ತೂರ್. ಹೀಗೆ ಒಬ್ಬರನ್ನೊಬ್ಬರು ಹಳಿಯುತ್ತ ಹೊರಟರೆ ಭಾರತದ ಗತಿಯೇನು?" ಎಂದು ಮೇಥಾ ಸವಾಲು ಹಾಕಿದ.

"ಈ ಶೆಟ್ಟರು ಮೋಸಗಾರರಾಗಿರದಿದ್ದರೆ ಸಾಕು. ಪ್ರಸಾದ್‌ಭಾಯನ್ನು ಇಲ್ಲಿಂದ ಕರೆದೊಯ್ದು ಬೆಂಗಳೂರಿನಲ್ಲಿ ಕಷ್ಟಕ್ಕೆ ಸಿಕ್ಕಿಸಿದರೇನು ಮಾಡುವುದು ಎಂದು ನಾನು ಯೋಚಿಸುತ್ತಿದ್ದೆ."

"ನಿಜ ಮೇಥಾಜಿ. ಪ್ರಸಾದ್ ಬಹು ಸಾತ್ವಿಕ ಪ್ರಾಣಿ. ಎಷ್ಟೇ ಕಷ್ಟಬಂದರೂ ಅನುಭವಿಸುತ್ತಾರಲ್ಲದೆ ಇನ್ನೊಬ್ಬರಲ್ಲಿ ಬಾಯಿ ಬಿಡುವುದಿಲ್ಲ. ಶೆಟ್ಟರು ಈಗೇನೋ ಸವಿಯಾಗಿ ಮಾತಾಡುತ್ತಿದ್ದಾರೆ. ನಾಳೆ ಪ್ರಸಾದ್ ಕೈಗೆ ಸಿಕ್ಕಿದ ಮೇಲೂ ಹೀಗೇ ಇರುತ್ತಾರೆಂದು ನಂಬುವುದು ಹೇಗೆ?" ಎಂದು ದಾಮ್ಲೆ ಕೇಳಿದ.

"ಸದ್ಯಕ್ಕೆ ನಾವು ಶೆಟ್ಟರನ್ನು ನಂಬದೆ ವಿಧಿಯೇ ಇಲ್ಲ. ಆತ ಕಟ್ಟಾ ವ್ಯವಹಾರಿ. ಸ್ವಲ್ಪ ಚೌಕಾಶಿ ಸ್ವಭಾವದವರು. ಆದರೆ ಒಮ್ಮೆ ಮಾತು ಕೊಟ್ಟ ಮೇಲೆ ಅದನ್ನುಳಿಸಿಕೊಳ್ಳುವ ಹಾಗೆ ಕಾಣುತ್ತದೆ. ಬೆಂಗಳೂರಿನಲ್ಲಿ ಕಷ್ಟವಾದರೆ ನಮಗೆ ತಿಳಿಸಬೇಕೆಂದು ಲಲಿತಾಬಹೆನ್‌ಗೆ ನಾನು ಹೇಳಿದ್ದೇನೆ. ಪ್ರಸಾದ್ ಇಲ್ಲಿಂದ ಹೋಗುವುದು ನಿಮ್ಮ ಮನಸ್ಸಿಗೆಷ್ಟು ಅಪ್ರಿಯವಾಗಿದೆಯೋ ಅಷ್ಟೇ ನನ್ನ ಮನಸ್ಸಿಗಾಗಿದೆ. 'ಕೆಲದಿವಸವಾದರೂ ಹೋಗುವುದು ಒಳ್ಳೆಯದು' ಎಂದು ಲಲಿತಾಬಹೆನ್ ಅಭಿಪ್ರಾಯಪಡುತ್ತಾರೆ. ಕಳುಹಿಸಿಕೊಡುವುದಂತೂ ನಿಶ್ಚಯವಾದ ಮೇಲೆ ಸಂತೋಷವಾಗಿಯೇ ಕಳಿಸಿಕೊಡೋಣ. ಪ್ರಸಾದ್ ಎಲ್ಲಿದ್ದರೂ ನಮ್ಮವನೇ. ಅವನ ತ್ರಿಕರಣವೂ ನಮ್ಮನ್ನೇ ಬಯಸುತ್ತಿರುತ್ತದೆ—ಸ್ಮರಿಸುತ್ತಿರುತ್ತದೆ. ದೇವರು ಅವನನ್ನು ರಕ್ಷಿಸಲೆಂದು ಹಾರೈಸೋಣ."

ಎನ್ನುತ್ತಿದ್ದಂತೆ ಮೇಥನ ಗಂಟಲು ಬಿಗಿದುಬಂದಿತು. ಮಾತು ಹೊರಡದಾಯಿತು.

ಗುರುವಾರ ನಾಲ್ಕು ಗಂಟೆಗೇ 'ಸೆಂಚುರಿ' ಕಾರ್ಯಾಲಯದಲ್ಲಿ ಸಭೆ ಸೇರಿತು. ವೇಳೆಗೆ ಸರಿಯಾಗಿ ಗೋಪಾಲಶೆಟ್ಟರು ಹೊಟೇಲಿನ ಟ್ಯಾಕ್ಸಿಯಲ್ಲಿ ಬಂದಿಳಿದರು. ಪ್ರಸಾದನೇ ಎಲ್ಲ ಮಿತ್ರರ ಪರಿಚಯವನ್ನೂ ಶೆಟ್ಟರಿಗೆ ಮಾಡಿಕೊಟ್ಟ.

ವ್ಯವಹಾರದ ಮಾತುಕತೆಯೆಲ್ಲಾ ಮೊದಲೇ ಮುಗಿದಿದ್ದುದರಿಂದ, ಕರಾರು ಪತ್ರಕ್ಕೆ ಸಹಿಹಾಕುವುದಷ್ಟೇ ಉಳಿದಿತ್ತು.

ಶೆಟ್ಟರು ಟೈಪುಮಾಡಿಸಿ ತಂದಿದ್ದ ಕರಾರು ಪತ್ರಗಳನ್ನು ಎಲ್ಲರೂ ಪರಾಮರ್ಶಿಸಿದರು. ಯಾವ ನ್ಯೂನತೆಯೂ ಕಂಡು ಬರಲಿಲ್ಲ. ಪ್ರಸಾದ್ ಆದನ್ನೊಮ್ಮೆ ಸೂಕ್ಷ್ಮವಾಗಿ ಪರಿಶೀಲಿಸಿ

"ಪತ್ರಿಕೆಯ ಧೋರಣೆಯ (Poliey) ಬಗ್ಗೆ ಏನೂ ಹೇಳಿಲ್ಲವಲ್ಲ ಶೆಟ್ಟರೇ."

"ಕರಾರು ಪತ್ರದಲ್ಲಿ ಅವನ್ನೇಕೆ ಕಾಣಿಸಬೇಕು ಸ್ವಾಮಿ."

"ಪತ್ರಿಕೆಯ ಧೋರಣೆಯೇನು ?"

"ಸ್ವತಂತ್ರ ಪತ್ರಿಕೆ. ನಾವು ಯಾವ ರಾಜಕೀಯ ಪಕ್ಷಕ್ಕೂ ಶರಣಾಗುವುದು ಬೇಡ. ಒಳ್ಳೆಯದನ್ನು ಒಳ್ಳೆಯದು ಅನ್ನುವುದು ; ಕೆಟ್ಟುದನ್ನು ಕೆಟ್ಟುದು ಅನ್ನುವುದು."

"ಸಂತೋಷ - ನನಗೆ ಬೇಕಾಗಿದ್ದುದೂ ಅದೇ. – ಇನ್ನು ಸಂಪಾದಕ ವರ್ಗ."

"ನಾನು ಕೆಲವರನ್ನು ಆರಿಸಿದ್ದೇನೆ. ಆದರೆ ನನ್ನ ಆಯ್ಕೆಯೇ ಕೊನೆಯದಲ್ಲ. ತಾವು ಅವರನ್ನು ಪರೀಕ್ಷೆಮಾಡಿ ನೋಡಿ. ಅವರಲ್ಲಿ ಯಾರಾದರೂ ನಮ್ಮ ಕೆಲಸಕ್ಕೆ ಹೊಂದದಿದ್ದರೆ ಬಿಟ್ಟುಬಿಡೋಣ. ಆ ಬಗ್ಗೆ ತಮಗೆ ಸಂಪೂರ್ಣ ಸ್ವಾತಂತ್ರ್ಯ ವಹಿಸಿದ್ದೇನೆ. – ತಾವು ಹೇಗೆ ಹೇಳಿದರೆ ಹಾಗೆ ಮಾಡಲು ನಾನು ಸಿದ್ಧನಾಗಿದ್ದೇನೆ ಸ್ವಾಮಿ " ಎಂದರು.

ಸಂದೇಹಗಳೆಲ್ಲಾ ಬಗೆಹರಿದಂತಾಯಿತು. ಪ್ರಸಾದ್ ಪತ್ರಕ್ಕೆ ಸಹಿ ಹಾಕಿದ. ನಕಲಿಗೆ ಶೆಟ್ಟರು ಸಹಿಹಾಕಿದರು.

ಮೇಥಾ, ದಸ್ತೂರ್ ಸಾಕ್ಷಿಗಳಾದರು. ಶೆಟ್ಟರು ಸಾವಿರ ರೂಪಾಯಿಗೆ ಒಂದು ಚೆಕ್ಕನ್ನು ಬರೆದು ಪ್ರಸಾದನ ಕೈಗಿತ್ತು, ಸ್ಟಾಂಪು ಹಚ್ಚಿ ರಶೀತಿ ಪಡೆದುಕೊಂಡರು.

ಎಲ್ಲರ ಪರವಾಗಿ ದಾವ್ಲೆ ಶೆಟ್ಟರಿಗೆ

"ಸರ್. ನೀವು ದೊಡ್ಡ ಕೆಲಸಕ್ಕೆ ಕೈಹಾಕಿರುವಿರಿ. ಆದಕ್ಕೆ ಸಕಲ ಯಶಸ್ಸೂ ದೊರೆಯಲೆಂದು ನಾವೆಲ್ಲ ಹಾರೈಸುತ್ತೇವೆ. ಪ್ರಸಾದ್‌ಭಾಯ್

ಲಲಿತಾಬಹೆನ್ ನಮ್ಮನ್ನು ಬಿಟ್ಟುಹೋಗುವುದರಿಂದ ನಮಗಾಗುವ, ನೋವು, ನಷ್ಟ ಅವರ್ಣನೀಯ. ವಿಶಾಲವಾದ ಕಾರ್ಯಕ್ಷೇತ್ರವಲ್ಲಿ, ಜನಪದಕ್ಕೆ ಹಿತ ವಾಗುವ ಕೆಲಸಮಾಡುವ ಅವಕಾಶ ಪ್ರಸಾದರಿಗೆ ಸಿಕ್ಕಿತೆಂದು ನಾವು ಈ ನೋವು, ನಷ್ಟವನ್ನು ಸಹಿಸಲು ಸಿದ್ಧರಾಗಿದ್ದೇವೆ. ಆದರೆ ಪ್ರಸಾದರ ಮನಸ್ಸಿಗೆ ನೋವಾಗದಂತೆ ನೋಡಿಕೊಳ್ಳುವುದು ನಿಮ್ಮ ಕರ್ತವ್ಯ. ನಿಮಗೆ ಅವರು ಬೇಡವೆನಿಸಿದಾಗ ಇಲ್ಲಿಗೆ ಸೌಹಾರ್ದದಿಂದ ಕಳಿಸಿಬಿಡಿ. 'ಸೆಂಚುರಿ' ಯಲ್ಲಿ ಅವರ ಸ್ಥಾನ ಯಾವಾಗಲೂ ಅವರಿಗೆ ಮೀಸಲಾಗಿರುತ್ತದೆ" ಎಂದು ಹೇಳಿದ.

ಶೆಟ್ಟರು ನಾಲ್ಕು ಮಾತು ಹೇಳಲೇ ಬೇಕಾಯಿತು.

"ಮಿತ್ರರೇ - ಪ್ರಸಾದರನ್ನು ಬೆಂಗಳೂರಿಗೆ ಕಳುಹಿಸಲೊಪ್ಪಿ ನನಗೆ ಮಹೋಪಕಾರ ಮಾಡಿರುವಿರಿ. ಅವರ ಹೆಸರಿನ ಬಲವೇ ನನ್ನ ಪತ್ರಿಕೆಯ ದೊಡ್ಡ ಬಂಡವಾಳ. ನಮ್ಮ ದೇಶದಲ್ಲಿ ಪ್ರಸಾದರ ಹೆಸರು ಮನೆಮಾತಾಗಿದೆ. ಅವರನ್ನು ಸರಸ್ವತೀಪುತ್ರರೆಂದು ಕನ್ನಡ ಜನ ಆರಾಧಿಸುತ್ತಾರೆ. ಪ್ರಸಾದರ ಮನಸ್ಸಿಗೆ ಕಿಂಚಿತ್ತಾದ ನೋವೂ ಆಗದಂತೆ ನೋಡಿಕೊಳ್ಳುವುದುದಾಗಿ ನಾನು ಭರವಸೆಕೊಡುತ್ತೇನೆ. ಇಂಥ ಲೋಕಪ್ರಿಯ, ಲೋಕಮಾನ್ಯ ವ್ಯಕ್ತಿಯನ್ನು ನಾನು ನೋಯಿಸಿದರೆ ಜನ ಸುಮ್ಮನಿರುತ್ತಾರೆಯೇ ತಾವೇ ಯೋಚಿಸಿ. ಮಾನವ್ಯದೃಷ್ಟಿಯಿಂದ ಮಾತ್ರವಲ್ಲದೆ ವ್ಯವಹಾರದೃಷ್ಟಿಯಿಂದಲೂ ಅದು ನನಗೇ ಹಾನಿಕರ. ನಿಮ್ಮೆಲ್ಲರ ನೆರವು ನನ್ನ ಪ್ರಯತ್ನಕ್ಕೆ ಹಲವು ವಿಧದಲ್ಲಿ ಬೇಕು. ಸೆಂಚುರಿ ಹೇಗೆ ನಿಮ್ಮ ಪತ್ರಿಕೆಯೋ ಹಾಗೇ ನನ್ನ ದೈನಂದಿನ ಪತ್ರಿಕೆಯೂ ನಿಮ್ಮದೆಂದು ಭಾವಿಸಿಕೊಂಡು ನನಗೆ ಸಹಕಾರ ನೀಡಬೇಕು" ಎಂದು ಹೇಳಿದರು.

ಗೆಳೆಯರ ಮನಸ್ಸಿನಿಂದ ದೊಡ್ಡ ಭಾರವನ್ನಿಳುಹಿದಂತಾಯಿತು. ಮೇಥಾ ಎದ್ದು ಹೋಗಿ ಫೋನ್ ಮಾಡಿಬಂದ. ಎಲ್ಲರೂ ಮೇಥನ ಮನೆಗೆ ಹೊರಡಲು ಸಿದ್ಧರಾದರು. ಪ್ರಸಾದ್ ಮೆಲ್ಲನೆ ಮೇಥನಿಗೆ

"ಸರ್ದಾರ್ ಬರಲಿಲ್ಲವಲ್ಲ!" ಎಂದ.

"ಅವರಿಗೆ ಫೋನ್‌ಮಾಡಿದ್ದೆ. ನೇರವಾಗಿ ಮನೆಗೇ ಬರುವರಂತೆ!" ಎಂದು ಹೇಳಿದ.

ಮೇಥನ ಕಾರಿನಲ್ಲಿ ಮೇಥಾ, ಪ್ರಸಾದ್, ಲಲಿತಮ್ಮ, ದಸ್ತೂರ್ ಕುಳಿತರು. ಶೆಟ್ಟರ ಟ್ಯಾಕ್ಸಿಯಲ್ಲಿ ಶೆಟ್ಟರು, ನಾನಾ, ದಾವ್ಲೆ ಕುಳಿತರು. ಎರಡು ಕಾರುಗಳೂ 'ಮಲಬಾರ್ ಹಿಲ್' ಕಡೆಗೆ ಧಾವಿಸಿದವು.

ಮೇಥನ ಹೆಂಡತಿ ಸೆಲೀನ್ (Celine) ವೆರಾಂಡದ ಪಾವಟಿಗೆಗಳ ಮೇಲೆ ನಿಂತು ಎಲ್ಲರನ್ನೂ ಸ್ವಾಗತಿಸಿದಳು. ಲಲಿತಮ್ಮ ಕಾರಿನಿಂದಿಳಿದೊಡನೆಯೇ ಸೆಲೀನ್ ಆಕೆಯನ್ನಪ್ಪಿಕೊಂಡು ಒಳಗೆ ಕರೆದೊಯ್ದಳು.

ಲಲಿತಮ್ಮ ಕಾರಿನಲ್ಲಿಯೇ ಬಿಟ್ಟು ಹೋಗಿದ್ದ ಅವಳ ಪರ್ಸನ್ನೆತ್ತಿಕೊಂಡು ಹೋಗಿ ಪ್ರಸಾದ್ ಅವಳ ಕೈಯಲ್ಲಿಟ್ಟ. ಇಬ್ಬರೂ ಮುಗುಳ್ನಗೆ ನಕ್ಕರು. ಲಲಿತಮ್ಮ ಸೆಲೀನ್ ಕಡೆ ತಿರುಗಿ

"ನನ್ನ ಪರ್ಸ್ ಕಾಯುವ ಕೆಲಸವೊಂದನ್ನು ಯಜಮಾನರಿಗೆ ವಹಿಸಿದ್ದೇನೆ" ಎಂದಳು.

"ಇಲ್ಲ ಸೋದರಿ - ಪರ್ಸಿಗೂ ಈಕೆಗೂ ಬದ್ಧದ್ವೇಷ" ಎಂದು ಪ್ರಸಾದ್ ಹೇಳಿದ.

"ನ್ಯಾಯವೇ - ಸಾಹಿತಿಯ ಹೆಂಡತಿಯಲ್ಲವೇ ? ಲಕ್ಷ್ಮಿಗೂ ಸರಸ್ವತಿಗೂ ಬದ್ಧದ್ವೇಷವಿರುವುದು ಸ್ವಾಭಾವಿಕ" ಎಂದು ಸೆಲೀನ್ ಸರಸವಾಗಿ ನುಡಿದಳು.

ಮೇಥನ ಮನೆಯ ವೈಭವ, ಪತ್ನಿಯ ಸೌಂದರ್ಯ ಎರಡೂ ಶೆಟ್ಟರ ಕಣ್ಣು ಕೋರೈಸಿತ್ತು. ಸ್ವಲ್ಪ ಚೇತರಿಸಿಕೊಂಡ ಮೇಲೆ ಶೆಟ್ಟರು ಮೇಥನಿಗೆ

"ಸರ್. ತಾವು ಒಳ್ಳೆಯ ಚಿತ್ರಗಾರರು ಎಂದು ಕೇಳಿದ್ದೇನೆ. ತಮ್ಮ ಚಿತ್ರಗಳನ್ನು ನೋಡಬಹುದೇ" ಎಂದು ಕೇಳಿದರು.

"ಅವಶ್ಯಕವಾಗಿ – ಬನ್ನಿ ಒಳಗೆ"

ಎಂದು ಮೇಥಾ ಎಲ್ಲರನ್ನೂ ಒಳಗೆ ಕರೆದೊಯ್ದು ತನ್ನ ಚಿತ್ರಗಳನ್ನು ತೋರಿಸಿದ.

ಅವುಗಳಲ್ಲಿ ಅಪರಿಚಿತವಾಗಿದ್ದ ಒಂದು ಚಿತ್ರ ಗುರುತಿಸಿ ಪ್ರಸಾದ್

"ಮೇಥಾಭಾಯ್ ಇದನ್ನು ಯಾವಾಗ ಪೂರೈಸಿದೆ" ಎಂದು ಕೇಳಿದ.

"ಇತ್ತ ನೀನು ಸುಳಿದು ತಿಂಗಳಾಯಿತು ಪ್ರಸಾದ್."

"ಹೌದು ನಾನು ಅಪರಾಧಿ. ಕ್ಷಮಿಸು. ನನ್ನ ಕೆಲಸ ನೋಡಿರುವೆಯೋ

ಇಲ್ಲವೋ. ಲಲಿತಾ ನಾನು ವಾಕಿಂಗ್ ಹೋಗಿ ತಿಂಗಳಾಗುತ್ತ ಬಂದಿತು. – ಚಿತ್ರ ಯಾವಾಗ ಮುಗಿಸಿದೆ ಹೇಳು."

"ಎಂಟು ಹತ್ತು ದಿವಸವಾಯಿತು. ಒಪ್ಪಿಗೆಯಾಯಿತೇ ?"

"ಒಪ್ಪಿಗೆ — It is magnificient "

"ಹೌದು ಸರ್. ಅದ್ಭುತವಾಗಿದೆ "

ಎಂದು ಶೆಟ್ಟರೂ ದನಿಗೂಡಿಸಿದರು.

ಪ್ರಸಾದನಿಗೆ ಮೇಥನ ಹೊಸ ಚಿತ್ರ '**ಬಂಧನ - ಮುಕ್ತಿ**' (Bondage and Freedom) ಬಿಟ್ಟು ಹೋಗುವುದಕ್ಕೇ ಮನಸ್ಸಾಗಲಿಲ್ಲ. ಚಿತ್ರದ ಮುಂದೆ ಸಾಲಭಂಜಿಕೆಯಂತೆ ನಿಂತುಬಿಟ್ಟ.

'ಬಂಧನ - ಮುಕ್ತಿ' ಚಿತ್ರದಲ್ಲಿ ಪ್ರಧಾನವಾಗಿ ಕಾಣುತ್ತಿದ್ದುದು ಒಂದು ದೊಡ್ಡ ಬಂಡೆ. ಅದಕ್ಕೆ ದಪ್ಪ ಸರಪಳಿಗಳಲ್ಲಿ ಮಾನವನನ್ನು ಬಿಗಿದಿದ್ದಾರೆ. ಅವನು ಸರ್ವಶಕ್ತಿ ಪ್ರಯೋಗಿಸಿದ್ದಾನೆ. ಸರಪಳಿಗಳು ಮುರಿದಿವೆ – ಬಂಡೆ ಸ್ಥಳಬಿಟ್ಟು ಕದಲುತ್ತಿದೆ.

ಪ್ರಸಾದನ ತಲ್ಲೀನತೆ ಶೆಟ್ಟರಿಗೆ ಆಶ್ಚರ್ಯವನ್ನುಂಟುಮಾಡಿತು. ಮೆಲ್ಲನೆ ಅವನ ಸಮೀಪಕ್ಕೆ ಬಂದು

"ಚಿತ್ರದ ಉದ್ದೇಶವೇನು ಸರ್" ಎಂದು ಕೇಳಿದರು.

"ಬಂಡೆ ಪರಾಧೀನತೆಯ ಸಂಕೇತ. ಅದಕ್ಕೆ ಮಾನವನನ್ನು ಬಿಗಿದಿದ್ದಾರೆ. ಸರಪಳಿ ಬಂಧನದ ಸಂಕೇತ. ಮೊದಲು ನೋಡುವಾಗ ಬಂಡೆ, ಸರಪಳಿ ಅಗಾಧವಾಗಿ ಕಂಡು ಬಂದು, ಮಾನವ ಅವುಗಳ ಮುಂದೆ ಅಲ್ಪನಾಗಿ ತೋರುತ್ತಾನೆ. ಆದರೆ ಬಂಡೆ ಜಡವಸ್ತು. ಆದರಲ್ಲಿ ಕ್ಲಿಪ್ತ ಪ್ರಮಾಣದ ಶಕ್ತಿಮಾತ್ರ ಅಡಕವಾಗಿದೆ. ಆ ಶಕ್ತಿ ಹೆಚ್ಚಲೂ ಸಾಧ್ಯವಿಲ್ಲ, ಕಡಿಮೆಯಾಗಲೂ ಸಾಧ್ಯವಿಲ್ಲ. ಮಾನವನ ಸುಪ್ತಶಕ್ತಿಯನ್ನು ಅಳೆಯಲು ಸಾಧ್ಯವೇ? ಅವನಿಗೆ ಬೇಕಾದುದು 'ಸ್ವಸ್ವರೂಪ ದರ್ಶನ.' ತಾನು ಅಲ್ಪ, ದುರ್ಬಲ, ಸಾಮಾನ್ಯ ಎಂದವನು ಭಾವಿಸಿಕೊಂಡರೆ ಹಾಗೇ ಆಗುತ್ತಾನೆ; ಅಜೇಯ್ಯ, ಅತಿಬಲ, ಅಸಾಮಾನ್ಯ ಎಂದು ಭಾವಿಸಿಕೊಂಡರೆ ಹಾಗೇ ಆಗುತ್ತಾನೆ; ಯದ್ಭಾವಂ ತದ್ಭವತಿ. ಸಂಕಲ್ಪಶಕ್ತಿಯಿಂದ ಮಾನವ ಎಂಥ ವಿರೋಧಶಕ್ತಿಯನ್ನೂ ದಮನ ಮಾಡಬಲ್ಲ ಎಂದು ಚಿತ್ರಗಾರ ತೋರಿಸಿದ್ದಾನೆ. ಮಾನವನ

ನಿರ್ಧಾರವಮಾತ್ರದಿಂದಲೇ ಅವನ ಬೇಡಿಗಳು ಸಿಡಿಯುತ್ತವೆ ಎಂಬ ಸಂದೇಶ ಚಿತ್ರಗಾರ ಕೊಡುತ್ತಿದ್ದಾನೆ."

ಪ್ರಸಾದನ ಹಿಂದೆ ಸಾಲಾಗಿ ನಿಂತಿದ್ದ ಗೆಳೆಯರೆಲ್ಲಾ 'ಹಿಯರ್ - ಹಿಯರ್' ಎಂದರು. ಪ್ರಸಾದ ನಾಟಕೀಯವಾಗಿ ಅವರಿಗೆ ತಲೆಬಾಗಿ 'Thank - you , Thank yon' ಎಂದ. ಎಲ್ಲರೂ ಗಹಗಹಿಸಿ ನಕ್ಕರು.

ಚಿತ್ರವನ್ನೆಲ್ಲಾ ನೋಡಿ ಬಂದಮೇಲೆ ಶೆಟ್ಟರು ಪ್ರಸಾದನಿಗೆ

"ನಮ್ಮ 'ದೀಪಾವಳಿ ವಿಶೇಷ ಸಂಚಿಗೆ'ಯ ಮುಖಚಿತ್ರವಾಗಿ ಇದನ್ನು ಪ್ರಕಟಿಸಿದರೆ ಚೆನ್ನಾಗಿರುತ್ತದೆ. ಅಲ್ಲಿನವೆಯಲ್ಲಾ ಎರಡು ಚಿತ್ರಗಳು 'ಪಲ್ಲಿ ಪ್ರಾಣ' – 'ತ್ರಿಲೋಕ ಸುಂದರಿ' ಅವುಗಳನ್ನೂ ಪ್ರಕಟಿಸಲಿಚ್ಛಿಸುತ್ತೇನೆ. ದಯೆಯಿಟ್ಟು ಮೇಥಾ ಅವರನ್ನು ಕೇಳಿ ಒಪ್ಪಿಸಿ."

ಮೇಥಾ ಚಿತ್ರಗಳನ್ನು ಕೊಡುವುದಕ್ಕೆ ಒಪ್ಪಿಗೆಯಿತ್ತುದಲ್ಲದೆ ತಾನೇ ಮುಂಬಯಿಯಲ್ಲಿ ಅಚ್ಚು ಹಾಕಿಸಿಕೊಡುವುದಕ್ಕೂ ಒಪ್ಪಿಕೊಂಡ.

ಸರ್ದಾರ್ 'ಮಾಫ್‌ಕೀಜೀಯೆ – ಬಹುತ್ ದೇರ್ ಹೋಗಯಾ' ಎಂದು ಕ್ಷಮೆ ಕೇಳಿಕೊಂಡೇ ಒಳಗೆ ಪ್ರವೇಶಿಸಿದ. ಪ್ರಸಾದ್ ಎದ್ದು

"ಇವರೇ ನಮ್ಮ ಸ್ನೇಹಿತರು ಸರ್ದಾರ್ ತಾರಾಸಿಂಗ್. ಇಲ್ಲಿ ಕಂಟ್ರಾಕ್ಟ ರಾಗಿದ್ದಾರೆ; ಇವರು ಶ್ರೀ ಗೋಪಾಲಶೆಟ್ಟರು – ನಾನು ಸಂಪಾದಕನಾಗಿ ಹೋಗುವ ಪತ್ರಿಕೆಯ ಮಾಲಿಕರು" ಎಂದು ಪರಿಚಯಮಾಡಿಕೊಟ್ಟ.

ಮೇಥಾ ಎಲ್ಲರನ್ನೂ ಒಳಕ್ಕೆ ಕರೆದುಕೊಂಡು ಹೋದ. ಭವ್ಯವೂ ವಿಶಾಲವೂ ಆಗಿದ್ದ ಊಟದ ಮನೆ (Dining Hall). ಅದರ ಪ್ರತಿಯೊಂದು ಗೋಡೆ, ಪ್ರತಿಯೊಂದು ಮೂಲೆ ಮೇಥನ ಕಲಾಭಿರುಚಿಯ ಕುರುಹಾಗಿತ್ತು. ಅಗ್ರಸ್ಥಾನದಲ್ಲಿ ಶೆಟ್ಟರನ್ನು ಕೂಡಿಸಿ, ಅತ್ತಿತ್ತ ಮೇಥಾ, ದಸ್ತೂರ್ ಕುಳಿತು ಕೊಂಡರು. ಶೆಟ್ಟರ ಬಲಗಡೆ ಮೇಥನ ಸಾಲಿನಲ್ಲಿ ಲಲಿತಾ, ಸರ್ದಾರ್, ನಾನಾ ಕುಳಿತುಕೊಂಡರು; ಶೆಟ್ಟರ ಎಡಗಡೆ ದಸ್ತೂರ್ ಸಾಲಿನಲ್ಲಿ ಸೆಲೀನ್, ಪ್ರಸಾದ್, ದಾವ್ಲೆ ಕುಳಿತುಕೊಂಡರು.

ಸಮವಸ್ತ್ರ ಧರಿಸಿದ್ದ ಇಬ್ಬರು ಬಾಯ್‌ಗಳು ತಿಂಡಿಗಳನ್ನೊದಗಿಸಲು ನಿಂತರು. ಅವರ ಲಕ್ಷ್ಯವೆಲ್ಲಾ ಸೆಲೀನ್ ಕಡೆಗಿತ್ತು. ಸೆಲೀನ್ ಒಂದು ಮಾತನಾಡದೆ ಕಣ್ಸನ್ನೆಯಲ್ಲೇ ಆಜ್ಞೆ ವಿಧಿಸುತ್ತಿದ್ದಳು.

ಬಾಯ್‌ಗಳು ಮೊದಲು ಎಲ್ಲರ ಮುಂದೆಯೂ 'ಟೊಮೆಟೋ ಸೂಪ್' ತಂದಿಟ್ಟರು. ಮೇಜಿನ ಮೇಲೆಯೇ ಬ್ರೆಡ್ ಇತ್ತು.

ಅದು ಮುಗಿಯುವುದನ್ನೇ ಕಾದಿದ್ದು ಬಾಯ್‌ಗಳು ಪ್ಲೇಟುಗಳನ್ನೆತ್ತಿಕೊಂಡು ಬೇರೆ ಪ್ಲೇಟುಗಳಲ್ಲಿ ಎಲ್ಲ ತರಕಾರಿ ಹಾಕಿದ ಭಾತ್ ಮತ್ತು ದೂದ್ ಫೇಡಾ ತಂದಿಟ್ಟರು.

ಮೂರನೆಯ ಸರ್ತಿಗೆ ಚೂಡಾ ರಸಗುಲ್ಲಾ ಬಂತು.

ನಾಲ್ಕನೆಯ ಸರ್ತಿಗೆ ಖಾರ ಹಚ್ಚಿದ ಗೇರುಬೀಜ, ಜಹಾಂಗೀರ್ ಬಂತು.

ಅತಿಥಿಗಳಿಗೆ ಆಗಲೇ ಸಾಕಾಗಿತ್ತು.

ಶೆಟ್ಟರು ನಾಲ್ಕೈದು ಗ್ಲಾಸು ಕಿತ್ತಳೆಹಣ್ಣಿನ ರಸ ಕುಡಿದಿದ್ದರು. ಪ್ರಸಾದ್ ನಿಟ್ಟುಸಿರು ಬಿಡುತ್ತಾ

"ಇನ್ನೂ ಏನೇನಿದೆ ಮೇಥಾ?" ಎಂದು ಕೇಳಿದ.

"ನನಗೇನು ಗೊತ್ತಪ್ಪ. ನಾನೂ ನಿನ್ನ ಹಾಗೇ ಅತಿಥಿ. ನಿನ್ನ ಸೋದರಿಯನ್ನು ಕೇಳು" ಎಂದ.

ಸೆಲೀನ್ ನಸುನಗುತ್ತ 'Wait and see' ಎಂದು ಹೇಳಿದಳು.

ಐದನೆಯ ಸರ್ತಿಗೆ ಸೇವು, ಫಾಟಿಯಾ ಮತ್ತು ಬಾದಾಮಿ ಹಲ್ವ ಬಂದಿತು.

ಫಾಟಿಯಾ ಕುರುಕುತ್ತ ಸರ್ದಾರ್ ಮೆಲ್ಲನೆ ಲಲಿತಮ್ಮನಿಗೆ

"ಬೆಂಗಳೂರಿಗೆ ಯಾವಾಗ ಪ್ರಯಾಣ ಬಹೆನ್" ಎಂದು ಕೇಳಿದ.

"ಮೂರು ನಾಲ್ಕು ವಾರಗಳಲ್ಲಿ."

"ನಮ್ಮ ಸಹವಾಸ ಬೇಸರವಾಯಿತೇ?"

"ಸರ್ದಾರ್‌ಜೀ – ನಮಗೆ ಧೈರ್ಯಹೇಳಬೇಕಾದವರು ನೀವು – ನೀವೇ ಚಿಂತಾಕ್ರಾಂತರಾದರೆ ನಮ್ಮ ಗತಿ."

"ಗೆಳೆತನ – ವಿಶ್ವಾಸ ಎಲ್ಲಾ ಕೆಟ್ಟದು ಬಹೆನ್. ಪ್ರಸಾದರಂಥ ಹೃದಯಜೀವಿಗಳ ಸ್ನೇಹಮಾಡಿದ್ದೇ ನಮ್ಮ ತಪ್ಪು."

"ಸಿಂಹವೂ ದುರ್ಬಲವಾಗುವುದೇ ಸರ್ದಾರ್."

"ಸಿಂಹಕ್ಕೂ ತನ್ನ ಬಳಗ ಕಂಡರೆ ಅಭಿಮಾನವಿರುತ್ತದೆ ಬಹೆನ್."

ಆರನೆಯ ಸರ್ತಿಗೆ ಉಪ್ಪಿನ ಬಿಸ್ಕತ್ತುಗಳೂ, ಪೇಸ್ಟ್ರೀಗಳು (Pastries) ಬಂದವು.

ಸೆಲೀನ್ ಮೆಲ್ಲನೆ ಪ್ರಸಾದನಿಗೆ

"ನಿಮ್ಮ ಸ್ನೇಹಿತರು ಎಷ್ಟು ಸಂತೋಷವಾಗಿದ್ದಾರೆ ನೋಡಿ" ಎಂದಳು.

"ಏಕೆ?"

"ನೀವು ಹೊರಡುತ್ತೀರೆಂದು."

"ನೀವು ಅವರಿಗೆ ಸಮಾಧಾನ ಹೇಳಬೇಕು ಸೋದರಿ."

"ನನಗೆ ಯಾರು ಸಮಾಧಾನ ಹೇಳುವವರು."

"ಮೇಥಾ ಭಯ್ಯಾ."

"ಈಗಲೂ ನಿಮ್ಮ ನಿರ್ಧಾರ ಬದಲಾಯಿಸಲು ಸಾಧ್ಯವಿಲ್ಲವೇ?"

"ಕರಾರು ಪತ್ರಕ್ಕೆ ಸಹಿ ಮಾಡಿಯಾಯಿತು."

"ಅದನ್ನು ರದ್ದು ಮಾಡಿಸೋಣ."

"ಒಂದು ವರ್ಷ ಅವಕಾಶಕೊಡಿ."

"ವರ್ಷ ಕಳೆದ ಮೇಲಾದರೂ ಬರುವಿರಾ?"

"ಪ್ರಯತ್ನಿಸುತ್ತೇನೆ. ಒಬ್ಬರ ಕೈಕೆಳಗೆ ದುಡಿದು ನನಗೂ ಅಭ್ಯಾಸ ವಿಲ್ಲ. ಈ ವ್ಯವಹಾರ ಹೇಗಾಗುವುದೋ ನೋಡೋಣ."

ಏಳನೆಯ ಸರ್ತಿಗೆ ಐಸ್‌ಕ್ರೀಮ್, ಫ್ರೂಟ್‌ಸ್ಯಾಲಾಡ್ ಬಂದಿತು. ಶೆಟ್ಟರೇ ಗಾಬರಿಯಾಗಿ

"ಇನ್ನೂ ಏನಿದೆ ಸರ್" ಎಂದರು.

"ಇಲ್ಲಿಗೆ ಮುಗಿಯಿತು ಎಂದು ಕಾಣುತ್ತದೆ."

ಎಂದು ದಸ್ತೂರ್ ಹೇಳಿದ.

"ಇಲ್ಲ ದಸ್ತೂರ್. ಇನ್ನೂ ಕಾಫಿ ಇದೆ - ಡೆಸರ್ಟ್ಸ್ (Deserts) ಇದೆ?"

ಎಂದು ದಾಮ್ಲೆ ಉತ್ತರ ಹೇಳಿದ.

ಉಪಹಾರ ಮುಗಿದ ಮೇಲೆ ಎಲ್ಲರೂ ಹಜಾರಕ್ಕೆ ಬಂದು ಕುಳಿತರು. ಬಾಯ್‌ಗಳು ಅಲ್ಲಿಗೇ ಕಾಫಿ ತಂದುಕೊಟ್ಟರು. ಶೆಟ್ಟರು ಕಾಫಿ ಹೀರುತ್ತಾ

"ಬಹಳ ಸೊಗಸಾಗಿದೆ ಸರ್. ಮೈಸೂರ ಕಾಫಿ ಇದ್ದ ಹಾಗೇ ಇದೆ" ಎಂದರು.

"ಇದು ನನ್ನ ಸೋಪರಿ ಸೆಲೀನರ ವೈಶಿಷ್ಟ್ಯ ಶೆಟ್ಟರೇ - ಅವರ ಹಾಗೆ ಕಾಫಿ ಮಾಡುವವರೇ ಇಲ್ಲ'' ಎಂದು ಪ್ರಸಾದ್ ಹೇಳಿದ.

ಸೆಲೀನ್ ಲಲಿತಮ್ಮನ ಕಡೆ ಬೆರಳುತೋರಿಸಿ

"ಅಲ್ಲಿದ್ದಾರೆ ನೋಡಿ - ನನ್ನ ಗುರುಗಳು" ಎಂದು ಹೇಳಿದಳು.

ಲಲಿತಮ್ಮ ಅನುಮಾನಿಸುತ್ತಲೇ

"ನೀವೆಲ್ಲಾ ನಮ್ಮ ಮನೆಗೆ ಯಾವಾಗ ಊಟಕ್ಕೆ ಬರುವಿರಿ"

ಎಂದು ಕೇಳಿದಳು. ಮೇಥಾ ಥಟಕ್ಕನೆ

"ಈಗಲೇ ಬರೋಣವೇ ?" ಎಂದು ಕೇಳಿದ.

"ಇದ್ದಕ್ಕಿದ್ದಂತೆ ನೀವು ಹೊಟ್ಟೆಬಾಕರಾಗಿಬಿಟ್ಟಿದ್ದೀರಲ್ಲಾ ಮೇಥಾ."

ಎಂದು ದಸ್ತೂರ್ ಹಾಸ್ಯಮಾಡಿದ.

"ನೀವು ಈಗಲೇ ಬಂದರೆ ಅಡಿಗೆ ಮಾಡುವವರು ಯಾರು ಮೇಥಾಜಿ. ನಮ್ಮ ಮನೆಯಲ್ಲಿ ಬಾಯ್‌ಗಳಿಲ್ಲ - ಇರುವುದೆಲ್ಲಾ ಒಂದು ಓಲ್ಡ್ ಗರ್ಲ್ (Old Girl) - ನಮ್ಮಮ್ಮ."

"ನಾವೇ ಮಾಡುತ್ತೇವೆ - ನಾನು ಘಾಟಿಯಾ ಮಾಡುತ್ತೇನೆ; ದಸ್ತೂರ್ ಕಿಚಡಿ ಮಾಡುತ್ತಾರೆ; ಸೆಲೀನ್ ಕಾಫಿ ಮಾಡುತ್ತಾಳೆ; ಸರ್ದಾರ್ ಅಕಾಲಿರೊಟ್ಟಿ ಮಾಡುತ್ತಾರೆ; ನಾನಾ ಹಲ್ವಾ ಮಾಡುತ್ತಾರೆ; ದಾವ್ಲೆ ಶ್ರೀಖಂಡ ಮಾಡುತ್ತಾರೆ."

"ನಾನು ಉಪ್ಪಿಟ್ಟು ಮಾಡುತ್ತೀನಪ್ಪಾ"

ಎಂದು ಪ್ರಸಾದ್ ಸೇರಿಸಿದ. ಲಲಿತಮ್ಮ ನಗುತ್ತಾ

"ಉಪ್ಪಿಟ್ಟು - ಇವರಿಗೆ ಹಾಲು ಕಾಯಿಸುವುದಕ್ಕೆ ಕೂಡ ಬರುವುದಿಲ್ಲ ಮೇಥಾಜಿ – ಸುಮ್ಮನೆ ನಿಮ್ಮ ಮುಂದೆ ಜಂಬ ಕೊಚ್ಚಿಕೊಳ್ಳುತ್ತಿದ್ದಾರೆ."

ಮಾತಿಗೆ ಮಾತು ಕುಣಿಕೆಹಾಕಿಕೊಂಡು ಹಾಸ್ಯ ಹೊನಲಾಗಿ ಹರಿಯಿತು.

"ನಮ್ಮ ಮನೆಗೆ ಯಾವಾಗ ಬರುವಿರೆಂಬುದನ್ನು ಕೊನೆಗೂ ತಿಳಿಸಲಿಲ್ಲವಲ್ಲ" ಎಂದಳು ಲಲಿತಮ್ಮ.

"ನಿಮ್ಮದು ಕೊನೆಯ ಪಾರ್ಟಿಯಾಗಲಿ ಬಹೆನ್. ನಮ್ಮ ಪಾರ್ಟಿಗಳು ಆಗಬೇಕಾಗಿವೆ"

ಎಂದು ದಾವ್ಲೆ ಸಮಾಧಾನ ಹೇಳಿದ.

ಅಲ್ಲಿ ನಡೆಯುತ್ತಿದ್ದ ಸಂಭಾಷಣೆಯಲ್ಲಿ ಭಾಗವಹಿಸಲು ಶೆಟ್ಟರಿಗೆ ಸಾಧ್ಯವಾಗಲಿಲ್ಲ. ಸೇರಿದ್ದವರು ಒಂದು ಕುಟುಂಬದವರಂತೆ ಅನ್ಯೋನ್ಯವಾಗಿ ಮಾತನಾಡುತ್ತಿದ್ದರು. ಶೆಟ್ಟರು ಸಂಭಾಷಣೆಯನ್ನು ಬೇರೆ ಕಡೆಗೆ ತಿರುಗಿಸಲು ಮೇಘನನ್ನು ಕುರಿತು

"ಕಲೆಯ ಬಗ್ಗೆ ನಿಮ್ಮ ಕಲ್ಪನೆಯೇನು ?" ಎಂದು ಕೇಳಿದರು.

"ಕಲ್ಪನೆ ಎಂದರೆ ?"

"ಕಲೆಯ ಗುರಿಯೇನು ?"

"ಕಲೆಯನ್ನು ಕ್ರಾಂತಿ - ಶಾಂತಿಗಳೆರಡಕ್ಕೂ ಬಳಸಿಕೊಳ್ಳಬಹುದು. ಆದರ ಹಾದಿ ಯಾವದೇ ಆದರೂ ಅಂತಿಮಗುರಿ 'ಮಾನವನ ಕಲ್ಯಾಣ'ವಾಗಬೇಕು. ಶಾಂತಿಯನ್ನೂ, ನಿರ್ಮಲಾನಂದವನ್ನೂ ನಿರ್ದೇಶಿಸುವುದೇ ಕಲೆಯ ಮಾರ್ಗವೆಂದು ನಾನು ತಿಳಿದಿದ್ದೇನೆ. ಜೀವನದ ಜಂಜಡ, ಕಾಳ್ಕಿ, ಘರ್ಷಣೆಯನ್ನು ಕಲಾವಿದ ಅರಿಯಬೇಕು - ಅವುಗಳನ್ನು ಮಾನಸಿಕವಾಗಿ ಅನುಭವಿಸಲೂ ಬೇಕು. ಆದರೆ ಅವುಗಳಿಗೆ ತನ್ನ ಕಲೆಯನ್ನು ಅಧೀನ ಮಾಡಬಾರದು. ಜೀವನದ ಹೊಲಬನ್ನು ಶುಚಿಗೊಳಿಸುವುದು ಯಾವದು? ದುರ್ಮುಖ ಜೀವನಕ್ಕೆ ಸುಮುಖವನ್ನು ಕಲ್ಪಿಸುವುದು ಯಾವದು ಎನ್ನುವುದರ ಕಡೆಗೆ ಅವನು ಸದಾ ಲಕ್ಷ್ಯದಲ್ಲಿಟ್ಟಿರಬೇಕು. ಆನಂದದ ದಾರಿಯಲ್ಲೇ ಕಲೆ ಹೋಗಬೇಕಾಗಿಲ್ಲವಾದರೂ ಆನಂದವನ್ನೇ ಅಂತಿಮಗುರಿಯನ್ನಾಗಿಟ್ಟುಕೊಂಡಿರಬೇಕು. ಹಳೆಯ ಮಾತನ್ನೇ ಹೇಳಬೇಕಾದರೆ 'ಸರ್ವೇಜನಾ ಸುಖಿನೋಭವಂತು.' ಇದೇ ಕಲೆಯಗುರಿ."

"ಬಹಳ ಚೆನ್ನಾಗಿ ವಿವರಿಸಿದಿರಿ ಸರ್. - ಬೆಂಗಳೂರಿನಲ್ಲಿ ಒಮ್ಮೆ ನಿಮ್ಮ ಎಲ್ಲಾ ಚಿತ್ರಗಳ ಪ್ರದರ್ಶನ ಏರ್ಪಡಿಸಬೇಕೆಂದು ನನ್ನಿಚ್ಛೆ."

"ಆಗಬಹುದು. ಪ್ರಸಾದ್ ಅಲ್ಲೇ ಇರುತ್ತಾನಲ್ಲಾ. ಅವನು ಹೇಳಿದಂತೆ ಕೇಳುವುದಕ್ಕೆ ನಾನು ಸಿದ್ಧ" ಎಂದ.

ಶೆಟ್ಟರು ಹೊತ್ತಾಯಿತೆಂದು ಮೇಲಕ್ಕೆದ್ದರು. ಎಲ್ಲರೂ ಏಳಬೇಕಾಯಿತು.

ಸರ್ದಾರ್ ತನ್ನ ಮೋಟಾರ್ ಬೈಕ್ (Motar - Bike) ಚಟಪಟ ಮಾಡಿ ಹೊರಟುಬಿಟ್ಟ.

ಅತಿಥಿಗಳ ಜತೆಯಲ್ಲಿ ಮೇಥಾ, ಸೆಲೀನ್ ಹೊರಡಲು ಸಿದ್ಧವಾದರು. ಪ್ರಸಾದ, ಲಲಿತಮ್ಮ, ಮೇಥಾ, ಸೆಲೀನ್ ಮೇಥನ ಕಾರಿನಲ್ಲಿ ಕುಳಿತರು. ದಸ್ತೂರ್, ದಾವ್ಲೆ, ಶೆಟ್ಟರು, ನಾನಾ ಹೊಟೇಲ್ ಕಾರಿನಲ್ಲಿ ಕುಳಿತರು.

ಶೆಟ್ಟರು ಹೊಟೇಲ್ ಬಳಿ ಇಳಿದು, ಉಳಿದವರನ್ನು ಮನೆ ತಲುಪಿಸಿ ಬರುವಂತೆ ಡ್ರೈವರಿಗೆ ಹೇಳಿದರು.

ಮೇಥನ ಕಾರು ಪ್ರಸಾದನ ಮನೆಯ ಮುಂದೆ ನಿಂತಿತು. ಪ್ರಸಾದ್, ಮೇಥಾ, ಲಲಿತಮ್ಮ ಇಳಿದರು. ಸೆಲೀನ್, ಲಲಿತಮ್ಮನ ಪರ್ಸನ್ನು ಕೈಯಲ್ಲಿ ಹಿಡಿದುಕೊಂಡೇ ಇಳಿದು ಅದನ್ನು ಲಲಿತಮ್ಮನಿಗೆ ಕೊಡುತ್ತಾ 'ಇದು ನಿಮ್ಮ ಪರ್ಸು' ಎಂದಳು. ಸೆಲೀನ್ ಆಡಿದ ಮಾತಿನ ಕಡೆ ಲಲಿತಮ್ಮನ ಲಕ್ಷ್ಯ ಹೋಗಲಿಲ್ಲ.

"ಒಳಕ್ಕೆ ಬರುವುದಿಲ್ಲವೇ" ಎಂದು ಕೇಳಿದಳು.

"ಹೊತ್ತಾಗಿದೆ. ಹೋಗಲು ಅಪ್ಪಣೆ ಕೊಡಿ."

ಎಂದು ಮೇಥಾ ಹೇಳಿದ. ಸೆಲೀನ್ ಮುಖಮುದ್ರೆಯೂ ಅದೇ ಅಭಿಪ್ರಾಯವನ್ನು ಪ್ರಕಟಿಸಿತು. ಲಲಿತಮ್ಮ ಬಲವಂತ ಮಾಡಲಿಲ್ಲ.

ಮನೆಗೆ ಬಂದೊಡನೆಯೇ ಸೆಲೀನ್ ಸೋಫಾದ ಮೇಲೆ ಕುಕ್ಕರಿಸಿ ಮುಖಮುಚ್ಚಿಕೊಂಡಳು. ಮೇಥಾ ಅವಳ ಪಕ್ಕದಲ್ಲಿ ಕುಳಿತು ಮೃದುವಾಗಿ ತಲೆಗೂದಲು ನೇವರಿಸಿ

"ಏಕಳುತ್ತಿರುವೆ ಡಾರ್ಲಿಂಗ್" ಎಂದ.

"ಜೀವನ ಬರಿದಾಗುತ್ತಿದೆ"

"ಹೌದು ಹೌದು - ಹಕ್ಕಿಗಳಂತೆ ಸೇರಿ, ಹಕ್ಕಿಗಳಂತೆ ಚೆದುರುತ್ತಿದ್ದೇವೆ" ಎಂದ.

ಭಾನುವಾರ ಬೆಳಿಗ್ಗೆ ಶೆಟ್ಟರನ್ನು ಕಳಿಸಿ ಬರಲು ಪ್ರಸಾದ್, ಲಲಿತಮ್ಮ

ಇಬ್ಬರೂ ಏರಿಯೋಡ್ರೋಮಿಗೆ ಹೋದರು. ಈಗಾಗಲೇ ಹತ್ತಾರು ಬಾರಿ ಪ್ರಸ್ತಾಪಿಸಿದ್ದ ವಿಷಯವನ್ನೇ ಶೆಟ್ಟರು ಪುನಃ ಪ್ರಸ್ತಾಪಿಸಿ

"ಯಾವಾಗ ಬರುವಿರಿ ಸರ್" ಎಂದು ಕೇಳಿದರು.

ಶೆಟ್ಟರ ಪ್ರಶ್ನೆಗೆ ಉತ್ತರ ಹೇಳಿ ಹೇಳಿ ಪ್ರಸಾದನಿಗೆ ಬೇಸರವಾಗಿದ್ದರೂ ತಾಳ್ಮೆ ತಂದುಕೊಂಡು

"ಹೇಳಿದೆನಲ್ಲಾ ಶೆಟ್ಟರೇ. ಎರಡೂ ಮೂರು ವಾರಗಳಲ್ಲಿ ಖಂಡಿತ ಬರುತ್ತೇನೆ. ಆ ಬಗ್ಗೆ ನೀವು ಯಾವ ಯೋಚನೆಯನ್ನೂ ಇಟ್ಟುಕೊಳ್ಳಬೇಡಿ."

"ನೀವು ಬರುವವೇಳೆಗೆ ನಾನು ಪೂರ್ವಸಿದ್ಧತೆಯನ್ನೆಲ್ಲಾ ಮಾಡಿರುತ್ತೇನೆ ಸರ್. ತಮಗೆ ನಿಯೋಜಿತವಾಗಿರುವ ಮನೆಗೆ ಸುಣ್ಣಬಣ್ಣ ಮಾಡಿಸಿ, ಲೈಟ್ ಕನೆಕ್ಷನ್ ಕೊಡಿಸಿರುತ್ತೇನೆ."

"ಮನೆಗೆ ಈಗ ಲೈಟಿಲ್ಲವೇ ?"

"ಲೈಟಿದೆ. ಮನೆ ಖಾಲಿಬಿದ್ದಿದ್ದುದರಿಂದ ಕನೆಕ್ಷನ್ ಕಿತ್ತು ಹಾಕಿದ್ದಾರೆ. ನೀವು ಬರುವ ಮುನ್ನ ವೈರ್ ಮಾಡಿದರೆ ನಾನು ಸ್ಟೇಷನ್ನಿಗೆ ಬಂದಿರುತ್ತೇನೆ."

"ಹಾಗೇ ಆಗಲಿ"

ಏರಿಯೋಡ್ರೋಮಿನ ಧ್ವನಿವಾಹಕಗಳು 'ಹೈದರಾಬಾದು, ಬೆಂಗಳೂರು ಪ್ರಯಾಣಿಕರು ಪ್ಲೇನ್ ಹತ್ತಬೇಕು. ಐದು ನಿಮಿಷದಲ್ಲಿ ಪ್ಲೇನು ಹೋರಡುತ್ತದೆ' ಎಂದು ಕೂಗಿದವು.

ಶೆಟ್ಟರು ಪ್ರಸಾದನಿಗೂ ಲಲಿತಮ್ಮನಿಗೂ ಕೈಮುಗಿದು ಪ್ಲೇನ್ ಹತ್ತಿದರು.

ಪ್ಲೇನ್ ಸ್ವಲ್ಪದೂರ ನಡೆದು ಹೋಗಿ, ಹಕ್ಕಿಯಂತೆ ಮೇಲಕ್ಕೆ ಹಾರಿತು. ಪ್ರಸಾದನ ಮನಸ್ಸಿನಲ್ಲಿಯೂ ಏನೋ ಒಂದು ಬಗೆಯ ಅವ್ಯಕ್ತ ಆನಂದವಾಗಿತ್ತು. ನೀಲಾಕಾಶದ ಮುಂದೆ ಹಾರಿ ಹೋಗುತ್ತಿದ್ದ ವಿಮಾನವನ್ನು ಎವೆಯಿಕ್ಕದೆ ನೋಡುತ್ತ ನಿಂತ. ವಿಮಾನ ಕಣ್ಮರೆಯಾದರೂ ಪ್ರಸಾದ ಕಣ್ಣುಗಿಸಲಿಲ್ಲ. ಲಲಿತಾ ಮೆಲ್ಲನೆ ಅವನನ್ನೆಚ್ಚರಿಸಿ

"ನಿಮ್ಮ ಮನಸ್ಸೂ ಹಕ್ಕಿಯಂತೆ ಹಾರುತ್ತಿದೆಯೋ ?"

ಎಂದು ಕೇಳಿದಳು.

"ಇಲ್ಲ ಡಿಯರ್. ಸ್ಥಿರವಾಗಿ ಭೂಮಿಯ ಮೇಲೆ ನಿಂತಿದೆ" ಎಂದ.

ಹೊಟೇಲ್ ಟ್ಯಾಕ್ಸಿ ನಿಂತೇ ಇತ್ತು. ಏರಿಯೋಡ್ರೋಮಿನ ಬಳಿ ಬರುವವರೆಗೆ ಆದಷ್ಟು ಚಾರ್ಜನ್ನು ಶೆಟ್ಟರು ಕೊಟ್ಟಿದ್ದರು. ಪ್ರಸಾದ ಟ್ಯಾಕ್ಸಿಯ ಬಳಿ ಬಂದು

"ನಮ್ಮನ್ನು ಮನೆ ಮುಟ್ಟಿಸುವೆಯಾ" ಎಂದ.

"ಆಗಲಿ ಸರ್."

ಲಲಿತಮ್ಮ ಪ್ರಸಾದನ ತೋಳು ಮುಟ್ಟಿ

"ಇವತ್ತು ಹೇಗೂ ಪುರಸತ್ತಿದೆ. ದಾದಾ, ಆಯಿ, ವೀಣಾ ಅವರನ್ನು ನೋಡಿಕೊಂಡು ಬರೋಣ ಎಂದಳು."

"ಆಗಬಹುದು. ಊಟದ ಹೊತ್ತು. ಈಗ ನಾವು ಹೋದರೆ ಅವರು ಊಟಕ್ಕೆಬ್ಬಿಸುತ್ತಾರೆ. ವೃಥಾ ತೊಂದರೆ ಕೊಟ್ಟಂತಾಗುತ್ತದೆ."

"ಕೈಯಲ್ಲಿ ಸ್ವಲ್ಪ ತಿಂಡಿ ತೆಗೆದುಕೊಂಡು ಹೋದರಾಯಿತು."

"ಮನೆಯಲ್ಲಿ ಅಮ್ಮ ಕಾದಿರುತ್ತಾರಲ್ಲಾ!"

"ಇಲ್ಲಿಂದಲೇ ಫೋನ್ ಮಾಡಿ ಆಫೀಸಿಗೆ ತಿಳಿಸಿ – ಯಾರಾದರೂ ಹೋಗಿ ಅಮ್ಮನಿಗೆ ಹೇಳುತ್ತಾರೆ."

ಲಲಿತಮ್ಮನ ಸಲಹೆ ಸೂಕ್ತವಾಗಿ ತೋರಿತು. ಪ್ರಸಾದ್ ಫೋನ್ ಮಾಡಿ ಬಂದು ಲಲಿತನ ಜತೆ ಕಾರಿನಲ್ಲಿ ಕುಳಿತ. ಡ್ರೈವರ್ 'ಎಲ್ಲಿಗೆ ಸರ್' ಎಂದ. ಲಲಿತಮ್ಮ 'ಕ್ರಾಫರ್ಡ್ ಮಾರ್ಕೆಟ್' ಎಂದಳು.

ಕ್ರಾಫರ್ಡ್ ಮಾರ್ಕೆಟ್ಟಿನಲ್ಲಿಳಿದು ಪ್ರಸಾದ್, ಲಲಿತಮ್ಮ ಒಂದು ಬುಟ್ಟಿ ತರಕಾರಿ, ಹಣ್ಣು, ಬಗೆಬಗೆಯ ಮಿಠಾಯಿಗಳು, ದೊಡ್ಡ ಸಿಲಲಾಯೆಡ್ ಬೊಂಬೆ ಖರೀದಿ ಮಾಡಿದರು.

ಟ್ಯಾಕ್ಸಿ ದಾದರಿನಲ್ಲಿದ್ದ ದಾದನ ಮನೆಯ ಮುಂದೆ ಬಂದು ನಿಂತಿತು. ಡ್ರೈವರ್

"ಕಾಯಲೇ ಸರ್" ಎಂದು ಕೇಳಿದ.

"ಬೇಡ – ನಾವು ಇಲ್ಲೇ ಇರಬೇಕಾಗಿದೆ ಎಂದ."

ಡ್ರೈವರ್ ಎರಡು ಬುಟ್ಟಿಗಳನ್ನೂ ಕೈಗೆ ತೆಗೆದುಕೊಂಡ. ಪ್ರಸಾದ್ ಮಿಠಾಯಿ ಪೊಟ್ಟಣ ಕೈಗೆತ್ತಿಕೊಂಡ. ಅದನ್ನು ಅವನ ಕೈಯಿಂದ ತೆಗೆದು

ಕೊಳ್ಳಲು ಲಲಿತಮ್ಮ ಪ್ರಯತ್ನಿಸಿದಾಗ, ಅವಳ ಕೈಗೆ ಬೊಂಬೆಯನ್ನಿತ್ತು ಮುಗುಳ್ನಗೆ ನಕ್ಕ.

ದಾದನ ಮನೆಯ ವೆರಾಂಡದಲ್ಲಿ ಡ್ರೈವರ್ ಬುಟ್ಟಿಗಳನ್ನಿಟ್ಟು ಬಾಡಿಗೆ ತೆಗೆದುಕೊಂಡು ಹೋದ. ಲಲಿತಮ್ಮ ಹೊರಗಿನಿಂದಲೇ 'ಆಯಿ' ಎಂದು ಕೂಗಿದಳು. ಭಕ್ರಿ ಬಡಿಯುತ್ತಿದ್ದ ಆಯಿ ಎದ್ದು ಬಂದು ಬಾಗಿಲು ತೆಗೆದು ಆಶ್ಚರ್ಯದಿಂದ

"ಇದೇನು ಕೋಟಿ ಗಾಳಿ ದಾವರದ ಕಡೆ ಬೀಸಿಬಿಟ್ಟಿದೆ" ಎಂದರು.

ಪ್ರಸಾದ್ ಬುಟ್ಟಿಗಳನ್ನೂ, ಮಿಠಾಯಿ ಪೊಟ್ಟಣವನ್ನು ಮನೆಯ ಹಜಾರದಲ್ಲಿಟ್ಟು

"ವೀಣಾ, ದಾದಾ ಎಲ್ಲಿ ಆಯೀ" ಎಂದು ಕೇಳಿದ.

"ಇಲ್ಲೇ ಅಂಗಡಿಯ ಹತ್ತಿರ ಹೋಗಿದ್ದಾರೆ. ವೀಣಾ ಸ್ಕೂಲಿಗೆ ಹೋಗುವ ಸಂಭ್ರಮ ಆರಂಭವಾಗಿದೆ. ಪ್ಲ್ಯಾಸ್ಟಿಕ್ ಚೀಲ ಬೇಕೆಂದು ಹಟ ಹಿಡಿದಿದ್ದಳು. ಕೊಡಿಸುವುದಕ್ಕೆ ಕರೆದುಕೊಂಡು ಹೋಗಿದ್ದಾರೆ."

"ಮನೆಯಲ್ಲಿ ಎಲ್ಲರೂ ಕ್ಷೇಮವೇ ಆಯೀ" ಎಂದು ಪ್ರಸಾದ್ ಕೇಳಿದ.

"ಎಲ್ಲರೂ ಕ್ಷೇಮ. ಬಡವರನ್ನು ಮರೆತರೇನೋ ಅಂತಿದ್ದೆ."

"ಇಲ್ಲ ಆಯೀ - ಕೈತುಂಬ ಕೆಲಸ."

"ಊಟ ಮಾಡಿಕೊಂಡು ಹೋಗಬೇಕು. ಅದಕ್ಕಾದರೂ ಪುರಸತ್ತಿದೆಯೋ?"

"ನಾವು ಊಟಕ್ಕೆ ತಯಾರಾಗಿಯೇ ಬಂದಿದ್ದೇವೆ ಆಯಿ" ಎಂದು ಪ್ರಸಾದ್ ಹೇಳಿದ.

"ನೀವು ಮೊದಲಿನಿಂದಲೂ ಆರಂಭಿಸಬೇಕಾಗುತ್ತದೇನೋ?"

ಎಂದು ಲಲಿತಮ್ಮ ಉಪಚಾರ ಹೇಳಿದಳು.

"ಏನಿಲ್ಲ. ರೊಟ್ಟಿ, ಭಾಜಿ, ಅಮಟಿ, ಝುಣಕ ಎಲ್ಲಾ ಇದೆ. ಸ್ವಲ್ಪ ಅನ್ನ ಮಾಡಿದರೆ ಆಯಿತು."

"ನಾನು ಕೋಸಂಬರಿ ಮಾಡುತ್ತೇನೆ ಆಯೀ."

"ಬೇಡ ತಾಯಿ - ಅಪರೂಪಕ್ಕೆ ಬಂದಿದ್ದೀ. ಒಂದುಗಳಿಗೆ ಕುಳಿತುಕೋ."

ಎಂದು ಆಯಿ ಹೇಳುತ್ತಿದ್ದರೂ ಕೇಳದೆ ಲಲಿತಮ್ಮ ಬುಟ್ಟಿಯಿಂದ

ಸೌತೆಕಾಯಿ, ನಿಂಬೆಹಣ್ಣು, ಮೆಣಸಿನಕಾಯಿ ತೆಗೆದುಕೊಂಡು ಕೋಸಂಬರಿ ಮಾಡುವುದಕ್ಕೆ ಹೊರಟಳು.

ಆಯಿಯ ಭಕ್ರಿ ಕೆಲಸ ಮುಗಿದಿರಲಿಲ್ಲವಾದ್ದರಿಂದ ಅವರು ಒಲೆಯ ಮುಂದೆ ಕೂಡಬೇಕಾಯಿತು. ಒಂದು ಮಣೆ ಹಾಕಿ ಪ್ರಸಾದನಿಗೂ ಅಡಿಗೆಯ ಮನೆಯಲ್ಲಿಯೇ ಕೂಡಹೇಳಿ, ಒಲೆಯ ಮೇಲೆ ನೀರು ಮರಳಿಸಿ ಚಹಾ ಮಾಡಿ ಪ್ರಸಾದನಿಗೂ, ಲಲಿತಮ್ಮನಿಗೂ ಕೊಟ್ಟರು.

"ದಾದಾ ಆಫೀಸಿನ ಕಡೆಯಾಗಲಿ, ಮನೆ ಕಡೆಯಾಗಲಿ ಬರಲಿಲ್ಲ." ಎಂದು ಪ್ರಸಾದ್ ಸೂಚಿಸಿದ.

"ವಾರವೆಲ್ಲಾ ಕೆಲಸ. ಪಾಠಗಳು ಬೇರೆ. ಈ ಭಾನುವಾರವೇ ಅವರಿಗೆ ಪುರಸತ್ತು. ಬೆಳಿಗ್ಗೆಯಿಂದ ನಿಮ್ಮ ಮಾತೇ ಆಗಿತ್ತು. ಕಾಕಾನ ಕಕ್ಕೀನ ನೋಡಲಿಲ್ಲ ಎಂದು ವೀಣಾ ಹಟಮಾಡುತ್ತಿದ್ದಳು. ಆ ಮಾತು ಮರೆಯಲಿ ಎಂದು ಅವಳನ್ನು ಹೊರಗೆ ಕರೆದುಕೊಂಡು ಹೋದರು. ನೀವು ಈಗ ಬರದಿದ್ದರೆ ನಾವು ಸಂಜೆ ನಿಮ್ಮ ಮನೆಗೆ ಬಂದೇ ಬರುತ್ತಿದ್ದೆವು. ಅಮ್ಮ ಚೆನ್ನಾಗಿದ್ದಾರೆಯೇ?"

"ಚೆನ್ನಾಗಿದ್ದಾರೆ."

ಲಲಿತಮ್ಮನಿಗೆ ವೀಣನ ವಿಷಯ ಎಷ್ಟು ಕೇಳಿದರೂ ತೃಪ್ತಿಯಿಲ್ಲ. ಅವಳ ಪ್ರತಿಯೊಂದು ಮಾತು, ಆಟ, ತುಂಟತನವನ್ನು ಆಯಿ ಬಿಡಿಸಿ ಬಿಡಿಸಿ ವಿವರಿಸಬೇಕಾಯಿತು.

"ರಾತ್ರಿಯೆಲ್ಲಾ ಕಕ್ಕ - ಕಕ್ಕಿ ಎಂದು ಬಡಬಡಿಸುತ್ತಾಳೆ. ಶಾಲೆಗೆ ಹೋಗಿ ಬಂದ ಕೂಡಲೆ 'ಕಕ್ಕ - ಕಕ್ಕಿ' ಬಂದರೇ ಎಂದು ಕೇಳುತ್ತಾಳೆ. ಇಲ್ಲವೆಂದಾಗ ಅವಳ ಮುಖ ನೋಡಬೇಕು. ಅವಳಿಗೆ ತಿಂಡಿ ತಿನ್ನಿಸುವುದು, ಊಟ ಮಾಡಿಸುವುದು ದೊಡ್ಡ ರಾಮಾಯಣವಾಗಿದೆ."

ಎಂದು ಪ್ರಸಾದನ ಕಡೆ ತಿರುಗಿ

"ನಿಮ್ಮ ಪ್ರೀತಿ ಮಗಳನ್ನು ಕರೆದುಕೊಂಡು ಹೋಗಿಬಿಡಿಯಪ್ಪ" ಎಂದರು.

"ನೀವು ಅವಳನ್ನು ಬಿಟ್ಟು ಅರೆಕ್ಷಣ ಇರಬಲ್ಲಿರಾ ಆಯಿ."

ಎಂದು ಪ್ರಸಾದ್ ಕೇಳಿದ.

ಹೊರಗಡೆ ವೀಣೆಯ ಪುಟ ಪುಟ ಪಾದಶಬ್ದ, ಜತೆಯಲ್ಲಿ 'ಮಾ' ಕೂಗು ಕೇಳಿಬಂತು.

ಆಯಿ ಕುಳಿತಲ್ಲಿಂದಲೇ

"ನೋಡು ಬಾ. ಯಾರು ಬಂದಿದ್ದಾರೆ" ಎಂದರು.

ವೀಣಾ ಒಳಗೆ ಬಂದವಳೇ ಪ್ರಸಾದ್, ಲಲಿತಮ್ಮನನ್ನು ನೋಡಿ, ತನ್ನ ಹೊಸ ಪ್ಲ್ಯಾಸ್ಟಿಕ್ ಬ್ಯಾಗ್ ಒಂದು ಮೂಲೆಗೆ ಒಗೆದು

"ಕಕ್ಕಾ - ಕಕ್ಕಿ" ಎಂದು ಹಾರಿ ಪ್ರಸಾದನ ಕುತ್ತಿಗೆಯಪ್ಪಿ

"ಕಕ್ಕಾ - ನೀನು ತುಂಬ ಕೆಟ್ಟವನು ಕಕ್ಕಾ" ಎಂದಳು.

"ಏಕಮ್ಮ."

"ನನ್ನೇಕೆ ಮರೆತುಬಿಟ್ಟೆ."

"ಇಲ್ಲ ಸ್ವೀಟ್ - ಎಂದಿಗೆ ಮರೆತೇನು ? — ಹೋಗು ಕಕ್ಕಿಯನ್ನು ಮಾತನಾಡಿಸು." ಎಂದು ಕೆಳಗಿಳಿಸಿದ.

ವೀಣಾ ಹೋಗಿ ಕಕ್ಕಿಯ ಕುತ್ತಿಗೆಯನ್ನಪ್ಪಿದಳು.

ಪ್ರಸಾದ್ ಎದ್ದು ಹೊರಗೆ ಬಂದು ದಾದನ ಜತೆ ಮಾತನಾಡುತ್ತ ಕುಳಿತ.

ಲಲಿತಮ್ಮ ತನ್ನ ಕೆಲಸ ಮುಗಿಸಿಕೊಂಡು, ವೀಣಳ ಕೈಹಿಡಿದುಕೊಂಡು ಹೊರಗೆ ಬಂದು ಅವಳ ಕೈಗೆ ಸಿಲಲಾಯಿಡ್ ಬೊಂಬೆಯಿತ್ತಳು. ವೀಣಾ ಬೊಂಬೆಯನ್ನಪ್ಪಿಕೊಂಡು ಕುಣಿದಾಡಿದಳು.

"ಕಕ್ಕಿ – ಕಕ್ಕಿಯನ್ನು ಕಂಡಕೂಡಲೆ ಬ್ಯಾಗ್ ಬೇಡವಾಯಿತು. ಬ್ಯಾಗ್ ಬೇಕೂಂತ ಎಷ್ಟು ಕಾಡಿದಳು ಗೊತ್ತೇ ?"

"ವೀಣಾ ಸೊರಗಿದ್ದಾಳೆ ದಾದಾ."

"ಹೌದಮ್ಮ – ಈ ಮಕ್ಕಳ ಆಟವೇ ಆಟ. ಇದೂ ಒಂದು ಮಾಯೆ ಯಲ್ಲವೇ ತಂಗಿ."

"ಎಲ್ಲಾ ಮೋಹವೂ ಮಾಯೆಯೇ ದಾದಾ. ಆದರೆ ಮೋಹವಿಲ್ಲದೆ ಬಾಳುವುದು ಹೇಗೆ ಸಾಧ್ಯ ?"

"ನಿಜ ತಂಗಿ. ಇದು ಸಾತ್ವಿಕಮೋಹ - ಇದೂ ಭಗವಂತನ ಅಂಶ ಎಂದು ನಮ್ಮವರು ಸರಿಯಾಗಿ ಹೇಳಿದ್ದಾರೆ. ಈ ಮೋಹ ಮನಸ್ಸನ್ನು ಪರಿಶುದ್ಧಗೊಳಿಸಿ, ಮೇಲಕ್ಕೆತ್ತುತ್ತದೆ. ತಾಮಸಮೋಹ ಮನುಷ್ಯನನ್ನು ಅಧಃಪತನಕ್ಕೆಳೆ

ಯುತ್ತದೆ. ಭಗವಂತ ಗೀತೆಯಲ್ಲಿ ಹೇಳಿರುವಂತೆ 'ಕ್ರೋಧಾದ್ಭವತಿ ಸಮ್ಮೋಹಃ ಸಮ್ಮೋಹಾತ್ ಸ್ಮೃತಿವಿಭ್ರಮಃ ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿ ನಾಶಾತ್ ಪ್ರಣಶ್ಯತಿ'"

ಮಾತು ಮುಂದುವರಿಸಲು ವೀಣಾ ಅವರನ್ನು ಬಿಡಲಿಲ್ಲ.

ಆಯಿ ಹೊರಗೆ ಬಂದು 'ಊಟಕ್ಕೇಳಿ' ಎಂದು ಎಬ್ಬಿಸಿದರು. ವೀಣಾ ಮಿಠಾಯಿ ಪೊಟ್ಟಣಗಳನ್ನು ತೆಗೆದುಕೊಂಡು ಹೋಗಿ ತಾಯಿಯ ಕೈಯಲ್ಲಿಟ್ಟಳು.

ದಾದಾ, ಪ್ರಸಾದ್, ವೀಣಾ ಮೂವರೇ ಊಟಕ್ಕೆ ಕೊಡಬೇಕಾಯಿತು. ಲಲಿತಮ್ಮ ತಾನೂ ಬಡಿಸಲು ನಿಂತು, ಆಯಿ ಜತೆಗೆ ಊಟ ಮಾಡುವು ದಾಗಿ ಹೇಳಿದಳು.

ಲಲಿತಮ್ಮ ತಂದಿದ್ದ ಮಿಠಾಯಿಯೇ ವೀಣಳ ಊಟವಾಯಿತು. ಆಯಿ ಗಾಬರಿಯಾಗಿ

"ಸಾಕು ವೀಣಾ – ನಾಳೆ ತಿನ್ನುವೆಯಂತೆ" ಎಂದರು.

"ತಿನ್ನಲಿ ಬಿಡು. ಇವತ್ತಾದರೂ ಹೊಟ್ಟೆಯ ತುಂಬ ಸಂತೋಷವಾಗಿ ತಿನ್ನುತ್ತಿದ್ದಾಳೆ" ಎಂದು ದಾದಾ ಹೇಳಿದರು.

ಲಲಿತಮ್ಮ ವೀಣೆಯ ಪಕ್ಕದಲ್ಲಿ ಕುಳಿತುಕೊಂಡು ಮುದ್ದುಮಾಡಿ ನಾಲ್ಕು ತುಣುಕು ಭಕ್ರಿ ತಿನ್ನಿಸಿ, ಸ್ವಲ್ಪ ಹಾಲು ಕುಡಿಸಿದಳು.

ಆಯಿ ನಿಂತುನೋಡಿ ಬೆಕ್ಕಸಬೆರಗಾಗಿ

"ನೋಡಮ್ಮ- ಈ ತುಂಟ ಆಟಾನ. ಕಕ್ಕೀ ತಿನ್ನಿಸಿದರೆ ಗಲಾಟೆ ಮಾಡದೆ ಗದುಗುತ್ತಾಳೆ" ಎಂದರು.

ಊಟ ಮುಗಿದ ಮೇಲೆ ದಾದಾ, ಪ್ರಸಾದ್ ಪಾನ್ – ಸುಪಾರಿ ಡಬ್ಬಿ ಮುಂದಿಟ್ಟುಕೊಂಡು ಕುಳಿತರು. ಆಯಿ ಒಳಗೆ ಎರಡು ತಾಟು ಹಾಕಿದರು. ಕಕ್ಕೀಗೆ ಬಡಿಸುವುದಕ್ಕೆ ವೀಣಾ ನಿಂತಳು. ಊಟ ಮುಗಿಸಿಕೊಂಡು ಆಯಿ, ಲಲಿತ ಇಬ್ಬರೂ ಹೊರಗೆ ಬಂದು ಕುಳಿತರು.

ಲೋಕಾಭಿರಾಮವಾಗಿ ಸ್ವಲ್ಪಹೊತ್ತು ಮಾತು ನಡೆದಮೇಲೆ ಪ್ರಸಾದ್ ಸೂಕ್ಷ್ಮವಾಗಿ ತಾನು ಬೆಂಗಳೂರಿಗೆ ಹೋಗುವ ವಿಷಯ ತಿಳಿಸಿದ. ಶುಭ್ರ ಆಕಾಶವನ್ನು ಕಾರ್ಮೋಡಗಳು ಕವಿದಂತಾಯಿತು.

"ಊರಿಗೆ ಹೋದ ಮೇಲೆ ನಮ್ಮನ್ನು ಮರೆತೇ ಬಿಡುವಿರೇನೋ ?" ಎಂದು ಆಯಿ ಶೋಕಾರ್ತರಾಗಿ ಕೇಳಿದರು.

"ನಿಮ್ಮನ್ನು ಮರೆಯುವುದು ಅಷ್ಟು ಸುಲಭವಲ್ಲ ಆಯೀ."

"ನೀವೊಮ್ಮೆ ಬೆಂಗಳೂರಿಗೆ ಬರಬೇಕು ಆಯಿ. ಒಂದು ತಿಂಗಳು ದಾದಾ ರಜ ತೆಗೆದುಕೊಳ್ಳಲಿ. ನಾವೂ ಜತೆಯಲ್ಲಿ ಬರುತ್ತೇವೆ – ಮೈಸೂರೆಲ್ಲಾ ಸುತ್ತಿಕೊಂಡು ಬರೋಣ" ಎಂದು ಲಲಿತಮ್ಮ ಸೂಚಿಸಿದಳು.

"ಆ ಭಾಗ್ಯ ಬಡವರಿಗೆಲ್ಲಿ ಬಂತಮ್ಮ ?"

"ಬರುವ ವಿಷಯ ನೀವು ನಿರ್ಧರಿಸಿ ದಾದಾ. ಉಳಿದದ್ದು ನನಗಿರಲಿ" ಎಂದು ಪ್ರಸಾದ್ ಒತ್ತಾಯಮಾಡಿದ.

ಸಂಜೆ ಐದುಗಂಟೆಯವರೆಗೆ ಪ್ರಸಾದ್, ಲಲಿತಾ ಅಲ್ಲೇ ವಿಶ್ರಮಿಸಿ ಕೊಂಡರು.

"ವೊರ್ಲಿಗೆ ಹೋಗಿ ಸಂತೂತಾಯಿಯನ್ನು ನೋಡಿಕೊಂಡು ಬರೋಣ" ಎಂದು ಪ್ರಸಾದ್ ಸೂಚಿಸಿದ.

"ದಾದಾ, ಆಯೀನೂ ಜತೆಯಲ್ಲಿ ಬರಲಿ" ಎಂದು ಲಲಿತಮ್ಮ ಸೂಚಿಸಿದಳು.

ಆಯಿ ಕಡೆಯವರು ಯಾರೋ ಮನೆಗೆ ಬರುವವರಿದ್ದರು. ಆಯಿ ಹೊರಡಲು ಸಾಧ್ಯವಿರಲಿಲ್ಲ. ಬರಲಿದ್ದ ಅತಿಥಿಗಳ ಯೋಗಕ್ಷೇಮ ನೋಡಿ ಕೊಳ್ಳುವುದಕ್ಕೆ ದಾದಾ ನಿಲ್ಲಬೇಕಾಗಿತ್ತು. ವೀಣಳನ್ನು ಕರೆದುಕೊಂಡು ಹೋಗಲು ಲಲಿತಮ್ಮ ನಿರ್ಧರಿಸಿದಳು.

ವೀಣೆಗಂತೂ ಪರಮಾನಂದವಾಯಿತು. ಐದು ನಿಮಿಷಗಳಲ್ಲಿ ಬಟ್ಟೆ ಧರಿಸಿ ಸಿದ್ಧವಾದಳು. ಪ್ರಸಾದ್ ಹೋಗಿ ಒಂದು ಟ್ಯಾಕ್ಸಿ ಕರೆತಂದ.

ಟ್ಯಾಕ್ಸಿ ವೊರ್ಲಿ ಅಭಿಮುಖವಾದಾಗ ಲಲಿತಮ್ಮ

"ಎಷ್ಟು ಜೀವಗಳಿಗೆ ನಾವು ವ್ಯಸನವನ್ನುಂಟುಮಾಡುತ್ತಿದ್ದೇವೆ" ಎಂದಳು.

"ಸಂತೂತಾಯಿಗೆ ಸಮಾಧಾನ ಹೇಗೆ ಹೇಳುವುದು ಲಲಿತಾ."

"ಬೆಂಗಳೂರಿಗೆ ಹೋಗುವುದರಿಂದ ನಮ್ಮ ಜೀವನ ಸುಗಮವಾಗುತ್ತದೆ ಎಂದು ಸಂತೂತಾಯಿಗೆ ಹೇಳಬೇಕು."

"ಜೀವನ ಸುಗಮವಾಗುತ್ತದೆಯೇ ?"

"ನಿಮ್ಮ ಧ್ವನಿಯಲ್ಲೇಕೋ ನಿರಾಶೆ ಮೂಡಿದೆ."

"ಒಂದು ಕಡೆ ಕರ್ತವ್ಯದ ಕರೆ; ಇನ್ನೊಂದು ಕಡೆ ಹೃದಯದ ಕರೆ – ಇವುಗಳ ಮಧ್ಯೆ ಸಿಕ್ಕಿಕೊಂಡು ನಾನು ತತ್ತರಿಸಿ ಹೋಗಿದ್ದೇನೆ."

"ಮನುಷ್ಯಜೀವಕ್ಕೆ ಸಮಾಧಾನ ಯಾವಾಗ ?"

"ಪರೀಕ್ಷೆಗಳ ಕಾಟ ನಿಂತಾಗ."

"ಪರೀಕ್ಷೆಗಳ ಕಾಟ............"

"ಹೌದು. ಎರಡು ವರ್ಷ ಕಾಲೇಜಿನಲ್ಲಿ ಓದಿದರೆ ಒಂದು ಬಿ. ಎ., ಬಿ. ಎಸ್‌ಸಿ. ಹಚ್ಚಿಕೊಂಡು ಸುಮ್ಮನಾಗಬಹುದು. ಈ ಜೀವನದ ಕಾಲೇಜಿನ ಪ್ರಿನ್ಸಿಪಾಲರು ಡಿಗ್ರಿಕೊಡುವ ಅಭ್ಯಾಸವನ್ನೇ ಇಟ್ಟುಕೊಂಡಿಲ್ಲ. ಒಂದು ಪರೀಕ್ಷೆ ಮುಗಿದಕೂಡಲೆ ಇನ್ನೊಂದು ಪರೀಕ್ಷೆಗೆ ಸಿದ್ಧವಾಗು ಎಂದು ಆಜ್ಞಾಪಿಸುತ್ತಾರೆ."

"ಪರೀಕ್ಷೆಗಳ ಕಾಟ ನಿಲ್ಲುವುದು............?"

"ಮಾನವನ ಆಯಸ್ಸು ಮುಗಿದಾಗ!"

"ಈಚೆಗೇಕೆ ಸಾವಿನ ವಿಷಯ ಬಹಳ ಯೋಚಿಸುತ್ತಿದ್ದೀರಿ ?"

"ಸಾವಿಗೆ ಹೆದರಬೇಕೇ ?"

"ಸಾವು ಹೆದರಿಕೆ ಹುಟ್ಟಿಸುತ್ತದೆ."

"ಜೀವನಕ್ಕಿಂತ............?"

"ಸತ್ಯ ಪ್ರೇಮವುಳ್ಳವರು ಜೀವನಕ್ಕೆ ಹೆದರುವುದಿಲ್ಲ."

"ಸತ್ಯ ಪತಿವ್ರತಾ ಸ್ತ್ರೀ ಇದ್ದಂತೆ. ನಗ್ನತೆ ತನಗೆ ನಿಸರ್ಗದತ್ತವಾದುದೆಂದು ಅವಳು ತಿಳಿದಿದ್ದರೂ ಅದನ್ನು ಮರೆಸಲು ಇಚ್ಛೆಪಡುವುದಿಲ್ಲ. ಹಲವು ವಸ್ತ್ರಗಳ ತೆರೆಯಲ್ಲಿ ಅಡಗಿಕೊಳ್ಳಲು ಅವಳು ಇಷ್ಟಪಡುತ್ತಾಳೆ. ಆ ವಸ್ತ್ರಗಳನ್ನೇ ವೇದಾಂತಿಗಳು 'ಉಪಾಧಿ' ಎಂದು ಕರೆಯುತ್ತಾರೆ."

"ನಮ್ಮನ್ನು ಕಾಡುತ್ತಿರುವ ಉಪಾಧಿ ಯಾವದು ?"

"ಪಿಶುಣರ ಮರ್ಮಘಾತಕ ನುಡಿಗಳು."

"ಶುಂಭರ ಮಾತಿಗೆ ವೀರ ಲಕ್ಷ್ಯಕೊಡುತ್ತಾನೆಯೇ ?"

"ವೀರನೂ ಮನುಷ್ಯನಲ್ಲವೇ ? ಅವನ ಜೀವವೂ ಮಮತೆ, ಕರುಣೆ, ಸಹನೆಗಳನ್ನು ಬಯಸುವುದಿಲ್ಲವೇ ?"

"ಬಯಸುತ್ತದೆ. ಆದರವು ದೊರೆಯಲಿಲ್ಲವೆಂದು ಅವನು ವ್ಯಥೆಪಡುವುದಿಲ್ಲ."

"ವ್ಯಥೆಪಡುತ್ತಾನೆ. ಲೋಕದ ಕಸರನ್ನು ಕಳೆಯುವ ತನ್ನ ಪ್ರಯತ್ನ ನಿಸ್ವಾರ್ಥಕವಾಯಿತಲ್ಲ ಎಂದು ಕೊರಗುತ್ತಾನೆ."

ವೊರ್ಲಿಯ ಮಹಾಕೂಟಕ್ಕೆ ಟ್ಯಾಕ್ಸಿ ಬಂದಿತ್ತು. ಡ್ರೈವರ್ 'ಎಲ್ಲಿಗೆ ಹೋಗಬೇಕು ಸಾರ್' ಎಂದು ಕೇಳಿದ. ಪ್ರಸಾದ್ ಚಾಲುಗಳ ಕಡೆ ಕೈತೋರಿಸಿ ಥಟ್ಟನೆ 'ಯಾವದಾದರೂ ಇರಾನಿ ರೆಸ್ಟುರಾ ಹತ್ತಿರ ನಿಲ್ಲಿಸು ಡ್ರೈವರ್' ಎಂದ.

ಒಂದೆರಡು ಫರ್ಲಾಂಗುಗಳ ದೂರದಲ್ಲಿ ದೊಡ್ಡ ರೆಸ್ಟುರಾ ಇತ್ತು. ಡ್ರೈವರ್ ಅವರ ಮುಂದೆ ಕಾರು ನಿಲ್ಲಿಸಿದ. ಪ್ರಸಾದ್ ಒಳಗೆ ಹೋಗಿ ಬಿಸ್ಕತ್ತು, ಕೇಕು, ಉಪ್ಪೇರಿಯ ಪೊಟ್ಟಣಗಳನ್ನು ಕಟ್ಟಿಸಿಕೊಂಡು ಬಂದ.

ಚಾಲುಗಳ ಬಳಿ ಬಂದು ಕಾರು ನಿಂತಿತು. ಪ್ರಸಾದ್ ಕಾರಿನಿಂದಿಳಿದು ಲಲಿತಮ್ಮ, ವೀಣೆಯನ್ನು ಕೆಳಗಿಳಿಸಿಕೊಂಡ.

ಪ್ರಸಾದ್, ಲಲಿತಮ್ಮನನ್ನು ನೋಡಿದ ಕ್ಷಣಕಾಲ ಸಂತೂಬಾಯಿಯ ಬಾಯಲ್ಲಿ ಮಾತೇ ಹೊರಡಲಿಲ್ಲ. ವೀಣೆಯನ್ನು ಗುರುತಿಸಿ

"ನಮ್ಮ ದಾದಾ ಅವರ ಮಗಳು ವೀಣಾ ಅಲ್ಲವೇ ?"

"ಹೌದು."

"ನನ್ನ ಗುರುತಿದೆಯೇ ವೀಣಾ"

ಇಲ್ಲವೆಂದು ವೀಣಾ ತಲೆಯಲ್ಲಾಡಿಸಿದಳು.

ಸಂತೂಬಾಯಿ ಹಾಸಿದ ಹರಕು ಕಂಬಳಿಯ ಮೇಲೇ ಎಲ್ಲರೂ ಕುಳಿತರು.

"ಮಕ್ಕಳೆಲ್ಲಿ ?" ಎಂದು ಪ್ರಸಾದ್ ಕೇಳಿದ.

"ಕೆಲಸಕ್ಕೆ ಹೋಗಿದ್ದಾರೆ ?"

ಲಲಿತಮ್ಮ ಪೊಟ್ಟಣಗಳನ್ನು ಸಂತೂಬಾಯಿಗೊಪ್ಪಿಸಿದಳು. ಸುಳ್ಳು ಗಾಂಭೀರ್ಯ ತೋರಿಸದ ಸಂತೂ ಅವುಗಳನ್ನು ಸ್ವೀಕರಿಸಿ

"ಅಣ್ಣಾ, ಯಾವಾಗ ಬಂದರೂ ಕೈತುಂಬ ತಿಂಡಿ ತರುತ್ತಾರೆ. ನಾನು ಅವರನ್ನು..........."

"ಮಾಯಿ, ನೀವು ದುಃಖಪಡುವ ಹಾಗಿದ್ದರೆ ಇನ್ನು ಮೇಲೆ ನಾನು ಏನನ್ನೂ ತರುವುದಿಲ್ಲ."

"ಅದಕ್ಕಲ್ಲ ಅಣ್ಣ - ದೇವರು ನಮಗೆ ಬಡತನಕೊಟ್ಟಿದಾನೆ ಎಂದು ನಾನು ವ್ಯಥೆಪಡುವುದಿಲ್ಲ. ಬಡವರನ್ನು ಸೃಷ್ಟಿಮಾಡಿದ ಪಾಂಡುರಂಗ ಅವರಿಗೆ ಹೊಟ್ಟೆ ಕೊಡಬಾರದಾಗಿತ್ತು........ನನ್ನದಿರಲಿ. ನೀವೆಲ್ಲಾ ಕ್ಷೇಮವಷ್ಟೆ."

"ಕ್ಷೇಮವಾಗಿದ್ದೇವೆ."

ಸಂತೂಬಾಯಿ ಲಲಿತಮ್ಮನನ್ನೇ ದಿಟ್ಟಿಸಿ ನೋಡಿದಳು. ಅವಳ ದಿದೃಕ್ಷೆಯ ಕಾರಣವನ್ನರಿತ ಲಲಿತಮ್ಮ ತಲೆಯಳ್ಳಾಡಿಸಿದಳು. ಸಂತೂ ಮುಖದಲ್ಲಿ ನಿರಾಶೆ ವ್ಯಕ್ತವಾಗಲು ಲಲಿತಮ್ಮ

"ಬಡವರಿಗೆ ಮಕ್ಕಳೂ ಆಗಬಾರದು ಮಾಯಿ" ಎಂದಳು.

"ಹಾಗೆನ್ನಬೇಡ ಬಾಯಿ. ಆಗಬೇಕು. ಮಕ್ಕಳ ಮುದ್ದುಮುಖ ನೋಡಿಕೊಂಡಾದರೂ ಬಡವರು ತಮ್ಮ ದುಃಖ ಮರೆಯಬಹುದು."

ಸಂತೂಬಾಯಿ ಚಹಾ ಮಾಡಲು ಒಲೆ ಹೊತ್ತಿಟ್ಟಳು. ಮನೆಯೆಲ್ಲಾ ಹೊಗೆ ತುಂಬಿಕೊಂಡಿತು. ಲಲಿತಮ್ಮ

"ಈಗೇಕೆ ಚಹಾ" ಎಂದಳು.

"ಮಾಯಿ ಪ್ರೀತಿಯಿಂದ ಚಹಾಮಾಡಿಕೊಡುವಾಗ ಬೇಡವೆನ್ನುವುದ ಕ್ಕಾಗುತ್ತದೆಯೇ" ಎಂದು ಪ್ರಸಾದ್ ಹೇಳಿದ.

ಚಹಾ ಜತೆಯಲ್ಲಿ, ಪ್ರಸಾದ್ ತಂದಿದ್ದ ಬಿಸ್ಕತ್ತುಗಳನ್ನು ತಂದು ಸಂತೂ ಬಾಯಿ ಎಲ್ಲರ ಮುಂದಿಟ್ಟಳು. ವೀಣಾ ಒಂದು ಬಿಸ್ಕತ್ತು ಕೈಗೆ ತೆಗೆದು ಕೊಂಡಳು. ಉಳಿದವರು ಚಹಾ ಕುಡಿದರು. ಕಪ್ಪು, ಬಸಿ ಕೆಳಗಿಡುತ್ತಾ ಲಲಿತಮ್ಮ

"ಮಾಯಿ, ನಾವು ಬೆಂಗಳೂರಿಗೆ ಹೋಗಿ ಬರುತ್ತೇವೆ. ನಿಮಗೆ ಹೇಳಿ ಹೋಗುವ ಎಂದು ಬಂದೆವು."

"ಯಾವಾಗ ಪ್ರಯಾಣ ?"

"ಎರಡು ಮೂರು ವಾರಗಳಲ್ಲಿ."

"ಯಾವಾಗ ಹಿಂದಿರುಗುತ್ತೀರಿ."

"ವರ್ಷ – ಎರಡು ವರ್ಷವಾಗಬಹುದು."

"ವರ್ಷ – ಎರಡು ವರ್ಷವೇ – ಎರಡು ವರ್ಷ! ಮುಂಬಯಿ ಬಿಟ್ಟು ಬಿಡುತ್ತೀರಾ?"

"ಇಲ್ಲ - ಮತ್ತೆ ಬರುತ್ತೇವೆ."

ತಾನು ಹೇಳಿದ ಸುದ್ದಿ ಸಂತೂಬಾಯಿಯ ಮೇಲೆ ಮಾಡಿದ ವಿಲಕ್ಷಣ ಪರಿಣಾಮ ಕಂಡು ಲಲಿತಮ್ಮನಿಗೆ ಆಶ್ಚರ್ಯವಾಯಿತು. ಸಂತೂಬಾಯಿ ತನ್ನ ದುಃಖ ತೋರಗೊಡದೆ

"ಬೆಂಗಳೂರು ಒಳ್ಳೆಯ ಊರೇ?" ಎಂದು ಕೇಳಿದಳು.

"ಒಳ್ಳೆಯ ಊರು ಅಂದರೆ..........."

"ಮುಂಬಯಿಯಷ್ಟು ದೊಡ್ಡದೇ."

"ಇಲ್ಲ – ಮುಂಬಯಿಯ ಕಾಲುಭಾಗವಿರಬಹುದು."

"ಜನ ಒಳ್ಳೆಯವರೇ?"

"ಮುಂಬಯಿಯಲ್ಲಿರುವ ಹಾಗೆ ಅಲ್ಲಿಯೂ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ."

"ತುಂಬ ಶ್ರೀಮಂತರಿದ್ದಾರೆಯೇ?"

"ಬಡವರೇ ಹೆಚ್ಚು."

"ಅಣ್ಣ ಅಲ್ಲಿ ಏನು ಕೆಲಸಮಾಡುತ್ತಾರೆ?"

"ದೊಡ್ಡ ಪೇಪರಿನ ಸಂಪಾದಕರಾಗುತ್ತಾರೆ.?

"ಸಂಪಾದಕ ಎಂದರೇನು?"

"ಪತ್ರಿಕೆಯಲ್ಲಿ ಬರೆಯುವವರು."

"ಕವಿಗಳು."

"ಹೂ - ಕವಿಗಳು."

"ಅಣ್ಣಾ, ನೀವೇನು ಮರಾಟಿಯಲ್ಲಿ ಬರೆದಿಲ್ಲವೇ?"

"ಇಲ್ಲ ಮಾಯಿ, ಮರಾಟಿ ನನಗೆ ಬರುವುದಿಲ್ಲ, ನಾನು ಬರೆದರೇನು ಪ್ರಯೋಜನ - ನೀವು ಓದಲಾರಿರಿ?"

"ಮಗ ಓದಿ ಹೇಳುತ್ತಾನೆ."

"ಮಾಯಿ, ನಿಮಗಾಗಿಯಾದರೂ ನನ್ನ ಬರವಣಿಗೆ ಮರಾಟಿಯಲ್ಲಿ ಬರುವಂತೆ ಮಾಡುತ್ತೇನೆ."

"ನಿಜವೇ ?"

"ನಿಜ ಮಾಯೀ - ನೀವು ಓದಿ ಚೆನ್ನಾಗಿದೆಯೆಂದರೆ ನನಗೆ ಸಾಕು."

ಮಾಯಿ ಪ್ರಸಾದನ ಮುಖದ ಮೇಲೆ ಕೈಯಾಡಿಸಿ ಲಟಿಕೆ ಮುರಿದು

"ನೀವೂ ತುಕಾರಾಮ ಮಹಾರಾಜರ ಹಾಗೆ ಕವಿಯೆಂದು ನನಗೆ ಗೊತ್ತೇ ಇರಲಿಲ್ಲವಲ್ಲ."

"ತುಕಾರಾಮ ಮಹಾರಾಜರು ದೇವರ ಮಕ್ಕಳು ಆಯಿ. ಭಗವಂತನೇ ತುಕಾರಾಮರ ಹಾಗೆ ಹುಟ್ಟಿಬಂದು ಹಾಡಿದ್ದಾನೆ. – ನಾನೊಬ್ಬ ಹೊಟ್ಟೆ ಹೊರೆಯಲು ಬರೆಯುವ ಕವಿ. ನನ್ನನ್ನೇಕೆ ಅವರಿಗೆ ಹೋಲಿಸುತ್ತೀರಿ."

ಸಂತೂಬಾಯಿ ಪ್ರಸಾದನಿಗೆ ಉತ್ತರಕೊಡಲಿಲ್ಲ. ಲಲಿತಮ್ಮನ ಕಡೆ ತಿರುಗಿ

"ಬಾಯಿ, ನೀವು ಮುಂಬಯಿಗೆ ಬಂದಿರಲಿಲ್ಲ. ಅಣ್ಣಾ ಇಲ್ಲಿ ಒಬ್ಬರೇ ಇದ್ದರು. ಆಗ ನನಗೆ ಬಹಳ ಕಷ್ಟಬಂತು. ನನ್ನ ಯಜಮಾನರನ್ನು........"

"ಅದನ್ನು ನಾನು ಬಲ್ಲೆ ಆಯಿ."

"ದಿಕ್ಕೆಟ್ಟು ಅನಾಥಳಾದೆ. ಮುಂಬಯಿಯಲ್ಲಿ ಲಕ್ಷಾಂತರ ಜನರಿದ್ದಾರೆ. ನನ್ನ ಭಾಗಕ್ಕೆ ಯಾರೂ ಇಲ್ಲವಾಯಿತು. ನಾನೂ ನನ್ನ ನಿರ್ಭಾಗ್ಯ ಮಕ್ಕಳೂ ಸಮುದ್ರಕ್ಕೆ ಹಾರಿಕೊಳ್ಳುವ ಸ್ಥಿತಿಬಂತು. ಆಗ ಅಣ್ಣಾ ಬಂದು ಕೈಹಿಡಿದರು – ಧೈರ್ಯ ಹೇಳಿದರು. 'ಆಯೀ - ಯೋಚನೆಮಾಡಬೇಡ - ನಾನು ದುಡಿದು ತಂದು ಹಾಕುತ್ತೇನೆ, ನಿನ್ನ - ನಿನ್ನ ಮಕ್ಕಳನ್ನು ಸಾಯಲು ಬಿಡುವುದಿಲ್ಲ' ಎಂದು ಹೇಳಿದರು. ಅಂದು ಅಣ್ಣಾ ನನ್ನ ಮನೆಯಲ್ಲಿ ಹಚ್ಚಿದ ದೀಪ ಇನ್ನೂ ಉರಿಯುತ್ತಿದೆ. ಮಕ್ಕಳೂ ದೊಡ್ಡವರಾಗುತ್ತಿದ್ದಾರೆ. ಸಂಪಾದಿಸುತ್ತಿದ್ದಾರೆ. ತುಕಾರಾಮ ಮಹಾರಾಜರು ಇದಕ್ಕಿಂತ ಹೆಚ್ಚಿನದೇನು ಮಾಡುತ್ತಿದ್ದರು ಬಾಯಿ."

"ಒಂದು ಒಳ್ಳೆಯ ಮಾತಿಗೆ ಎಷ್ಟು ಬೆಲೆಕೊಡುವಿರಿ ಮಾಯಿ."

"ಈ ಕಾಲದಲ್ಲಿ ಅನ್ನವಿಡುವುದೇ ಹೆಚ್ಚು; ಅದಕ್ಕಿಂತ ದೊಡ್ಡದು ಒಂದು ಒಳ್ಳೆಯ ಮಾತು ಬಾಯಿ. ನನ್ನ ಆ ಕಷ್ಟದ ಸಮಯದಲ್ಲಿ ನನಗೆ ಬೇಕಾ

ಗಿದ್ದುದು ಒಳ್ಳೆಯ ಮಾತು. ಅಣ್ಣಾ - ಹೋಗಿಬನ್ನಿ, ನೀವು ಎಲ್ಲೇ ಇದ್ದರೂ ನಿಮಗೆ ಒಳ್ಳೆಯದಾಗಲಿ ಎಂದು ಪ್ರಾರ್ಥಿಸುತ್ತಿರುತ್ತೇನೆ."

ಎಂದನ್ನುತ್ತಿರುವಂತೆ ಮಾಯಿಯ ದುಃಖದ ಕಟ್ಟೆ ಒಡೆದುಹೋಯಿತು. ಪ್ರಸಾದನೂ ಮಕ್ಕಳಂತೆ ಬಿಕ್ಕಳಿಸಿ ಅತ್ತುಬಿಟ್ಟ. ಲಲಿತಮ್ಮನೇ ಇಬ್ಬರಿಗೂ ಸಮಾಧಾನಮಾಡಬೇಕಾಯಿತು.

ಲಲಿತಮ್ಮ, ಪ್ರಸಾದ್, ವೀಣಾ ಎದ್ದುನಿಂತು

"ಹೊರಡಲಪ್ಪಣೆಯೇ " ಎಂದರು.

ಮಾಯಿ ಪ್ರಸಾದನ ಕೆನ್ನೆ ಮುಟ್ಟಿ ಮುದ್ದಿಟ್ಟುಕೊಂಡಳು. ನಮಸ್ಕರಿಸಲು ಬಗ್ಗಿದ ಲಲಿತಮ್ಮನನ್ನೆತ್ತಿ ಸಂತೂ ಅಪ್ಪಿಕೊಂಡು

"ಬಾಯಿ, ಮುಂಬಯಿಗೆ ಬರುವಾಗ ಮಗನನ್ನೆತ್ತಿಕೊಂಡು ಬನ್ನಿ" ಎಂದು ವೀಣೆಯ ಗಲ್ಲಹಿಡಿದು ಮುದ್ದಿಸಿದಳು.

ಪ್ರಸಾದ್ ಕಾರಿನಲ್ಲಿ ಕುಳಿತ ಮೇಲೂ ಅವನ ಕೆನ್ನೆಯ ಮೇಲೆ ಕಂಬನಿ ಇಳಿಯುವುದು ನಿಲ್ಲಲಿಲ್ಲ. ವೀಣಾ ಲಲಿತಮ್ಮನಿಗೆ

"ಕಕ್ಕಿ, ಕಕ್ಕ ಅಳುತ್ತಿದ್ದಾರೆ" ಎಂದಳು.

ಪ್ರಸಾದ್ ಕಣ್ಣೀರು ಒರಸಿಕೊಂಡು

"ಇಲ್ಲ ವೀಣಾ" ಎಂದ.

"ಯಾಕೆ ಕಕ್ಕ - ಅಳುತ್ತಿದ್ದಿರಿ ?"

ಉತ್ತರ ಹೇಳಲು ಪ್ರಸಾದನಿಗೆ ತೋರಲಿಲ್ಲ.

ದಾದನ ಮನೆಗೆ ವೀಣಳನ್ನು ಕರೆದುಕೊಂಡು ಬಂದುಬಿಟ್ಟು ಹೊರಡಲು ಪ್ರಸಾದ್, ಲಲಿತಮ್ಮ ಸಿದ್ಧವಾದರು. ವೀಣಾ ಜತೆಯಲ್ಲಿ ಬರುತ್ತೇನೆಂದು ಹಟ ಹಿಡಿದಳು. ಪ್ರಸಾದ್ ಅವಳನ್ನು ಮುದ್ದಿಸಿ 'ಬೇಗ ಬಂದು ಕರೆದು ಕೊಂಡು ಹೋಗುತ್ತೇನೆ' ಎಂದು ಮಾತು ಕೊಡಬೇಕಾಯಿತು.

ದಾದಾ, ಆಯಿ ಇಬ್ಬರೂ ದುಃಖಾರ್ತರಾಗಿ ನೋಡುತ್ತ ನಿಂತರು. ಪ್ರಸಾದ್, ಲಲಿತಮ್ಮ ಕಾರಿನಲ್ಲಿ ಕುಳಿತು ಹೊರಟರು.

ಕಾರು ಮುಂದಕ್ಕೆ ಹೊರಟಿತು. ಮನಸ್ಸು ಮಾತ್ರ ಹಿಂದೆಯೇ ಉಳಿದು ಕೊಂಡಿತು.

೫

ಪ್ರಸಾದನಿಗೂ ಲಲಿತಮ್ಮನಿಗೂ ಅಜೀರ್ಣವಾಗುವಷ್ಟು ಔತಣಗಳಾದವು. 'ಪತ್ರಿಕೋದ್ಯಮಿಗಳ ಸಂಘ' – 'ಸಂಯುಕ್ತ ಕೂಲಿಗಾರರ ಸಂಘ' – 'ಜನಪದ ಕಲಾಸಂಘ'ದ ಔತಣಗಳ ಜತೆಗೆ ನಾನಾ, ದಸ್ತೂರ್, ದಾವ್ಲೆ, ನರಸಿಂಹ ಮೂರ್ತಿಯವರ ಔತಣಗಳಾದವು. ಮೇಥನ ಮನೆಯಲ್ಲಿ ಭಾರಿ ಔತಣ ವಾಯಿತು. 'ಸೆಂಚುರಿ' ಪ್ರೆಸ್ಸಿನ ಫೋರ್‌ಮನ್ ರಾಡ್‌ರೀಗಸ್ (Rodrigues) ಮುಂದಾಳುವಾಗಿ ನಿಂತುಕೊಂಡು ಚಂದಾ ವಸೂಲ್ಮಾಡಿ ಒಂದು ಔತಣ ಸಿದ್ಧ ಗೊಳಿಸಿದ. ಆ ಔತಣವನ್ನು ಜೀರ್ಣಿಸಿಕೊಳ್ಳುವುದು ಪ್ರಸಾದನಿಗೆ ಬಹಳ ಕಷ್ಟವಾಯಿತು.

'ಸೆಂಚುರಿ' ಕಛೇರಿಯಲ್ಲಿಯೇ ಔತಣದ ವ್ಯವಸ್ಥೆಯಾಗಿತ್ತು. ಉಪಾ ಹಾರವಾದ ಮೇಲೆ ರಾಡ್‌ರೀಗಸ್ ನಾನಾ ಅವರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸಿದ. ವೇದಿಕೆಯ ಮೇಲೆ ನಾನಾ, ಅತ್ತಿತ್ತ ಪ್ರಸಾದ - ಲಲಿತಮ್ಮ ಕುಳಿತುಕೊಂಡರು. ದಾವ್ಲೆ ನಾಲ್ಕು ಮಾತನಾಡಬೇಕೆಂದು ಅಧ್ಯಕ್ಷರು ಬಯಸಿದರು. ದಾವ್ಲೆ ತಡೆತಡೆದು ಮಾತನಾಡಿದರು :

"ಔತಣಗಳನ್ನು ಕೊಡುವ ಉದ್ದೇಶ ಸಂತೋಷಪ್ರದರ್ಶನ. ಇಂದು ನಾವು ಸಂತೋಷ ಪ್ರದರ್ಶನಮಾಡುತ್ತಿಲ್ಲ; ದುಃಖ ಪ್ರದರ್ಶನಮಾಡುತ್ತಿ ದ್ದೇವೆ. 'ಸೆಂಚುರಿ'ಯ ಹೊರೆಯನ್ನು ನಮ್ಮ ಜತೆ, ನಮಗಿಂತಲೂ ಹೆಚ್ಚಾಗಿ ಹೊತ್ತ ಸಾಥೀ ಪ್ರಸಾದರನ್ನು ನಾವು ಬೀಳ್ಕೊಡುತ್ತಿದ್ದೇವೆ. ಅವರಾದರೋ ಸುಖವನ್ನರಸಿಕೊಂಡು ಇಲ್ಲಿಂದ ಹೋಗುತ್ತಿಲ್ಲ. ಹೆಚ್ಚು ದುಃಖ, ಹೆಚ್ಚು ಕಷ್ಟ, ಹೆಚ್ಚು ದುಡಿಮೆಯನ್ನಪ್ಪಲು ಹೋಗುತ್ತಿದ್ದಾರೆ. ಒಂದು ದೊಡ್ಡ ದೈನಂದಿನ ಪತ್ರಿಕೆಯ ಸಂಪಾದಕರಾಗಿ ಅವರು ಹೋಗುವುದು ನಮಗೆ ಹೆಮ್ಮೆಯ ವಿಷಯ. ಶ್ರಮಜೀವಿಗಳ ಹಿತವೇ 'ಸೆಂಚುರಿ'ಯ ಆದರ್ಶ. ಆ ಆದರ್ಶವನ್ನು ಹತ್ತು ಕಡೆ ಬೀರಲು ಪ್ರಸಾದರು ಹೋಗುತ್ತಿರುವಾಗ ನಾವು ಬೇಡವೆನ್ನುವುದು ಹೇಗೆ? ಆದರೆ 'ಸೆಂಚುರಿ' ಯಲ್ಲಿಯೂ ನಮ್ಮೆಲ್ಲರ ಹೃದಯದಲ್ಲಿಯೂ ಯಾವ ಸ್ಥಳ ಬರಿದಾಗುವುದೋ ಅದು ತುಂಬುವುದು ಕಷ್ಟ. ಪ್ರಸಾದರೇ ಬೇಗ ಹಿಂದಿರುಗಿ ಬಂದು ಆ ಸ್ಥಳ ತುಂಬ

ಬೇಕು. ಶ್ರೀಮತಿ ಲಲಿತಾಬಾಯಿಯವರ ಬಗ್ಗೆ ನಾನು ಹೇಳಲಿ? ಅವರ ಗುಣ, ಸೌಜನ್ಯ, ಸೇವೆ ವರ್ಣಿಸುವುದಕ್ಕೆ ನನ್ನಲ್ಲಿ ಶಬ್ದಸಂಪತ್ತಿಲ್ಲ. ಈ ತಾಯಿ 'ಸೆಂಚುರಿ'ಯನ್ನು ಮಗುವಿನಂತೆ ಪೋಷಿಸಿದರು. ತಾಯಿಯನ್ನ ಗಲುವ ಮಕ್ಕಳಂತಾಗಿದೆ ನಮ್ಮ ಪಾಡು. ಪ್ರಸಾದ್ ದಂಪತಿಗಳನ್ನು ನಾವು ಮರೆಯಲಾರೆವು - ಅವರೂ ನಮ್ಮನ್ನು ಮರೆಯಲಾರರೆಂದು ನಾನು ದೃಢವಾಗಿ ನಂಬಿದ್ದೇನೆ."

ದಾವ್ಲೆ ಕುಳಿತಮೇಲೆ ಮುಂದಿನ ಭಾಷಣಗಾರ ರಾಡ್‌ರೀಗಸ್ ಮಾತನ್ನಾರಂಭಿಸುವುದಕ್ಕೆ ನಾಲ್ಕು ನಿಮಿಷ ಬೇಕಾಯಿತು.

"ಅಣ್ಣಾಸಾಹೇಬ್ ದಾವ್ಲೆಯವರು ಹೇಳಿದಂತೆ ಇದು ಸಂತೋಷ ಪ್ರದರ್ಶನವಲ್ಲ - ದುಃಖ ಪ್ರದರ್ಶನ. ಪ್ರಸಾದರು ನಮ್ಮನ್ನು ಬಿಟ್ಟು ಹೋಗು ತ್ತಿದ್ದಾರೆ ಎನ್ನುವ ಕಲ್ಪನೆ ಕೂಡ ನಮ್ಮ ಮನಸ್ಸಿಗೆ ಸರಿಯಾಗಿ ಬರಲೊಲ್ಲದು.

ನಮ್ಮ 'ಸೆಂಚುರಿ' ಪತ್ರಿಕೆ ಬಂಡವಾಳಗಾರರ ಪತ್ರಿಕೆಯಲ್ಲ - ಶ್ರಮ ಜೀವಿಗಳ ಪತ್ರಿಕೆ. ವ್ಯವಹಾರದೃಷ್ಟಿಯಿಂದ ಬಂಡವಾಳಗಾರರು ಶ್ರಮಜೀವಿಗಳ ಆಶೋತ್ತರವನ್ನು ಎತ್ತಿ ಹಿಡಿಯುವುದೂ ಉಂಟು. 'ಸೆಂಚುರಿ' ಆ ವರ್ಗಕ್ಕೆ ಸೇರಿದುದಲ್ಲ. ಶ್ರಮಜೀವಿಗಳ ಹಿತಾರ್ಥವಾಗಿ ಶ್ರಮಜೀವಿಗಳಿಂದಲೇ ನಡಸ ಲ್ಪಡುವ ಪತ್ರಿಕೆ. ನಮ್ಮ ಹಾಗೆಯೇ ಶ್ರೀಗಳಾದ ನಾನಾ, ದಾವ್ಲೆ, ದಸ್ತೂರ್ ಸಾಹೇಬರು ದುಡಿಯುತ್ತಿರುವ ಜನ. ಉಳಿದ ಪತ್ರಿಕೆಗಳಲ್ಲಿದ್ದುಕೊಂಡು ಸುಖ ಪಡುವುದಕ್ಕಿಂತ 'ಸೆಂಚುರಿ' ಪತ್ರಿಕೆಯಲ್ಲಿದ್ದುಕೊಂಡು ಕಷ್ಟಪಡುವುದೇ ನಮಗೆ ಪ್ರಿಯವಾಗಿದೆ. ನಮ್ಮ ಬಳಗಕ್ಕೆ ಶ್ರೀ ಪ್ರಸಾದರು, ಅವರ ಸೌಭಾಗ್ಯವತಿ ಶ್ರೀಮತಿ ಲಲಿತಾದೇವಿಯವರು ಬಂದು ಸೇರಿದರು. ಅವರು ಬಂದುದರಿಂದ ನಮ್ಮ ಪತ್ರಿಕೆಯ ಘನತೆ, ನಮ್ಮ ಘನತೆ ಮೇಲಕ್ಕೇರಿದವು. ನೋಡಿದವರು ನಮ್ಮನ್ನು 'ಅವನು ಸೆಂಚುರಿಯಲ್ಲಿದ್ದಾನೆ' ಎಂದು ಗುರುತಿಸಿ ಗೌರವಿಸು ವಂತಾಯಿತು.

ಶ್ರೀ ಪ್ರಸಾದರು ಅವರ ಸೌಭಾಗ್ಯವತಿಯವರು ಈಗ ನಮ್ಮನ್ನು ಬಿಟ್ಟು ಬೆಂಗಳೂರಿಗೆ ಹೋಗುತ್ತಿದ್ದಾರೆ - 'ಸೆಂಚುರಿ'ಯ ಸಂದೇಶವನ್ನು ಪ್ರಸಾರ ಮಾಡುವುದಕ್ಕೆ. ಅವರಿಗೆ ಶುಭವನ್ನು, ಮಂಗಳವನ್ನು, ವಿಜಯವನ್ನು ನಾವು ಸದಾ ಕೋರುತ್ತಿರುತ್ತೇವೆ."

ಎಂದು ಪ್ರಸಾದನ ಕಡೆ ತಿರುಗಿ

"ಶ್ರೀ ಪ್ರಸಾದರೇ, ಶ್ರೀಮತಿ ಲಲಿತಾದೇವಿಯವರೇ, ನೀವು ನಮ್ಮ ಸೋದರ ಸೋದರಿಯರಾಗಿ ವರ್ತಿಸಿದಿರಿ. ನಮ್ಮ ಲೋಪದೋಷಗಳನ್ನು ನಿರ್ಲಕ್ಷಿಸಿ, ನಮ್ಮ ಗುಣವನ್ನು ಎತ್ತಿಹಿಡಿಯುತ್ತ ಬಂದಿರಿ. ವಿದ್ಯಾನಿಧಿಗಳಾದ ನೀವು ಅವಿದ್ಯಾವಂತರಾದ ನಮ್ಮನ್ನು ಸರಿಸಮಾನರಂತೆ ಕಂಡು ಆದರಿಸಿದಿರಿ. ನಮ್ಮೆಲ್ಲರ ಹೃದಯದಲ್ಲಿ ತುಂಬಿ ತುಳುಕುತ್ತಿರುವ ಭಕ್ತಿ, ವಿಶ್ವಾಸ, ಗೌರವವನ್ನು ಯೋಗ್ಯರೀತಿಯಲ್ಲಿ ವ್ಯಕ್ತಪಡಿಸುವ ಸಾಮರ್ಥ್ಯ ನಮಗಿಲ್ಲ. ನೀವು ಕೈಗೊಳ್ಳುವ ಉದ್ಯಮದಲ್ಲಿ ಸರ್ವತೋಮುಖವಾದ ಯಶಸ್ಸು ದೊರೆಯಲೆಂದು ಹಾರೈಸಿ, ನಮ್ಮ ವಿಶ್ವಾಸ, ಗೌರವದ ಕುರುಹಾಗಿ ಈ ಉಡುಗೆರೆಯನ್ನರ್ಪಿಸುತ್ತೇವೆ" ಎಂದು ಹೇಳಿದ.

ಕಂಪೋಸರ್ ಸಾಠೆ ಹೂವಿನ ಹಾರಗಳನ್ನು ತಂದಿತ್ತ. ರಾಡ್‌ರೀಗಸ್, ಪ್ರಸಾದನಿಗೆ ಒಂದು ಥಾನು ಖಾದಿ ಬಟ್ಟೆಯನ್ನೂ, ಲಲಿತಮ್ಮನಿಗೆ ಖಾದಿ ಸೀರೆ, ಕುಪ್ಪಸದ ಅರಿವೆಯನ್ನೂ ಒಪ್ಪಿಸಿದ.

ಅತಿಥಿಗಳು ಉತ್ತರಕೊಡಬೇಕಾಯಿತು. ನಾಲ್ಕು ಮಾತಾಡಬೇಕೆಂದು ನಾನಾ ಲಲಿತಮ್ಮನನ್ನು ಪ್ರಾರ್ಥಿಸಿದರು. ಲಲಿತಮ್ಮ ಎದ್ದುನಿಂತಳು. ಆಪಾದ ಮಸ್ತಕ ಅರಳಿಯೆಲೆಯಂತೆ ಅದರುತ್ತಿತ್ತು. ಹಣೆಯ ಮೇಲೆ ಬೆವರುಹನಿಗಳು ಕಾಣಿಸಿಕೊಂಡಿದ್ದವು.

"ನಿಮ್ಮ ಅಭಿಮಾನಕ್ಕೆ ನಾವು ತುಂಬ ಋಣಿಗಳಾಗಿದ್ದೇವೆ. ನಿಮ್ಮನ್ನು ಬಿಟ್ಟು ಹೋಗುವುದಕ್ಕೆ............"

ಲಲಿತಮ್ಮನ ಬಾಯಿಕಟ್ಟಿತು. ಕಣ್ಣುಗಳಿಂದ ಧಾರಾಪ್ರವಾಹ ಹೊರಟು ಬಿಟ್ಟಿತು. ಆರಂಭಿಸಿದ ಮಾತು ಮುಗಿಸಲಾರದೆ ಕುಳಿತುಬಿಟ್ಟಳು. ನಾನಾ ಅವರ ಒತ್ತಾಯಕ್ಕೆ ಪ್ರಸಾದ್ ಎದ್ದುನಿಂತ. ಲಲಿತಮ್ಮನ ಸ್ಥಿತಿಯೇ ತನ್ನದೂ ಆಗುತ್ತದೆಂದು ಹೆದರಿಯೇ ಸಾವಕಾಶವಾಗಿ ಆರಂಭಿಸಿದ.

"ನನ್ನ ಸೌಭಾಗ್ಯವತಿಯವರ ಅನುಭವ ಕಂಡಿದ್ದೀರಿ. ನಮ್ಮಿಬ್ಬರ ಹೃದಯದಲ್ಲಿ ತುಂಬಿರುವ ಭಾವನೆಗಳನ್ನು ಅವರ ಕಣ್ಣೀರು ಸ್ಪಷ್ಟವಾಗಿ ವ್ಯಕ್ತಪಡಿಸಿದೆ. ಅವಕ್ಕಿಂತಲೂ ನಾನು ಹೆಚ್ಚೇನು ಹೇಳಲಿ.

ನಾನು ನಿರಾಶ್ರಿತನಾಗಿ 'ಸೆಂಚುರಿ' ಸೇರಿದೆ. ನಾನಾ, ದಾವ್ಲೆ, ದಸ್ತೂರ್ ಬಂಧುಗಳು ನನ್ನನ್ನು ಅಪ್ಪಿಕೊಂಡು ತಮ್ಮ ಹೃದಯದಲ್ಲಿ ಸ್ಥಾನ ಕೊಟ್ಟರು. ನನ್ನನ್ನು ಒಬ್ಬ ಮನುಷ್ಯನನ್ನಾಗಿಮಾಡಿ ನಿಲ್ಲಿಸಿದ ವ್ಯಕ್ತಿಗಳಿಗೆ ಸಂಸ್ಥೆಗೆ 'ನಾನು ಕೃತಜ್ಞನಾಗಿದ್ದೇನೆ' ಎಂದು ಹೇಳಿದರೆ ಸಾಕೇ? ಪ್ರಿಯ ಬಂಧು ರಾಡ್‌ರೀಗಸ್ ನಮ್ಮಿಬ್ಬರನ್ನೂ ಮನಃಪೂರ್ವಕವಾಗಿ ಕೊಂಡಾಡಿದ್ದಾರೆ. ನಿಮ್ಮೆಲ್ಲರ ಸಹಕಾರ, ಪ್ರೇಮದಿಂದಲ್ಲವೇ ನಾವು ಸ್ವಲ್ಪ ಕೆಲಸ ಮಾಡಲು ಸಾಧ್ಯವಾದುದು.

ನಾನೀಗ ಬೆಂಗಳೂರಿಗೆ ಹೋಗುತ್ತಿದ್ದೇನೆ. ನಿಮ್ಮನ್ನು ಬಿಟ್ಟುಹೋಗುತ್ತಿಲ್ಲ– ಸಂಗಡಲೇ ಕರೆದೊಯ್ಯುತ್ತಿದ್ದೇನೆ. ಈ ದೇಹ ಎಲ್ಲಿದ್ದರೇನು? ಆತ್ಮ 'ಸೆಂಚುರಿ'ಗೆ ಮೀಸಲು, 'ಸೆಂಚುರಿ'ಯಲ್ಲಿ ನನ್ನ ಸ್ಥಾನ ನನಗೇ ಮೀಸಲಾಗಿರುತ್ತದೆ ಎನ್ನುವ ಮಾತನ್ನು ಅಣ್ಣಾಸಾಹೇಬ್ ದಾವ್ಲೆ, ಪ್ರಿಯಬಂಧು ರಾಡ್‌ರೀಗಸ್ ಇಬ್ಬರೂ ಒತ್ತಿಯೊತ್ತಿ ಹೇಳಿದ್ದಾರೆ. ಇದಕ್ಕಿಂತ ನನಗೆ ಹೆಚ್ಚಿನದೇನು ಬೇಕು? ನನಗೆ 'ಸೆಂಚುರಿ'ಯ ಆಶ್ರಯವೆಂದರೆ ಹೆಣ್ಣುಮಗಳಿಗೆ ತೌರುಮನೆಯ ಬಲವಿದ್ದ ಹಾಗೆ. ನನ್ನ ತೌರುಮನೆ, ಅದರಲ್ಲಿರುವ ನನ್ನ ಅಣ್ಣತಮ್ಮಂದಿರು ನಿತ್ಯಸುಖಿಗಳಾಗಿರಲಿ ಎಂದು ತ್ರಿಕರಣಪೂರ್ವಕವಾಗಿ ಬಯಸುತ್ತೇನೆ."

ಎಂದು ಹೇಳಿ ಮುಗಿಸಿದ. ಅಧ್ಯಕ್ಷರು ಸಮಾರೋಪ ಭಾಷಣ ಮಾಡಲು ಎದ್ದು ನಿಂತರು.

"ನಾನು ಹೆಚ್ಚು ಮಾತನಾಡಬೇಕಾಗಿಲ್ಲ. ಇಂದಿನ ಸನ್ನಿವೇಶ ಹೆಚ್ಚು ಮಾತಿಗೂ ಅವಕಾಶಕೊಡುತ್ತಿಲ್ಲ. ನಮ್ಮೆಲ್ಲರ ಪರವಾಗಿ ಪ್ರಸಾದರಿಗೂ ಶ್ರೀಮತಿ ಲಲಿತಾದೇವಿಯವರಿಗೆ ಒಂದು ಮಾತು ಹೇಳಿ ಮುಗಿಸುತ್ತೇನೆ. ಪ್ರಿಯ ಸೋದರ, ಪ್ರಿಯ ಸೋದರಿ,—ಒಂದು ತತ್ತ್ವಕ್ಕೆ ಕಟ್ಟುಬಿದ್ದು ನೀವು ನಮ್ಮನ್ನಗಲಿ ಹೋಗುತ್ತಿರುವಿರಿಯೆಂಬುದನ್ನು ಬಲ್ಲೆವು. ನಿಮ್ಮ ತೌರುಮನೆ ನಿಮ್ಮನ್ನು ಸದಾ ಎದುರು ನೋಡುತ್ತಿರುತ್ತದೆ. ನೀವು ಯಾವಾಗ ಬಂದರೂ ಸ್ವಾಗತ ಬಯಸಲು ಸಿದ್ಧವಾಗಿರುತ್ತದೆ. ಅಣ್ಣತಮ್ಮಂದಿರನ್ನು ಹೆಚ್ಚು ದಿನ ಅಗಲುವಿಕೆಯ ದುಃಖದಲ್ಲಿ ಮುಳುಗಿಸದೆ ಬೇಗ ಬನ್ನಿ" ಎಂದು ಕುಳಿತುಬಿಟ್ಟರು.

ಉತ್ಸವ ಬೇಗ ಮುಗಿದುದು ಎಲ್ಲರಿಗೂ ಹಿತವೆನಿಸಿತು.

ಪ್ರಸಾದ್ ಹೊರಡುವ ದಿನಗಳು ಸಮೀಪಿಸಿದವು. ಒಂದು ರಾತ್ರಿ ಎಲ್ಲರನ್ನೂ ಕರೆದು ಔತಣವೇರ್ಪಡಿಸಿದ. ಆಯಿ, ಸಂತೂಬಾಯಿ ಬಂದು ಗೌರಮ್ಮನವರಿಗೆ ನೆರವಾದರು.

ಪ್ರಸಾದ್ ಮಾರನೆಯ ದಿನ ಮನೆಯ ಸಾಮಾನುಗಳನ್ನೆಲ್ಲಾ ಪ್ಯಾಕ್ ಮಾಡಿ ಗೂಡ್ಸ್ ಗಾಡಿಯಲ್ಲಿ ಬೆಂಗಳೂರಿಗೆ ರವಾನಿಸಿ ಗೋಪಾಲಶೆಟ್ಟರಿಗೂ, ಗೆಳೆಯ ಗುಂಡಯ್ಯನಿಗೂ ಕಾಗದ ಬರೆದ.

ಶನಿವಾರ ಮಧ್ಯಾಹ್ನದ ಗಾಡಿಯಲ್ಲಿ ಗುಂತಕಲ್ ಮಾರ್ಗವಾಗಿ ಹೋಗುವುದೆಂದು ನಿಶ್ಚಯವಾಯಿತು. ದಸ್ತೂರ್ ಮೂರು ಸೆಕೆಂಡ್ ಕ್ಲಾಸ್ ಬರ್ತ್ (Berth)ಗಳನ್ನು ರಿಸರ್ವ್ ಮಾಡಿಸಿದ.

ಪ್ರಯಾಣದ ದಿನ ಸಮೀಪಿಸಿದಂತೆ ಲಲಿತಮ್ಮ ನಿರ್ಮಲನಿಗಾಗಿ ಮರುಗಿದಳು.

ಭದ್ರಾಬಹೆನ್ ಗೌರಮ್ಮನವರ ಮುಂದೆ ಅತ್ತು ಕರೆದು 'ಮಂಗೂ ಮದುವೆಗೆ ನೀವಿರುವುದಿಲ್ಲವಲ್ಲ' ಎಂದಳು.

ಒಂದು ಮಧ್ಯಾಹ್ನ ಲಲಿತಮ್ಮ ನಿರ್ಮಲನನ್ನು ಮನೆಗೆ ಕರೆದುಕೊಂಡು ಬಂದು

"ನಿರ್ಮಲಾ, ಯಾವುದಕ್ಕೂ ದುಡುಕಬೇಡ. ತಾಳ್ಮೆಯನ್ನೂ ಕಷ್ಟ ಸೋಸುವುದನ್ನೂ ಹೆಣ್ಣು ಅರಿಯದಿದ್ದರೆ ಅವರ ಬಾಳು ಅಸಹನೀಯವಾಗುತ್ತದೆ."

"ನಾನೇನು ಮಾಡಲಿ ದೀದಿ."

"ಸವತಿಯೊಂದಿಗೆ ಸೌಹಾರ್ದದಿಂದಿರುವುದೇ ನಿನಗೆ ಶ್ರೇಯಸ್ಕರ ನಿರ್ಮಲಾ."

"ಅದು ಸಾಧ್ಯವಿಲ್ಲ ದೀದಿ. ಕೂಲಿನಾಲಿ ಮಾಡಿಕೊಂಡಾದರೂ ನಾನು ಸ್ವತಂತ್ರಳಾಗಿರುತ್ತೇನೆ."

"ಸ್ವತಂತ್ರಳಾಗಿರುವುದು ಸುಲಭವಲ್ಲ ನಿರ್ಮಲಾ."

"ಸುಖ ನನ್ನ ಹಣೆಯಲ್ಲಿ ಬರೆದಿಲ್ಲವೆಂದ ಮೇಲೆ ಯಾವ ಕಷ್ಟಕ್ಕೂ ನಾನು ಅಂಜಬೇಕಾಗಿಲ್ಲನಲ್ಲ ದೀದಿ."

ನಿರ್ಮಲಾ – ನನಗೊಂದು ಮಾತುಕೊಡುವೆಯಾ ?"

"ಹೇಳಿ ದೀದಿ."

"ನೀನು ಅಂತಿಮ ನಿರ್ಧಾರ ಮಾಡುವುದಕ್ಕೆ ಮುಂಚೆ ಅಣ್ಣ ಕನ್ನಯ್ಯ ಲಾಲ್ ಮೇಥಾ ಅವರನ್ನು ಒಂದು ಮಾತು ಕೇಳು, ಅವರ ವಿಳಾಸ – ಫೋನ್ ನಂಬರು ಗುರುತುಹಾಕಿ ಕೊಡುತ್ತೇನೆ. ಅದೂ ಬೇಡವಾದರೆ ಬೆಂಗಳೂರಿಗೆ ಬಂದು ಬಿಡು. ನಮ್ಮ ವಿಳಾಸವನ್ನು ಗುರುತುಹಾಕಿ ಕೊಡುತ್ತೇನೆ."

"ಹಾಗೇ ಆಗಲಿ ದೀದಿ."

ಎಂದು ನಿರ್ಮಲಾ ಆಶ್ವಾಸನವಿತ್ತಳು.

ಶುಕ್ರವಾರ ಸಂಜೆ ಒಂದು ಟ್ಯಾಕ್ಸಿ ತೆಗೆದುಕೊಂಡು ಪ್ರಸಾದ್, ಲಲಿತಮ್ಮ ಎಲ್ಲರನ್ನೂ ಕೊನೆಯಬಾರಿ ಕಂಡು ಬರಲು ಹೊರಟರು. ದಾದಾ, ಆಯಿ ಗೋಳಾಡಿದರು. ವೀಣಾ ಚಂಡಿ ಹಿಡಿದಳು. ಮೇಥಾ, ಸೆಲೀನ್ ತಮ್ಮ ದುಃಖ ತೋರಗೊಡಲಿಲ್ಲ.

ಸಂತೂಬಾಯಿಯ ದುಃಖ ಅಪರಿಹಾರ್ಯವಾಯಿತು.

"ನಾಳೆ ನಾನು ಸ್ಟೇಷನ್ನಿಗೂ ಬರಲು ಸಾಧ್ಯವಿಲ್ಲವಾಗಿದೆ. ಕೆಲಸಕ್ಕೆ ತಪ್ಪಿಸಿಕೊಳ್ಳುವ ಹಾಗಿಲ್ಲ. ಸ್ವಲ್ಪ ಕಾರಣ ಸಿಕ್ಕಿದರೆ ಸಾಕು ಮಿಲ್ಲಿನಿಂದ ಹೊರಗೆ ಕಳುಹಿಸುತ್ತಾರೆ."

ಲಲಿತಮ್ಮ ಅವಳನ್ನು ಸಮಾಧಾನಮಾಡಿ, ಹೊರಟು ಬರುವಾಗ ಸಂತೂಬಾಯಿಯ ಕೈಯಲ್ಲಿ ಒಂದು ಕವರಿತ್ತಳು. ಸಂತೂ ಅದನ್ನೊಡೆದು ಹತ್ತು ರೂಪಾಯಿಗಳ ನೋಟುಗಳ ಕಂಡು

"ಇದು ನ್ಯಾಯವಲ್ಲ ಬಾಯಿ" ಎಂದಳು.

"ಈಗ ನಮ್ಮ ಕೈತುಂಬ ದುಡ್ಡಿದೆ ಮಾಯಿ – ಯೋಚನೆಮಾಡಬೇಡಿ. ಮಕ್ಕಳಿಗೆ ಬಟ್ಟೆ ಹೊಲಿಸಿ."

"ಪರಸ್ಥಳಕ್ಕೆ ಹೋಗುವಾಗ ಕೈಯಲ್ಲಿ ದುಡ್ಡಿರಬೇಕು."

ಲಲಿತಮ್ಮ ತನ್ನ ಪರ್ಸ್ ತೆಗೆದು, ಅದರಲ್ಲಿದ್ದ ನೋಟಿನ ಕಂತೆಯನ್ನು ತೋರಿಸಿದಳು.

ಪ್ರಸಾದ್, ಲಲಿತಮ್ಮ, ಗೌರಮ್ಮನವರನ್ನು ಸ್ಟೇಷನ್ನಿಗೆ ಕರೆದೊಯ್ಯಲು ಮೇಥಾ, ಸೆಲೀನ್ ಬಂದರು. ಪ್ರಯಾಣಿಕರೂ ಹೊರಡಲು ಸಿದ್ಧವಾಗಿದ್ದರು.

ಮೇಥನ ಕಾರಿನಲ್ಲಿ ಪ್ರಸಾದ್, ಲಲಿತಮ್ಮ, ಗೌರಮ್ಮನವರು, ಸೆಲೀನ್ ಹೊರಟರು. ಟ್ಯಾಕ್ಸಿಯಲ್ಲಿ ನಾನಾ, ದಸ್ತೂರ್, ದಾವ್ಲೆ, ರಾಡ್‌ರೀಗಸ್ ಹೊರಟರು. ಕಾರಿಳಿದ ಮೇಲೆ ಕೂಲಿಗಳು ಹೋಲ್ಡ್‌ಆಲ್, ಟ್ರಂಕುಗಳನ್ನು ಕೈಯಲ್ಲಿ ತೆಗೆದುಕೊಂಡರು. ತಮ್ಮ ದೇವರ ಪೆಟ್ಟಿಗೆ ಗೌರಮ್ಮನವರೇ ಕೈಗೆ ತೆಗೆದುಕೊಂಡರು. ಲಲಿತಮ್ಮ, ಸೆಲೀನ್ ಸಣ್ಣಪುಟ್ಟ ಸಾಮಾನುಗಳನ್ನು ಕೈಗೆತ್ತಿಕೊಂಡರು.

ಪ್ಲ್ಯಾಟ್‌ಫಾರಂ ಪ್ರವೇಶಿಸಿ ಗಾಡಿಯ ಬಳಿಗೆ ಬರುತ್ತಿದ್ದಂತೆ ಲಲಿತಮ್ಮ ಥಟ್ಟನೆ ಜ್ಞಾಪಿಸಿಕೊಂಡು

"ನನ್ನ ಪರ್ಸ್ ಕಾರಿನಲ್ಲೇ ಬಿಟ್ಟೆ" ಎಂದಳು.

ಅರ್ಥಯುತವಾಗಿ ಪ್ರಸಾದ್ ನಕ್ಕ.

"ಪರ್ಸ್ ನನ್ನಲ್ಲಿದೆ – ಚಿಂತೆ ಮಾಡಬೇಡಿ" ಎಂದು ಸೆಲೀನ್ ಸಮಾಧಾನ ಹೇಳಿದಳು.

ಪ್ರಸಾದನ ಡಬ್ಬಿಯ ಮುಂದೆ ಸಾಕಷ್ಟು ಜನಸಂದಣಿ ಸೇರಿತ್ತು. 'ಸೆಂಚುರಿ' ಕಾರ್ಯಾಲಯದ ಕೆಲಸಗಾರರು, ಮೈಸೂರು ಅಸೋಸಿಯೇಷನ್ ಅಧಿಕಾರಿಗಳು, ಪತ್ರಿಕೋದ್ಯಮಿ ಸಂಘದ ಅಧಿಕಾರಿಗಳು, ಸದಸ್ಯರು ಪ್ರಸಾದನನ್ನು ಬೀಳ್ಕೊಡಲು ಬಂದಿದ್ದರು.

ಪ್ರಸಾದನ ಮುಖ ಕಂಡ ಕೂಡಲೇ ವೀಣಾ ಓಡಿ ಬಂದು ಅವನ ತೋಳೇರಿದಳು. ದಾದಾ, ಆಯಿ ಬಂದಿದ್ದುದನ್ನು ಕಂಡು ಪ್ರಸಾದ್

"ಶಾಲೆಯಿಲ್ಲವೇ ದಾದಾ" ಎಂದು ಕೇಳಿದ.

"ಇವತ್ತು ರಜಾ ತೆಗೆದುಕೊಂಡೆ" ಎಂದರು.

ಆಯಿ ತಿಂಡಿ ಡಬ್ಬಿಯೊಂದನ್ನು ಮೆಲ್ಲನೆ ಲಲಿತಮ್ಮನ ಕೈಗೆ ಸರಿಸಿದರು.

"ಇದೇಕೆ ಆಯಿ."

"ದೂರ ಪ್ರಯಾಣ. ಹಸಿದುಕೊಂಡು ಹೋಗುವಿರೇನು ?"

ಪ್ರಸಾದ್, ಲಲಿತಮ್ಮನ ಕೊರಳಿಗೆ ಮಾಲೆಗಳು ಬಿದ್ದವು. ಪ್ರಸಾದ್ ಎಲ್ಲರನ್ನೂ ಮಾತನಾಡಿಸಿ, ಎಲ್ಲರ ಕೈಕುಲುಕಿದ.

"ಬೆಂಗಳೂರು ತಲುಪಿದ ಕೂಡಲೇ ವೈರ್ ಮಾಡು ಪ್ರಸಾದ್"
ಎಂದು ಮೇಥಾ ಸೂಚಿಸಿದ.

ರೈಲು ಹೊರಡುವ ವೇಳೆಯಾಯಿತು. ವೀಣಾ ಪ್ರಸಾದನನ್ನು ಬಿಡಲೊಲ್ಲಳು. ಲಲಿತಮ್ಮ ಅವಳನ್ನೆತ್ತಿಕೊಂಡು ಮುದ್ದುಮಾಡಿ ಆಯಿಯ ಕೈಗಿತ್ತಳು. ವೀಣಾ ದೊಡ್ಡದಾಗಿ ಅಳತೊಡಗಿದಳು.

ದಾದಾ, ನಾನಾ, ದಸ್ತೂರ್, ದಾವ್ಲೆ, ಮೇಥಾ, ರಾಡ್‌ರೀಗಸ್ ಪ್ರಸಾದನನ್ನಪ್ಪಿ ಕಂಬನಿಸುರಿಸಿದರು.

ಗೌರಮ್ಮನವರು ರೈಲೊಳಗೆ ಕುಳಿತರು. ಲಲಿತಮ್ಮ ರೈಲು ಹತ್ತಿ ಕಿಟಕಿಯ ಬಳಿ ಬಂದು ನಿಂತಳು. ಸೆಲೀನ್ ಮರೆಯದೆ ಅವಳ ಕೈಗೆ ಪರ್ಸ್ ಕೊಟ್ಟಳು.

ರೈಲು ಮೆಲ್ಲನೆ ಮುಂದಡಿಯಿಟ್ಟಿತು. ಪ್ರಸಾದ್ ನಿಂತುಕೊಂಡು ಎಲ್ಲರಿಗೂ ಕೈಮುಗಿದ. ಗೆಳೆಯರು, ದಾದಾ ರೈಲಿನ ಜತೆಗೇ ಹೊರಟರು. ಪ್ರಸಾದ್ ಕಿಟಕಿಯಾಚೆ ಕೈನೀಡಿ ವೀಣನ ಮುಖ ನೇವರಿಸಿದ. ಲಲಿತಮ್ಮ ಕಟ್ಟು ಹಾಕಿದ ಚಿತ್ರದಂತೆ ಕಿಟಕಿಯ ಬಳಿ ನಿಂತಿದ್ದಳು.

ಡಬ್ಬಿಯ ಪಕ್ಕದಲ್ಲಿ ನಡೆದು ಬರುತ್ತಿದ್ದ ಮೇಥನಿಗೆ ಪ್ರಸಾದ್

"ನೀನು ಹೋಗುವಾಗ ದಾದಾ ಆಯಿಯನ್ನು ಜತೆಯಲ್ಲಿ ಕರೆದು ಕೊಂಡು ಹೋಗು ಭಯ್ಯಾ" ಎಂದು ಹೇಳಿದ.

ರೈಲು ಮುನ್ನಡೆದಂತೆ ವೀಣನ ದುಃಖೋದ್ಗಾರ ಬಲವಾಯಿತು.

"ಕಾಕಾ – ಕಾಕಾ – ಕಾಕಾ" ಎಂದು ಕೂಗಿದಳು.

ರೈಲು ನಡೆದಂತೆ ಎಂಜನ್ನಿನ ಶಬ್ದವೇರಿತು. ಅದರ ಆರ್ಭಟೆಯಲ್ಲಿ ವೀಣೆಯ ಕೂಗು ಅಸ್ಪಷ್ಟವಾಗುತ್ತ ಬಂದಿತು.

ಪ್ರಸಾದ್ ತನ್ನ ಸೀಟಿನಲ್ಲಿ ಕುಕ್ಕರಿಸಿಬಿಟ್ಟ. ಗೆಳೆಯರೆಲ್ಲರ ಮುಖ ಬಿಂಬ ಅವನ ಚಿತ್ರಫಲಕದ ಮೇಲೆ ಸುಳಿಯಲಾರಂಭಿಸಿದವು.

ವೀಣೆಯ ಉದ್ಗಾರ 'ಕಾಕಾ – ಕಾಕಾ – ಕಾಕಾ'

ಕಿವಿ ಒಡೆದು ಹೋಗುವಂತೆ ವೀಣೆಯ ಕೂಗು ಧ್ವನಿಸುತ್ತಿತ್ತು.

ಹೃದಯಕ್ಕೂ ಅದೇ ಅನುಭವ.

ಹೃದಯದ ಮೇಲೆ ಕೈಯಿಟ್ಟುಕೊಂಡು ಪ್ರಸಾದ್ ಕತ್ತು ತಗ್ಗಿಸಿದ.

ರೈಲು ಹತ್ತುವ ಸಡಗರದಲ್ಲಿ ಲಲಿತಮ್ಮ ಎಲ್ಲಿಯೋ ತನ್ನ ಕರವಸ್ತ್ರ ಕೆಡವಿಕೊಂಡುಬಿಟ್ಟಿದ್ದಳು. ಪರ್ಸಿನೊಳಗಿದ್ದ ಕರವಸ್ತ್ರ ತೆಗೆದುಕೊಳ್ಳಲು ಅವನ್ನು ಬಿಚ್ಚಿದಾಗ, ಅದರೊಳಗೆ ಹೊಸದಾಗಿ ಕಂಡ ನೀಲಿ ಲಕೋಟೆ ನೋಡಿ ಆಶ್ಚರ್ಯವಾಯಿತು. ಲಕೋಟೆ ಒಡೆದು ನೋಡಲು ನೂರು ರೂಪಾಯಿಯ ಹತ್ತು ನೋಟುಗಳು - ಜತೆಯಲ್ಲಿ ಮೇಥನ ಕಾರ್ಡು. ಕಾರ್ಡಿನ ಮೇಲೆ 'ಪ್ರಸಾದ್ - ಲಲಿತಾದೇವಿಯವರಿಗೆ: ಪ್ರೀತಿಪೂರ್ವಕ - ಮೇಥಾ, ಸೆಲೀನ್' ಎಂದಿತ್ತು. ಲಲಿತಮ್ಮ ಲಕೋಟೆಯನ್ನು ಪ್ರಸಾದನ ಕೈಗಿತ್ತಳು. ಪ್ರಸಾದ್ ಅದನ್ನು ನೋಡಿಕೊಂಡು ಲಲಿತಮ್ಮನಿಗೇ ಹಿಂದಿರುಗಿಸಿದ.

ಪುಣೆ ಮುಟ್ಟುವವರೆಗೆ ಯಾರೂ ಬಾಯಿಬಿಡಲಿಲ್ಲ. ಪುಣೆ ನಿಲ್ದಾಣದಲ್ಲಿಳಿದು ಸಾಮಾನುಗಳನ್ನು ಗುಂತಕಲ್ ಗಾಡಿಗೆ ಸಾಗಿಸಿ, ತಮ್ಮ ಬರ್ತ್‌ಗಳ ಮೇಲೆ ಹಾಸಿಗೆಯುರುಳಿಕೊಂಡು ಪ್ರಸಾದ್, ಲಲಿತಮ್ಮ, ಗೌರಮ್ಮನವರು ಕುಳಿತರು.

ಪ್ರಸಾದ್ ಹೆಂಡತಿಯ ಕಡೆ ತಿರುಗಿ

"ಚಹಾ ಬೇಕಲ್ಲವೇ ?"

"ಬೇಕಾಗಿತ್ತು" ಎಂದಳು.

ಪ್ರಸಾದ್ ರೆಫ್ರೆಷ್‌ಮೆಂಟ್ ರೂಮಿನ (Refreshment Room) ಬಾಯನ್ನು ಕರೆದು ಚಹಾಕ್ಕೆ ಹೇಳಿದ.

ಚಹಾ ಕುಡಿದುದು ಮುಗಿಸಿ, ಕಪ್ಪು ಬಸಿ ಹಿಂದಕ್ಕೆ ಕಳುಹಿಸಿ ಪ್ರಸಾದ್ ಪ್ಲ್ಯಾಟ್‌ಫಾರ್ಮಿನ ಮೇಲೆ ಸ್ವಲ್ಪಹೊತ್ತು ಶಥಪಥ ತಿರುಗಾಡಿದ. ಸೀಟಿಯ ಧ್ವನಿ ಕೇಳಿದ ಮೇಲೆ ಕೆಲವು ಪತ್ರಿಕೆಗಳನ್ನು ಕೊಂಡು ಗಾಡಿಹತ್ತಿ ಕುಳಿತ. ರೈಲು ಮುಂವಕ್ಕೆ ಹೊರಟಿತು. ಲಲಿತಮ್ಮ ಪುಣೆಯ ದೃಶ್ಯನೋಡುತ್ತಾ

"ನಾವಿಷ್ಟು ದಿನ ಮುಂಬಯಿಯಲ್ಲಿದ್ದರೂ ಪುಣೆಯನ್ನೇ ನೋಡಲಿಲ್ಲ" ಎಂದಳು.

"ಒಮ್ಮೆ ರಜಾಪಡೆದು ಇತ್ತ ಬಂದು ನೋಡಿಕೊಂಡು ಹೋಗೋಣ."

"ನಿಮ್ಮ ಮೇಥಾಜಿ ಮಾಡಿದುದು ನೋಡಿದಿರಾ ?"

"ಏನುಮಾಡಿದ."

"ನೀಲಿ ಲಕೋಟಿ ತೋರಿಸಲಿಲ್ಲವೇ ?"

"ಓಹೋ ಅದೇ! ಇದು ನಿನ್ನ ಸೋದರಿ ಸೆಲೀನಳ ಕೆಲಸ. ಕಾರಿನಲ್ಲಿ ನೀನು ಪರ್ಸ್ ಮರೆತುದೇ ತಪ್ಪಾಯಿತು."

"ಈ ಹಾಳು ಮರವು ನನಗೇಕೆ ಬಂದಿತೋ ?"

"ನಿನ್ನ ಮರವಿನಿಂದ ಅನುಕೂಲವೇ ಆಯಿತಲ್ಲಾ !"

"ಮೇಥಾಜಿ ಸೆಲೀನರಿಂದ ನಾನು ಹಣ ಅಪೇಕ್ಷಿಸಿದೆನೇ ?"

"ಛೆ ಛೆ! ಆ ಅರ್ಥದಲ್ಲಿ ನಾನು ಹೇಳಲಿಲ್ಲ. ಮೇಥನ ಹಣ ತೆಗೆದು ಕೊಳ್ಳುವುದಕ್ಕೆ ನಾವೇಕೆ ಹಿಂದುಮುಂದು ನೋಡಬೇಕು. ಹಣಕ್ಕೆ ಜೀವನದಲ್ಲಿ ನಾವು ಬೆಲೆಕೊಟ್ಟಿಲ್ಲವಲ್ಲ."

"ನೀವು ನಾಚಿಕೆಯನ್ನೇ ಬಿಡುತ್ತಿರುವಿರಿ ದೊರೆ."

"ಏಕೆ ಲಲಿತಾ ?"

"ಹಣದ ಬಗ್ಗೆ ಇಷ್ಟು ನಿರ್ಲಜ್ಜೆಯೇ ?"

"ಲಕ್ಷ್ಮಿ ಲಜ್ಜಾಹೀನೆಯೆಂಬುದನ್ನರಿಯೆಯಾ - ನಾವು ಅನುಸರಿಸಿದ ನೀತಿ ಯಾವುದು ಗೊತ್ತೋ ?"

"ಯಾವದು ?"

"ಗಾಂಧೀ ಸೋಷಿಯಲಿಸಂ (Gandhian Socialism)"

"ಹಾಗೆಂದರೆ........"

"ಹಾಗೆಂದರೆ.... ಉಳ್ಳದಿರುವವರು ಉಳ್ಳವರಿಂದ ತೆಗೆದುಕೊಳ್ಳುವುದು.... ಅಹಿಂಸಾಮಾರ್ಗದಲ್ಲಿ."

"ಇದನ್ನೇ ಲೋಕ ಭಂಡತನವೆನ್ನುವುದು."

ಪ್ರಸಾದ ನಕ್ಕ. ಗೌರಮ್ಮನವರಿಗೆ ಮಗಳ ನಿಂದೆ ಡಂಗುಬಡಿಸಿತು. ಲಲಿತಮ್ಮನನ್ನು ಹತ್ತಿರ ಕರೆದು

"ಅವರನ್ನು ಎಷ್ಟು ಬಯ್ಯುತ್ತೀಯೇ ಲಲಿತೂ ?" ಎಂದರು.

ಪ್ರಸಾದ್ ಮತ್ತಷ್ಟು ನಗುತ್ತ

"ಇವು ಬೈಗಳಲ್ಲ - ಲಲಿತಾ ನನ್ನ ಮೇಲೆ ವಿಶ್ವಾಸ ತೋರಿಸುವ ರೀತಿ"

"ನಾನು ನಿಮ್ಮನ್ನು ಬೈದೇ ವಿಶ್ವಾಸ ತೋರಿಸುತ್ತೀನೇನೋ ?"

"ಅದನ್ನೇ ಸಂಸ್ಕೃತ ಲಾಕ್ಷಣಿಕರು 'ನಿಂದಾಸ್ತುತಿ' ಎಂದು ಕರೆಯುವುದು."

"ಹೋಗಿ ದೊರೆ - ನೀವು ತುಂಬ ಕೆಟ್ಟವರು."

ಕತ್ತಲು ಕವಿಯುತ್ತ ಬಂದಿತ್ತು. ರೈಲ್ವೆ ಕಂಪಾರ್ಟ್‌ಮೆಂಟಿನ ದೀಪಗಳು ಬೆಳಗಲಾರಂಭಿಸಿದವು. ಗೌರಮ್ಮನವರು

"ಲಲಿತಾ ನೀನೂ ಅವರು ಏನಾದರೂ ತಿಂಡಿ ತೆಗೆದುಕೊಳ್ಳಬಾರದೆ? ಬೆಳಿಗ್ಗೆ ಸ್ವಲ್ಪ ಊಟದ ಶಾಸ್ತ್ರ ಮಾಡಿದ್ದು" ಎಂದರು.

"ಹಸಿವಿಲ್ಲಮ್ಮ – ಸ್ವಲ್ಪಹೊತ್ತು ಹೋಗಲಿ."

"ಧೋಂಡ್ ಸ್ಟೇಷನ್ ಬರಲಿ. ದಾದಾ, ನಾನಾ ಏನೇನು ಕೊಟ್ಟಿದ್ದಾರೋ ಪರೀಕ್ಷೆ ಮಾಡೋಣ" ಎಂದು ಪ್ರಸಾದ್ ಹೇಳಿದ.

ಲಲಿತಮ್ಮ, ಪ್ರಸಾದ್ ಒಂದೊಂದು ಪತ್ರಿಕೆ ಹಿಡಿದು ನೋಡುತ್ತ ಕುಳಿತರು. ಹತ್ತು ನಿಮಿಷಗಳಲ್ಲಿ ಲಲಿತಮ್ಮ ತನ್ನ ಕೈಯಲ್ಲಿದ್ದ ಪತ್ರಿಕೆಯನ್ನು ಜಿಗುಪ್ಸೆಯಿಂದ ಪಕ್ಕಕ್ಕೆ ಒಗೆದಳು. ಪ್ರಸಾದ್ ಕಣ್ಣೆತ್ತಿ ನೋಡಿ

"ಏಕೆ ಲಲಿತಾ" ಎಂದು ಕೇಳಿದ.

"ನಿಮಗೆ ದುಡ್ಡು ಹೆಚ್ಚಾಗಿತ್ತೇನು? – ಈ ಅಧ್ವಾನ ಪತ್ರಿಕೆಯನ್ನೇಕೆ ಕೊಂಡುಕೊಂಡು ಬಂದಿರಿ?"

"ಫಿಲ್ಮ್ ಇಂಡಿಯಾನ (Film India) ಅಧ್ವಾನ ಪತ್ರಿಕೆ ಎನ್ನುವೆಯಾ?"

"ಇಲ್ಲಿ ನೋಡಿ"

ಎಂದು, ಪತ್ರಿಕೆ ಕೈಗೆ ತೆಗೆದುಕೊಂಡು ಒಂದು ಪುಟ ತೋರಿಸಿದಳು. 'ಪ್ರಶ್ನೋತ್ತರ ವಿಭಾಗ'ದಲ್ಲಿ ಯಾರೋ ಬಾತ್ಮೀದಾರರು ಕೇಳಿದ್ದರು

"ಪ್ರೇಮವೆಂದರೇನು?"

ಅದಕ್ಕೆ ಪತ್ರಿಕೆಯ ಮಾನ್ಯ ಸಂಪಾದಕರ ಉತ್ತರ:

"ಪ್ರಾಪ್ತ ವಯಸ್ಕಳೂ ರೂಪವತಿಯೂ ಆದ ತರುಣಿಯನ್ನು ತಬ್ಬಿಕೊಂಡು, ಅವಳನ್ನು ಕೇಳಿದರೆ ನಿಮ್ಮ ಪ್ರಶ್ನೆಗೆ ಸದುತ್ತರ ದೊರೆಯುತ್ತದೆ."

ಪತ್ರಿಕೆಯನ್ನು ಕೆಳಗಿಟ್ಟು ಪ್ರಸಾದ್ ನಸುನಗುತ್ತಾ

"ಅದಕ್ಕೇಕೆ ಇಷ್ಟು ಬೇಸರಪಟ್ಟುಕೊಳ್ಳಬೇಕು?"

"ನಮ್ಮ ತರುಣ ತರುಣಿಯರಿಗೆ ಒಳ್ಳೆಯ ಪಾಠ."

"ಅದನ್ನೇಕೆ ಬಯ್ಯುವೆ. ನನ್ನ ಕೈಯಲ್ಲಿರುವ 'ಪ್ರಜಾಮತ'ದ ಪ್ರಶ್ನೋತ್ತರ ಭಾಗ ನೋಡು

ಪ್ರಶ್ನೆ : ಪ್ರೇಮದ ಮೂಲ ಚಿನ್ಹೆಯಾವುದು ?

ಉತ್ತರ : 'ಹೃದಯದ ಬಿಸಿ ಹೊಡೆತ' ಎನ್ನುತ್ತಾರೆ. 'ಕಣ್ಣುಗಳ ಇಜ್ಜೋಡಿ ಮಿಲನ'ವೂ ಆಗುವುದುಂಟು.

* * * *

ಪ್ರಶ್ನೆ : ಒಬ್ಬ ಸ್ತ್ರೀಯಲ್ಲಿ ಅಂಕುರಿಸುವ ಪ್ರೇಮದ ಬೆಲೆ ಏನು ?

ಉತ್ತರ : ಆ ಪ್ರೇಮವನ್ನು ಆಹ್ವಾನಿಸಿ, ಬೆಳಗಿಸಿ, ಆನಂದಪಡಿಸ ಬಲ್ಲ ಪ್ರತಿ ಪ್ರೇಮ.

* * * *

ಪ್ರಶ್ನೆ : ಪ್ರೀತಿ - ಪ್ರೇಮ - ಮೋಹ ಇವುಗಳ ಅರ್ಥವನ್ನು ವಿವರಿಸು ವಿರಾ ?

ಉತ್ತರ : ಪ್ರೀತಿಯಿಂದ ವಿವರಿಸಹೋದರೆ, ಪ್ರೇಮ ಪರವಶರಾಗಿ ಮೋಹಗೊಳ್ಳಬೇಕಾಗುವುದು ! ಮೂರ್ಛೆ ಹೋದೀರಿ !!

* * * *

ಪ್ರಶ್ನೆ : ಪ್ರೇಮಿಗಳಿಬ್ಬರ ವಿವಾಹಕ್ಕೆ ಅಡ್ಡಿ ತೋರಿದಾಗ ಅವರು ಮಾಡಬೇಕಾದ ಕಾರ್ಯವೇನು ?

ಉತ್ತರ : ಪ್ರೇಮಿಗಳ ಪ್ರೇಮಸಾಫಲ್ಯಕ್ಕೆ ವಿವಾಹವೇ ಗುರಿಯಲ್ಲ; ವಿವಾಹವೇ ಪ್ರಣಯೋನ್ಮುಖತೆಯ ಸೌರಭವಲ್ಲ.

* * * *

ಪ್ರಶ್ನೆ : ಪ್ರೇಮಿಗಳ ಮಾತು ಕಣ್ಣುಗಳಲ್ಲಿ. ಬಾಯಿಬಿಟ್ಟು ಮಾತಾಡ ಲಿಕ್ಕೆ ಇಬ್ಬರಿಗೂ ಸಂಕೋಚ. ಹಾಗಾದರೆ ಪ್ರಥಮತಃ ಯಾರು ಮಾತನ್ನಾಡ ಬೇಕು ?

ಉತ್ತರ : ಯಾರ ಕಣ್ಣುಗಳಲ್ಲಿ ಹೊಳಪು ಜಾಸ್ತಿಯೊ ಅವರೇ ಮೊದಲು ಮಾತನಾಡಿಸಲ್ಪಡುವವರು.

* * * *

ಪ್ರಶ್ನೆ : ಹೆಂಗಸು ಹುಟ್ಟುವುದು ಏತಕ್ಕಾಗಿ ?

ಉತ್ತರ : ಪುರುಷನ ಸವಿಗನಸನ್ನು ಪೂರ್ತಿಮಾಡಿ ಜಗತ್ತಿನ ರಥವನ್ನು ಮುಂದೆ ಸಾಗಿಸುವುದಕ್ಕಾಗಿ.

* * * *

ಪ್ರಶ್ನೆ : ಕಾಲೇಜು ವಿದ್ಯಾರ್ಥಿನಿಯರು ಕೈಗೆ ಬಳೆ ತೊಡುವುದನ್ನು ಬಿಟ್ಟಿರಲು ಕಾರಣವೇನು ?

ಉತ್ತರ : ಬಳೆ ತೊಟ್ಟರೆ ಅವರು ತಿರುಗಾಡುವಾಗ ಉದ್ಭವಿಸುವ ಬಳೆಯನಾದ ಇನ್ನೂ ಹೆಚ್ಚು ಜನರನ್ನು ಮನಸೆಳೆದುಬಿಟ್ಟರೆ ? ಪಾಡೇನು ?

* * * *

ಪ್ರಶ್ನೆ : ರಾಮಮಂದಿರಗಳಲ್ಲಿ ಗಂಡಸರೇ ಹೆಚ್ಚಾಗಿ ದೇವರ ಧ್ಯಾನ ಮಾಡಲು ಕಾರಣವೇನು ?

ಉತ್ತರ : ಕೋಮಲಾಂಗಿನಿಯರಿಗೆ ಬ್ರಹ್ಮಚಾರಿ ಆಂಜನೇಯನ ಭಯವಿರಬೇಕು.

* * * *

ಪ್ರಶ್ನೆ : ಸ್ವಾಮಿ, ಈ ಪ್ರಪಂಚದಲ್ಲಿ ಒಳ್ಳೆಯದು ಕೆಟ್ಟದಾವುದು ಎಂಬುದನ್ನು ದಯೆಯಿಟ್ಟು ವಿವರಿಸುವಿರಾ ?

ಉತ್ತರ : ನಿಮ್ಮ ಮನಸ್ಸು ಹೀರುವ ವಸ್ತುಗಳೆಲ್ಲ ಒಳ್ಳೆಯವು ; ಮೆದುಳನ್ನು ಕೊರೆಯುವ ವಸ್ತುಗಳೆಲ್ಲ ಕೆಟ್ಟವುಗಳು.... ತಿಳಿಯಿತೆ ? ' "

"ಈ ಬಗೆಯ ಹೊಲಸು ಬರವಣಿಗೆಯ ಮೇಲೆ ಯಾವ ಹದ್ದುಬಸ್ತು ಇಲ್ಲವೇ ?"

"ಪತ್ರಿಕೋದ್ಯಮಿ ಎಂದರೆ ನಮ್ಮ ದೇಶದಲ್ಲಿ ಸರ್ವಜ್ಞಮೂರ್ತಿ - ಸರ್ವಾಧಿಕಾರಿ - ಎಲ್ಲ ವಿವೇಕ, ತಿಳುವಳಿಕೆ, ಲೋಕಹಿತಜ್ಞಾನ ಅವನಲ್ಲಿ ಕೇಂದ್ರೀಕರಿಸಿರುತ್ತವೆ. ಅವನನ್ನು ಕೆಣಕಿ ಯಾರು ಬದುಕಲು ಸಾಧ್ಯ."

"ನಿಮ್ಮ ಪತ್ರಿಕೆಯಲ್ಲಿಯೂ ಈ ಬಗೆಯ 'ಪ್ರಶ್ನೋತ್ತರ' ಆರಂಭಿಸುವಿರೋ ?"

"'ಜನಜೀವಾಳ' ಆ ಕೆಲಸ ಮಾಡುತ್ತಿರುವುವರಿಂದ ನನಗೆ ಆ ಪ್ರಮೇಯ ಒದಗಲಾರದು."

ರೈಲು ಧೋಂಡ್ ಜಂಕ್ಷನ್ ದಾಟಿತು. ಲಲಿತಮ್ಮ ತಿಂಡಿ ಬುಟ್ಟಿಗಳನ್ನು ಕೈಗೆ ತೆಗೆದುಕೊಂಡಳು. ಆಯಿ ತಂದುಕೊಟ್ಟಿದ್ದ ಬುಟ್ಟಿಯಲ್ಲಿ ಪೂರಿ, ಪಲ್ಯ, ಮಿಠಾಯಿಗಳಿದ್ದವು. ನಾನಾ ತಂದುಕೊಟ್ಟಿದ್ದ ಬುಟ್ಟಿಯಲ್ಲಿ ಬಗೆ ಬಗೆಯ ಹಣ್ಣುಗಳಿದ್ದವು.

"ಅಮ್ಮನಿಗೆ ಹಣ್ಣು ಕೊಡು" ಎಂದು ಪ್ರಸಾದ್ ಹೇಳಿದ.

ಗೌರಮ್ಮನವರು ಬೇಡವೆಂದು ಹೇಳಿದರು.

ಲಲಿತಮ್ಮ ತುಸು ಬೇಸರದಿಂದ

"ವಯಸ್ಸಾಗುತ್ತ ಆಗುತ್ತ ಅಮ್ಮನಿಗೆ ಮಡಿಜಾಡ್ಯ ಹೆಚ್ಚಾಗುತ್ತಿದೆ" ಎಂದಳು.

"ರೈಲಿನಲ್ಲಿ ಬಂದು ಸ್ನಾನಮಾಡದೆ ಹೇಗೆ ತಿನ್ನಲೀ ಲಲಿತಾ ?"

"ಹಣ್ಣಿಗೇನಮ್ಮ ?"

"ಸ್ನಾನಮಾಡದೆ ನಾನು ಬಾಯಿಗೆ ನೀರು ಕೂಡ ಹಾಕುವುದಿಲ್ಲವೆನ್ನುವುದು ನಿನಗೆ ಗೊತ್ತಿಲ್ಲವೆ ?"

"ಹೋಗಲಿ ಬಿಡು ಲಲಿತಾ. ಅವರ ನೇಮ ನಿಷ್ಠೆಯನ್ನು ನಾವೇಕೆ ಕೆಡಿಸಬೇಕು" ಎಂದು ಪ್ರಸಾದ್ ಸಮಾಧಾನ ಹೇಳಿದ.

ಪ್ರಸಾದ್, ಲಲಿತಾ ಇಬ್ಬರೂ ಉಪಾಹಾರಮಾಡುತ್ತಿದ್ದಂತೆ ಲಲಿತಮ್ಮನ ಮುಖದ ಮೇಲೆ ದುಃಖದ ಗೆರೆಗಳು ಕಾಣಿಸಿಕೊಂಡವು.

"ಏಕೆ ಲಲಿತಾ, ಏನು ಚಿಂತಿಸುತ್ತಿರುವೆ" ಎಂದು ಪ್ರಸಾದ್ ಕೇಳಿದ.

"ಎಷ್ಟು ಜನರ ಮನಸ್ಸು ನೋಯಿಸಿ ನಾವು ಬೆಂಗಳೂರಿಗೆ ಹೋಗುತ್ತಿದ್ದೇವೆ ಎಂದು ಯೋಚಿಸುತ್ತಿದ್ದೆ."

"ನೀನೇ ಅಧೀರಳಾದರೆ ನನ್ನ ಗತಿ ?"

"ಮುಂಬಯಿಯಲ್ಲಿ ಕೈತುಂಬ ಕೆಲಸವಿದ್ದರೂ ಜತೆಯಲ್ಲಿರುತ್ತಿದ್ದೆವು.... ಜತೆಯಲ್ಲಿ ದುಡಿಯುತ್ತಿದ್ದೆವು."

"ಬೆಂಗಳೂರಿನಲ್ಲಿಯೂ ಜತೆಯಲ್ಲಿ ದುಡಿಯಲು ಯಾರದೇನು ಅಡ್ಡಿ ವಾರಾಂತ್ಯದ ಸಂಚಿಕೆಯಲ್ಲಿ ನಿನ್ನ 'ಮಹಿಳಾಪುಟ' ಇದ್ದೇ ಇರಬೇಕು."

"ಶೆಟ್ಟರು ಒಪ್ಪಬೇಕಲ್ಲ !"

"ಖರ್ಚಿಗೆ ದಾರಿಯಾಗದ ಯಾವ ಸಲಹೆ ಹೇಳಿದರೂ ಶೆಟ್ಟರು ಬೇಡ ವೆನ್ನುವುದಿಲ್ಲ."

"ನಾವಿಬ್ಬರೂ ಮುಂಬಯಿಯಲ್ಲಿ ಒಂದೇ ಆಫೀಸಿನಲ್ಲಿ ಜತೆಯಲ್ಲಿ ದುಡಿಯುತ್ತಿದ್ದಂತೆ ಬೆಂಗಳೂರಿನಲ್ಲಿ ದುಡಿಯಲು ಸಾಧ್ಯವೇ ?"

"ಏಕೆ ಸಾಧ್ಯವಿಲ್ಲ."

"ಜನ ಏನನ್ನುತ್ತಾರೆ."

"ಗಂಡನ ಜತೆ ಹೆಂಡತಿ ದುಡಿಯುವುದು ಮಹಾಪರಾಧವೇ ?"

"ನಮ್ಮ ಜನಗಳ ದೃಷ್ಟಿಯಲ್ಲಿ ಮೈತ್ರಿಗೂ ಗಂಡಹೆಂಡಿರಿಗೂ ವಿರೋಧ ದೊರೆ."

"ಗಂಡಹೆಂಡಿರು ಸದಾ ನಾಯಿ ಬೆಕ್ಕುಗಳಂತೆ ಕಚ್ಚಾಡುತ್ತಿರ ಬೇಕೇನು ?"

"ಅದೇ ನಿಜವಾದ ದಾಂಪತ್ಯದ ಲಕ್ಷಣ."

"ನಮ್ಮದು ಪುರೋಹಿತರು ಕೂಡಿಸಿರುವ ದಾಂಪತ್ಯವಲ್ಲ."

"ಅದಕ್ಕೇ ಪುರೋಹಿತರು ಕಟ್ಟಿರುವ ಸಮಾಜ ವಿರೋಧ ಸೂಚಿಸುವುದು."

"ವಿರೋಧಕ್ಕೆ ಅಂಜಿದರಾಗುತ್ತದೆಯೇ ?"

"ಈ ಬಗೆಯ ನಿಷ್ಪ್ರಯೋಜಕ ವಿರೋಧಗಳನ್ನೆದುರಿಸುತ್ತಾ ನಿಮ್ಮ ಚೇತನವನ್ನು ನಷ್ಟಮಾಡಿಕೊಳ್ಳುವಿರಾ ?"

"ಸತ್ಯ ಶಾಶ್ವತವೇ ವಿನಾ ಸಂಪ್ರದಾಯ ಶಾಶ್ವತವಲ್ಲ. ದೇಶ, ಕಾಲ, ಪರಿಸ್ಥಿತಿಯನ್ನನುಸರಿಸಿ ಸಂಪ್ರದಾಯಗಳು ರೂಪುಗೊಳ್ಳುತ್ತವೆ. ಅವುಗಳನ್ನೇ ಶಾಶ್ವತವೆಂದು ತಿಳಿಯದವರು ಭಾವಿಸುತ್ತಾರೆ. ಸಂಪ್ರದಾಯಕ್ಕೆ ಹೊಂದಿ ಕೊಳ್ಳದ ಮಾರ್ಗನಿರ್ದೇಶನ ಮಾಡಿದವರನ್ನು ಇವರು ಎದುರಿಸುತ್ತಾರೆ. ಮಾನವಜೀವನದಲ್ಲಿ ಸಹಜವಾದ ಪ್ರಗತಿಕ್ರಮವೊಂದು ಇದ್ದೇ ಇದೆ. ಎಳೆಯ ವಯಸ್ಸಿನಲ್ಲಿ ಮಗು ಗೋಲಿ, ಬಂಗರ, ಗಾಳೀಪಟ, ಚಿಣ್ಣೀಕೋಲು ಆಡುವುದು ಅದರ ಸಹಜಗುಣ. ಗೋಲಿ, ಬಂಗರ ಆಡದ ಮಗು ಬೆಳೆಯುತ್ತದೆಯೇ ವಿನಾ ಪ್ರಗತಿಯನ್ನೈದುವುದಿಲ್ಲ. ಮಕ್ಕಳು ಗೋಲಿ, ಬಂಗರ ಆಡುತ್ತಿದ್ದರೆ ನಾವು ನೋಡಿ ಸಂತೋಷಪಡುತ್ತೇವೆ; ಅವುಗಳನ್ನೇ ದೊಡ್ಡವರು ಆಡುತ್ತಿದ್ದರೆ ನೋಡಿ ಅಪಹಾಸ್ಯಮಾಡುತ್ತೇವೆ. ಸಂಪ್ರದಾಯವಾದಿಗಳು ವಯಸ್ಸಾದ

ಮೇಲೂ ಗೋಲಿ, ಬಂಗರ ಆಡಿಸುವ ಮಕ್ಕಳಂತೆ. ಅವರನ್ನೂ ತಿದ್ದಲೆತ್ನಿಸ ಬೇಕು. — ಇದರಿಂದ ನಮ್ಮ ಚೇತನ ನಷ್ಟವಾಗುವುದಿಲ್ಲ. ಚೇತನಕ್ಕೆ ಅನುಭವದ ಪುಟದೊರೆತ ಹೊರತೂ ಅದು ಪಕ್ವವಾಗುವುದಿಲ್ಲ. ಒಮ್ಮೆ ಪಕ್ವವಾದ ಚೇತನ ಕಷ್ಟನಷ್ಟಗಳಿಗೆ ಪಕ್ಕಾದರೂ ಅಧೀನವಾಗುವುದಿಲ್ಲ."

"ನಿಮ್ಮ ಮಾತು ಕೇಳಿದರೆ ಮನಸ್ಸಿಗೆಷ್ಟು ಹಿತವಾಗುತ್ತದೋ ಅಷ್ಟೇ ಭಯವೂ ಆಗುತ್ತದೆ."

"ಭಯವೇಕೆ ?"

"ಹಕ್ಕಿಯ ಸುಕೋಮಲ ಹೃದಯಕ್ಕೆ ಮುಳ್ಳುಗಳೆಲ್ಲಿ ಅಂಟುವವೋ ಎಂದು ಭಯ."

"ಮುಳ್ಳಿನ ಮೊನೆ ತಾಗಿ ರಕ್ತಬಂದಾಗಲೇ ಯಾವದೋ ಹಕ್ಕಿ ಮನೋಹರವಾಗಿ ಹಾಡುವುದಂತೆ!"

"ದುಃಖ, ವೇದನೆಗಳಿಂದುಕ್ಕಿಬರುವ ಆ 'ಮನೋಹರ ಹಾಡು' ನನಗೆ ಬೇಡ ದೊರೆ."

"ದುಃಖ, ವೇದನೆ, ಅನುಕಂಪದಿಂದ ಉಕ್ಕಿಬಂದ ಮನೋಹರ ಗೀತವಲ್ಲವೇ ಋಷಿಕವಿಯ 'ರಾಮಾಯಣ'"

ಲಲಿತಮ್ಮ ನಿರುತ್ತರಳಾಗಿ ಮೌನತಳೆದಳು. ಆದರದು ಮಾತರಿಯದ ಮೌನವಾಗಿರಲಿಲ್ಲ; ಮಮತೆ ತುಂಬಿದ ಮೌನವಾಗಿತ್ತು.

ಬೆಳಿಗ್ಗೆ ರೈಲು ರಾಯಿಚೂರು ಮುಟ್ಟಿದಾಗಲೇ ಎಲ್ಲರಿಗೂ ಎಚ್ಚರ. ಲಲಿತಮ್ಮ, ಪ್ರಸಾದ್ ಮುಖಮಾರ್ಜನೆಮಾಡಿಕೊಂಡು ಕಾಫಿ ಸ್ವೀಕರಿಸಿದರು. ರೈಲು ಎಂಟರ ವೇಳೆಗೆ ಗುಂತಕಲ್ ಜಂಕ್ಷನ್ನಿಗೆ ಬಂದಿತು.

ಗುಂತಕಲ್ಲಿನಲ್ಲಿ ಗಾಡಿ ಬದಲಾಯಿಸಬೇಕಾಗಿತ್ತು. ಬೆಂಗಳೂರು ಪ್ಯಾಸೆಂಜರ್ ಗಾಡಿ ಹೊರಡುವುದಕ್ಕೆ ಒಂದೂವರೆ ಗಂಟೆ ಅವಕಾಶವಿತ್ತು. ವೆಯ್ಟಿಂಗ್ ರೂಮಿನ (Waiting - room) ಸ್ನಾನಗೃಹದಲ್ಲಿ ನೀರು ಇದ್ದುದನ್ನು ಪ್ರಸಾದ್ ನೋಡಿ ಬಂದು ಲಲಿತಮ್ಮನಿಗೆ

"ಸ್ನಾನಕ್ಕೆ ನೀರಿವೆ. ನಿಮ್ಮ ತಾಯಿ ಸ್ನಾನಮಾಡಿ ಸ್ವಲ್ಪ ಹಾಲು ಹಣ್ಣು ತೆಗೆದುಕೊಳ್ಳಲಿ" ಎಂದು ಹೇಳಿದ.

ಗೌರಮ್ಮನವರು, ಲಲಿತ ಸ್ನಾನ ಮುಗಿಸಿಕೊಂಡು ಬರುವಷ್ಟರಲ್ಲಿ ಪ್ರಸಾದ್ ಕಂಪಾರ್ಟಿಮೆಂಟಿಗೆ ಇಡ್ಲಿ, ಕಾಫಿ, ಹಾಲು ತರಿಸಿಟ್ಟಿದ್ದ. ಲಲಿತ, ಪ್ರಸಾದ್, ಇಡ್ಲಿ ಕಾಫಿ ಸ್ವೀಕರಿಸಿದರು. ಗೌರಮ್ಮನವರು ಹಾಲು ಹಣ್ಣು ಸ್ವೀಕರಿಸಿದರು.

ಪ್ರಸಾದ್ ಬೆಂಗಳೂರಿಗೆ ಶೆಟ್ಟರಿಗೂ, ಗುಂಡಯ್ಯನಿಗೂ ವೈರ್‌ಮಾಡಿ, ತಾನೂ ಸ್ನಾನ ಮುಗಿಸಿಕೊಂಡು ಬಂದು ಗಾಡಿಯಲ್ಲಿ ಕುಳಿತ.

ಬೆಂಗಳೂರ ಪ್ಯಾಸೆಂಜರ್ ಹೊರಟಿತು.

"ಬೆಂಗಳೂರಿಗೆ ಹತ್ತಿರವಾಗುತ್ತಿದ್ದೇವೆ ಲಲಿತಾ"

"ಹೌದು – ಮುಂಬಾಯಿಯಿಂದ ದೂರವಾಗುತ್ತಿದ್ದೇವೆ."

"ಇಲ್ಲ – ಇಬ್ಬರೂ ತಪ್ಪು ಹೇಳಿದೆವು. ಬೆಂಗಳೂರಿಗೆ ದೂರವಾಗುತ್ತಿದ್ದೇವೆ. ಮುಂಬಯಿಗೆ ಹತ್ತಿರವಾಗುತ್ತಿದ್ದೇವೆ."

ಸ್ವಲ್ಪಹೊತ್ತು ಕಳೆದಮೇಲೆ ಗೌರಮ್ಮನವರನ್ನು ಮಗಳ ಕಡೆ ತಿರುಗಿ

"ಊಟಕ್ಕೇನುಮಾಡುತ್ತೀರಿ?" ಎಂದು ಕೇಳಿದರು.

"ಊಟವೇಕೆ? ಆಯಿ ಕೊಟ್ಟಿರುವ ಪೂರಿ, ಮಿಠಾಯಿ ಇನ್ನೂ ಬೇಕಾದಷ್ಟಿದೆ."

"ಹೊಟ್ಟೆಗೆ ಅನ್ನ ಬೀಳದಿದ್ದರೆ ವೈಕಾದು ಬೆಂಕಿಯಾಗುತ್ತದೆ - ಎಲ್ಲಿಯಾದರೂ ಊಟಮಾಡಿ" ಎಂದು ಒತ್ತಾಯಮಾಡಿದರು.

ಪ್ರಸಾದ್ ಅನಂತಪುರ ನಿಲ್ದಾಣದಲ್ಲಿ ಗಾರ್ಡನ್ನು ಕರೆದು ಧರ್ಮಾವರ ಸ್ಟೇಷನ್ನಿಗೆ ವೈರ್ ಮಾಡಿಸಿದ.

ರೈಲು ಗುಡುಗುತ್ತ ಮುಂದುರುಳುತ್ತಿತ್ತು. ಪ್ರಸಾದನ ವಿಚಾರ ಲಹರಿಯೂ ಮುಂದೆ ಸಾಗುತ್ತಿತ್ತು. ಕಣ್ಣು ಎತ್ತ ಚಾಚಿದರೂ ಒಂದು ಗಿಡವಿಲ್ಲ, ಮರವಿಲ್ಲ, ಗರಿಕೆಹುಲ್ಲಿಲ್ಲ. ತಂಪೆಸೆವ ತಾಣವಿಲ್ಲ. ಕಲ್ಲು - ಬಂಡೆ. 'ಮನುಷ್ಯನ ಮನಸ್ಸೂ ಹೀಗೇ ಆಗುತ್ತದೆಯಲ್ಲವೇ?' ಎಂದುಕೊಂಡ.

ಧರ್ಮಾವರದ ಸ್ಟೇಷನ್ನಿನಲ್ಲಿ ಊಟ ಬಂದಿತು. ಹೊಟೇಲ್ ಮಾಣಿಯ ಹಿಂದೆ ನಾಲ್ಕಾರು ಭಿಕ್ಷದ ಹುಡುಗರು. ಒಬ್ಬ 'ಮದಿಲೋ - ನೀ ಮದಿಲೋ' ಹಾಡುತ್ತಿದ್ದ. ಇನ್ನೊಬ್ಬ, ಜತೆಯಲ್ಲಿದ್ದ ತನ್ನ ಕುರುಡು ತಂದೆಯನ್ನು ತೋರಿಸುತ್ತಿದ್ದ. ಮತ್ತೊಬ್ಬ ತನ್ನ ಕ್ಷಾಮಪೀಡಿತ ಶುಷ್ಕಕಾಯದ ಕಡೆಗೆ

ಲಕ್ಷ್ಯವೆಳೆಯುತ್ತಿದ್ದ. ಮಗದೊಬ್ಬ ಎಲ್ಲರ ಧ್ವನಿಯನ್ನಡಗಿಸುವಂತೆ ಆರ್ತನಾದ ಮಾಡುತ್ತಿದ್ದ.

ಲಲಿತಮ್ಮ ಒಂದು ತಟ್ಟೆಯಲ್ಲಿದ್ದ ಅನ್ನವನ್ನು ಸಾರಿನಲ್ಲಿ ಕಲಸಿ, ಅದಕ್ಕೆ ಪಲ್ಯ, ಹಪ್ಪಳ ಸೇರಿಸಿ ಭಿಕ್ಷುಕ ಹುಡುಗರಿಗೆಲ್ಲಾ ತುತ್ತು ನೀಡಿದಳು. ಉಳಿದಿದ್ದುದನ್ನು ಲಲಿತ, ಪ್ರಸಾದ್ ಇಬ್ಬರೂ ಸ್ವಲ್ಪ ಸ್ವಲ್ಪ ಸೇವಿಸಿದರು. ಅವರು ಭುಜಿಸಿದ ಮೇಲೂ ಸಾಕಷ್ಟು ಅನ್ನ ಉಳಿದಿತ್ತು. ಲಲಿತಮ್ಮ ಅದನ್ನೂ ಒಬ್ಬ ಭಿಕ್ಷುಕನಿಗೆ ನೀಡಿದಳು.

ಪ್ರಸಾದ್ ನಿಟ್ಟುಸಿರು ಬಿಡುತ್ತ

"ಇದೇ ನಮ್ಮ ಭಾರತ ಲಲಿತ."

"ಬಡತನವೆಲ್ಲಿ ಹೆಚ್ಚೋ ಅಲ್ಲಿ ವೇದಾಂತವೂ ಹೆಚ್ಚಲ್ಲವೇ ?"

"ನಮ್ಮ ದೇಶ ನೋಡಿದರೆ ಹೌದೆನ್ನಬೇಕಾಗುತ್ತದೆ."

"ಈ ಬಡತನ ನೀಗುವುದೆಂದು ?"

"ಮನುಷ್ಯ – ಮನುಷ್ಯನಾದಾಗ."

"ಅಂದರೆ........ಈಗ............"

"ಮನುಷ್ಯ ತೋಳವಾಗಿದ್ದಾನೆ. ಚಾರ್ಲಿ ಚಾಪ್ಲಿನ್ 'ಗೋಲ್ಡ್ ರಷ್' (Gold Rush) ಚಿತ್ರದಲ್ಲಿ ಹಸಿದವನ ಕಣ್ಣಿಗೆ ಮನುಷ್ಯರು ಕೂಡ ಕುರಿ, ಕೋಳಿಗಳಾಗಿ ಪರಿಣಮಿಸುತ್ತಾರೆಂಬುದನ್ನು ಚೆನ್ನಾಗಿ ತೋರಿಸಿದ್ದಾನೆ. ಇಂದು ಶ್ರೀಮಂತ, ಬಡವನನ್ನು ಸುಲಿಯುತ್ತಿದ್ದಾನೆ; ನಾಳೆ ಬಡವ ಶ್ರೀಮಂತನನ್ನು ಸುಲಿಯುತ್ತಾನೆ; ನಾಳಿದ್ದು ಬಡವ ಬಡವನನ್ನೇ ಸುಲಿಯುತ್ತಾನೆ. ಕಾಲ ಬದಲಾಯಿಸಿದಂತೆ ಮನುಷ್ಯನ ಸ್ವಭಾವ ಬದಲಾಯಿಸುವುದಿಲ್ಲ - ಸುಲಿಗೆಯ ಸ್ವರೂಪ ಬದಲಾಯಿಸುತ್ತ ಹೋಗುತ್ತದೆ."

"ಇದರ ಕೊನೆ ?"

"ಮನುಷ್ಯನಿಗೆ ಮನುಷ್ಯತ್ವವುಂಟಾದಾಗ."

"ಅದೊಂದು ಕನಸಿನ ಗಂಟು."

"ಕನಸಿನ ಗಂಟಲ್ಲ - ಪರಪೀಡನೆಯಿಲ್ಲದ 'ರಾಮರಾಜ್ಯ' ಕಟ್ಟಬೇಕೆಂಬ ಬಾಪೂ ಕನಸು ನನಸಾಗುತ್ತದೆ, ಇಂದಲ್ಲ - ನಾಳೆ."

"ನೀವೂ ಕನಸು ಕಾಣುತ್ತಿಲ್ಲವೇ ?"

"ನಿಜ - ಕನಸು ಕಾಣುತ್ತಿದ್ದೇನೆ. ಆದರೆ ಕನಸನ್ನು ನನಸುಮಾಡ ಬೇಕೆಂದು ತ್ರಿಕರಣಪೂರ್ವಕ ಪ್ರಯತ್ನಿಸುತ್ತಲೂ ಇದ್ದೇನೆ."

ಬೆಂಗಳೂರು ಸಮೀಪಿಸಿದಂತೆ ರೈಲಿನ ವೇಗವೂ ಹೆಚ್ಚುತ್ತಿತ್ತು. ಯಥಾ ವಿಧಿಯಂತೆ ರೈಲು ಮಹಾರಾಜಾಮಿಲ್ಲಿನ ಕೆರೆಯ ಏರಿಮೇಲೆ ಸ್ವಲ್ಪಕಾಲ ನಿಂತು 'ಕಿರೋ' ಎಂದು ಕಿರಲಿ ಮುಂದಡಿಯಿಟ್ಟಿತು.

ಪ್ರಸಾದ್ ಕಿಟಕಿಯಿಂದಾಚೆ ನೋಡಿದ. ಗುಂಡಯ್ಯನ ಮುಖ ಕಾಣಿಸಿತು.

"ಲಲಿತಾ - ಅಗೋ ಗುಂಡಯ್ಯ" ಎಂದು ಉತ್ಸಾಹದಿಂದ ಹೇಳಿದ.

ಗಾಡಿ ನಿಂತ ಕೂಡಲೆ ಶೆಟ್ಟರು, ಅವರ ಪರಿವಾರ ಪ್ರಸಾದನ ಡಬ್ಬಿಯ ಬಳಿಗೆ ಬಂದರು. ಗುಂಡಯ್ಯನೂ ಬಂದ. ಪ್ರಸಾದ್ ಗಾಡಿಯಿಳಿದ ಕೂಡಲೆ ಗುಂಡಯ್ಯನನ್ನಪ್ಪಿದ.

ಶೆಟ್ಟರು, ಪ್ರಸಾದನ ಕೊರಳಿಗೆ ಹಾರಹಾಕಿ ಸ್ವಾಗತ ಬಯಸಿ, ಪರಿವಾರದ ಪರಿಚಯಮಾಡಿಕೊಟ್ಟರು

"ಮ್ಯಾನೇಜರ್ ರಾಮಚಂದ್ರಶೆಟ್ಟರು ; ಪುಟ್ಟಣ್ಣ, ಮುಖ್ಯ ಉಪಸಂಪಾದಕರು ; ಸೂರ್ಯನಾರಾಯಣ, ಬಸಪ್ಪ - ಉಪಸಂಪಾದಕರು. ಸ್ವಾಮಿನಾಥನ್ - ಕ್ಯಾಷಿಯರ್ "

ಆಫೀಸಿನ ಆಳು ಪಳನಿಸ್ವಾಮಿ, ಸಾಮಾನುಗಳನ್ನು ತೆಗೆದುಕೊಂಡು ಹೋಗಿ ಸ್ಟೇಷನ್ ವ್ಯಾಗನ್‌ನಲ್ಲಿಟ್ಟ - (Station Wagon) ಗೌರಮ್ಮನವರು ತಮ್ಮ ದೇವರ ಪೆಟ್ಟಿಗೆ ಕೈಗೆತ್ತಿಕೊಂಡರು. ಲಲಿತಮ್ಮ ಮರೆತಿದ್ದ ಪರ್ಸನ್ನು ಕೈಗೆ ತೆಗೆದುಕೊಂಡು ಪ್ರಸಾದ್ ಅವಳ ಕೈಗೆ ಕೊಟ್ಟ.

ಶೆಟ್ಟರ ಕಾರಿನಲ್ಲಿ ಶೆಟ್ಟರು, ಪ್ರಸಾದ್, ಗುಂಡಣ್ಣ, ಲಲಿತಮ್ಮ, ಗೌರಮ್ಮನವರು ಹೊರಟರು. ಉಳಿದವರು ಸ್ಟೇಷನ್ ವ್ಯಾಗನ್ನಿನಲ್ಲಿ ಬಂದರು.

ಪ್ರಸಾದನಿಗೆ ನಿರ್ದಿಷ್ಟವಾಗಿದ್ದ ಮನೆಯ ಬಾಗಿಲಿನಲ್ಲಿ ಕಾರೂ, ವ್ಯಾಗನ್ನೂ ಬಂದು ನಿಂತವು. ರಾಮು ಮನೆಯ ಬಾಗಿಲಿನಲ್ಲಿ ನಿಂತು ಕೈಮುಗಿದ

"ರಾಮು ನಿಮ್ಮ ಖಾಸಾ ಸೇವಕ" ಎಂದರು ಶೆಟ್ಟರು.

ಒಳಗೆ ಬಂದಮೇಲೆ ಶೆಟ್ಟರು ಎಲ್ಲರನ್ನೂ ಕರೆದೊಯ್ದು ಮನೆತೋರಿಸಿ

"ಅನುಕೂಲವಾಗಿದೆಯೇ ಸ್ವಾಮಿ' ಎಂದು ಕೇಳಿದರು.

"ಮುಂಬಯಿಯಲ್ಲಿ ವಾಸಮಾಡಿದವರಿಗೆ ಇದು ಅರಮನೆ ಶೆಟ್ಟರೇ" ಎಂದು ಪ್ರಸಾದ್ ಹೇಳಿದ.

ಕೆಲವು ದಿವಸಗಳ ಹಿಂದೆಯೇ ಗೂಡ್ಸ್‌ಗಾಡಿಯಲ್ಲಿ ಬಂದಿದ್ದ ಸಾಮಾನುಗಳನ್ನು ಬಿಚ್ಚಿ, ಅವವುಗಳ ಸ್ಥಳದಲ್ಲಿ ರಾಮು ಅಣಿಮಾಡಿಟ್ಟಿದ್ದ. ಅಡಿಗೆಯ ಮನೆಯಲ್ಲಿ ಪಾತ್ರೆಗಳೂ ಅಣಿಮಾಡಲ್ಪಟ್ಟಿದ್ದವು. ಸ್ನಾನಗೃಹದಲ್ಲಿ ಬಾಯಿಲರ್‌ನಲ್ಲಿ ನೀರು ಕಾದು ಮರಳುತ್ತಿತ್ತು.

ಹಜಾರದಲ್ಲಿ ಕುಳಿತಮೇಲೆ ರಾಮು ಎಲ್ಲರಿಗೂ ಕಾಫಿ ತಂದಿತ್ತ. ಶೆಟ್ಟರು ಕಾಫಿ ಮುಗಿಸುತ್ತಾ

"ಆಫೀಸ್ ತೋರಿಸಿಬಿಡುತ್ತೇನೆ. ಬಂದು ಸ್ನಾನಮಾಡಿ ಊಟಮಾಡಬಹುದು. ರಾಮು ಊಟ ತಂದುಕೊಡುತ್ತಾನೆ" ಎಂದರು.

ಆಫೀಸಿನಲ್ಲಿ ಉಳಿದ ನೌಕರರ ಪರಿಚಯವಾಯಿತು.

"ವಿಶ್ವೇಶ್ವರಯ್ಯ - ಉಪಸಂಪಾದಕರು; ನಂಜಪ್ಪ - ರಿಪೋರ್ಟರ್; ಅಬ್ದುಲ್ ಸಾಲಿಕ್ - ಫೋಟೋಗ್ರಾಫರ್; ವೆಂಬುಅಯ್ಯರ್ - ಪತ್ರವ್ಯವಹಾರದ ಕಾರಕೂನರು; ಅನಂತರಾಜು - ಪ್ರೆಸ್ ಫೋರ್‌ಮನ್."

ಪ್ರಸಾದ ಎಲ್ಲರಿಗೂ ಕೈಮುಗಿದು

"ಒಂದು ಕುಟುಂಬದವರ ಹಾಗೆ ನಾವು ಐಕಮತ್ಯದಿಂದ ಕೆಲಸ ನಡಸಿಕೊಂಡು ಹೋಗಬೇಕು" ಎಂದು ಹೇಳಿದ.

ಶೆಟ್ಟರು ಪ್ರಸಾದನನ್ನೂ ಗುಂಡಣ್ಣನನ್ನೂ ಕರೆದೊಯ್ದು ಕಟ್ಟಡ ತೋರಿಸಿದರು.

"ಕೆಳಸಾಲಿನಲ್ಲಿ: ಬಲಗಡೆ ಇರುವುದು ಮ್ಯಾನೇಜರ ರೂಮು. ಎಡಗಡೆ ನನ್ನ ರೂಮು; ಮ್ಯಾನೇಜರ ರೂಮಿನ ಪಕ್ಕದಲ್ಲಿ ಅವರ ಕಛೇರಿ; ಮಧ್ಯದ ಹಜಾರ, ಅದರ ಪಕ್ಕದ ರೂಮಿನಲ್ಲಿ ಕಂಪೋಸಿಂಗ್ ಸೆಕ್ಷನ್; ಅದರ ಹಿಂದಿರುವ ರೂಮಿನಲ್ಲಿ ಟ್ರೆಡಲ್ - ಅದರ ಪಕ್ಕದ ಹಜಾರದಲ್ಲಿ ರೋಟರಿ ಮೆಷಿನ್ - ಆ ಕೊನೆಯಲ್ಲಿರುವುದು ಬೈಂಡಿಂಗ್ ರೂಮ್."

'ಮೇಲಕ್ಕೆ ಬನ್ನಿ' ಎಂದು ಮಹಡಿಯ ಮೇಲೆ ಕರೆದೊಯ್ದು

"ಎಡಗಡೆ ಇರುವುದು ರಿಸೆಪ್‌ಷನ್ ರೂಮ್ (Reception Room). ತಮ್ಮನ್ನಾಗಲಿ, ನನ್ನನ್ನಾಗಲಿ ನೋಡಲು ಬಂದವರಿಗಾಗಿ; ಬಲಗಡೆ

ಇರುವುದೇ ತಮ್ಮ ರೂಮು ; ತಮ್ಮ ರೂಮಿನ ಮಗ್ಗುಲಿಗೇ ಪುಸ್ತಕ ಭಂಡಾರ ; ಮಧ್ಯದ ಹಜಾರ ಉಪಸಂಪಾದಕರ ಕಛೇರಿ; ರಿಸೆಪ್‌ಷನ್ ರೂಮಿನ ಪಕ್ಕದ್ದೇ ಸ್ಟುಡಿಯೋ. ಸ್ಟುಡಿಯೋ ಹಿಂದಿನ ಸಾಲಿನಲ್ಲಿ ಲ್ಯಾಬೊರೇಟರಿ, ಗೋಡೌನ್‌ಗಳಿವೆ."

ಶೆಟ್ಟರು ಮಾಡಿದ್ದ ಅಚ್ಚುಕಟ್ಟು ವ್ಯವಸ್ಥೆಯನ್ನು ಕಂಡು ಪ್ರಸಾದ್ ತನ್ನ ಮೆಚ್ಚುಗೆ ವ್ಯಕ್ತಗೊಳಿಸಿದ.

"ಈಗ ತಾವು ಸ್ನಾನ ಊಟ ಮುಗಿಸಿಕೊಂಡು ಪೂರ್ಣ ವಿಶ್ರಾಂತಿ ತೆಗೆದುಕೊಳ್ಳಿ ಸರ್. ಬೆಳಿಗ್ಗೆ ಎಲ್ಲಾ ಮಾತನಾಡೋಣ."

ಎಂದು ಹೇಳಿ ಶೆಟ್ಟರು ಪ್ರಸಾದನನ್ನ ಮನೆಗೆ ಕರೆತಂದುಬಿಟ್ಟು ರಾಮುವನ್ನು ಕರೆದು

"ರಾಮು, ರಾಯರ ಸ್ನಾನವಾದ ಕೂಡಲೆ ಊಟ ತಂದು ಬಡಿಸು. ಅವರೀಗೇನು ಬೇಕೋ ನೋಡಿಕೋ" ಎಂದು ಹೇಳಿಹೋದರು.

ಪ್ರಸಾದ್, ಗುಂಡಯ್ಯ ಇಬ್ಬರೇ ಹಜಾರದಲ್ಲಿ ಕುಳಿತರು.

"ಮನೆಯಲ್ಲಿ ಎಲ್ಲರೂ ಕ್ಷೇಮವೇ ಗುಂಡಯ್ಯ."

"ಎಲ್ಲರೂ ಕ್ಷೇಮ - ತಂದೆಯವರು ಮಾತ್ರ ಮಲಗಿಬಿಟ್ಟಿದ್ದಾರೆ."

"ಅವರಿಗೇನಾಗಿದೆ ?"

"ವಾತಬಾಧೆ."

ಲಲಿತಮ್ಮ ಸ್ನಾನಮುಗಿಸಿಕೊಂಡು ಬಂದು ಗುಂಡಯ್ಯನನ್ನು ಮಾತನಾಡಿಸಿದಳು.

"ಕೊನೆಗೂ ಬಂದುಬಿಟ್ಟರಲ್ಲಾ !"

"ನನ್ನದೇನಿಲ್ಲಪ್ಪಾ – ನನ್ನನ್ನು ಹೊರಡಿಸಿಕೊಂಡು ಬಂದವಳು ಈ ಪುಣ್ಯಾತ್ಗಿತ್ತಿ."

"ನನ್ನನ್ನು ಅಪರಾಧಿಸ್ಥಾನದಲ್ಲಿ ನಿಲ್ಲಿಸಿದ್ದಾರೆ ಗುಂಡಣ್ಣನವರೇ."

ರಾಮು ಬಂದು 'ಊಟ ತರಲೇ ಸರ್.' ಎಂದು ಕೇಳಿದ. ಪ್ರಸಾದ್ ಲಲಿತಮ್ಮನ ಕಡೆ ತಿರುಗಿ

"ಅಮ್ಮ ಏನುಮಾಡುತ್ತಾರೆ ?"

"ಪೂಜೆಗೆ ಕುಳಿತಿದ್ದಾರೆ. ಅವರು ಊಟ ಮಾಡುವುದಿಲ್ಲ. ಸ್ವಲ್ಪ ಹಾಲೂ ಹಣ್ಣು ತೆಗೆದುಕೊಳ್ಳುತ್ತಾರೆ."

"ಹಾಲು ತಂದಿಟ್ಟಿದ್ದೀನಿ ಸರ್" ಎಂದು ರಾಮು ಹೇಳಿದ.

ಪ್ರಸಾದ್ ರಾಮುವನ್ನು ಅಭಿಮಾನದಿಂದ ನೋಡಿ

"ತುಂಬ ಕಷ್ಟಪಟ್ಟಿದ್ದೀಯಪ್ಪ. ನಮಗೆ ಸ್ವಲ್ಪವೂ ತೊಂದರೆಯಾಗ ದಂತೆ ಎಲ್ಲಾ ವ್ಯವಸ್ಥೆಮಾಡಿದ್ದೀ."

ರಾಮು ಹಿಗ್ಗಿಹೋದ.

ಲಲಿತಮ್ಮ ಮೆಲ್ಲನೆ

"ಇಲ್ಲೇ ನೀವೂ ಊಟಕ್ಕೇಳಿ ಗುಂಡಣ್ಣನವರೇ" ಎಂದಳು.

"ಇಲ್ಲಮ್ಮ. ನಾನು ಮನೆಗೆ ಹೋಗಲೇಬೇಕಾಗಿದೆ. ತಂದೆಯವರನ್ನು ನೋಡಿಕೊಳ್ಳುವವರು ಯಾರೂ ಇಲ್ಲ. ಇವತ್ತು ಹೇಳಿ ಕೇಳಿ ಹೊಟೇಲ್ ಊಟ - ಇವತ್ತೇಕೆ – ನಾಳೆಯಿಂದ ಇಲ್ಲೇ ಒಕ್ಕರಿಸುತ್ತೇನೆ ಸುಮ್ಮನಿರಿ" ಎಂದ.

"ನಾಳೆ ಎಷ್ಟುಹೊತ್ತಿಗೆ ಬರುತ್ತೀರಿ ?"

"ಹನ್ನೊಂದು ಗಂಟೆಯ ಮೇಲೆ ಬರುತ್ತೇನೆ. ಆ ವೇಳೆಗೆ ತಂದೆಯವರ ಕೆಲಸವೂ ಮುಗಿದಿರುತ್ತದೆ."

"ನಾಳೆಯಾದರೂ ಇಲ್ಲೇ ಊಟಕ್ಕೇಳಬೇಕು."

"ಆಗಲಿ - ಅದಕ್ಕೇನು ?"

ಎಂದು ಗುಂಡಣ್ಣ ಹೊರಡಲನುವಾದ.

ಅವನು ಹೋದ ಮೇಲೆ ಪ್ರಸಾದ್ ಸ್ನಾನ ಮುಗಿಸಿಕೊಂಡು ಬಂದ. ರಾಮು ಹೊಟೇಲಿಂದ ಊಟ ತಂದು ಪ್ರಸಾದ್, ಲಲಿತಮ್ಮನಿಗೆ ಬಡಿಸಿದ. ತಮ್ಮ ಊಟ ಮುಗಿದ ಮೇಲೆ ಲಲಿತಮ್ಮ ರಾಮುವನ್ನು ಕೂಡಿಸಿ ಬಡಿಸಿದಳು.

ಗೌರಮ್ಮನವರು ದೇವರಿಗೆ ನೇವೇದ್ಯಮಾಡಿದ ಹಾಲೂ ಹಣ್ಣನ್ನು ಸ್ವೀಕರಿಸಿದರು.

ಏಕಾಂಗಿಯಾಗಿ ಕುಳಿತಿದ್ದ ಪ್ರಸಾದನ ಬಳಿಗೆಬಂದು ಲಲಿತಮ್ಮ ಕುಳಿತು

"ಕೆಲಸದ ಚಿಂತೆ ಆರಂಭವಾಯಿತೇ ?"

"ಇಲ್ಲ."

"ಆಫೀಸ್ ಹೇಗಿದೆ!"

"ಭವ್ಯವಾಗಿದೆ."

"ದೊಡ್ಡ ಆಫೀಸು – ದೊಡ್ಡ ದೈನಂದಿನ ಪತ್ರಿಕೆಯ ಸಂಪಾದಕರು – ಇನ್ನು ಮೇಲೆ ನಿಮ್ಮನ್ನು ಮಾತನಾಡಿಸಬೇಕಾದರೆ ನಾನು ತುಂಬ ಹುಷಾರಾಗಿರಬೇಕು."

"ಸೆರೆಮನೆ ದೊಡ್ಡದಾಗಿದೆಯೆಂದು ಹಿಗ್ಗಲೇ ಲಲಿತಾ."

"ಏಕೆ ಸ್ವಾಮಿ - ಸೆರೆಮನೆ ಎನ್ನುವಿರಿ ?"

"ಮನಸ್ಸಿಗೇಕೋ ಚಿಂತೆಯಾಗಿದೆ ಲಲಿತಾ - ಈ ವೈಭವ, ಈ ಕೀರ್ತಿ - ಈ ಪ್ರತಿಷ್ಠೆ - ಈ ಸ್ಥಾನಗೌರವ ನನಗಲ್ಲ. ಉಮರ್ ಖಯ್ಯಂ ಹೇಳಿದಂತೆ ನನಗೆ ಬೇಕಾದುದು - ಪ್ರಶಾಂತ ತಾಣ, ಸುಂದರ ಕಾವ್ಯ - ನಿನ್ನ ಸಾನ್ನಿಧ್ಯ."

"ಸೆರೆಮನೆಯನ್ನು ಅರಮನೆ ಮಾಡೋಣ ದೊರೆ."

"ನಿನ್ನ ಮಾತಿಗೆ ನಾನು ಪ್ರತಿ ಹೇಳಲಾರೆ."

"ತುಂಬ ಆಯಾಸವಾಯಿತೇ ?"

"ಆಗಿದೆ ದೇಹಕ್ಕಲ್ಲ - ಮನಸ್ಸಿಗೆ."

ಲಲಿತಮ್ಮನ ಮೃದುಮಧುರ ಪ್ರೇಮಬಾಹುಗಳು ಪ್ರಸಾದನನ್ನು ಬಳಸಿದವು. ಪ್ರಸಾದ್ ಅವಳ ಬುಜದ ಮೇಲೆ ಮುಖವಿಟ್ಟು ಮಲಗಿದ.

೬

ಬೆಳಿಗ್ಗೆ ಗೌರಮ್ಮನವರು ಅಡಿಗೆಯ ಮನೆಯ ಚಾರ್ಜ್ ವಹಿಸಿಕೊಂಡರು. ಪ್ರಸಾದ್ ಏಳುವವೇಳೆಗೆ ಮನೆಯಲ್ಲಿಯೇ ಕಾಫಿ ಸಿದ್ಧವಾಗಿತ್ತು.

ಪ್ರಸಾದ್ ಮೊಟ್ಟಮೊದಲನೆಯದಾಗಿ ತಾವು ಸುಖವಾಗಿ ಬೆಂಗಳೂರು ತಲುಪಿದ ಸುದ್ದಿಯನ್ನು ಸೆಂಚುರಿ ಕಛೇರಿ, ದಾದಾ, ಮೇಥಾ, ಸಂತೂಬಾಯಿ ಅವರಿಗೆ ತಿಳಿಸುವ ತಾರುಗಳನ್ನು ಬರೆದು ರಾಮು ಕೈಯಲ್ಲಿ ಕಳುಹಿಸಿಕೊಟ್ಟ.

ಪ್ರಸಾದ್ ಸ್ನಾನ ಮುಗಿಸಿದ ಮೇಲೆ ಲಲಿತಮ್ಮ ಅವನಿಗೆ ಉಪ್ಪಿಟ್ಟು ತಂದುಕೊಟ್ಟಳು.

"ಮನೆಗೆ ಸಾಮಾನು ತರಬೇಕಲ್ಲವೇ ಲಲಿತಾ" ಎಂದು ಕೇಳಿದ.

"ಈಗ್ಗೆ ಬೇಕಾಗುವುದನ್ನೆಲ್ಲಾ ರಾಮು ಕೈಯಲ್ಲಿ ತರಿಸಿಕೊಂಡಿದ್ದೇವೆ. ಮಧ್ಯಾನ್ಹ ನಾನೂ ಅಮ್ಮ ಪೇಟೆಯ ಕಡೆ ಹೋಗಿ ಉಳಿದ ಸಾಮಾನುಗಳನ್ನು ತರುತ್ತೇವೆ. ಪಾತ್ರೆಗಳು ಬೇಕಾಗಿವೆ; ಕಪ್ಪು ಬಸಿಬೇಕಾಗಿದೆ."

"ಹಾಗೇ ಮಾಡಿ. ನಾನೂ ಹೋಗಿ ಪಂಡಿತರನ್ನು ನೋಡಿಕೊಂಡು ಬರುತ್ತೇನೆ."

"ನಿಮ್ಮ ತೀರ್ಥರೂಪರವರನ್ನು ನೋಡುವುದಿಲ್ಲವೇ ?"

"ನಾಲ್ಕು ದಿನ ಕಳೆದಮೇಲೆ ಅವರನ್ನು ಹೋಗಿ ನೋಡುವುದು ಒಳ್ಳೆಯದಲ್ಲವೇ ?"

"ಊರಿಗೆ ಬಂದವರೂ ಮನೆಗೆ ಬರಲಿಲ್ಲ ಎಂದುಕೊಳ್ಳುತ್ತಾರೇನೋ ?"

"ಹೌದು, ಚಿಕ್ಕಮ್ಮ ನೊಂದುಕೊಳ್ಳುತ್ತಾಳೆ."

"ಪಂಡಿತರನ್ನು ನೋಡಿಕೊಂಡು ಚಿಕ್ಕಮ್ಮನನ್ನು ನೋಡಿಕೊಂಡು ಬನ್ನಿ."

ಪ್ರಸಾದ್ ಕೂಡಲೆ ತನ್ನ ಒಪ್ಪಿಗೆ ಸೂಚಿಸಲಿಲ್ಲ. ಆಫೀಸ್ ಆಳು ಪಳನಿಸ್ವಾಮಿ ಬಂದು

"ಯಜಮಾನರು ಕರೆಯುತ್ತಿದ್ದಾರೆ ಸಾರ್" ಎಂದ.

"ಈಗಲೇ ಬರುತ್ತೇನೆಂದು ಹೇಳಪ್ಪಾ"

ಲಲಿತಮ್ಮ ಹುಬ್ಬುಗಂಟು ಹಾಕಿಕೊಂಡಳು.

"ಒಳ್ಳೆಯ ಜಿಗಣೆ ಗಂಟುಬಿದ್ದ ಹಾಗೆ ಕಾಣುತ್ತದೆ."

"ಏಕೆ."

"ಈಗ ತಾನೇ ಎಂಟು ಹೊಡೆದಿದೆ. ಆಗಲೇ ಯಜಮಾನ ವರಾತ ಹಚ್ಚಿದ್ದಾನೆ. ಊರಿಗಿನ್ನೂ ಬಂದು ನಿಲ್ಲುವುದಕ್ಕಿಲ್ಲ - ಗಾಡಿ ನೊಗ ಹೆಗಲ ಮೇಲೆ ಹಾಕಲು ಅವಸರಪಡುತ್ತಿದ್ದಾನೆ."

"ನೊಗಹೊರುವುದು ನಿಶ್ಚಯವಾದ ಮೇಲೆ ಒಂದು ಗಂಟೆ ಹಿಂಚೇನು, ಮುಂಚೇನು ? – 'ಸೆಂಚುರಿ'ಯಲ್ಲಿನ ನಿನ್ನ ವೀಕ್ಲಿ ಫೀಚರ್ (Weekly Feature) 'ಮಹಿಳಾಪುಟ' ಏನುಮಾಡುತ್ತೀ ?"

"ಏನುಮಾಡಲಿ ?"

"ನಿನ್ನ 'ಮಹಿಳಾಪುಟ' ಮುಂದುವರಿಸೋಣ."

"ನನ್ನ ಫೀಚರ್ ಮುಂದುವರಿಸಬಹುದು. ನಿಮ್ಮ 'ಸಾಹಿತ್ಯಪುಟ' ಮುಂದುವರಿಸಲು ವೇಳೆಯೆಲ್ಲಿದೆ ?"

"ಸೆಂಚುರಿ ಕೆಲಸಕ್ಕೆ ವೇಳೆಯಿಲ್ಲ ಎನ್ನುವ ಮಾತೇ ಇಲ್ಲ - ಗುರುವಾರ ರಾತ್ರಿ ಇದಕ್ಕಾಗಿ ಮೀಸಲು."

"ಮೇಥಾ ಸೆಲೀನ್ ಕೊಟ್ಟಿರುವ ಹಣವನ್ನೇನು ಮಾಡಲಿ ?"

"ನಿನಗೇನು ಬೇಕೋ ತೆಗೆದುಕೋ ? ನಾನಂತೂ ಸಂಪಾದನೆ ಮಾಡಿ ನಿನಗೆ ಸೀರೆ ತೆಗೆದುಕೊಡಲಿಲ್ಲ, ಒಡವೆ ಮಾಡಿಸಿಕೊಡಲಿಲ್ಲ."

"ಸೀರೆ, ಒಡವೆ ಬಗ್ಗೆ ನನಗೆ ಅಪೇಕ್ಷೆಯಿದ್ದರಲ್ಲವೇ..........."

"ನನಗೆ ಅಪೇಕ್ಷೆಯಿದೆ ಲಲಿತಾ. ಎರಡು ಒಳ್ಳೆಯ ಸೀರೆ ನೀನು ತೆಗೆದು ಕೊಳ್ಳಬೇಕು. ಅಮ್ಮನಿಗೆ ಏನುಬೇಕೋ ಕೊಡಿಸು."

ಪಳನಿಸಾಮಿ ಮತ್ತೊಮ್ಮೆ ಬಂದು ಕರೆದು ಹೋದ.

ಶೆಟ್ಟರು ಆಫೀಸಿನಲ್ಲಿ ಮಿಂಚಿನಂತೆ ಓಡಿಯಾಡುತ್ತಿದ್ದರು. ಪ್ರಸಾದನನ್ನು ಕಂಡೊಡನೆಯೇ ಅವನನ್ನು ಕರೆದೊಯ್ದು ಆಫೀಸಿನಲ್ಲಿ ಕೂಡಿಸಿ

"ಡಮ್ಮಿ (Dummy) ತಯಾರುಮಾಡಿದ್ದೇನೆ ನೋಡಿ" ಎಂದರು.

ಶೆಟ್ಟರು ಕೈಗೆ ಕೊಟ್ಟ ಮಾದರಿ ಸಂಚಿಕೆಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತ ಪ್ರಸಾದ್

"ಡಮ್ಮಿ ಚೆನ್ನಾಗಿದೆ. ಆದರೆ ಸುದ್ದಿಗಳ ಹಿನ್ನೆಲೆ ವಿವರಿಸುವ ಒಂದು ಭಾಗ ಅವಶ್ಯಕವಾಗಿರಬೇಕು."

"ಅದು ಬಹಳ ಜವಾಬ್ದಾರಿ ಕೆಲಸವಾಯಿತಲ್ಲ ಸ್ವಾಮಿ. ಯಾರು ಮಾಡುವವರು ?"

"ಒಬ್ಬ ಉಪಸಂಪಾದಕರಿಗೆ ಆ ಕೆಲಸ ವಿಧಿಸಿದರಾಯ್ತು."

"ಉಪಸಂಪಾದಕರ ಶಕ್ತಿ ಸಾಮರ್ಥ್ಯ ನೋಡಿ. ಅನಂತರ ಹಿನ್ನೆಲೆ ವಿಭಾಗ ಆರಂಭಿಸಿ ಸ್ವಾಮಿ."

"ಹಾಗೇ ಆಗಲಿ. ಈಗ ನಾನೇನು ಮಾಡಬೇಕು."

"ಮೊದಲು ಪತ್ರಿಕೆಗೆ ನಾಮಕರಣ ಮಾಡಬೇಕು ಸ್ವಾಮಿ. ಹೆಸರು ಯೋಚಿಸಿದ್ದೀರಾ ?"

"ಕೆಲವು ಹೆಸರುಗಳನ್ನು ಯೋಚಿಸಿದ್ದೇನೆ."

"ಹೆಸರು ಸುಲಭವಾಗಿ ನಮ್ಮ ಮಾರಾಟದ ಹುಡುಗರ (Hawkers) ಬಾಯಲ್ಲಿ ಹೊರಡುವ ಹಾಗಿರಬೇಕು."

"ಲೋಕವಾಣಿ."

"ಕನ್ನಡದಲ್ಲಿ ವಾಣಿಗಳು ಬಹಳವಾಗಿವೆ ಸ್ವಾಮಿ."

"ಜನದುಂದುಭಿ"

"ಜನ ಇರಲಿ - ದುಂದುಭಿ ಕ್ಲಿಷ್ಟವಾಗುತ್ತದೆ."

"ಜನಜೀವನ - ಜನಧ್ವನಿ - ಜನ ಸಂದೇಶ."

"ಜನಸಂದೇಶ - ಜನಸಂದೇಶ - ಜನಸಂದೇಶ."

ಎಂದುಕೊಂಡು ಶೆಟ್ಟರು ಮ್ಯಾನೇಜರ್ ಕಡೆ ತಿರುಗಿ

"ಹೇಗಿದೆ ಹೆಸರು" ಎಂದು ಕೇಳಿದರು.

ಮ್ಯಾನೇಜರು ನಾಲ್ಕಾರು ಸಾರಿ 'ಜನಸಂದೇಶ'ವೆಂದುಕೊಂಡು

"ಚೆನ್ನಾಗಿದೆ - ಸುಲಭವಾಗಿಯೂ ಇದೆ." ಎಂದರು.

"ಅದೇ ಇರಲಿ ಸ್ವಾಮಿ - ಮ್ಯಾನೇಜರೂ ಒಪ್ಪಿಬಿಟ್ಟಿದ್ದಾರೆ ವಿಜಯ ದಶಮಿಗೆ ನಾಲ್ಕು ದಿವಸ ಮುಂಚಿತವಾಗಿ ನಮ್ಮ ಪತ್ರಿಕೆ ಹೊರಬೀಳಬೇಕು. ಮೊದಲನೆಯ ಸಂಚಿಕೆಯಲ್ಲಿ ನಮ್ಮ ಧ್ಯೇಯ ನಿರೂಪಣೆ, ಸಂದೇಶಗಳು, ಇತ್ಯಾದಿ ಇರಬೇಕು. ನೀವು ಮೊದಲು ಪ್ರಧಾನ ಲೇಖನ (Leader) ಸಿದ್ಧಗೊಳಿಸಬೇಕು ಸರ್."

"ಪತ್ರಿಕೆಯಲ್ಲಿ ಒಟ್ಟು ನಾಲ್ಕು ಪುಟಗಳಿಗೆ, ಮೂವತ್ತೆರಡು ಕಾಲಮ್‍ಗಳಾಗುತ್ತವೆ. ಜಾಹೀರಾತುಗಳಿಗೆ ಎಷ್ಟು ಸ್ಥಳ ಮೀಸಲಾಗಿಡಬೇಕು."

"ಸದ್ಯಕ್ಕೆ ಒಂದುಪುಟ - ಎಂಟು ಕಾಲಮ್ ಮೀಸಲಾಗಿಟ್ಟುಬಿಡಿ."

"ಭಾನುವಾರ ಪುರವಣಿ (Supplement) ಕೊಡುವುದುಂಟೇ?"

"ಅವಶ್ಯಕವಾಗಿ"

"ಭಾನುವಾರದ ಪುರವಣಿಯಲ್ಲಿ ಸಾಹಿತ್ಯ, ಲಲಿತ ಕಲೆಗಳು, ಮಕ್ಕಳ ವಿಭಾಗ, ಮಹಿಳಾ ವಿಭಾಗವಿದ್ದರೆ ಸಾಕು. ನಾಲ್ಕು ಪುಟಗಳಲ್ಲಿ ಮೊದಲನೆಯ ಪುಟದಲ್ಲಿ ಸಾಹಿತ್ಯ, ಲಲಿತ ಕಲೆಗಳ ಸಂಬಂಧ ಎರಡು ಲೇಖನಗಳು; ಎರಡನೆಯ ಪುಟದಲ್ಲಿ ಸಣ್ಣಕಥೆ, ಕಿರುನಾಟಕ, ಪ್ರಬಂಧಗಳು; ಮೂರನೆಯ

ಪುಟದಲ್ಲಿ ಗ್ರಂಥವಿಮರ್ಶೆ, ಕಲಾವಿಮರ್ಶೆ, ನಾಲ್ಕನೆಯ ಪುಟದಲ್ಲಿ ಅರ್ಧ ಮಹಿಳಾ ವಿಭಾಗ, ಉಳಿದರ್ಧ ಮಕ್ಕಳ ವಿಭಾಗ."

"ನಿಯೋಜನೆ ಚೆನ್ನಾಗಿದೆ - ಖರ್ಚು ಬಹಳ ಬರುತ್ತದಲ್ಲ."

"ಹೌದು - ಖರ್ಚಾಗುತ್ತದೆ. ನಮ್ಮ ಪುರವಣಿ ಪತ್ರಿಕೆಯ ಘನತೆಯನ್ನು ಕಾಪಾಡುತ್ತದೆಂದು ನಾನು ನಂಬಿದ್ದೇನೆ. ಲೇಖಕರಿಗೆ ಗೌರವಧನ (Rayalty) ಕೊಡಬೇಕು."

"ಎಷ್ಟು ಕೊಡಬೇಕು. ಒಂದು ಕಾಲಮ್ಮಿಗೆ (ಕಾಲಮ್ ಎಂದರೆ ಇಪ್ಪತ್ತು ಅಂಗುಲ) ಐದು ರೂಪಾಯಿ ಎಂದು ಗೊತ್ತು ಮಾಡಬಹುದು."

"ವಾರಕ್ಕೆ ಇದೇ ನೂರ ಅರವತ್ತು ರೂಪಾಯಿ - ತಿಂಗಳಿಗೆ ಆರು ನೂರು ನಲವತ್ತು ರೂಪಾಯಿಗಳ ಖರ್ಚು ಬರುವುದಲ್ಲ ಸ್ವಾಮಿ. ಬ್ಲಾಕುಗಳಿಗೆ ಬೇರೆ ಖರ್ಚುಮಾಡಬೇಕು. ಸದ್ಯಕ್ಕೆ ಕಾಲಮ್ಮಿಗೆ ಐದು ರೂಪಾಯಿ ಬೇಡ – ಮೂರು ರೂಪಾಯಿ ಗೊತ್ತುಮಾಡಿ. ಪತ್ರಿಕೆಯ ಸ್ಥಿತಿ ಸುಧಾರಿಸಿದ ಮೇಲೆ ಐದು ರೂಪಾಯಿ ಕೊಡಬಹುದು. – ಅಲ್ಲಿಗೂ ವಾರಕ್ಕೆ ತೊಂಭತ್ತಾರು – ತಿಂಗಳಿಗೆ ಮುನ್ನೂರ ನಲವತ್ತು ನಾಲ್ಕು ರೂಪಾಯಿ ಖರ್ಚು ಬರುತ್ತದೆ."

"ಇದು ವ್ಯರ್ಥದ ಖರ್ಚಾಗುವುದಿಲ್ಲ ಶೆಟ್ಟರೆ...........ಮಹಿಳಾ ಮತ್ತು ಮಕ್ಕಳ ವಿಭಾಗವನ್ನು ಯಾರಿಗೆ ವಹಿಸೋಣ ?"

"ನೋಡಿ - ನಮ್ಮ ಉಪಸಂಪಾದಕರಲ್ಲಿ ಈ ಕೆಲಸ ಯಾರು ಮಾಡಬಹುದೆನ್ನುವುದನ್ನು."

"ಈ ವಿಭಾಗವನ್ನು ಯಾರಾದರೂ ಹೆಣ್ಣುಮಕ್ಕಳು ನಡೆಸುವುದು ಒಳ್ಳೆಯದು."

"ಅಂಥವರು ನಮ್ಮಲ್ಲಿ ಯಾರಿದ್ದಾರೆ ಸ್ವಾಮಿ ?"

"ನನ್ನ ಸಹಧರ್ಮಿಣಿ 'ಸೆಂಚುರಿ' ಪತ್ರಿಕೆಯ 'ಮಹಿಳಾಪುಟ' ನಡೆಸುತ್ತಿದ್ದರು. ಅವರಿಗೇ ಈ ಕೆಲಸ ಒಪ್ಪಿಸಬಹುದು."

"ಬಹಳ ಸಂತೋಷ - ಅವಶ್ಯಕವಾಗಿಯಾಗಲಿ"

ಎಂದು ಶೆಟ್ಟರು ಸಮ್ಮತಿಸೂಚಿಸಿ,

"ರೋಟರಿ ಆರಂಭವಾಗಿದೆ. ನಾನು ಮೆಷೀನ್ ರೂಮಿನಲ್ಲಿರುತ್ತೇನೆ. ಬೇಕಾದರೆ ಹೇಳಿ ಕಳುಹಿಸಿ."

"ಹಾಗೇ ಆಗಲಿ. ನಾನು 'ಪ್ರಧಾನಲೇಖನ' ಮುಗಿಸಿ ನಿಮಗೆ ತಿಳಿಸುತ್ತೇನೆ. ಸಂಪಾದಕವರ್ಗದ ಸಭೆಯನ್ನು ನಿಮ್ಮ ಎದುರಿನಲ್ಲೇ ಕರೆಯಲಿಚ್ಛಿಸುತ್ತೇನೆ."

"ಆಗಬಹುದು ಸ್ವಾಮಿ." ಎಂದು ಹೇಳಿ ಶೆಟ್ಟರು ಹೋದರು.

ಪ್ರಸಾದ್ ಪ್ರಧಾನಲೇಖನ ಸಿದ್ಧಗೊಳಿಸುವುದಕ್ಕೆ ಒಂದು ಗಂಟೆ ಕಾಲ ಹಿಡಿಯಿತು. ಲೇಖನ ಬರೆದುದು ಮುಗಿಯಲು ಶೆಟ್ಟರಿಗೂ, ಸಂಪಾದಕ ವರ್ಗದವರಿಗೂ ಹೇಳಿ ಕಳುಹಿಸಿದ.

ಶೆಟ್ಟರು, ಮ್ಯಾನೇಜರು, ಕ್ಯಾಷಿಯರು, ಪತ್ರವ್ಯವಹಾರದ ಕಾರಕೂನರ ಸಂಗಡ ಬಂದು ಕುಳಿತರು. ನಾಲ್ವರು ಉಪಸಂಪಾದಕರೂ, ರಿಪೋರ್ಟರೂ ಬಂದು ಕುಳಿತರು.

ಪ್ರಸಾದ್ ತನ್ನ ಲೇಖನ ಓದಿ ಹೇಳಿದ.

ಮೊದಲನೆಯ ವಾಕ್ಯಬೃಂದದಲ್ಲಿ ಪತ್ರಿಕಾವೃತ್ತಿಯ ಘನತೆ, ಪಾವಿತ್ರ್ಯ ವಿವರಿಸಿ, ಎರಡನೆಯ ವಾಕ್ಯಬೃಂದದಲ್ಲಿ ಕರ್ನಾಟಕದ ವೈಶಿಷ್ಟ್ಯ ವರ್ಣಿಸಿ

"ಕನ್ನಡ ಪತ್ರಿಕಾ ಪ್ರಪಂಚ ಭಾರತದ ಇತರ ಭಾಷೆಗಳಷ್ಟು ವಿಸ್ತರಿಸದಿದ್ದರೂ ಅವುಗಳಿಗಿಂತ ಹೆಚ್ಚಿನ ಘನತೆ, ಗಾಂಭೀರ್ಯ, ನೀತಿಯನ್ನು ಪರಿಪೋಷಿಸಿಕೊಂಡು ಬಂದಿದೆ. ಬಂಗಾಳಿ, ತಮಿಳು, ಮರಾಟಿ ಪತ್ರಿಕೆಗಳಷ್ಟು ನಮ್ಮ ಪತ್ರಿಕೆಗಳು ಮುನ್ನಡೆದಿಲ್ಲವಾದರೂ, ನಾವು ಸಾಧಿಸಿರುವುದು ಅಲ್ಪವಾದುದಲ್ಲ. **'ಸಂಪದಭ್ಯುದಯ'** ಪತ್ರಿಕೆಯ ಸಂಪಾದಕರಾಗಿದ್ದ ಮೈಸೂರಿನ ವೃದ್ಧಪಿತಾಮಹ ಕೀರ್ತಿಶೇಷ **ಶ್ರೀ ಎಂ. ವೆಂಕಟಕೃಷ್ಣಯ್ಯನವರು** ಪ್ರಜಾಭಿಪ್ರಾಯದ ಕಹಳೆಯನ್ನೂದಿದರು. ಸರ್ಕಾರದ ನಿರಂಕುಶ ಪ್ರಭುತ್ವದ ವಿರುದ್ಧ ಹೋರಾಟ ಹೂಡಿ ಪ್ರಜಾಭಿಪ್ರಾಯವನ್ನು ರೂಪುಗೊಳಿಸಿದರು. **ಶ್ರೀ ಡಿ. ವಿ. ಗುಂಡಪ್ಪನವರು** ತಮ್ಮ ಪಾಂಡಿತ್ಯಪೂರ್ಣವೂ ತೂಕವೂ ಆದ ಬರವಣಿಗೆಯಿಂದ **'ಕರ್ನಾಟಕ'**ಕ್ಕೆ ವಿಶ್ವದ ಮನ್ನಣೆಯನ್ನು ದೊರಕಿಸಿದರು. ಕನ್ನಡಿಗರಲ್ಲಿಯೂ ಇಂಥ ಮೇಧಾವಿಗಳೂ, ನಿಷ್ಣಾತ ವಿಮರ್ಶಕರೂ, ಭಾಷಾಸ್ವಾಮ್ಯವುಳ್ಳವರೂ ಇದ್ದಾರೆಂದು ಹೊರಗಿನ ಜನ ಆಶ್ಚರ್ಯಪಡುವಂತೆ ಮಾಡಿದರು. **ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು** ತಮ್ಮ **'ವಿಶ್ವಕರ್ನಾಟಕ'** ಪತ್ರಿಕೆಯ ಮೂಲಕ ಕನ್ನಡ ಪತ್ರಿಕೆ

ಗಳ ಭಾಷೆಗೆ ಸಾಣೆಕೊಟ್ಟರು. ಗಾಂಭೀರ್ಯ ಬಿಡದೆ, ದುರ್ಭಾಷೆಯನ್ನವಲಂಬಿಸದೆ ಅಭಿಪ್ರಾಯಗಳನ್ನು ಸಾಕಷ್ಟು ಶಕ್ತಿಯುತವಾಗಿ ವ್ಯಕ್ತಗೊಳಿಸಬಹುದೆಂಬುದನ್ನು ಶ್ರೀ ಶರ್ಮರು ತೋರಿಸಿಕೊಟ್ಟರು. **ಶ್ರೀ ಸಾ. ರಾ. ರಾಮಯ್ಯನವರು** ಕಿರುಪ್ರಮಾಣದಲ್ಲಿ '**ತಾಯಿನಾಡು**' ಪತ್ರಿಕೆಯನ್ನಾರಂಭಿಸಿ, ಇಂದು ಅದನ್ನು ದೊಡ್ಡ ರಾಷ್ಟ್ರೀಯ ಸಂಸ್ಥೆಯನ್ನಾಗಿ ಬೆಳೆಸಿದ್ದಾರೆ. ಭಿನ್ನಾಭಿಪ್ರಾಯಗಳಿಗೂ ಎಡೆಕೊಟ್ಟು, ಪತ್ರಿಕೋದ್ಯಮಿ ಅವಲಂಬಿಸಬೇಕಾದ ನಿಷ್ಪಕ್ಷಪಾತವಾದ ದೃಷ್ಟಿಯನ್ನು ಶ್ರೀ ರಾಮಯ್ಯನವರು ಅನ್ಯಾದೃಶವಾಗಿ ಬೆಳೆಸಿದ್ದಾರೆ. ಉತ್ತರ ಕರ್ನಾಟಕದಲ್ಲಿ **ಶ್ರೀ ಆಲೂರು ವೆಂಕಟರಾಯರು** ತಮ್ಮ '**ಜಯ ಕರ್ನಾಟಕ**' ಪತ್ರಿಕೆಯ ಮೂಲಕವೂ, **ಶ್ರೀ ಮುದವೀಡು ಕೃಷ್ಣರಾಯರು** ತಮ್ಮ '**ಕರ್ನಾಟಕ ವೃತ್ತ**'ದ ಮೂಲಕವೂ ಹಲವಾರು ಕಡೆ ಹಂಚಿಹೋಗಿರುವ ಕನ್ನಡ ಜನರನ್ನು ಒಗ್ಗೂಡಿಸಿದ್ದಾರೆ. ಕನ್ನಡ ಜನತೆಯಲ್ಲಿ ಆತ್ಮಗೌರವ, ಆತ್ಮವಿಶ್ವಾಸ, ಆತ್ಮಾವಲಂಬನೆ ಬೆಳೆಯಲು ಶ್ರೀಗಳಾದ ವೆಂಕಟರಾಯರು, ಕೃಷ್ಣರಾಯರು ಮಾಡಿರುವ ಸೇವೆಯನ್ನು ಕನ್ನಡ ಜನ ಸದಾ ಕೃತಜ್ಞತೆಯಿಂದ ಸ್ಮರಿಸಿಕೊಳ್ಳಬೇಕು."

ಶೆಟ್ಟರು ಪುಟ್ಟಣ್ಣನ ಮುಖ ನೋಡಿದರು; ಪುಟ್ಟಣ್ಣ ಶೆಟ್ಟರ ಮುಖ ನೋಡಿದ. ಪ್ರಸಾದ್ ತನ್ನ ಲೇಖನದ ಓದು ಮುಂದುವರಿಸಿದ.

"ಈ ಮಾನ್ಯ ಹಿರಿಯರ ಮೇಲ್ಪಂಕ್ತಿಯನ್ನನುಸರಿಸಿಯೇ '**ಜನಸಂದೇಶ**' ಅಡಿಯಿಡುತ್ತದೆ. ಹಿರಿಯರು ಬೆಳಸಿರುವ ಸತ್ಸಂಪ್ರದಾಯಗಳನ್ನು ಸ್ವಲ್ಪವೂ ಬಿಡದೆ ಪರಿಪಾಲಿಸಿಕೊಂಡು ಹೋಗಬೇಕೆನ್ನುವುದೇ ನಮ್ಮ ಸಂಕಲ್ಪ.

'**ಜನಸಂದೇಶ**' ಸ್ವತಂತ್ರ ಧೋರಣೆಯನ್ನನುಸರಿಸುತ್ತದೆ. ಯಾವ ರಾಜಕೀಯ ಪಕ್ಷ ಅಥವಾ ವ್ಯಕ್ತಿಯ ಮುಖವೀಣೆಯಾಗಿ 'ಜನಸಂದೇಶ' ವಿರಾಜಿಸುವುದಿಲ್ಲ. ಯಾವ ಪಕ್ಷ, ಯಾವ ವ್ಯಕ್ತಿ ದೇಶಕ್ಕೆ ಒಳ್ಳಿತಾಗುವ ಕೆಲಸಮಾಡಿದರೂ ಅದನ್ನು ಪ್ರಶಂಸಿಸುವುದಕ್ಕೆ 'ಜನಸಂದೇಶ' ಹಿಂದೆಗೆಯುವುದಿಲ್ಲ. ಹಾಗೇ ಯಾವ ಪಕ್ಷ, ವ್ಯಕ್ತಿ ದೇಶದ ಹಿತಕ್ಕೆ ವಿಘಾತಕವಾಗಿ ನಡೆದುಕೊಂಡರೆ ಅದನ್ನು ಬಯಲಿಗೆಳೆಯುವುದಕ್ಕೂ 'ಜನಸಂದೇಶ' ಹಿಂಜರಿಯುವುದಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ವ್ಯಕ್ತಿ, ಸಂಸ್ಥೆಗಳೆರಡರ ಜವಾಬ್ದಾರಿಯೂ ಹೆಚ್ಚಿದೆ. ಸ್ವಾತಂತ್ರ್ಯವನ್ನು ಊರ್ಜಿತಪಡಿಸಿಕೊಂಡು, ಭಾರತ ವಿಶ್ವರಾಷ್ಟ್ರಗಳ ಸಮೂಹದಲ್ಲಿ ಗಣ್ಯಸ್ಥಾನ ಪಡೆಯಲು ದುಡಿಯಬೇಕಾದುದು ನಮ್ಮ ಆದ್ಯಕರ್ತವ್ಯವಾಗಿದೆ. ಈ ಪರ್ವಕಾಲದಲ್ಲಿ ಪತ್ರಿಕೆಗಳ ಜವಾಬ್ದಾರಿ ಅತಿ ಹೆಚ್ಚಿನದು. ರಾಷ್ಟ್ರಜೀವನಕ್ಕೆ ಅವಶ್ಯಕವಾದ ವಿಚಾರಶಕ್ತಿಯನ್ನು ನೀಡುವ ಹೊಣೆಗಾರಿಕೆ ಪತ್ರಿಕೆಗಳ ಮೇಲಿದೆ. ರಾಷ್ಟ್ರನಿರ್ಮಾಣೋದ್ಯಮದಲ್ಲಿ '**ಜನಸಂದೇಶ**' ತನ್ನ ಅಳಿಲು ಭಕ್ತಿ, ಮಳಲು ಸೇವೆಯನ್ನರ್ಪಿಸಲು ಸಿದ್ಧವಾಗಿದೆ.

ಇಂದು ಭಾರತೀಯ ಜೀವನದ ಮೇಲೆ ವಿವಿಧ ವಿಚಾರಶಕ್ತಿಗಳ ಆವಾಹನೆಯಾಗುತ್ತಿದೆ. ಕೆಲವು ಕಲ್ಯಾಣಕಾರಕವಾದವು; ಕೆಲವು ವಿನಾಶಕಾರಕವಾದವು. ನಮ್ಮ ರಾಷ್ಟ್ರದ ಸಂಪತ್ತಿನ ಸಮಾನ ಹಂಚಿಕೆಯಾಗಬೇಕು – ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗೂ ಆಹಾರ, ವಸ್ತ್ರ, ವಸತಿ, ವಿಹಾರ, ವಿದ್ಯಾಭ್ಯಾಸ ಸೌಕರ್ಯವಿರಬೇಕೆನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಈ ಸೌಕರ್ಯಗಳನ್ನು ಕಲ್ಪಿಸುವುದು ಹೇಗೆ? ಭಾರತ ಪರಂಪರಾಗತವಾಗಿ ಬಂದಿರುವ ತನ್ನ ಭವ್ಯ ಸಂಸ್ಕೃತಿಯ ಬೆಳಕಿನಲ್ಲಿ ಮುನ್ನಡೆಯಬೇಕೇ? ಅಥವಾ – ಹೊರಗಣ ಬೆಳಕನ್ನು ತಂದುಕೊಂಡು, ಹೊರಗಿನವರ ಕ್ರಿಯಾರೂಪವನ್ನು ಅಳವಡಿಸಿಕೊಂಡು ಜನಹಿತವನ್ನು ಸಾಧಿಸಬೇಕೇ? ಭಾರತ ತನ್ನ ಭಾರತೀಯತೆಯನ್ನು ಉಳಿಸಿ ಬೆಳಸಿಕೊಳ್ಳುವುದು ಹೇಗೆ? ಎನ್ನುವ ಮಹತ್ತ್ವದ ಪ್ರಶ್ನೆಗಳಿದ್ದಿವೆ. 'ಜನಸಂದೇಶ' ಈ ಪ್ರಶ್ನೆಗಳ ಯಥಾರ್ಥ ಪರಿಚಯ ಮಾಡಿಕೊಡುವುದಲ್ಲದೆ, ತನ್ನ ಶಕ್ತ್ಯನುಸಾರ ಉತ್ತರಿಸಲೂ ಪ್ರಯತ್ನಿಸುತ್ತದೆ.

ಉಪಸಂಪಾದಕ ವಿಶ್ವೇಶ್ವರಯ್ಯ ಸ್ಫೂರ್ತಿಗೊಂಡು "Hear - Hear – ಬಹಳ ಚೆನ್ನಾಗಿದೆ ಸರ್ – ಬಹಳ ಚೆನ್ನಾಗಿದೆ" ಎಂದು ಪ್ರಶಂಸಿಸಿದ."

ಶೆಟ್ಟರು ಸಣ್ಣಧ್ವನಿಯಲ್ಲಿ

"ಲೇಖನ ಚೆನ್ನಾಗಿದೆ. ನಮ್ಮ ಧ್ಯೇಯ ಧೋರಣೆಯನ್ನು ತಾವು ಸ್ಪಷ್ಟವಾಗಿ ವಿವರಿಸಿದ್ದೀರಿ. ಆದರೆ ಎರಡನೆಯ ಪ್ಯಾರಾದಲ್ಲಿ ತಾವು ಹೇಳಿರುವ ವಿಷಯ ಅವಶ್ಯಕವೇ?"

"ಯಾವದು - ಕನ್ನಡ ಪತ್ರಿಕೆಗಳ ಮೊದಲಿಗರ ಬಗ್ಗೆ ಬರೆದಿರುವುದೇ ?"

"ಹೂ - ಅದೇ ಪ್ಯಾರಾ."

"ಅವರು ನನ್ನ ಗುರುಸ್ವರೂಪರು ಶೆಟ್ಟರೇ. ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಅಡಿಯಿಡುವವರೆಲ್ಲ ಗುರುಸ್ವರೂಪರು. ಅವರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯನ್ನನುಸರಿಸಿದರೆ ನಮಗೆ ಶ್ರೇಯಸ್ಸೆಂದು ನಾನು ನಂಬಿದ್ದೇನೆ. ಹಿರಿಯರ ಬಗ್ಗೆ ಒಂದು ಗೌರವದ ಮಾತು ಆಡುವುದಕ್ಕೆ ನಾವೇಕೆ ಕಾರ್ಪಣ್ಯ ತೋರಿಸಬೇಕು."

"ಪ್ರಸಾದರು ಹೇಳುವುದು ನಿಜ - ಅದು ಇರಲಿ ಸಾರ್."

ಎಂದು ಉಪಸಂಪಾದಕ ಬಸಪ್ಪ ಅಭಿಪ್ರಾಯ ವ್ಯಕ್ತಪಡಿಸಿದ.

"ಆಗಲಿ ಸ್ವಾಮಿ ತಮ್ಮಿಷ್ಟ"

ಎಂದು ಶೆಟ್ಟರು ಅಂಗೀಕಾರ ಸೂಚಿಸಿ ಪ್ರಧಾನ ಲೇಖನ ತೆಗೆದುಕೊಂಡು ಕಂಪೋಸಿಂಗ್ ರೂಮಿಗೆ ಹೋದರು.

ಶೆಟ್ಟರು ಸಿದ್ಧಮಾಡಿದ್ದ ಡಮ್ಮಿಯನ್ನು ಮೇಜಿನ ಮೇಲೆ ಬಿಚ್ಚಿಟ್ಟುಕೊಂಡು ಪ್ರಸಾದ್ ಉಪಸಂಪಾದಕರನ್ನು ಹತ್ತಿರ ಕರೆದು

"ಮೊದಲನೆಯ ಪುಟದಲ್ಲಿ ಪ್ರಧಾನ ಸುದ್ದಿಗಳಿರಬೇಕು. ಟೆಲಿಗ್ರಾಮ್‌ಗಳನ್ನು ಅನುವಾದಿಸಿ, ಉಚಿತ ತಲೆಬರಹಗಳನ್ನು ಕೊಡುವ ಕೆಲಸ ನಿಮ್ಮದು ಪುಟ್ಟಣ್ಣನವರೇ."

"ಆಗಬಹುದು ಸರ್. ಆದರೆ ಈ ಕೆಲಸಕ್ಕೆ ಒಬ್ಬರು ಸಾಲದು."

"ಹೌದು. ಸೂರ್ಯನಾರಾಯಣರು ನಿಮಗೆ ನೆರವಾಗುತ್ತಾರೆ."

"ಎರಡನೆಯ ಪುಟದಲ್ಲಿ ಪ್ರಧಾನಲೇಖನ ಮತ್ತು ಸಂಪಾದಕೀಯ ಟಿಪ್ಪಣಿಗಳು ಎರಡು ಕಾಲಮ್ ನನಗಿರಲಿ – ಸದ್ಯಕ್ಕೆ 'ಹಿನ್ನೆಲೆ'ಯ ಲೇಖನಗಳನ್ನು ನಾನೇ ಬರೆಯುತ್ತೇನೆ. ಅದು ಎರಡು ಕಾಲಮ್ - ಉಳಿದ ನಾಲ್ಕು ಕಾಲಮ್‌ಗಳು ಮುಖ್ಯ ಭಾಷಣಗಳ ವರದಿ - ನಾಯಕರ ಹೇಳಿಕೆಗಳು - ಮಹೋತ್ಸವಗಳ ವರದಿಗೆ ವಿನಿಯೋಗವಾಗಲಿ. ವಿಶ್ವೇಶ್ವರಯ್ಯ, ನಂಜಪ್ಪನವರು ಇದರ ಜವಾಬ್ದಾರಿ ಹೊರಬೇಕು. – ಮೂರನೆಯ ಪುಟದಲ್ಲಿ ಪೇಟೆ ಧಾರಣೆ, ಆಲ್ ಇಂಡಿಯಾ ರೇಡಿಯೋ ಸುದ್ದಿಗಳು, ಸ್ಥಳೀಯ ಸುದ್ದಿಗಳು ಮತ್ತು ಪತ್ರ ವ್ಯವಹಾರ, ಈ ಭಾಗವನ್ನು ಬಸಪ್ಪನವರು ನೋಡಿಕೊಳ್ಳಲಿ."

ಉಪಸಂಪಾದಕರು ತಮ್ಮ ಒಪ್ಪಿಗೆ ಸೂಚಿಸಿದರು.

"ಕೊನೆಯದಾಗಿ, ಉಪಸಂಪಾದಕ ಮಿತ್ರರಿಗೆ ಒಂದು ಮಾತು ಹೇಳ ಬಯಸುತ್ತೇನೆ. ನಾನು ಪತ್ರಿಕೆಯ ಸಂಪಾದಕನಾಗಿದ್ದರೂ ನಿಮ್ಮಲ್ಲಿ ಒಬ್ಬ ನಾಗಿದ್ದೇನೆ. ಈ ಪತ್ರಿಕೆಗೆ ದುಡಿಯುವ ಪ್ರತಿಯೊಬ್ಬರಿಗೂ ಸಮಾನಸ್ಥಾನ ವಿದೆ. ಪತ್ರಿಕೆ ನಮ್ಮೆಲ್ಲರ ಪ್ರಯತ್ನದ ಫಲ. ಪರಸ್ಪರ ಸೌಹಾರ್ದ ಸಹಾನು ಭೂತಿಯಿಂದ ನೀವು ಸಹಕಾರ ನೀಡಬೇಕು."

ಎಂದು ಹೇಳಿ ಪಳನಿಸಾಮಿಯನ್ನು ಕರೆದು ಎಲ್ಲರಿಗೂ ಕಾಫಿ ತರಿಸಿ ಕೊಟ್ಟು

"ಇವತ್ತು ಎಲ್ಲರೂ ರಜಾ ತೆಗೆದುಕೊಳ್ಳಿರಿ. ನಾಳೆ ಬೆಳಿಗ್ಗೆಯಿಂದ ಕ್ರಮವಾಗಿ ಕೆಲಸಕ್ಕೆ ತೊಡಗೋಣ."

ಎಂದು ಹೇಳಿ ಕಂಪೋಸಿಂಗ್ ರೂಮಿನಲ್ಲಿದ್ದ ಯಜಮಾನರನ್ನು ಕಂಡು ಅವರ ಅಪ್ಪಣೆ ಪಡೆದು ಮನೆಗೆ ಹೊರಟ.

ಲಲಿತಮ್ಮನ ಜತೆಯಲ್ಲಿ ಮಾತನಾಡುತ್ತ ಕುಳಿತಿದ್ದ ಗುಂಡಯ್ಯನನ್ನು ನೋಡಿ

"ಯಾವಾಗ ಬಂದೆ ಗುಂಡೂ" ಎಂದು ಕೇಳಿದ.

"ಹನ್ನೊಂದು ಗಂಟೆಗೆ ಸರಿಯಾಗಿ ಬಂದೆನಪ್ಪಾ."

"ಆಫೀಸಿಗೆ ಬಂದು ಬಿಟ್ಟಿದ್ದರೆ........ಲೀಡರ್ ಬರೆಯಬೇಕಾಗಿತ್ತು, ಉಪಸಂಪಾದಕರಿಗೆ ಕೆಲಸ ಹಂಚಬೇಕಾಗಿತ್ತು."

"ನಿನ್ನ ಕೆಲಸಕ್ಕೆ ತೊಂದರೆಮಾಡಬಾರದೆಂದು ಆಫೀಸಿಗೆ ಬರಲಿಲ್ಲ. ತಂಗಿಯನ್ನು ನೋಡಿ ಬಹಳ ದಿವಸಗಳಾಗಿತ್ತು. ಗೃಹಕೃತ್ಯ ಮಾತನಾಡುತ್ತ ಕುಳಿತೆ."

ಪತ್ರಿಕೆಯಲ್ಲಿ ಮಾಡಿದ್ದ ವ್ಯವಸ್ಥೆಯನ್ನು ವಿವರಿಸುತ್ತಾ ಪ್ರಸಾದ್, ಮಹಿಳಾಪುಟ, ಮಕ್ಕಳ ಪುಟವನ್ನು ಲಲಿತಮ್ಮನಿಗೆ ಒಪ್ಪಿಸಿರುವ ವಿಷಯವನ್ನು ತಿಳಿಸಿದ. ಲಲಿತಮ್ಮ ಚಿಂತಾಕ್ರಾಂತಳಾಗಿ

"ನನಗೇಕೆ ಈ ಕೆಲಸ ಈಗಲೇ ಅಂಟಿಸಿದಿರಿ" ಎಂದು ಕೇಳಿದಳು.

"ನಿನ್ನ ಕೆಲಸ ನಿನಗೆ ಒಪ್ಪಿಸಿದ್ದೇನೆ."

"ಅದನ್ನು ನಿರ್ವಹಿಸಲು ನಾನು ಅನುಮಾನಿಸುತ್ತಿಲ್ಲ. ನಿಮ್ಮ ಮೇಲೆ ಇಲ್ಲಸಲ್ಲದ ಆಕ್ಷೇಪಣೆ ಬರಲು ಅವಕಾಶವಾಗುತ್ತದೆ."

"ನಿನಗಿಂತ ಈ ಕೆಲಸ ದಕ್ಷತೆಯಿಂದ ನಡೆಸುವವರು ಯಾರೂ ನನಗೆ ಗೊತ್ತಿಲ್ಲವಲ್ಲ."

"ಅವನು ಹೇಳುತ್ತಿರುವುದು ನಿಜ ಅಕ್ಕಾ. ಆ ವಿಭಾಗ ನಿಮ್ಮಷ್ಟು ಚೆನ್ನಾಗಿ ಬೇರೆಯವರು ನಡೆಸಲಾರರು"

ಎಂದು ಗುಂಡಯ್ಯ ಖಾಜಿನ್ಯಾಯ ಮಾಡಿದ.

ಪ್ರಸಾದ್ ಗುಂಡಯ್ಯನ ಕಡೆ ತಿರುಗಿ

"ನಾವು ಪತ್ರಿಕೆಯ ಕೆಲಸಕ್ಕೆ ಇನ್ನೂ ಒಬ್ಬಿಬ್ಬರನ್ನು ತೆಗೆದುಕೊಳ್ಳ ಬೇಕಾಗುತ್ತದೆ ಗುಂಡಯ್ಯ."

"ಈಗ ಉಪಸಂಪಾದಕರು ಎಷ್ಟು ಜನರಿದ್ದಾರೆ ?"

"ನಾಲ್ವರಿದ್ದಾರೆ. ನಾಲ್ವರಿಗೂ ಕೈತುಂಬ ಕೆಲಸವಿದೆ. ಒಬ್ಬಿಬ್ಬರನ್ನು ಹೆಚ್ಚಿಗೆ ತೆಗೆದುಕೊಳ್ಳದಿದ್ದರೆ ಈ ನಾಲ್ವರೂ ಅತಿಯಾಗಿ ದುಡಿದು ಕಾಹಿಲೆ ಬೀಳಬಹುದು."

"ಪತ್ರಿಕೆ ಒಂದೆರಡು ತಿಂಗಳು ನಡೆದ ಮೇಲೆ ನೀನು ಈ ಸೂಚನೆ ಮಾಡುವುದು ಒಳ್ಳೆಯದು."

"ಸದ್ಯಕ್ಕೆ 'ವಾರಾಂತ್ಯದ ಪುರವಣಿ' ನೋಡಿಕೊಳ್ಳುವುದಕ್ಕೇ ನನಗೊಬ್ಬರು ಬೇಕು. ಸಾಹಿತ್ಯ, ಕಲಾವಿಭಾಗ ಬಹಳ ಚೆನ್ನಾಗಿ ಮಾಡಬೇಕೆಂಬ ಆಸೆಯಿದೆ ?"

"ಆ ಕೆಲಸ ದಕ್ಷತೆಯಿಂದ ನಿರ್ವಹಿಸಬಲ್ಲವರು ಒಬ್ಬರಿದ್ದಾರೆ, ಆದರವರು ಪತ್ರಿಕಾ ಕಛೇರಿ ಸೇರುವುದಕ್ಕೆ ಒಪ್ಪುತ್ತಾರೆಯೋ ಇಲ್ಲವೋ ?"

"ಯಾರವರು ?"

"ಸುದರ್ಶನ್. ನೀನು ಅವರ ಕೃತಿಗಳನ್ನು ಓದಿರಬಹುದು."

"ಓದಿದ್ದೇನೆ - ಅವರ 'ಶ್ರೀರಾಮ ಪಾದುಕಾ ಪಟ್ಟಾಭಿಷೇಕ' ಚಿತ್ರವನ್ನು ನಾನು ಮುಂಬಯಿಯಲ್ಲಿ ನೋಡಿದ್ದೇನೆ............ನಾನು ಹೊರಗಿನವರನ್ನು ಕುರಿತು ಯೋಚಿಸುತ್ತಿರಲಿಲ್ಲ ಗುಂಡಣ್ಣ."

"ಯಾರನ್ನು ಕುರಿತು ಯೋಚಿಸುತ್ತಿರುವೆ ?"

"ನಿನ್ನನ್ನು."

"ಉಪಾಧ್ಯಾಯ ವೃತ್ತಿ ಬಿಟ್ಟು ಈಗ ಪತ್ರಿಕಾ ಪ್ರಪಂಚಕ್ಕೆ ಧುಮ್ಮಿಕ್ಕಲೇ ?"

"ಅದರಲ್ಲಿ ತಪ್ಪೇನು ?"

"ನಿಮ್ಮ ಪ್ರಪಂಚ ನಮ್ಮದರಷ್ಟು ಸ್ಥಿರವಲ್ಲ. ಈಗ ಕೆಲಸ ಮಾಡಲಿ ಬಿಡಲಿ ತಿಂಗಳ ಸಂಬಳ ಕೈಗೆ ಬರುತ್ತದೆ."

"ಮನಸ್ಸಿನಲ್ಲಿರುವುದನ್ನು ಸ್ಪಷ್ಟವಾಗಿ ಹೇಳಿ ಗುಂಡಣ್ಣನವರೇ."

ಎಂದು ಲಲಿತ ಸೂಚಿಸಿದಳು.

"ಯಾವ ವಿಷಯ ?"

"ಶೆಟ್ಟರು ಹೇಗೆ ಎಂದು ಕೇಳಿದೆ. ಗುಂಡಣ್ಣನವರು ಅವರ ವಿಷಯ ಕೆಲವು ಸ್ವಾರಸ್ಯವಾದ ವಿಷಯಗಳನ್ನು ಹೇಳಿದರು."

"ಹೇಳಪ್ಪಾ."

"ನಿನಗೂ ಪ್ರೊಪ್ರೈಟರಿಗೂ ನಾನೇ ಒಡಕು ಹುಟ್ಟಿಸಿದಂತಾಗಬಾರದು. ಶೆಟ್ಟರ ನಿಜವಾದ ಗುಣವನ್ನು ನೀನು ತಿಳಿದುಕೊಂಡಿದ್ದರೆ ಒಳ್ಳೆಯದೆಂದು ಅಕ್ಕನ ಹತ್ತಿರ ಹೇಳಿದೆ."

"ಅದನ್ನೇ ನನಗೂ ಹೇಳಯ್ಯಾ - ಪರವಾಯಿಲ್ಲ."

"ಗೋಪಾಲಶೆಟ್ಟರ ದಕ್ಷತೆಯ ಬಗ್ಗೆ ಭಿನ್ನಾಭಿಪ್ರಾಯವೇ ಇಲ್ಲ. ಇದೊಂದು ಅಸಾಧಾರಣ ವ್ಯಕ್ತಿ. ಬೆರಳು ತೋರಿಸಿದರೆ ಹಸ್ತನುಂಗುತ್ತಾನೆ. ಈ ಪತ್ರಿಕೆಯನ್ನು ಅವರು ಯಶಸ್ವಿಮಾಡುವುದು ಮಾತ್ರವೇ ಅಲ್ಲ - ಕನ್ನಡದ ಪತ್ರಿಕಾಪ್ರಪಂಚದಲ್ಲಿ ಇದಕ್ಕೆ ಪ್ರಥಮಸ್ಥಾನ ದೊರಕಿಸುತ್ತಾರೆ - ಆದರೆ ಶೆಟ್ಟರು ಪತ್ರಿಕೆಯನ್ನು ನಂಬಿಕೊಂಡು ಕುಳಿತಿದ್ದಾರೆಂದು ಭಾವಿಸಿದ್ದೀಯೇನು ?"

"ನೀನು ಹೇಳುವುದು ನನಗರ್ಥವಾಗಲಿಲ್ಲ. ಸಾವಿರಾರು ರೂಪಾಯಿ ಬಂಡವಾಳ ಹಾಕಿ ಒಂದು ಪತ್ರಿಕೆಯನ್ನು ಹುಡುಗಾಟಕ್ಕೆಗೆ ಯಾರಾದರೂ ಆರಂಭಿಸುತ್ತಾರೆಯೇ ? ನನಗೆ ತಿಳಿದಂತೆ ಶೆಟ್ಟರು ಈ ಪತ್ರಿಕೆಗೆ ಈಗಾಗಲೇ ಒಂದು ಲಕ್ಷ ರೂಪಾಯಿ ಸುರಿದಿದ್ದಾರೆ."

"ಅದರ ನೂರರಷ್ಟು ಬಾಚಿಕೊಳ್ಳುತ್ತಾರೆ ಪ್ರಸಾದ್. ಪತ್ರಿಕೆ ಶೆಟ್ಟರ ಜೀವನದ ಏಣಿಯಲ್ಲಿ ಒಂದು ಹಂತ ಮಾತ್ರ. ನಿನಗೂ ನನಗೂ ಪತ್ರಿಕೆಯೇ

ಮೊದಲು - ಅದೇ ಕೊನೆ. ದೈನಂದಿನ ಪತ್ರಿಕೆ ಒಂದು ಮಹಾಸ್ತ್ರವಿದ್ದಂತೆ. ಈ ಅಸ್ತ್ರ ಕೈಯಲ್ಲಿ ಹಿಡಿದು ಶೆಟ್ಟರು ಮೈಸೂರಿನ ದಿಗ್ವಿಜಯ ಮಾಡಲು ಹೊರಟಿದ್ದಾರೆ."

"ಶೆಟ್ಟರು ಅಂಥವರೇನು ?"

"ಸ್ವಕಾರ್ಯ ಸಾಧಿಸುವುದರಲ್ಲಿ ಈ ಮನುಷ್ಯ ನಿಸ್ಸೀಮ. ಹಣಕಾಸಿನ ವಿಷಯದಲ್ಲಿ ಮಹಾಜಿನುಗು."

"ಹಾಗೇನು ?"

"ಗೋಪಾಲಸೆಟ್ಟರ ವ್ಯವಹಾರ ಇಲ್ಲಿ ನಾಣ್ಣುಡಿಯಾಗಿದೆ."

"ನನ್ನ ವಿಷಯದಲ್ಲಿ ಬಹಳ ಔದಾರ್ಯದಿಂದ ವರ್ತಿಸಿದ್ದಾರೆ."

"ಸಿಂಹವನ್ನು ಬೋನಿಗೆ ಕೆಡವಬೇಕಾದರೆ, ದೊಡ್ಡ ತುಂಡು ಮಾಂಸ ತೋರಿಸಲೇಬೇಕು. ನನ್ನ ಸ್ವಂತ ಅನುಭವ ಹೇಳುತ್ತೇನೆ ಕೇಳು. ಇವರು ನಡಸುತ್ತಿದ್ದಾರಲ್ಲಾ ವಾರಪತ್ರಿಕೆ 'ಜನಜೀವಾಳ' ಇದರ ಪುರವಣಿಯಾಗಿ ಪ್ರತಿ ದೀಪಾವಳಿಗೂ ಒಂದು ವಿಶೇಷ ಸಂಚಿಕೆ ಹೊರಡಿಸುತ್ತಾರೆ. ಎರಡು ವರ್ಷಗಳ ಕೆಳಗೆ ಎಲ್ಲ ಲೇಖಕರನ್ನು ಕೇಳಿದಂತೆ ನನ್ನನ್ನೂ ಲೇಖನಕ್ಕಾಗಿ ಕೇಳಿದರು. ಇಪ್ಪತ್ತು ರೂಪಾಯಿ ಸಂಭಾವನೆ ಕೊಡಲೊಪ್ಪಿ ಶೆಟ್ಟರು ಪತ್ರ ಬರೆದಿದ್ದರು - ಅನಂತರ ತಾವೇ ಬಂದು, ನನ್ನನ್ನು ಕಂಡು ಲೇಖನ ಬೇಡಿದರು. ನಾನು ಸ್ವಲ್ಪ ಕಷ್ಟಪಟ್ಟು 'ಭಾರತೀಯ ಸಾಹಿತ್ಯದಲ್ಲಿ ಪೌರುಷ ಪ್ರತಿಪಾದನೆ' ಎಂಬ ಲೇಖನ ಬರೆದೆ."

"ಆ ಲೇಖನ ನಾನು ಓದಿದ್ದೇನೆ ಗುಂಡಣ್ಣ."

"ದೀಪಾವಳಿ ಸಂಚಿಕೆ ಪ್ರಕಟವಾದ ಎರಡು ತಿಂಗಳ ಮೇಲೆ ನನ್ನ ಹೆಸರಿಗೆ ಐದು ರೂಪಾಯಿಗೆ ಒಂದು ಚೆಕ್ ಬಂತು - ದೀಪಾವಳಿ ಸಂಚಿಕೆಯ ಲೇಖನಕ್ಕೆ ಸಂಭಾವನೆ. ನಾನು ಚೆಕ್ ಹಿಂದಕ್ಕೆ ಕಳುಹಿಸಿ, ಶೆಟ್ಟರು ಕೊಡಲೊಪ್ಪಿದ್ದ ಇಪ್ಪತ್ತು ರೂಪಾಯಿಗಳ ಬಗ್ಗೆ ಪ್ರಸ್ತಾಪಿಸಿ ಕಾಗದ ಬರೆದೆ. – ಶೆಟ್ಟರು ಏನುಮಾಡಿದರು ಬಲ್ಲೆಯಾ ?"

"ಇಪ್ಪತ್ತು ರೂಪಾಯಿಗಳಿಗೆ ಚೆಕ್ ಕಳಿಸಿರಬೇಕು."

"ಅದೇ ಸ್ವಾರಸ್ಯ. ಆ ಐದುರೂಪಾಯಿಗಳ ಚೆಕ್ಕನ್ನೂ ಕಿಸೆಸೇರಿಸಿ ತೆಪ್ಪಗೆ ಕುಳಿತರು."

"ಕೊನೆಗೂ ಹಣ ಕಳಿಸಲಿಲ್ಲವೇ ?"

"ಇದುವರೆಗೂ ಇಲ್ಲ. ಇದು ನನ್ನೊಬ್ಬನ ಅನುಭವವಲ್ಲ. ಇನ್ನೂ ಒಂದು ಸ್ವಾರಸ್ಯವಾದ ವಿಷಯ ಹೇಳುತ್ತೇನೆ ಕೇಳು. ಶೆಟ್ಟರ 'ಜನಜೀವಾಳ' ಕಛೇರಿಯಲ್ಲಿ ಒಬ್ಬ ಸಾಬಿ ಆಳಾಗಿದ್ದ. ಮನುಷ್ಯ ತುಂಬ ಯೋಗ್ಯ. ಅವನಿಗೆ ಸಂಬಳ ತಿಂಗಳಿಗೆ ಹನ್ನೆರಡು ಎಂದು ಶೆಟ್ಟರು ಗೊತ್ತುಮಾಡಿದರು. ಮೊದಲು ಕೆಲವು ತಿಂಗಳು ಸಂಬಳ ಸಲೀಸಾಗಿ ಕೊಟ್ಟರು. ಆಮೇಲೆ ಆರಂಭವಾಯಿತು ಸಾಬಣ್ಣನ ಗ್ರಹಚಾರ. ಹನ್ನೆರಡು ರೂಪಾಯಿಗಳನ್ನು ನಾಲ್ಕಾರು ಕಂತು ಗಳಲ್ಲಿ ಕೊಡಲಾರಂಭಿಸಿದರು. ಅದನ್ನೂ ಸಹಿಸಿಕೊಂಡು ಸಾಬಣ್ಣ ಕೆಲಸ ಮಾಡಿಕೊಂಡು ಹೋಗುತ್ತಿದ್ದ. ಕೊನೆಕೊನೆಗೆ ಸಂಬಳ ಪೂರ್ತಿಕೊಡುವ ಅಭ್ಯಾಸವೇ ಶೆಟ್ಟರಿಗೆ ಹೋಗಿಬಿಟ್ಟಿತು. ಸಾಬಣ್ಣನದು ಮೂವತ್ತು ರೂಪಾಯಿ ಯಷ್ಟು ಬಾಕಿ ಉಳಿಯಿತು. ಒಂದು ದಿನ ಯಾವದೋ ಕುಂಟು ನೆಪಮಾಡಿ ಕೊಂಡು ಶೆಟ್ಟರು ಸಾಬಣ್ಣನನ್ನು ಕೆಲಸದಿಂದ ತೆಗೆದುಹಾಕಿದರು. ಅದಕ್ಕೂ ಸಾಬಣ್ಣ ಉಸಿರೆತ್ತಲಿಲ್ಲ. 'ಬಾಕಿಕೊಟ್ಟುಬಿಡಿ ಸ್ವಾಮಿ. ಗರೀಬ - ಎಲ್ಲಾದರೂ ಬದುಕಿಕೊಳ್ಳುತ್ತೇನೆ' ಎಂದು ಅಂಗಲಾಚಿ ಬೇಡಿಕೊಂಡ. ಶೆಟ್ಟರು ಇವತ್ತು – ನಾಳೆ ಎಂದು ಸತಾಯಿಸಲಾರಂಭಿಸಿದರು. ಶೆಟ್ಟರ ಆಫೀಸಿಗೆ ಅಲೆದಲೆದು ಸಾಬಣ್ಣನಿಗೆ ಸಾಕಾಗಿ ಹೋಯಿತು. ಒಂದು ದಿನ ಅವನು ಮುಖ ಕೆಂಪಗೆ ಮಾಡಿಕೊಂಡು ಆಫೀಸಿಗೆ ಬಂದ. ಅವತ್ತು ನಾನೂ ಆಫೀಸಿನಲ್ಲೇ ಇದ್ದೆ. ಸಾಬಣ್ಣನ ಮಗುವಿಗೆ ಸಖತ್ ಕಾಹಿಲೆ – ಮನೆಯಲ್ಲಿ ಒಂದು ಕಾಳು ಅಕ್ಕಿ ಯಿಲ್ಲ – ಡಾಕ್ಟರು ಇಂಜಕ್ಷನ್ ಟ್ಯೂಬುಗಳಿಗೆ ಬರೆದುಕೊಟ್ಟಿದ್ದರು. ಈ ಪರಿಸ್ಥಿತಿಯಲ್ಲಿದ್ದ ಸಾಬಣ್ಣ ತನ್ನ ಗೋಳು ನಿವೇದಿಸಿಕೊಂಡು ಹಣ ಬೇಡಿದ. ಶೆಟ್ಟರು ನಿರ್ದಾಕ್ಷಿಣ್ಯವಾಗಿ ನಿರಾಕರಿಸಿದರು. ಸಾಬಣ್ಣ ನಮ್ಮ ಕಡೆ ತಿರುಗಿ ದುಃಖ ತೋಡಿಕೊಂಡ. ಶೆಟ್ಟರು ಕೆರಳಿ ಸಾಬಣ್ಣನನ್ನು ಬಾಯಿಗೆ ಬಂದಂತೆ ಬಯ್ದರು. ಸಾಬಣ್ಣನ ತಾಳ್ಮೆ ಮೀರಿತು. ಕಾಲಿನಲ್ಲಿದ್ದ ಚಪ್ಪಲಿ ಕಳಚಿ ಕೊಂಡು ಶೆಟ್ಟರಿಗೆ ಚೆನ್ನಾಗಿ ಪೂಜೆಮಾಡಿದ. ನಾವು ಹೋಗಿ ಬಿಡಿಸಿಕೊಂಡು, ಸಾಬಣ್ಣನಿಗೆ ಸಮಾಧಾನ ಹೇಳಿ ಕಳಿಸಬೇಕಾಯಿತು."

"ಕೊನೆಗೂ ಅವನ ಬಾಕಿ ತೀರಿಸಲಿಲ್ಲ."

"ಸಾಬಣ್ಣ ಆಫೀಸಿಗೆ ಬರುವುದನ್ನೇ ಬಿಟ್ಟುಬಿಟ್ಟ. ಶೆಟ್ಟರಿಗೆ ಅನುಕೂಲವೇ ಆಯಿತು."

"ಹಾವಿನ ನೆಳಲು ಆಶ್ರಯಿಸಿ ಬಂದಂತಾಯಿತಲ್ಲಾ ಗುಂಡಣ್ಣನವರೇ" ಎಂದು ಲಲಿತಮ್ಮ ಮರುಗಿದಳು.

"ಶೆಟ್ಟರ ವಿಷಯ ಇನ್ನೂ ಇದೆ – ಸಾವಕಾಶವಾಗಿ ಹೇಳುತ್ತೇನೆ."

ಲಲಿತಮ್ಮ ಎಲೆ ಹಾಕಿಸಲು ಒಳಗೆ ಹೋದಳು. ಗುಂಡಣ್ಣ, ಪ್ರಸಾದನ ಸಮೀಪಕ್ಕೆ ಬಂದು ಪಿಸುಮಾತಿನಲ್ಲಿ

"ಅಕ್ಕನನ್ನು ಮಾತ್ರ ಆಫೀಸಿಗೆ ಕರೆದುಕೊಂಡು ಹೋಗಬೇಡ – ಶೆಟ್ಟರನ್ನು ಮನೆ ಸೇರಿಸಬೇಡ."

"ಏಕೆ ಗುಂಡಣ್ಣ."

"ಅದೆಲ್ಲಾ ದೊಡ್ಡ ಕಥೆ - ನಿಧಾನವಾಗಿ ಹೇಳಬೇಕು. ಮನೆಯಲ್ಲಿ ಹೇಳುವ ವಿಷಯವೂ ಅಲ್ಲ. ನಾನು ಹೇಳಿದ ವಿಷಯದಲ್ಲಿ ಮಾತ್ರ ಜಾಗರೂಕನಾಗಿರು."

"ಇವೆಲ್ಲಾ ನನಗೆ ಗೊತ್ತಿದ್ದರೆ ನಾನು ಬೆಂಗಳೂರಿಗೆ ಬರುತ್ತಲೇ ಇರಲಿಲ್ಲ."

"ಚಿಂತೆಯಿಲ್ಲ - ಬಂದದ್ದಾಯಿತು. ನಿನ್ನ ಎಚ್ಚರದಲ್ಲಿ ನೀನಿದ್ದರಾಯಿತು."

ಪ್ರಸಾದನ ಮನಸ್ಸು ಅಲ್ಲಕಲ್ಲೋಲವಾಯಿತು. 'ಎಂಥ ಅನುಚಿತ ಕೆಲಸಮಾಡಿದೆ' ಎಂದು ಒಳಗೇ ದುಃಖಿಸಿದ.

ಪ್ರಸಾದ್ ಮತ್ತು ಗುಂಡಯ್ಯ ಊಟ ಮುಗಿಸಿ ಕುಳಿತುಕೊಳ್ಳುವಷ್ಟರಲ್ಲಿ ಪಳನಿಸ್ವಾಮಿ ಪ್ರಧಾನ ಲೇಖನದ ಪ್ರೂಫ್ ತಂದಿತ್ತ. ಪ್ರಸಾದ್ ಪ್ರೂಫನ್ನು ತಿದ್ದಿ ಗುಂಡಯ್ಯನಿಗೆ ತೋರಿಸಿ ಹಿಂದಕ್ಕೆ ಕಳುಹಿಸಿಕೊಟ್ಟ.

"ಶೆಟ್ಟರು ಲೇಖನ ನೋಡಿದರೇ ?"

"ನೋಡಿ - ಅವರೇ ಕಂಪೋಸಿಂಗ್‌ಗೆ ತೆಗೆದುಕೊಂಡು ಹೋದರು."

"ಏನು ಹೇಳಿದರು ?"

"ಶ್ರೀಮಾನ್ ವೆಂಕಟಕೃಷ್ಣಯ್ಯನವರು ಮತ್ತು ಇತರರ ವಿಷಯ ಇರಬೇಕೇ ಎಂದು ಕೇಳಿದರು."

"ಆಫೀಸಿನಲ್ಲಿ ಮಿಕ್ಕವರು ಏನು ಹೇಳಿದರು."

"ಯಾರೂ ಭಿನ್ನಾಭಿಪ್ರಾಯ ಸೂಚಿಸಲಿಲ್ಲ. ವಿಶ್ವೇಶ್ವರಯ್ಯನವರು ಸಂತೋಷ ವ್ಯಕ್ತಗೊಳಿಸಿದರು."

"ಪುಟ್ಟಣ್ಣ.........."

"ಅವರು ಏನೂ ಹೇಳಲಿಲ್ಲಪ್ಪಾ."

"ಪುಟ್ಟಣ್ಣನ ಚಲನವಲನಗಳ ಬಗ್ಗೆ ನೀನು ಸ್ವಲ್ಪ ಲಕ್ಷ್ಯವಿಟ್ಟಿರ ಬೇಕು. ಇವನು ಶೆಟ್ಟರ ನರ್ಮಸಚಿವ. ಒಳಗೇ ಸೂತ್ರಗಳನ್ನಾಡಿಸಿ ತರಲೆ ಮಾಡುವುದರಲ್ಲಿ ನಿಸ್ಸೀಮ."

"ತಂತ್ರ, ಕುತಂತ್ರಗಳ ಗುಹೆ ಹೊಕ್ಕ ಹಾಗಾಗಿದೆ."

"ಅದರ ನಿಜಸ್ವರೂಪ ನಿನಗೀಗಲೆ ಗೊತ್ತಾಗುವುದಿಲ್ಲ. ಪತ್ರಿಕೆ ಕೆಲವು ತಿಂಗಳು ನಡೆಯಬೇಕು – ನಾಲ್ಕು ಜನ ನಿನ್ನ ಕೆಲಸ ಪ್ರಶಂಸಿಸಬೇಕು – ಆಗ ಸ್ವಾರ್ಥ, ಅಸೂಯೆ, ಚಿತ್ರದಾಸ್ಯದ ವರ್ಣವಿಲಾಸ ನಿನಗರಿವಾಗುತ್ತದೆ."

"ನಾನಂತೂ ನಿರ್ವಿಕಲ್ಪ ಬುದ್ಧಿಯಿಂದ ಇಲ್ಲಿಗೆ ಬಂದಿದ್ದೇನೆ ಗುಂಡಯ್ಯ. ಕನ್ನಡ ಸೇವೆಮಾಡಲು ಇದೊಂದು ಸದವಕಾಶ ಸಿಕ್ಕಿತೆಂದು ಸಂತೋಷಪಟ್ಟು ಕೊಂಡು ಬಂದೆ. ನನ್ನ ಸೇವೆಗೆ ಅವಕಾಶವಿಲ್ಲವೆಂದು ತಿಳಿದಂದೇ 'ಜನ ಸಂದೇಶ'ಕ್ಕೆ ಕೈಮುಗಿದು ಬಿಡುತ್ತೇನೆ."

ಪ್ರಸಾದ್, ಗುಂಡಯ್ಯ ಮಾತನಾಡುತ್ತ ಕುಳಿತಿದ್ದಲ್ಲಿಗೇ ಲಲಿತಮ್ಮನೂ ಬಂದು ಕುಳಿತಳು.

"ನೀವು ಎಷ್ಟುಹೊತ್ತಿಗೆ ಪೇಟೆಯ ಕಡೆ ಹೋಗುತ್ತೀರಿ?" ಎಂದು ಪ್ರಸಾದ್ ಕೇಳಿದ.

"ಮೂರು ಗಂಟೆಯ ವೇಳೆ ಹೋದರಾಯಿತು."

"ನಾವೂ ಹೊರಗೆ ಹೋಗುತ್ತೇವೆ. ಮನೆಯಲ್ಲಿ ರಾಮು ಇರುತ್ತಾನಷ್ಟೆ?"

"ರಾಮೂನೂ ಜತೆಯಲ್ಲಿ ಕರೆದುಕೊಂಡು ಹೋಗುತ್ತೇವೆ."

"ಹಾಗಾದರೆ ಮನೆಯ ಬೀಗದಕೈ ಆಫೀಸಿನಲ್ಲಿ ಕೊಟ್ಟುಹೋಗಿ. ನಾನು ಬೇಗ ಬಂದರೆ ತೆಗೆದುಕೊಳ್ಳುತ್ತೇನೆ."

"ನಾವು ಬರುವುದೂ ಬಹಳ ಹೊತ್ತಾಗಬಹುದು. ಪೇಟೆ ಕೆಲಸ ಬೇಗ ಮುಗಿದರೆ 'ಸೇವಾಸದನ'ಕ್ಕೆ ಹೋಗಿ ಸುಂದರಮ್ಮನವರನ್ನು ನೋಡಿಕೊಂಡು ಬರುತ್ತೇನೆ."

"ಹಾಗೇಮಾಡು" ಎಂದು ಹೇಳಿ ಗುಂಡಯ್ಯನ ಕಡೆ ತಿರುಗಿ

"ನನಗೊಂದು ಪೋರ್ಟಬಲ್ ಟೈಪ್‌ರೈಟರ್ (Portable Type-writer) ಬೇಕಲ್ಲಯ್ಯಾ."

"ಹೊಸದೋ ಹಳೆಯದೋ ?"

"ಹಳೆಯದು ಸಾಕು."

"ನನ್ನ ಗುರುತಿನ ಒಂದು ಇನ್‌ಸ್ಟಿಟ್ಯೂಟ್ ಇದೆ - ಅಲ್ಲಿಗೆ ಹೋಗಿ ನೋಡೋಣ."

"ಬೆಲೆ ಎಷ್ಟಾಗುತ್ತದೆ ?"

"ಹೊಸದಾದರೆ ಮುನ್ನೂರು ನಾನೂರು ರೂಪಾಯಿಯಾಗಬಹುದು. ಹಳೆಯದು ಅದರ ಅರ್ಧವಾಗಬಹುದು."

ಪ್ರಸಾದ್, ಗುಂಡಯ್ಯ ಹೊರಡುವ ಮುನ್ನ ಲಲಿತಮ್ಮ ಅವರಿಗೆ ಕಾಫಿ ತಂದಿತ್ತಳು.

"ಮೊದಲು ನಿಮ್ಮ ಮನೆಗೆ ಹೋಗಿ ಪಂಡಿತರನ್ನು ನೋಡಿಕೊಂಡು ಮುಂದಕ್ಕೆ ಹೋಗೋಣ" ಎಂದು ಪ್ರಸಾದ್ ಸೂಚಿಸಿದ.

ಗುಂಡಯ್ಯನ ತಂದೆ ಹಾಸಿಗೆ ಹಿಡಿದು ಮಲಗಿಬಿಟ್ಟಿದ್ದರು. ಮೈಯಲ್ಲಿ ರಕ್ತ, ಮಾಂಸ ಸಂಪೂರ್ಣವಾಗಿ ಕಾಣೆಯಾಗಿದ್ದವು. ಕಣ್ಣುಗಳು ಆಳವಾಗಿ ಗುಣಿಬಿದ್ದಿದ್ದವು. ಒಂದಂಗಲ ಗಡ್ಡ ಬೆಳೆಸುಕೊಂಡು ಅವರ ಮುಖದ ಗುರುತೇ ಮಾಯವಾಗಿತ್ತು.

ಅದರವೇ ಕಣ್ಣುಗಳು !

ಅದೇ ತೇಜಸ್ಸು !

ಆ ರಕ್ತಹೀನ ಮುಖದ ಮೇಲೂ ಸಾತ್ವಿಕ ಜೀವನದ ಶುಭ್ರಕಾಂತಿ !

ಪ್ರಸಾದ್ ಪಂಡಿತರ ಎರಡು ಪಾದಗಳನ್ನೂ ಮುಟ್ಟಿ ನಮಸ್ಕರಿಸಿ ಅವರ ಪಕ್ಕದಲ್ಲಿ ಕುಳಿತ. ಪಂಡಿತರು ಕ್ಷಣಕಾಲ ಪ್ರಸಾದನನ್ನು ದಿಟ್ಟಿಸಿ ನೋಡಿ, ಅವನ ಮುಖದ ಮೇಲೆ ಕೈಯಾಡಿಸಿದರು.

ಅವರ ಕಣ್ಣುಗಳಲ್ಲಿ ಆನಂದಭಾಷ್ಪ ಉಕ್ಕಿಹರಿಯಿತು.

"ಚೆನ್ನಾಗಿದ್ದೀಯಾಪ್ಪಾ?"

"ತಮ್ಮ ಆಶೀರ್ವಾದ."

"ಗುಂಡ ಎಲ್ಲಾ ಹೇಳಿದ. ಇನ್ನು ಮೇಲೆ ಇಲ್ಲೇ ಇರುವೆಯಂತೆ - ದೊಡ್ಡ ಪತ್ರಿಕೆಯ ಸಂಪಾದಕನಾಗಿರುವೆಯಂತೆ!"

"ಹೌದು - ತಾವು ಮಲಗಿರುವುದು ನೋಡಿ ನನ್ನ ಮನಸ್ಸಿಗೆ ತುಂಬ ವಿಷಾದವಾಗಿದೆ."

"ನನಗೂ ವಯಸ್ಸಾಯಿತು. ಇನ್ನೂ ಎಷ್ಟು ಕಾಲ ಬದುಕಿರಬೇಕು."

"ತಾವು ಹಾಗೆನ್ನಬಾರದು. ತಾಯಿ ವಸುಂಧರೆಗೆ ತಾವು ಭಾರವೇ?"

"ಹುಟ್ಟಿದವರೆಲ್ಲಾ ಬದುಕಿದ್ದರೆ ಪ್ರಪಂಚ ನಡೆಯುವುದು ಹೇಗೆ? ಹಣ್ಣೆಲೆ ಉದುರುತ್ತಿರಬೇಕು, ಹೊಸ ಎಲೆ ಚಿಗುರುತ್ತಿರಬೇಕು. ಭಗವಂತನ ಸಿರೂಪ ನಾನು ಸಂತೋಷವಾಗಿ ಎದುರು ನೋಡುತ್ತಿದ್ದೇನೆ. ನನ್ನ ಮನಸ್ಸಿನಲ್ಲಿ ಯಾವ ಆಸೆಯೂ ಇಲ್ಲ - ಯಾವ ಕ್ಲೇಶವೂ ಇಲ್ಲ. ಮಗ ಒಳ್ಳೆಯವನು - ಮರ್ಯಾದೆಯಾಗಿ ಬಡತನದ ಜೀವನ ಸಾಗಿಸಿಕೊಂಡು ಹೋಗುತ್ತಿದ್ದಾನೆ. ನಿನ್ನಂಥ ಸ್ನೇಹಿತನನ್ನು ಪಡೆದಿರುವ ಅವನು ಪುಣ್ಯವಂತನೇ ಅಲ್ಲವೇ?"

"ನಾನೆಷ್ಟರವನು ಗುರುಗಳೇ, ತಮ್ಮ ಚರಣಧೂಳಿ."

"ವಿದ್ಯೆ, ವಿನಯ ಎರಡನ್ನೂ ಭಗವತಿ ನಿನಗನುಗ್ರಹಿಸಿದ್ದಾಳೆ. ಮೂರ್ತಿ, ನೀನು ದೊರಕಿಸಿಕೊಂಡಿರುವ ಕೀರ್ತಿ ಕೇಳಿ ನನಗೆ ಮಹದಾನಂದವಾಗಿದೆ. – ಕನ್ನಡದ ಭವಿಷ್ಯ ಕುರಿತು ಯೋಚನೆ ಮಾಡುತ್ತಾ ಮಾಡುತ್ತ ನಾನು ಒಳಗೇ ಕೊರಗುತ್ತಿದ್ದೆ. ನಾವಂತೂ ಹಳೆಕಾಲದ ಪಂಡಿತರು - ನಮ್ಮ ಮಾತಿಗೆ ಬೆಲೆಯಿಲ್ಲ. ಮಹಾನುಭಾವರು ಬಿ. ಎಂ. ಶ್ರೀಕಂಠಯ್ಯನವರು ಕನ್ನಡಕ್ಕೆ ಘನವಾದ ಸೇವೆಮಾಡಿದರು. ಇಂಗ್ಲಿಷಿನ ಸ್ಥಾನಮಾನವನ್ನೇ ಕನ್ನಡಕ್ಕೂ ದೊರಕಿಸಿಕೊಟ್ಟರು. ಬೀದಿಯ ಭಿಕಾರಿಯಾಗಿದ್ದ ಆ ನನ್ನ ಕನ್ನಡ ತಾಯಿಗೆ ಶ್ರೀಕಂಠಯ್ಯನವರು ಮನೆಮಾಡಿಕೊಟ್ಟರು. ನೀವುಗಳು ಆಕೆಯನ್ನು ಸಿಂಗರಿಸಿ ಮೆರಸುತ್ತಿದ್ದೀರಿ. ನನ್ನ ತಾಯಿ ರಾಜರಾಜೇಶ್ವರಿಯಾಗುತ್ತಿದ್ದಾಳೆ. ಈ ಭಾಗ್ಯಕಂಡ ನನ್ನ ಜನ್ಮ ಸಾರ್ಥಕವಾಗಲಿಲ್ಲವೇ?"

“ಗುರುಗಳೇ, ತಾವೂ, ಶ್ರೀಕಂಠಯ್ಯನವರೂ, ಆಲೂರು ವೆಂಕಟರಾಯರೂ ನಮ್ಮಲ್ಲಿ ಕನ್ನಡ ಪ್ರೇಮ ತುಂಬದಿದ್ದರೆ ನಾವೆಲ್ಲಿರುತ್ತಿದ್ದವು. ನಮ್ಮ ಎಲ್ಲ ಕೆಲಸದ ಕೀರ್ತಿ ತಮಗೇ ಸೇರಬೇಕು.”

“ನಮ್ಮದು ಇಚ್ಛಾಶಕ್ತಿ - ನಿಮ್ಮದು ಕ್ರಿಯಾಶಕ್ತಿ. ಒಂದು ಶಿವ - ಇನ್ನೊಂದು ಶಕ್ತಿ. ಶಿವ ದೊಡ್ಡವನೋ ಶಕ್ತಿ ದೊಡ್ಡವಳೋ? ಎರಡನ್ನೂ ಅವಿನಾಭಾವದಿಂದಲೇ ನೋಡಬೇಕು. ಕನ್ನಡದ ಬಗ್ಗೆ ನಿನ್ನಲ್ಲಿ ನಾನು ಪ್ರೀತಿ ಹುಟ್ಟಿಸಿದೆ ನಿಜ - ಆದರೆ ನಿನ್ನ ಹಾಗೆ ‘ಗಿಣಿಯಪಂಜರ’ ಬರೆಯಲು ನನಗೆ ಸಾಧ್ಯವೇ? ದೀನ ದಲಿತರ ಬಗ್ಗೆ ಎಷ್ಟು ಅಂತಃಕರಣ, ಕನ್ನಡದ ಬಗ್ಗೆ ಎಂಥ ಪ್ರೇಮ, ಲೋಗರ ದೌರ್ಬಲ್ಯಗಳ ಬಗ್ಗೆ ಎಂಥ ಅನುಕಂಪ! ಅಪ್ಪಾ, ನಾವು ತಾಯಿಯನ್ನು ಪೂಜಿಸಿದರೆ ಸಾಲದು - ಆಕೆ ಯಾರು ಯಾರಲ್ಲಿ ಆವಿರ್ಭವಿಸಿ ತನ್ನ ತೇಜೋರಾಶಿಯನ್ನು ಪ್ರಕಟಿಸುತ್ತಾಳೋ ಅವರನ್ನೂ ನಾವು ಪೂಜಿಸಬೇಕು. ದೇಶ, ಭಾಷೆ, ಜಾತಿ, ವೃತ್ತಿಗಳು ಯಾವದೂ ಈ ‘ಶಾರದಾಪೂಜೆ’ಗೆ ಅಡ್ಡಿಯಾಗಬಾರದು.”

ಗುಂಡೂ ಮೆಲ್ಲನೆ ತಂದೆಯ ಬಳಿಸರಿದು

“ಅಣ್ಣಾ, ಹೆಚ್ಚು ಮಾತನಾಡಿ ಆಯಾಸಮಾಡಿಕೊಳ್ಳಬೇಡಿ” ಎಂದ.

“ಇವತ್ತು ನನ್ನ ಬಾಯಿ ಕಟ್ಟಬೇಡ ಗುಂಡೂ, ತೌರುಮನೆಯಿಂದ ಯಾರಾದರೂ ಬಂಧುಗಳು ಬಂದರೆ ಅತ್ತೆಯ ಮನೆಯಲ್ಲಿರುವ ಮಗು ಹೃದಯ ಹೇಗೆ ಅರಳತ್ತೆ ನೋಡು, ಹಾಗೆ ನನ್ನ ಹೃದಯ ಅರಳಿದೆ.”

ಪ್ರಸಾದನ ಕಣ್ಣುಗಳಿಂದ ತೊಟ ತೊಟನೆ ಹನಿಗಳುದುರಿದವು.

“ಯಾಕಣ್ಣಾ, ಕಣ್ಣೀರು ಹಾಕುತ್ತೀ?”

“ಈ ಅಲ್ಪನಿಗೆ ಎಷ್ಟು ಬೆಲೆ ಕೊಡುವಿರಿ ಗುರುಗಳೇ. ನಾನೇನೂ ಮಾಡಿಲ್ಲವೇ? ಕನ್ನಡದಲ್ಲಿ ಎಷ್ಟು ಕೆಲಸವಾಗಬೇಕು - ನಾನೇನು ಮಾಡಿದ್ದೇನೆ - ಏನು ಮಾಡಬಲ್ಲೆ?”

“ಬಸವಣ್ಣನವರು ಒಂದು ದಿವ್ಯವಾದ ಮಾತು ಹೇಳಿದ್ದಾರೆ ಮಗೂ - ‘ನಂಬಿ ಕರೆದೊಡೆ ಓ ಎನ್ನನೇ ಶಿವನು’ - ನಿನ್ನ ಹೃದಯ ನಂಬಿ ತಾಯಿಯನ್ನು ಕರೆಯುತ್ತಿದೆ. ಪ್ರೇಮಸುಧಾತರಂಗಿಣಿಯಾದ ತಾಯಿ ನಿನ್ನನ್ನು ಅನುಗ್ರಹಿಸುವುದಿಲ್ಲವೇ? – ಯೋಚನೆಮಾಡಬೇಡ, ನಿನ್ನಿಂದ ಕನ್ನಡಕ್ಕೆ

ಶಾಶ್ವತವಾದ ಸೇವೆ ಸಲ್ಲುತ್ತದೆ. – ಕನ್ನಡ ತನ್ನ ಮಯೂರಲಾವಣ್ಯದಲ್ಲಿ ಮೆರೆಯುತ್ತದೆ.”

ಪ್ರಸಾದ್ ಪಂಡಿತರ ಪಾದಗಳನ್ನು ಗಟ್ಟಿಯಾಗಿ ಹಿಡಿದು ನಮಸ್ಕರಿಸಿದ.

“ನಾನೂ ಮೂರ್ತಿ ಸ್ವಲ್ಪ ಹೊರಗೆ ಹೋಗಿ ಬರುತ್ತೇವಣ್ಣ”

ಎಂದು ಗುಂಡೂ ಹೇಳಿದ. ಪಂಡಿತರು ಆಗಬಹುದೆಂದರು.

ಅಪಾರಪ್ರೇಮ, ಅಭಿಮಾನ, ನಂಬಿಕೆಗಳಿಂದ ಕೂಡಿದ್ದ ಪಂಡಿತರ ಸವಿಮಾತು ಪ್ರಸಾದನ ಚಿತ್ತವನ್ನು ಹಿಡಿದಲುಗಿಸಿತ್ತು.

ಗೆಳೆಯರು ಟೈಪ್‌ರೈಟಿಂಗ್ ಇನ್‌ಸ್ಟಿಟ್ಯೂಟಿಗೆ ನಡೆದು ಬರುತ್ತಿರುವಂತೆ ಗುಂಡಯ್ಯ

“ನೀನು ಇಲ್ಲಿಗೆ ಬಂದು, ಕನ್ನಡದ ಕೆಲಸ ಕೈಗೊಳ್ಳಬೇಕೆಂದು ತಂದೆ ಯವರ ಮನಸ್ಸಿನಲ್ಲಿ ಉತ್ಕಟಾಕಾಂಕ್ಷೆ ಇತ್ತು. ಇಂದು ನಿನ್ನನ್ನು ನೋಡಿ ಅವರಿಗಾಗಿರುವ ಸಂತೋಷ ವರ್ಣಿಸಲು ಸಾಧ್ಯವಿಲ್ಲ. ಇನ್ನುಮೇಲೆ ಅವರ ಆರೋಗ್ಯವೂ ಸುಧಾರಿಸುತ್ತದೆ.”

“ನಮ್ಮ ಆಫೀಸಿನ ವಿದ್ಯಮಾನ ನೋಡಿದರೆ ನನ್ನಿಂದ ಹೆಚ್ಚಿನ ಕೆಲಸ ವಾಗುವ ಸಂಭವವಿಲ್ಲ ಗುಂಡಣ್ಣ.”

“ಆಫೀಸು ನಿನ್ನ ಚೇತನಕ್ಕೆ ಬೇಡಿ ಹಾಕಬಲ್ಲುದೇ ?”

“ಲೇಖನಕಲಾಸಾಧನೆ ಒಂದು ತಪಸ್ಸು. ಲೇಖಕ ತನ್ನ ಆಯುಷ್ಯ ವನ್ನು ಸಂಪೂರ್ಣವಾಗಿ ಅದಕ್ಕೆ ಅರ್ಪಿಸಿದರೂ ಸಾಲದು. ಆಫೀಸಿನ ಕಿರುಕುಳ, ಪಿಶುಣರ ಟೀಕೆ, ಹೊಟ್ಟೆಪಾಡಿನ ಯೋಚನೆ ಚಿತ್ತೈಕಾಗ್ರತೆಗೆ ಭಂಗತರುತ್ತದೆ. ದೈವವನ್ನೂ ಭೂತವನ್ನೂ ಒಟ್ಟಿಗೆ ಮೆಚ್ಚಿಸಲಾಗುವುದಿಲ್ಲ.”

“ಇದೇ ಆಧುನಿಕ ಲೇಖಕನ ಮಹಾಸಮಸ್ಯೆ ಪ್ರಸಾದ್. ಅರಸನ ಪೋಷಣೆಗೊಳಗಾಗಿ, ಆಹಾರ ವಸ್ತ್ರಗಳ ಕಾಟವಿಲ್ಲದೆ ಒಂದು ಶಾಕುಂತಲ – ಒಂದು ವಿಕ್ರಮೋರ್ವಶೀಯಮ ಬರೆಯುವುದು ದೊಡ್ಡದಲ್ಲ. ಯುದ್ಧದ ಕಾರ್ಮೋಡಗಳು ಹೆಪ್ಪುಗಟ್ಟುತ್ತಿರುವಾಗ, ಅಡಿಯಿಟ್ಟಲ್ಲಿ ಬಾಂಬು ಸಿಡಿಯು ತ್ತಿರುವಾಗ, ಶಾಂತಿ ಘೋಷಣೆ ಮಾಡಿದುದೇ ಮಹಾಪರಾಧವಾಗಿ ಲೋಕದ ಅವಹೇಳನಕ್ಕೆ ಗುರಿಯಾಗಿರುವಾಗ ರೊಮೆ ರೋಲಾ (Romain Rolland) ‘ಜೀನ್ ಕ್ರಿಸ್ಟೊಫೆ’ (Jean Christophe) ಬರೆದರಲ್ಲಾ ಅದು

ಹೆಚ್ಚಿನದು. ಅಶಾಂತಿ, ಕ್ರಾಂತಿ, ಲೋಭಗಳು ಪೈಶಾಚನೃತ್ಯ ಮಾಡುತ್ತಿರುವಾಗ ಲೇಖಕ ತನ್ನ ಬುದ್ಧಿಯನ್ನು ಸ್ಥಿಮಿತದಲ್ಲಿಟ್ಟುಕೊಂಡು ಶಾಂತಿ ಪ್ರತಿಪಾದನೆ ಮಾಡುವುದು ದೈವಿಕ ಗುಣ........ನಿನಗೀಗ ಅಗ್ನಿಪರೀಕ್ಷೆ ಒದಗಿದೆಯೆನ್ನುವುದರಲ್ಲಿ ಸಂದೇಹವಿಲ್ಲ; ಆದರೆ ಅಗ್ನಿಸ್ತಂಭನ ನೀನು ಮಾಡಬಲ್ಲೆ ಎಂದು ನಾನು ದೃಢವಾಗಿ ನಂಬಿದ್ದೇನೆ........ನಿನ್ನ ಗುರುಗಳ ನಂಬಿಕೆಯೂ ಅದೇ ಆಗಿದೆ."

"ನಿಮ್ಮ ನಂಬಿಕೆಯೇ ನನ್ನ ರಕ್ಷಾಕವಚ."

ಇಬ್ಬರೂ ಇನ್‌ಸ್ಟಿಟ್ಯೂಟ್ ತಲುಪಿದರು. ನಾಲ್ಕೈದು ಪೋರ್ಟಬಲ್ (Portable) ಟೈಪ್‌ರೈಟರುಗಳನ್ನು ಪರೀಕ್ಷೆಮಾಡಿದ ಮೇಲೆ ಪ್ರಸಾದ್ ಒಂದು ರೆಮಿಂಗ್‌ಟನ್ (Remington) ಆರಿಸಿದ. ಧಾರಣೆ ನೂರ ಎಪ್ಪತ್ತೈದರಿಂದ ನೂರೈವತ್ತಕ್ಕಿಳಿಯಿತು. ಇನ್‌ಸ್ಟಿಟ್ಯೂಟಿನ ಮಾಲಿಕರು ಹೊಸ ರಿಬ್ಬನ್ ಹಾಕಿ ಟೈಪ್‌ರೈಟರನ್ನು ಪ್ರಸಾದನ ಕೈಗಿತ್ತರು.

"ಮುಂಬಯಿಯಲ್ಲಿ ನಿನ್ನ ಹತ್ತಿರ ಟೈಪ್‌ರೈಟರ್ ಇರಲಿಲ್ಲವೇ ?"

"ಇತ್ತು. ಆಫೀಸಿನದನ್ನು ನಾನು ಹೇಗೆ ತೆಗೆದುಕೊಂಡು ಬರಲಿ."

ಮಾಲಿಕರಿಗೆ ಹಣಕೊಟ್ಟು ಇಬ್ಬರೂ ಅಲ್ಲಿಂದ ಹೊರಟರು.

"ನಮ್ಮ ಮನೆಗೆ ಹೋಗಿ ಚಿಕ್ಕಮ್ಮನನ್ನು ನೋಡಿ ಬರೋಣ" ಎಂದು ಪ್ರಸಾದ್ ಹೇಳಿದ.

"ನಾನೇಕೆ ಬರಬೇಕು."

"ನೀನೂ ಜತೆಯಲ್ಲಿದ್ದರೆ ಒಳ್ಳೆಯದು. ತಂದೆಯವರು ಮನೆಯಲ್ಲಿದ್ದರೆ ಇಬ್ಬರಿಗೂ ಮುಜುಗರವಾಗುತ್ತದೆ."

ಪ್ರಸಾದ್, ಗುಂಡಯ್ಯ ಇಬ್ಬರೂ ವೆಂಕಟರಾಯರ ಮನೆಗೆ ಬಂದಾಗ ನಾಗಮ್ಮ ಹುರಿಗಾಳಿಗೆ ಹಾಕಲು ಕಡಲೆಕಾಯಿ (ನೇಂಗಾಯಿ) ಬೀಜವನ್ನಾರಿಸುತ್ತ ಕುಳಿತಿದ್ದಳು. ಪ್ರಸಾದನನ್ನು ಕಂಡ ಕೂಡಲೆ ಹೌಹಾರಿ ಎದ್ದುನಿಂತು "ಯಾವಾಗ ಬಂದೆ ?" ಎಂದು ಕೇಳಿದಳು.

"ಅಣ್ಣ ಮನೆಯಲ್ಲಿಲ್ಲವೇ ?"

"ಇಲ್ಲ – ಆಫೀಸಿಗೆ ಹೋಗಿದ್ದಾರೆ."

ಪ್ರಸಾದ್ ಕುಳಿತುಕೊಂಡು ಸಾವಕಾಶವಾಗಿ ತನ್ನ ಚರಿತ್ರೆಯನ್ನು

ನಿರೂಪಿಸಿ, ಬೆಂಗಳೂರಿಗೆ ಬಂದಿರುವ ಉದ್ದೇಶವನ್ನೂ ತಿಳಿಸಿದ. ನಾಗಮ್ಮನ ಮುಖವರಳಿತು.

"ಸದ್ಯ ಬಂದುಬಿಟ್ಟೆಯಲ್ಲಪ್ಪಾ!" ಎಂದಳು.

"ಮನೆಯಲ್ಲಿ ಎಲ್ಲರೂ ಕ್ಷೇಮವೇ ?"

"ಎಲ್ಲರೂ ಕ್ಷೇಮ."

"ಸೀತಕ್ಕ ಚೆನ್ನಾಗಿದ್ದಾಳೆಯೇ ?"

"ಚೆನ್ನಾಗಿದ್ದಾರೆ - ಕಳೆದ ತಿಂಗಳು ಇಲ್ಲಿಗೆ ಬಂದು ಒಂದು ವಾರವಿದ್ದು ಹೋದರು."

"ಅಣ್ಣ ಹೇಗಿದ್ದಾರೆ? ನನ್ನ ಮೇಲೆ ಕೋಪ ಸ್ವಲ್ಪವಾದರೂ ಇಳಿದಿದೆಯೇ ?"

"ಕೋಪ ಎಂದೋ ಇಳಿದುಹೋಯಿತು ಮೂರ್ತಿ. ನಿಮ್ಮ ಮಾವನವರು ಕೋಪ ಇಳಿಸಿಬಿಟ್ಟರು."

"ಈಗ ನಿಮ್ಮ ಮಗ ಮೂರ್ತಿಯಲ್ಲಮ್ಮ - ಪ್ರಸಾದ್."

"ಅವನು ಪ್ರಸಾದ್ ಆಗಲಿ, ಪರಮೇಶ್ವರ ಆಗಲಿ, ನಮ್ಮ ಮೂರ್ತಿನೇ ಗುಂಡಣ್ಣ."

"ಮುಂದೇನು ಮಾಡುತ್ತೀ ?"

"ಯಾವ ವಿಷಯ ?"

"ನಿನ್ನ ಹೆಂಡತಿಯನ್ನು ಕರಸಿಕೊಳ್ಳುವ ವಿಷಯ."

"ನನ್ನ ಹೆಂಡತಿ ಬಂದಿದ್ದಾಳಲ್ಲಾ ?"

"ಆ ಹೆಂಡತಿಯನ್ನಲ್ಲ ನಾನು ಹೇಳಿದು — ಗಿರಿಜನ್ನ ?"

"ಸದ್ಯಕ್ಕೆ ಇಬ್ಬರೂ ಸುಖವಾಗಿದ್ದೀವಲ್ಲ ಚಿಕ್ಕಮ್ಮ."

"ತಿಳುವಳಿಕೆಯಿಲ್ಲದ ಹುಡುಗಿ. ಅವಿವೇಕವಾಗಿ ಅದು ಆಡುತ್ತದೆಂದರೆ ನೀನೂ ಅದರ ಹಾಗೆ ಆಡುವುದು ಚೆನ್ನೇನೋ ಮೂರ್ತಿ ?"

"ನಾಯಿಬಾಲ ಎಂದಿದ್ದರೂ ಡೊಂಕು ಚಿಕ್ಕಮ್ಮ."

"ನಮ್ಮನೆ ನಾಯಿಬಾಲ ಡೊಂಕು ಎಂದು ಅದನ್ನು ಆಚೆಗಟ್ಟುವುದಕ್ಕಾಗುತ್ತದೆಯೇ ?"

"ಆಗಲಿ ಯೋಚನೆಮಾಡೋಣ. ಇನ್ನೂ ಇದೇ ಬರುತ್ತಾ ಇದ್ದೇನೆ – ನಾಲ್ಕು ದಿವಸ ಕಳೆಯಲಿ."

ಪ್ರಸಾದ್ ಎದ್ದುದನ್ನು ಕಂಡು ನಾಗಮ್ಮ

"ಇದೇನು ಹೊರಟುಬಿಟ್ಟೆ – ನಿಮ್ಮ ತಂದೆಯವರನ್ನು ನೋಡುವುದಿಲ್ಲವೇ ?"

"ಅವರು ಮನಸ್ಸು ಹೇಗಿದೆಯೆಂಬುದನ್ನು ತಿಳಿಯದೆ ಏಕೆ ನೋಡಲಿ."

ನಾಗಮ್ಮ ಆ ಮಾತು ಬೆಳಸದೆ

"ಮನೆಗೇನು ಸಾಮಾನುಬೇಕಾದರೂ ಹೇಳು – ಮಾಡಿಸಿ ಕಳಿಸುತ್ತೇನೆ."

"ಅತ್ತೆ ಇದ್ದಾರೆ - ಎಲ್ಲಾ ನೋಡಿಕೊಳ್ಳುತ್ತಾರೆ. ಹುರಿಗಾಳು ಮಾಡಿಸುತ್ತಿರುವಂತಿದೆ – ನನಗೆ ಸ್ವಲ್ಪ ಕಳುಹಿಸಿಕೊಡು."

"ನಿನ್ನ ಹೆಂಡತಿಯನ್ನು ಯಾವಾಗ ಕರೆದುಕೊಂಡು ಬರುತ್ತೀ ?"

"ಹೇಳಿದೆನಲ್ಲಾ ಚಿಕ್ಕಮ್ಮ."

"ಆ ಹೆಂಡತಿ ವಿಷಯವಲ್ಲ ನಾನು ಕೇಳಿದ್ದು - ಈ ಹೆಡತಿ ವಿಷಯ."

"ನಾಲ್ಕು ದಿವಸ ಕಳೆದಮೇಲೆ ಕರೆದುಕೊಂಡು ಬರುತ್ತೇನೆ."

"ನಾಲ್ಕು ದಿವಸ ನೋಡುತ್ತೇನೆ - ನೀನು ಕರೆದುಕೊಂಡು ಬರದಿದ್ದರೆ ನಾನೇ ಬರುತ್ತೇನೆ."

"ಹಾಗೂ ಆಗಬಹುದು"

ಎಂದು ಪ್ರಸಾದ್ ಕೈಗೆ ಟೈಪ್‌ರೈಟರ್ ಎತ್ತಿಕೊಂಡ.

"ಇದೇನು ಹೊರಟೇಬಿಟ್ಟೆಯಲ್ಲಾ ! ಕಾಫಿ ಮಾಡಿಕೊಡುತ್ತೇನೆ ಕುಳಿತುಕೋ."

"ಬೇಡ ಚಿಕ್ಕಮ್ಮ – ಇದೇ ಆಗಿದೆ"

ಎಂದು ಹೇಳಿ ಮನೆಗೆ ಹಿಂದಿರುಗಲು ಆತುರ ತೋರಿಸಿದ. ಗುಂಡಯ್ಯನನ್ನು ಬಿಡದ ಪ್ರಸಾದ್ ತನ್ನ ಮನೆಗೆ ಎಳೆದುಕೊಂಡು ಬಂದ.

ಲಲಿತಮ್ಮ ಕೊಟ್ಟು ಹೋಗಿದ್ದ ಬೀಗದಕೈಯನ್ನು ಪಳನಿಸ್ವಾಮಿ ತಂದು ಕೊಟ್ಟ. ಪಳನಿಸಾಮಿಯ ಕೈಯಲ್ಲಿ ಕಾಫಿ ತಿಂಡಿ ತರಿಸಿ ಗೆಳೆಯರಿಬ್ಬರೂ ಮುಗಿಸಿದರು.

"ನೀನು ಮನೆಯಲ್ಲಿಯೇ ಉಳಿದುಕೊಂಡು ತಂದೆಯವರನ್ನು ನೋಡಿಕೊಂಡು ಬರಬೇಕಾಗಿತ್ತು ಪ್ರಸಾದ್."

"ನನಗೂ ತುಂಬ ಮನಸ್ಸಿತ್ತು. ಆತುರಪಡಬಾರದೆಂದು ಮನಸ್ಸು ಗಟ್ಟಿಮಾಡಿಕೊಂಡೆ........ನಮ್ಮ ಪತ್ರಿಕೆಯ ವಾರಾಂತ್ಯದ ಪುರವಣಿಗೆ ನೀನು ಒಂದು ಲೇಖನಮಾಲೆ ಬರೆದುಕೊಡಬೇಕು."

"ಆ ಕೆಲಸಮಾಡಲು ಅಡ್ಡಿಯಿಲ್ಲ - ಯಾವ ವಿಷಯ ತೆಗೆದುಕೊಳ್ಳಲಿ."

"ಕನ್ನಡ ಕವಿಗಳ ಮೇಲೆಯೇ ಆಗಲಿ. ನೃಪತುಂಗ - ಪಂಪ - ರನ್ನ - ಜನ್ನ - ನಾಗವರ್ಮ - ರತ್ನಾಕರವಣಿ - ಹರಿಹರ - ರಾಘವಾಂಕ - ಚಾಮರಸ - ವಚನಕಾರರು - ಹರಿದಾಸರು - ಕುಮಾರವ್ಯಾಸ - ಕುಮಾರ ವಾಲ್ಮೀಕಿ - ಲಕ್ಷ್ಮೀಶ - ಸರ್ವಜ್ಞ - ಮುದ್ದಣ. - ಹದಿನಾರು ಲೇಖನಗಳಾಗುತ್ತವೆ. ನಾಲ್ಕು ತಿಂಗಳಲ್ಲಿ ಮುಗಿಯುತ್ತದೆ. ಲೇಖನಮಾಲೆ ಮುಗಿದಮೇಲೆ ಅದನ್ನೇ ಸಂಗ್ರಹಿಸಿ ಪ್ರಕಟಿಸಿದರೆ ಕನ್ನಡ ಕಾವ್ಯಾಭ್ಯಾಸಿಗಳಿಗೆ ಪ್ರಯೋಜನವಾಗುತ್ತದೆ."

"ಸಂತೋಷವಾಗಿ ಈ ಕೆಲಸ ಮಾಡುತ್ತೇನಪ್ಪ. ನಿನ್ನ ಪತ್ರಿಕೆಯ ಮೊದಲನೆಯ ಪುರವಣಿಯಾವಾಗ ?"

"ವಿಜಯದಶಮಿಯ ದಿನ ಮೊದಲನೆಯ ಸಂಚಿಕೆ ಹೊರಬೀಳುತ್ತದೆ. ಅದಾದ ಕೂಡಲೆ ಬರುವ ಭಾನುವಾರದಿಂದ 'ಪುರವಣಿ' ಆರಂಭಿಸುತ್ತೇನೆ. ಹಾಗೇ ಸುದರ್ಶನರಿಗೆ ಹೇಳಿ 'ಲಲಿತಕಲೆಗಳ' ಮೇಲೆ ಒಂದು ಲೇಖನಮಾಲೆ ಆರಂಭಮಾಡಿಸುವುದು ನಿನ್ನ ಕೆಲಸ."

"ಅದಕ್ಕೂ ಒಪ್ಪಿಕೊಳ್ಳುತ್ತೇನೆ."

"ಹಳೆಯ ಸಾಹಿತ್ಯ, ಹೊಸ ಸಾಹಿತ್ಯ; ಹಳೆಯ ಕಲೆ, ಹೊಸ ಕಲೆ ಎರಡಕ್ಕೂ ನಾನು ಸಮಾನಸ್ಥಾನಕೊಡಬೇಕೆಂದಿದ್ದೇನೆ. ಹಳೆಯದನ್ನು ಬಿಟ್ಟು ಹೊಸದು ಬದುಕುವದಕ್ಕಾಗುವುದಿಲ್ಲ."

"ನೀನು ಏನು ಬರೆಯುವೆ ?"

"ಸಾಹಿತ್ಯದ ವಿವಿಧ ಸಮಸ್ಯೆಗಳು, ಪ್ರಕಾರಗಳು, ಪ್ರಭಾವಗಳನ್ನು ಕುರಿತು ಬರೆಯುತ್ತೇನೆ. ರಾಜಕೀಯ, ಸಾಮಾಜಿಕ ಜೀವನದ ಧ್ಯೇಯ ಧೋರಣೆಗಳನ್ನು ಸಾಹಿತಿಯೂ ವಿಮರ್ಶಿಸಬೇಕು. ದೃಷ್ಟಾಂತಕ್ಕೆ ನಮ್ಮ ಕಮ್ಯುನಿಸ್ಟರು 'ಸಾಹಿತ್ಯ – ಲಲಿತಕಲೆಗಳು ಮಾರ್ಕ್ಸ್‌ವಾದದ ಪ್ರತಿಬಿಂಬ

ವಾಗಬೇಕು'ಎಂದು ಹೇಳುತ್ತಿದ್ದಾರೆ. ಮಾರ್ಕ್ಸ್‌ವಾದ ಅಂದರೆ ಲೆನಿನ್ ಸ್ಟಾಲಿನ್ ವಾದದ ಪ್ರತಿಬಿಂಬವಾಗದ ಸಾಹಿತ್ಯವನ್ನು Bourjouis - Decadent - Escapist - Ractionary ಎಂದವರು ಕರೆಯುತ್ತಿದ್ದಾರೆ. ಈ ವಾದವನ್ನು ಶಾಸ್ತ್ರೀಯವಾಗಿ ಪರೀಕ್ಷಿಸುವುದೊಳ್ಳೆಯದು. ರಾಜಕಾರಣಿಯಂತೆ ಸಾಹಿತಿಯೂ ರಷ್ಯಾದ ಡೋಲುಬಡಕನಾಗಿರಬೇಕೆಂದು ಕಮ್ಯುನಿಸ್ಟರು ಬಯಸುತ್ತಿದ್ದಾರೆ. ಭಾರತವನ್ನು ಚಿರತನದಾಸ್ಯದಲ್ಲಿ ಕೆಡಹಿ, ರಷ್ಯಾದ ಕರಡಿ ಪ್ರಭುತ್ವವನ್ನು ಭಾರತದ ಮೇಲೆ ಹೇರಬೇಕೆಂದು ಪ್ರಯತ್ನಿಸುತ್ತಿದ್ದಾರೆ. ನಿರಂಕುಶಮತಿಯಾದ ಸಾಹಿತಿ ಯಾರ ಪ್ರಭುತ್ವವನ್ನೂ ಒಪ್ಪಿಕೊಳ್ಳಲಾರ."

"ನಿನ್ನ ಅಭಿಪ್ರಾಯ ಕೇಳಿ ನನಗೆ ಪರಮಾನಂದವಾಯಿತು ಪ್ರಸಾದ್. ನಿಜವಾಗಿ ಹೇಳಬೇಕೆಂದರೆ ನಾನೂ ನಿನ್ನ ಕಮ್ಯುನಿಸ್ಟ್ ಎಂದು ತಿಳಿದು ಕೊಂಡಿದ್ದೆ."

"ಕಮ್ಯುನಿಸಂ ತತ್ತ್ವ ಒಮ್ಮೆ ನನ್ನ ಆಕರ್ಷಿಸಿತು. ಭಾರತದ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ವಿಚಾರದಾಸ್ಯವನ್ನು ಕುರಿತಾಲೋಚಿಸುತ್ತಾ 'ಜಾತ್ಯಾತೀತ - ವರ್ಗರಹಿತ ಸಮಾಜ'ಕಟ್ಟುವುದಕ್ಕೆ ಕಮ್ಯುನಿಸಂ ನೆರವಾಗುವು ದಿಲ್ಲವೇ ಎಂದು ನಾನು ಯೋಚಿಸಿದೆ. ನನ್ನ ಹಾಗೆಯೇ ಭಾವಿಕರಾಗಿದ್ದವ ರೆಲ್ಲಾ ಅದೇ ಬಗೆಯಲ್ಲಿ ಯೋಚನೆಮಾಡಿದರು. ಭಾರತದ ಬಹುಮುಖ ದಾಸ್ಯ ನೀಗುವುದಕ್ಕೆ ಕಮ್ಯುನಿಸಂ ಒಂದೇ ಪರಿಹಾರವೆಂದು ತಿಳಿದು ಅವರಲ್ಲಿ ಕೆಲವರು ಕಮ್ಯುನಿಸ್ಟ್‌ಪಾರ್ಟಿ ಸೇರಿದರು. ನಮ್ಮೆಲ್ಲರ ಮನೋಭಿಪ್ರಾಯವನ್ನು ಡಾ|| ರಾಧಾಕೃಷ್ಣನ್ ಚೆನ್ನಾಗಿ ಕ್ರೋಢೀಕರಿಸಿದ್ದಾರೆ.

**ಬಡವರ, ದಲಿತರ ಬಗ್ಗೆ ಮರುಕ ತೋರುವುದರಲ್ಲಿ, ಅವಕಾಶ ಮತ್ತು ಸಂಪತ್ತುಗಳ ಸಮಾನ ಹಂಚಿಕೆಯನ್ನು ಅಪೇಕ್ಷಿಸುವುದರಲ್ಲಿ, ವರ್ಣಸಮತೆಯನ್ನು ನಿರೀಕ್ಷಿಸುವಲ್ಲಿ ಅದು (ಮಾರ್ಕ್ಸ್‌ವಾದ) ಎಲ್ಲ ಆದರ್ಶವಾದಿಗಳೂ ಒಪ್ಪತಕ್ಕ ಸಾಮಾಜಿಕ ಸಂದೇಶವನ್ನು ನೀಡು ತ್ತದೆ. ಆದರೆ ಸಾಮಾಜಿಕ ಕಾರ್ಯಕ್ರಮದ ಬಗ್ಗೆ ನಮಗಿರುವ ಸಹಾನುಭೂತಿ ಮಾರ್ಕ್ಸ್‌ರ ಜೀವನದರ್ಶನವನ್ನು ಒಪ್ಪಿಕೊಂಡಂತಲ್ಲ. ಪರವಸ್ತುವಿನ ಬಗ್ಗೆ ಅದು ತಳೆದಿರುವ ನಾಸ್ತಿಕಭಾವನೆ ಮಾನವನ ಬಗ್ಗೆ ತಳೆದಿರುವ ವಾಸ್ತವದೃಷ್ಟಿ ಮತ್ತು ವ್ಯಕ್ತಿತ್ವದ ಪಾವಿತ್ರ್ಯತೆಯ**

9

**ಬಗ್ಗೆ ತಳೆದಿರುವ ತಿರಸ್ಕಾರ ನಮ್ಮ ಸಹಾನುಭೂತಿಯನ್ನು ದೊರಕಿಸು ವುದಿಲ್ಲ.** *

ದೀನ ದಲಿತರ ಬಗ್ಗೆ ಮಾರ್ಕ್ಸವಾದಕ್ಕೆ ಮರುಕವಿದೆ ಎಂದು ಡಾ. ರಾಧಾಕೃಷ್ಣನ್ ಹೇಳುವುದನ್ನೂ ಒಪ್ಪಿಕೊಳ್ಳುವುದಕ್ಕೆ ನಾನು ಸಿದ್ಧನಾಗಿಲ್ಲ. ಕಮ್ಯುನಿಸಂನಲ್ಲಿ (ಮಾರ್ಕ್ಸ್‌ವಾದದ ರಷ್ಯಾ ಸ್ವರೂಪ) ದಯೆ, ಕನಿಕರ, ಅನುಕಂಪ, ಕರುಣೆ, ಮರುಕ ಮೊದಲಾದ ಶಬ್ದಗಳಿಗೆ ಸ್ಥಾನವೇ ಇಲ್ಲ. **ಭಯ ದ್ವೇಷಗಳ** (Fear and Hate) ಮೇಲೆ ಕಟ್ಟಲ್ಪಟ್ಟಿರುವ ಈ ಭೂತಗುಡಿಯಲ್ಲಿ ಮಾನವಪ್ರೇಮವೆಲ್ಲಿಂದ ಬಂತು? ಕಮ್ಯುನಿಸಮ್ಮನ್ನು ಅನಾಫಲೀಸ್ ಸೊಳ್ಳೆಗೆ ಹೋಲಿಸಬಹುದು. ಎಲ್ಲಿ ಶುಭ್ರವಾದ ನೀರು ಹರಿಯುತ್ತದೆಯೊ ಅಲ್ಲಿ ಸೊಳ್ಳೆ ವರ್ಧಿಸಲು ಸಾಧ್ಯವಿಲ್ಲ; ಎಲ್ಲಿ ಕೊಳಚೆ, ರಾಡಿ, ಕಸರು ನಿಂತಿದೆಯೋ ಅಲ್ಲಿ ಸೊಳ್ಳೆ ತನ್ನ ಬಾವುಟ ನೆಡುತ್ತದೆ. ಸಮಾಜ, ರಾಷ್ಟ್ರ ಅಶಾಂತವಾದರೇ, ಸಮಾಜ, ರಾಷ್ಟ್ರ ಕೊಳಚೆ ಗುಂಡಿಗಳಾದರೇ ಕಮ್ಯುನಿಸಂ ಬೆಳೆಯಲು ಸಾಧ್ಯ. ತಾನು ಬೆಳೆಯಲು, ಬದುಕಲು ಸಮಾಜ, ರಾಷ್ಟ್ರವನ್ನು ಕೊಳಚೆಗುಂಡಿಮಾಡಲು ಕಮ್ಯುನಿಸಂ ಸದಾ ಹವಣಿಸುತ್ತಿರುತ್ತದೆ."

"ಇಲ್ಲಿಯೂ ಈ ಪುಂಡರ ಹಾವಳಿ ಬಹಳವಾಗಿಬಿಟ್ಟಿದೆಯಪ್ಪಾ. ಕಮ್ಯುನಿಸಂ ಎಂದರೆ ಜನಗಳು ಕಲ್ಲು ಒಗೆಯುತ್ತಾರೆಂದು ಹೆದರಿ

---

* "In its concern for the poor and lowly, in its demand for a more equitable distribution of wealth and opportunity, in its insistence on racial equality it gives us a social message with which all idealists are in agreement. But our sympathy for the social programme does not necessarily commit us to the Marxist philosophy of life, its atheistic conception of ultimate reality. its naturalistic view of man and its disregard for the sacredness of personality."

—Dr S. Radhakrishnan in "KAMALA LECTURES"

ಇಂಡೋ - ಸೋವಿಯಟ್ ಸೊಸೈಟಿ, ಫ್ರೆಂಡ್ಸ್ ಆಫ್ ಚೀನಾ, ಶಾಂತಿ ಚಳುವಳಿ ಎಂದು ಸೋಗು ಹಾಕುತ್ತಿದ್ದಾರೆ. ಕಮ್ಯುನಿಸ್ಟ್ ಪಾರ್ಟಿಯ ಸ್ವಾಮ್ಯಕ್ಕೆ ಅಧೀನವಾಗದ 'ಪ್ರಗತಿಶೀಲ ಲೇಖಕರ ಸಂಘ'ದ ಮೇಲೂ, ಅದರ ಪ್ರಧಾನ ವ್ಯಕ್ತಿಗಳ ಮೇಲೂ ಸತತ ಅಪಪ್ರಚಾರ ಆರಂಭಿಸಿದ್ದಾರೆ. ಧನಿಷ್ಟಾಪಂಚಕದ ಮನೆಯಲ್ಲಿ ಬಾವಲಿಗಳು ಸೇರಿಕೊಳ್ಳುವಂತೆ ಕನ್ನಡ ಪತ್ರಿಕೆಗಳಲ್ಲಿ ಸೇರಿಕೊಂಡು ರಷ್ಯಾದ ಪಂಚಮದಳದ (Fifth Coloumn) ಕೆಲಸವನ್ನು ಸಾಂಗವಾಗಿ ಮಾಡುತ್ತಿದ್ದಾರೆ."

"ಇಲ್ಲಿ ಈ ಚಳುವಳಿಯ ಮುಖಂಡರು ಯಾರು ?"

"ಮಂಗಳೂರಿನ ಇಬ್ಬರು ತಲೆಹೋಕರು. ಇಲ್ಲಿನ 'ಯುಗವಾಣಿ'ಯ ರಾಘವಯ್ಯ, 'ಕಾಲದೂತ'ದ ವಶಿಷ್ಠ, ಇವರ ನೆರವಿಗೆ ಹುನಗುಂದದ ಈಶ್ವರರಾಯ, ಕಾಲೇಜ್ ಮೇಷ್ಟ್ರು ಉಷಾಪ್ರಿಯ, ಪ್ರಾಥಮಿಕ ಶಾಲೆ ಮೇಷ್ಟ್ರು ಚೆಟ್ಟಯ್ಯ, ಕಾಫೀ ಬೋರ್ಡ್ಡಿನ ಧೃವರಾಯ."

"ಇವರಲ್ಲಿ ಕಟ್ಟಾ ಕಮ್ಯುನಿಸ್ಟರು ಯಾರು ?"

"ಹುನಗುಂದದ ಈಶ್ವರರಾಯ, ವಶಿಷ್ಠ, ಉಷಾಪ್ರಿಯ."

"ಇವರಿಗೆ ಪತ್ರಿಕೆಗಳವರು ಹೇಗೆ ಆಶ್ರಯವಿತ್ತಿದ್ದಾರೆ."

"ಅದಕ್ಕೆ ನಾನಾ ಕಾರಣಗಳಿವೆ. ಪತ್ರಿಕೆಗಳವರಿಗೆ ಕೊಟ್ಟದನ್ನು ತೆಗೆದುಕೊಂಡು ಬರೆದುಕೊಡುವವರು ಬೇಕು. ಬಿಸಿ ಬಿಸಿಯಾಗಿ ಬರೆಯುವವರು ಬೇಕು. ಯಾರನ್ನಾದರೂ ಹಸಿ ಹಸಿಯಾಗಿ ಬಯ್ದು ಹೊರತೂ ಬರವಣಿಗೆಯಲ್ಲಿ ಬಿಸಿ ಇರುವುದಿಲ್ಲ. ಈ ಕೆಲಸ ಕಮ್ಯುನಿಸ್ಟರಿಗಿಂತಲೂ ಇನ್ನು ಯಾರು ಮಾಡಲು ಸಾಧ್ಯ ? ಕಮ್ಯುನಿಸ್ಟರನ್ನು ನಂಬಿಕೊಂಡಿದ್ದರೆ ಒಂದಲ್ಲ ಒಂದು ದಿನ ರಷ್ಯಾಗೋ ಚೀನಾಕ್ಕೋ ಹೋಗಿಬರಬಹುದೆಂಬ ಆಕಾಂಕ್ಷೆ. ಎಲ್ಲಕ್ಕೂ ಹೆಚ್ಚಾಗಿ ಒಂದು ವಿಷಯ ಗಮನಿಸಬೇಕು. ಪತ್ರಿಕೆಯ ಸಾಹಿತಿಗಳಿಗೂ, ವಿಮರ್ಶಕರಿಗೂ ಕನ್ನಡದ ಓದುಗರಾಗಲಿ, ಸಾಹಿತಿಗಳಾಗಲಿ ಏನೂ ಬೆಲೆಕೊಡುವುದಿಲ್ಲ. ನಮ್ಮ 'ಯುಗವಾಣಿ' - 'ಕಾಲದೂತ' - 'ಪ್ರಜಾಪ್ರಗತಿ' ಪತ್ರಿಕೆಗಳು ಕಮ್ಯುನಿಸ್ಟರ ಕೆಳದರ್ಜೆಯ ಪುಸ್ತಕಗಳನ್ನೂ ಮಹಾಕಾವ್ಯಗಳೆಂದು ಹೊಗಳುತ್ತಾರೆ. ಕಮ್ಯುನಿಸಂ ಬಗ್ಗೆ ಆಸಕ್ತಿವಹಿಸದ ಅಥವಾ ಕಮ್ಯುನಿಸ್ಟ್ ವಿಷವ್ಯೂಹಕ್ಕೆ ಸೇರದಿರುವ ಸಾಹಿತಿಗಳ ಕೃತಿಗಳ

ಮೇಲೆ ಧಾಳಿ ನಡೆಸುತ್ತಾರೆ. ಈ ಹೊಗಳಿಕೆ - ಧಾಳಿ ಎರಡೂ ಕನ್ನಡ ಓದುಗರ ಮೇಲೆ ಏನೂ ಪರಿಣಾಮ ಮಾಡುವುದಿಲ್ಲವೆಂದು ನಾನು ಹೇಳಿದಲ್ಲಿ ನಿನಗೆ ಆಶ್ಚರ್ಯವಾಗಬಹುದು. ಕಮ್ಯುನಿಸಂ ಪ್ರತಿಪಾದಿಸುತ್ತಿರುವ ಕರ್ನಾಟಕದ ಯಾವ ಲೇಖಕನೂ ಇದುವರೆಗೆ ಓದುಗರ ಹೃದಯದಲ್ಲಿ ಚಿರಸ್ಥಾಯಿಯಾದ ಸ್ಥಾನಗಳಿಸಲಾಗಿಲ್ಲ."

"ಕಾರಣವೇನು ?"

"ಅವರ ಕೃತಿಗಳಲ್ಲಿ ಸಾರವಿಲ್ಲ. ಅವುಗಳಲ್ಲಿ ಬಹುಭಾಗ ರಷ್ಯಾ, ಚೀನಾದಿಂದ ಬರುವ ಕೃತಿಗಳ ಅನುವಾದ. ಅವರು ಸ್ವತಂತ್ರವೆಂದು ಬರೆಯುವುದು ಈ ಕೃತಿಗಳ ಕನ್ನಡರೂಪ. ಕಮ್ಯುನಿಸಂಗೆ ಗಂಟು ಬಿದ್ದ ಯಾವನೂ ಶ್ರೇಷ್ಟ ಲೇಖಕನಾಗಲಾರನೆಂಬ ನಂಬಿಕೆ ನನ್ನ ಮನಸ್ಸಿನಲ್ಲಿ ಮಾತ್ರವೇ ಅಲ್ಲ ಕನ್ನಡ ಓದುಗರೆಲ್ಲರ ಮನಸ್ಸಿನಲ್ಲಿಯೂ ಆಳವಾಗಿ ಬೇರೂರಿದೆ. **ಸಾಹಿತ್ಯದ ಅವಿನಾಶಿಯಾದ ಗುಣಗಳಿದ್ದರೇ ಅದು ಸಾಹಿತ್ಯವಾಗುತ್ತದಲ್ಲದೆ ಕಮ್ಯುನಿಸಂ ಕಸಿಮಾಡಿಕೊಳ್ಳುವುದರಿಂದ ಸಾಹಿತ್ಯವಾಗುವುದಿಲ್ಲ.**"

"ನೀನು ಈ ಸಮಸ್ಯೆಯ ಬಗ್ಗೆ ಇಷ್ಟು ವಿಚಾರ ಮಾಡಿರುವೆ ಎಂಬುದು ನನಗೆ ತಿಳಿದಿರಲಿಲ್ಲ ಗುಂಡೂ."

"ವಿಚಾರಮಾಡಲೇ ಬೇಕಾಗಿದೆ. ಭಾರತ ರಾಷ್ಟ್ರ, ಸಂಸ್ಕೃತಿ, ಜನಜೀವನದ ಬಗ್ಗೆ ವಿಶ್ವಾಸವುಳ್ಳವರೆಲ್ಲರೂ ವಿಚಾರಮಾಡಬೇಕಾದ ವಿಷಯ ಇದು."

"ಈ ಬಗ್ಗೆ ಕನ್ನಡ ಲೇಖಕರ ಪ್ರತಿಕ್ರಿಯೆಯೇನು ?"

"ಆಲಸ್ಯನೀತಿ. ಈ ವಿಷಯ ನಾಲ್ಕಾರು ತಿಂಗಳು ಕಳೆದ ಮೇಲೆ ಚರ್ಚಿಸೋಣ. ಕನ್ನಡ ಲೇಖಕರ ಪರಿಚಯ ಮೊದಲು ನಿನಗಾಗಲಿ."

ಲಲಿತಮ್ಮ, ಗೌರಮ್ಮನವರು, ರಾಮು ಬಂದರು. ರಾಮು ಗಾಡಿಯಲ್ಲಿದ್ದ ಪಾತ್ರೆ ಪದಾರ್ಥಗಳನ್ನು ತಂದು ಒಳಗಿಟ್ಟ. ಲಲಿತಮ್ಮ, ಗೌರಮ್ಮನವರು ಬಟ್ಟೆಯ ಗಂಟುಗಳನ್ನು ಒಳಕ್ಕೆ ಹೊತ್ತು ತಂದರು.

"ಬಹಳ ವ್ಯಾಪಾರ ಮಾಡಿಕೊಂಡು ಬಂದಿರುವ ಹಾಗಿದೆ"

ಎಂದು ಪ್ರಸಾದ್ ನುಡಿದ.

"ಹೌದು. ಮನೆಗೆ ಬೇಕಾಗುವುದನ್ನೆಲ್ಲಾ ಒಂದೇ ಸಾರಿ ತಂದು ಬಿಟ್ಟೆವು."

"ಏನು ತಂದಿದ್ದೀರಿ, ನನಗಷ್ಟು ತೋರಿಸಿರಮ್ಮ." ಎಂದು ಗುಂಡಣ್ಣ ಕೇಳಿದ.

ಲಲಿತಮ್ಮ ಬಟ್ಟೆಯ ಗಂಟಗಳನ್ನು ತಂದು ಪ್ರಸಾದ್, ಗುಂಡಣ್ಣನ ಮುಂದೆ ಬಿಚ್ಚಿದಳು.

"ಅಮ್ಮನಿಗೆ ಒಂದು ಜತೆ ಸೀರೆ. – ನನಗೆ ಒಂದು ಜತೆ ಸೀರೆ – ಟವಲು, ಬೆಡ್‌ಷೀಟುಗಳು, ಕಿಟಕಿ ಬಾಗಿಲುಗಳಿಗೆ ತೆರೆಗಳು – ಯಜಮಾನರಿಗೆ ಪಂಚೆ, ಷರ್ಟಿನ ಬಟ್ಟೆ, ಪಯಿಜಾಮ ಬಟ್ಟೆ – ಮನೆಗೆ ಬೇಕಾದ ಪಾತ್ರೆಗಳು, ಟೀಸೆಟ್ ಎಲ್ಲಾ ತಂದೆವು."

"ನನಗೇನೂ ತರಲಿಲ್ಲವೇ" ಎಂದು ಗುಂಡಣ್ಣ ಕೇಳಿದ.

"ಇವೆಲ್ಲಾ ನಿಮ್ಮದೇ - ಏನು ಬೇಕಾದರೂ ನೀವು ತೆಗೆದುಕೊಳ್ಳ ಬಹುದು."

"ಏನೂ ಬೇಡ್ರಮ್ಮ - ನೀವು ಸುಖವಾಗಿದ್ದರೆ ಸಾಕು - ಇನ್ನು ನಿಮ್ಮ ಯಜಮಾನರನ್ನು ಒಪ್ಪಿಸಿಕೊಳ್ಳಿ. ನಾನು ಹೋಗಿಬರುತ್ತೇನೆ."

"ಹತ್ತು ನಿಮಿಷ ಕೂಡಿ - ಕಾಫಿ ಮಾಡಿಕೊಡುತ್ತೇನೆ."

"ಕಾಫಿ ತಿಂಡಿಯೆಲ್ಲಾ ಮುಗಿಸಿಕೊಂಡೇ ನಾವು ಕುಳಿತೆವು."

"ಕಾಫಿ ತಿಂಡಿ ಎಲ್ಲಿತ್ತು ?"

"ಇದೆಯಲ್ಲಾ ಕೃಷ್ಣಪ್ಪನ ಹೋಟಲು."

ಗುಂಡಣ್ಣ ಹೋದಮೇಲೆ ಲಲಿತಾ ಪ್ರಸಾದನ ಪಕ್ಕದಲ್ಲಿ ಕುಳಿತು

"ನನಗಾಗಿ ಎರಡು ಸೀರೆ ತಂದೆ ದೊರೆ."

"ನೋಡಿದೆ. ತುಂಬ ಸಂತೋಷ. ನೀನು ಬಿಚ್ಚೋಲೆ ಗೌರಮ್ಮನ ಹಾಗಿರುವುದು ಕಂಡು ನನ್ನ ಮನಸ್ಸಿಗೆ ತುಂಬ ವ್ಯಥೆಯಾಗುತ್ತಿತ್ತು. – ಸುಂದರಮ್ಮನವರನ್ನು ನೋಡಿ ಬಂದೆಯಾ ?"

"ಇಲ್ಲ – ಪೇಟೆಯಲ್ಲಿಯೇ ಬಹಳ ಹೊತ್ತಾಯಿತು. ನೀವು ಎಲ್ಲೆಲ್ಲಿಗೆ ಹೋಗಿದ್ದಿರಿ."

"ಪಂಡಿತರನ್ನು ನೋಡಿಕೊಂಡು, ಟೈಪ್‌ರೈಟರ್ ಕೊಂಡುಕೊಂಡು, ಚಿಕ್ಕಮ್ಮನನ್ನು ಕಂಡುಬಂದೆ."

"ತಂದೆಯವರು ಮನೆಯಲ್ಲಿದ್ದರೇ ?"

"ಇರಲಿಲ್ಲ."

"ನಾಗಮ್ಮತ್ತೆ ಹೇಗಿದ್ದಾರೆ ?"

"ಚೆನ್ನಾಗಿದ್ದಾಳೆ. ನಿನ್ನ ಕರೆದುಕೊಂಡು ಬರಲಿಲ್ಲವೆಂದು ತುಂಬ ಆಕ್ಷೇಪಣೆ ಮಾಡಿದಳು."

"ಗಿರಿಜಕ್ಕನ ವಿಷಯ ಏನು ಹೇಳಿದರು ?"

"ನಿನ್ನ ಹಾಡೇ ಅವಳೂ ಹಾಡಿದಳು."

"ಹೋಗಲಿ - ನನ್ನ ಜತೆಗೆ ಒಬ್ಬರಾದರೂ ಇದ್ದಾರಲ್ಲಾ !"

"ನಿಮ್ಮಿಬ್ಬರ ಮಧ್ಯೆ ಸಿಕ್ಕಿಕೊಂಡು ನನ್ನಗತಿ ?"

"ನಾಗಮ್ಮತ್ತೆಗೆ ಏನು ಹೇಳಿದಿರಿ ?"

"ಯೋಚನೆ ಮಾಡೋಣ ಎಂದು ಹೇಳಿದೆ.?

"ಯೋಚನೆ ಜೇಗ ಕಾರ್ಯೋನ್ಮುಖವಾಗಬೇಕು."

"ಅಂದರೆ, ನಾನು ಅವಳ ಕಾಲಮೇಲೆ ಬಿದ್ದು ಇಲ್ಲಿಗೆ ಕರೆದುಕೊಂಡು ಬರಬೇಕು."

"ನೀವು ಕರೆದುಕೊಂಡು ಬರದಿದ್ದರೆ ನಾನು ಕರೆದುಕೊಂಡು ಬರುತ್ತೇನೆ."

"ನಿನ್ನ ಜತೆ ಅವಳಿರುವುದಿಲ್ಲ."

"ಬೇಡ – ನೀವಿಬ್ಬರೂ ಜತೆಯಲ್ಲಿರಿ - ನಾನು ಬೇರೆ ಇರುತ್ತೇನೆ."

"ಈ ಮಾತು ಹೇಳುವುದಕ್ಕೇ ನನ್ನ ಬೆಂಗಳೂರಿಗೆ ಕರೆತಂದೆಯಾ ?"

"ಒಂದು ಹೆಣ್ಣಿಗಾಗಿರುವ ತಪ್ಪನ್ನು ಸರಿಮಾಡುವುದಕ್ಕೆ."

"ತಪ್ಪಾಗಿರುವುದು ಹೆಣ್ಣಿಗಲ್ಲ - ಗಂಡಿಗೆ."

"ವನಿತ, ವಿತ್ತ, ಲತೆಗೆ ಆಶ್ರಯಬೇಕು."

"ಈ ವನಿತೆಗೆ ಆಶ್ರಯವಿದೆ."

"ತೌರುಮನೆಯ ಆಶ್ರಯ ಹೋಟೇಲ್ ವಾಸ ಮಾಡಿದಂತೆ. ನಾಲ್ಕು ದಿನ ಕಳೆದ ಮೇಲೆ ಹೊರಗೆ ಹೋಗಲೇಬೇಕು."

"ಕೆಲವರಿಗೆ ಮನೆ ವಾಸಕ್ಕಿಂತ ಹೊಟೇಲ್ ವಾಸವೇ ಪ್ರಿಯ. ಮನೆಯೂಟಕ್ಕಿಂತ ಹೊಟೇಲ್ ಊಟವೇ ಪ್ರಿಯ. ಮನೆಯ ವಾತಾವರಣಕ್ಕಿಂತ ಹೊಟೇಲ್ ವಾತಾವರಣವೇ ಆಪ್ಯಾಯಮಾನ."

"ಗಿರಿಜಮ್ಮ ಆ ವರ್ಗಕ್ಕೆ ಸೇರಿದವರೆಂದು ನಾನು ನಂಬುವುದಿಲ್ಲ."

"ನಾನು ಸುಳ್ಳು ಹೇಳುತ್ತಿರುವೆನೇ ?"

"ಸುಳ್ಳಲ್ಲ - ಹಿಂದಿನ ಘಟನೆಗಳಿಂದ ನಿಮ್ಮ ಮನಸ್ಸು ಕೆಟ್ಟಿದೆ-"

"ಒಡೆದ ಕನ್ನಡಿ ಕೂಡಿಸಲಾಗುವುದೇ ?"

"ಇಂದಿನ ವಿಜ್ಞಾನ ಅದನ್ನು ಸಾಧಿಸಿದೆ."

"ಇದು ವಿಜ್ಞಾನವಲ್ಲ - ಜೀವನ."

"ಜೀವನ ಕಲೆಯೂ ಹೌದು - ವಿಜ್ಞಾನವೂ ಹೌದು."

"ನೀನು ವೊಂಡುವಾದ ಮಾಡುತ್ತಿರುವೆ ಲಲಿತಾ."

"ಇಲ್ಲ ದೊರೆ. ನನ್ನ ಮಾತು ಕೇಳಿ."

"ಹುಚ್ಚಿ. ಎಷ್ಟು ದಡ್ಡಿಯೇ ನೀನು."

ಎಂದು ನಿಟ್ಟುಸಿರು ಬಿಟ್ಟ.

## ೭

ಮಾರನೆಯ ದಿನ ಶಾಲೆ ನಡೆಯುತ್ತಿರುವಾಗಲೇ ಲಲಿತಮ್ಮ 'ಸೇವಾಸದನ'ಕ್ಕೆ ಹೋದಳು. ಶಾಲೆಯ ಕಛೇರಿಯಲ್ಲಿ ಟಪಾಲ್ ಕಳುಹಿಸುತ್ತಿದ್ದ ಸುಂದರಮ್ಮನವರು ಆಶ್ಚರ್ಯ ಸಂತೋಷ ವ್ಯಕ್ತಗೊಳಿಸುತ್ತಾ 'ಲಲಿತಮ್ಮ! - ಯಾವಾಗ ಬಂದೆ?' ಎಂದು ಕೇಳಿದರು.

"ಮೂರುನಾಲ್ಕು ದಿವಸವಾಯಿತು."

"ಐದು ನಿಮಿಷ ಕುಳಿತುಕೋ. ಟಪಾಲ್ ಕೆಲಸ ಮುಗಿಸಿ ಬರುತ್ತೇನೆ."

ಟಪಾಲು ಮುಗಿಸುವುದಕ್ಕೆ ಸುಂದರಮ್ಮನವರಿಗೆ ವ್ಯವಧಾನವಿಲ್ಲ. ಮೇಜಿನ ಮೇಲಿದ್ದ ನಾಲ್ಕೈದು ಕಾಗದಗಳಿಗೆ ಸಹಿ ಹಾಕಿ 'ಉಳಿದವನ್ನು ನಾಳೆ ನೋಡಿಕೊಳ್ಳೋಣ' ಎಂದು ರೈಟರಿಗೆ ಹೇಳಿದರು.

"ಎಷ್ಟು ದಿವಸವಾಯ್ತಮ್ಮ ನಿನ್ನ ನೋಡಿ - ಚೆನ್ನಾಗಿದ್ದೀಯಾ ?"

"ಎಲ್ಲಾ ನಿಮ್ಮ ಆಶೀರ್ವಾದ."

"ಇದೇನೀಗ ಬೆಂಗಳೂರು ಜ್ಞಾಪಕಕ್ಕೆ ಬಂದದ್ದು."

"ಯಜಮಾನರು ಒಂದು ದೈನಂದಿನ ಪತ್ರಿಕೆಯ ಸಂಪಾದಕತ್ವ ವಹಿಸಿಕೊಂಡರು. ಇಲ್ಲಿ ಇರಬೇಕೆಂದೇ ಬಂದಿದ್ದೇವೆ."

"ತುಂಬ ಸಂತೋಷ. ನೀನು ಬಂದದ್ದು ನನಗೆ ಕೋಟಿಭುಜ ಬಂದಂತಾಯಿತು."

"ನನ್ನ ಜತೆಯಲ್ಲಿದ್ದ ಉಪಾಧ್ಯಾನಿಯರಲ್ಲಿ ಯಾರು ಯಾರು ಇದ್ದಾರೆ."

"ರಂಗೂಬಾಯಿಗೆ ಸರ್ಕಾರಿ ಸ್ಕೂಲಿನಲ್ಲಿ ಕೆಲಸ ಸಿಕ್ಕಿತು. ಸುಂದರ ಮೀನಾಕ್ಷಿಗೆ ಲಗ್ನವಾಯಿತು. ಅವರಿಬ್ಬರೂ ಸೇವಾಸದನ ಬಿಟ್ಟರು. ಉಳಿದವರೆಲ್ಲಾ ಇದ್ದಾರೆ. ನಿನ್ನ ಯಜಮಾನರ ಪತ್ರಿಕೆ ಯಾವಾಗ ಹೊರಬೀಳುತ್ತದೆ."

"ವಿಜಯದಶಮಿಯ ದಿವಸ."

"ಮನೆ ಎಲ್ಲಿ ಮಾಡಿದ್ದೀ ?"

"ಆಫೀಸಿನ ಹಿಂದೆಯೇ ಮನೆ. ಭಾರತ್ ಟಾಕೀಸಿಗೆ ತುಂಬ ಹತ್ತಿರ - ಸೇವಾಸದನ ಹೇಗೆ ನಡೆದಿದೆ ?"

"ನಡೆದಿದೆ. ನೀನು ಹೋದದ್ದು ನನ್ನ ಬಲಗೈ ಮುರಿದು ಹೋಯಿತು ಲಲಿತಮ್ಮ. ನಿನ್ನ ಸ್ಥಾನ ಮೀಸಲಾಗಿಟ್ಟಿದ್ದೇನೆ - ಬರುತ್ತೀಯೇನು ?"

"ನನಗೆ ಪುರುಸೊತ್ತೆಲ್ಲಿದೆ ಸುಂದರಮ್ಮನವರೇ. ಯಜಮಾನರು ತಮ್ಮ ಪತ್ರಿಕೆಯ 'ಮಹಿಳಾ, ಮಕ್ಕಳ ಪುಟ'ವನ್ನು ನನ್ನ ಕೊರಳಿಗೇ ಗಂಟು ಹಾಕಿದ್ದಾರೆ."

ಆ ಕೆಲಸ ಮಾಡುವುದಕ್ಕೆ ನಿನಗಿಂತ ದಕ್ಷರು ಯಾರು ಲಲಿತಮ್ಮ. ಮನೆಯಲ್ಲಿ ಯಾರು ಯಾರಿದ್ದೀರಿ ?"

"ನಾನೂ, ಯಜಮಾನರು, ನಮ್ಮಮ್ಮ."

ಸುಂದರಮ್ಮನವರು ಉಳಿದಿದ್ದ ಕೆಲಸವನ್ನು ಫಸ್ಟ್ ಅಸಿಸ್ಟೆಂಟ್ ಲೋಕನಾಯಕಮ್ಮನಿಗೆ ವಹಿಸಿ, ಲಲಿತಮ್ಮನ ಜತೆಯಲ್ಲಿ ತಮ್ಮ ಮನೆಗೆ ಬಂದು. ಅಡಿಗೆಯವನಿಗೆ ಕಾಫಿ, ತಿಂಡಿ ಮಾಡಲು ಹೇಳಿ ಲಲಿತಮ್ಮನೊಂದಿಗೆ ಮಾತನಾಡುತ್ತ ಕುಳಿತರು."

"ಗಿರಿಜಮ್ಮ ಬಂದಿದ್ದಾರೆಯೇ ?"

"ಇಲ್ಲ ಮ್ಯಾಡಾಂ. ನಾವು ಇಲ್ಲಿಗೆ ಬಂದಿರುವುದು ಅವರಿಗೆ ಗೊತ್ತಿದೆಯೋ ಗೊತ್ತೇ ಇಲ್ಲವೊ ?"

"ಈಗ ಅವರ ತಂದೆಗೆ ಮೈಸೂರಿನಲ್ಲಿ ಕೆಲಸ."

"ತಿಳಿಯಿತು."

"ನಿಮ್ಮ ಯಜಮಾನರು ಏನು ಹೇಳುತ್ತಾರೆ."

"ಬೆಂಗಳೂರಿಗೆ ಬಂದರೆ ಈ ಸಮಸ್ಯೆಯೇಳುತ್ತದೆ ಎಂದು ತಿಳಿದೇ ಅವರು ಒಲ್ಲೆಯೆಂದರು. ನಾನು ಬಲವಂತಮಾಡಿ ಅವರನ್ನು ಎಳೆದುಕೊಂಡು ಬರಬೇಕಾಯಿತು. ಬೊಂಬಾಯಿನ ಸ್ನೇಹಿತರಿಗೆಲ್ಲಾ ನನ್ನ ಮೇಲೆ ತುಂಬ ಕೋಪ."

"ನಿನ್ನ ಮನಸ್ಸಿನಲ್ಲೇನಿದೆ ?"

"ಗಂಡಹೆಂಡಿರನ್ನು ಕೂಡಿಸಬೇಕೆಂದಿದೆ."

"ಗಿರಿಜಮ್ಮ ನಿಮ್ಮ ಜತೆಯಲ್ಲಿರುತ್ತಾರೆಯೇ ?

"ನಾನು ಪ್ರತ್ಯೇಕವಾಗಿರಲೂ ಸಿದ್ಧ-"

"ನಿನಗೆ ಬುದ್ಧಿಯಿಲ್ಲ. ಕೂಡದ ದಾಂಪತ್ಯ ಕೂಡಿಸಲು ನೀನೇಕೆ ಪ್ರಯತ್ನಿಸುತ್ತಿರುವೆ. ನಿನ್ನ ಪ್ರಯತ್ನದಿಂದ ಯಾರಿಗೆ ಸುಖವಾಗುತ್ತದೆ ಯೋಚಿಸು."

"ನನ್ನ ಮೇಲಿನ ಅಪಖ್ಯಾತಿಯಾದರೂ ಕಳೆಯುತ್ತದೆ ?"

"ನಿನ್ನ ಗಂಡನಿಗಿಂತ ನಿನ್ನ ಖ್ಯಾತಿ ಹೆಚ್ಚೇ."

"ಇಲ್ಲ ಮ್ಯಾಡಾಂ. ನೀವೂ ನನ್ನ ಬಗ್ಗೆ ಕಠಿಣವರ್ತನೆ ತೋರಿದರೆ ನಾನು ಯಾರಲ್ಲಿ ದುಃಖ ತೋಡಿಕೊಳ್ಳಬೇಕು."

"ನಿಜವಾಗಿ ಹೇಳು. ಗಿರಿಜಮ್ಮ ಬೇಕೆಂದು ನಿನ್ನ ಯಜಮಾನರು ಬಯಸುತ್ತಾರೆಯೇ ?"

"ಇಲ್ಲ."

"ಯಜಮಾನ ಬೇಕೆಂದು ಗಿರಿಜಮ್ಮನೂ ಬಯಸುತ್ತಿಲ್ಲ. ಈ ವಿಷಯ ನಾನು ಖಚಿತವಾಗಿ ಹೇಳಬಲ್ಲೆ. ದೋರೆಗಾಯಿ ಹಿಸುಕಿ ಹಣ್ಣು ಮಾಡುವುದಕ್ಕಾಗುವುದಿಲ್ಲ ತಾಯೀ – ಹಾಗೆ ಮಾಡಿದರೆ ರುಚಿಯೂ ಇರುವುದಿಲ್ಲ."

"ನಿಮ್ಮೆಲ್ಲರ ಅಭಿಪ್ರಾಯವೂ ಒಂದೇ ಆಗಿದೆಯಲ್ಲ ಮ್ಯಾಡಾಂ,"

"ನಿನ್ನ ದುಃಖ ನನಗರ್ಥವಾಗುತ್ತದೆ ಲಲಿತಮ್ಮ. ನೀನು ಮಧ್ಯೆ ಬಂದುದರಿಂದ ಗಿರಿಜಮ್ಮನಿಗೂ, ಮೂರ್ತಿರಾಯರಿಗೂ ವಿಯೋಗವಾಯಿತೆಂದು ನೀನು ತಿಳಿದುಕೊಂಡಿರುವೆ. ನಿನ್ನ ತರ್ಕ ಶುದ್ಧ ತಪ್ಪು. ನೀನು ಮಧ್ಯೆ ಬರದಿದ್ದರೂ ವಿಯೋಗವಾಗುತ್ತಲೇ ಇತ್ತು. ಆದರೆ ನೀನು ಮಧ್ಯೆ ಬಂದುದರಿಂದ ಮೂರ್ತಿರಾಯರ ಜೀವನ ಒಂದು ನೆಲೆಗೆ ಬಂದಿತು; ಅವರ ಚೇತನ ಮುರುಟಹೋಗದೆ ಉಳಿದುಕೊಂಡಿತು. ಯಾವದೋ ಧರ್ಮಸೂಕ್ಷ್ಮ ಮೆಚ್ಚಿಸುವುದಕ್ಕೆ ನೀನೀಗ ಮೂರ್ತಿರಾಯರಿಗೆ ದೊಡ್ಡ ಅನ್ಯಾಯ – ಹಾನಿ ಮಾಡಲು ಹೊರಟಿರುವೆ."

"ಹಾಗನ್ನಬೇಡಿ ಮ್ಯಾಡಾಂ - ನನ್ನ ದೇಹದ ರಕ್ತದಿಂದ ನನ್ನ ದೊರೆ ಪಾದತೊಳೆಯಲು ಸಿದ್ಧಳಾಗಿದ್ದೇನೆ."

"ನನ್ನ ಮಾತು ಕೇಳು - ಗಿರಿಜಮ್ಮನ ಗೊಡವೆ ಬಿಟ್ಟುಬಿಡು."

ಅಡಿಗೆಯವನು ತಿಂಡಿ ಕಾಫಿ ತಂದಿಟ್ಟು ಹೋದ. ಸುಂದರಮ್ಮನವರ ಬಲವಂತಕ್ಕೆ ಲಲಿತಮ್ಮ ಒಂದೆರಡು ಚೂರು ಚಕ್ಕುಲಿ ಬಾಯಿಗೆ ಹಾಕಿಕೊಂಡು ಕಾಫಿ ಕುಡಿದಳು.

"ನನಗೆ ನಿನ್ನ ಸಹಾಯ ತುಂಬ ಬೇಕು ಲಲಿತಾ."

"ನಿಮಗೆ ನಾನೇನು ಸಹಾಯಮಾಡಬಲ್ಲೆ ಮ್ಯಾಡಾಂ."

"ಏನು ಮಾಡಬಲ್ಲೆಯೆಂಬುದು ಕ್ರಮೇಣ ನಿನಗೇ ಗೊತ್ತಾಗುತ್ತದೆ.... ವಾರವೆಲ್ಲಾ ನಿನ್ನ ಮಹಿಳಾಪುಟದ ಕೆಲಸವಾಗುತ್ತದೆಯೇ ?"

"ಇಲ್ಲ. ಒಂದೆರಡು ದಿವಸದ ಕೆಲಸ. 'ಸೆಂಚುರಿ' ಪತ್ರಿಕೆಯಲ್ಲಿಯೂ ನಾನೂ ಯಜಮಾನರೂ ನಮ್ಮ ಪುಟಗಳನ್ನು ಮುಂದುವರಿಸುತ್ತೇವೆ."

"ವಾರಕ್ಕೆ ನಾಲ್ಕು ದಿವಸ ನನಗೆ ಕೊಡಲು ಸಾಧ್ಯವೇ ?"

"ಅಗತ್ಯವಾಗಿ."

"ಸೇವಾಸದನ ಊರ್ಜಿತಾವಸ್ಥೆಗೆ ಬಂದಿತು. ಅದರ ಬಗ್ಗೆ ನಾನು ಚಿಂತಿಸುವುದಿಲ್ಲ. ನನ್ನ ತರುವಾಯವೂ ಈ ಸಂಸ್ಥೆ ಚೆನ್ನಾಗಿ ನಡೆದುಕೊಂಡು ಹೋಗುತ್ತದೆ ಎನ್ನುವ ವಿಷಯದಲ್ಲಿ ನನಗೆ ಅನುಮಾನವಿಲ್ಲ........ನೀನು

ಇಲ್ಲಿದ್ದಾಗ್ಗೆ ನಾವಿಬ್ಬರೂ ಒಂದು 'ಅಭಯಾಶ್ರಮ' ತೆಗೆಯುವ ವಿಷಯ ಆಲೋಚಿಸುತ್ತಿದ್ದೆವು. ಜ್ಞಾಪಕವಿದೆಯೇ ?"

"ಇಲ್ಲದೆ ಉಂಟೇ ಮ್ಯಾಡಾಂ."

"ನಿರ್ಗತಿಕರಿಗಾಗಿ 'ಕರುಣಾಶ್ರಮ' ತೆಗೆದಿರುವ ಶ್ರೀಮಾನ್ ರಾಮಚಂದ್ರರಾಯರು ನಿನಗೆ ಗೊತ್ತಿರಬೇಕು."

"ಗೊತ್ತಿಲ್ಲದೆ ಏನು - ಸೇವಾಸದನಕ್ಕೆ ಎಷ್ಟೋ ಸಾರಿ ಬಂದಿದ್ದರಲ್ಲ."

"ಏನೋ ದುರ್ವಿಧಿಯಿಂದ ದಾರಿತಪ್ಪಿಹೋಗುವ ನಮ್ಮ ಹೆಣ್ಣುಮಕ್ಕಳ ಕರುಣಾಜನಕಸ್ಥಿತಿ ಕಂಡು ಆ ಮುಪ್ಪಿನ ಮುದುಕರು ಕಣ್ಣೀರಿಡುತ್ತಾರೆ. ಇಂಥ ಹೆಣ್ಣುಮಕ್ಕಳು ನನ್ನಲ್ಲಿ ತಿಂಗಳಿಗೆ ಇಬ್ಬರು - ಮೂವರು ಬರುತ್ತಿರುತ್ತಾರೆ. ಕೆಲವರ ಕಥೆ ಹೇಳುತ್ತೇನೆ ಕೇಳು : ಈಗ್ಗೆ ನಾಲ್ಕು ತಿಂಗಳಾಗಿರಬಹುದು. ಒಬ್ಬಾಕೆ ಮೂರು ಜನ ಹೆಣ್ಣು ಮಕ್ಕಳನ್ನು ಕರೆದುಕೊಂಡು ಬಂದರು. ಮಕ್ಕಳು ಮುದ್ದಾಗಿದ್ದವು. ಹೊಟ್ಟೆಗಿಲ್ಲದೆ ಸೊರಗಿದ್ದವಷ್ಟೆ. ತಾಯಿ ತೀರ ನಿರ್ಗತಿಕಳು. ಮಕ್ಕಳನ್ನು ಸಾಕಲಾರದೆ ಮಿಷನ್ನಿಗೆ ಒಪ್ಪಿಸಿ ಬಿಡಬೇಕೆಂದು ಯೋಚಿಸುತ್ತಿದ್ದಳು.

— ಒಂದು ದಿನ ರಾಮಚಂದ್ರರಾಯರು ಸುಮಾರು ಹದಿನೇಳು ವಯಸ್ಸಿನ ಒಂದು ಹುಡುಗಿ ಕರೆದುಕೊಂಡು ಬಂದರು. ಅಂಥ ಸ್ಫುರದ್ರೂಪಿಯೇನಲ್ಲ - ನೋಡುವುದಕ್ಕೆ ಲಕ್ಷಣವಾಗಿದ್ದಳು. ಒಂದು ರಾತ್ರಿ ಅವಳು ಬಂದು 'ಕರುಣಾಶ್ರಮ'ದ ಬಾಗಿಲಲ್ಲಿ ಬಿದ್ದಿದ್ದಳಂತೆ. ರಾಯರು ಅವಳಿಗೆ ಉಪಚಾರ ಮಾಡಿ ಇಲ್ಲಿಗೆ ಕರೆತಂದರು. ಅವಳ ಕಥೆಯೇನೆಂದರೆ : ಹುಡುಗಿಗೆ ಲಗ್ನವಾಗಿತ್ತು ಪ್ರಸ್ತವಾಗಿರಲಿಲ್ಲ. ಯಾವಾಗಲೋ ಕಾಲುತಪ್ಪಿ ಜಾರಿ ಹುಡುಗಿ ಕಳ್ಳಬಸಿರಾಗಿಬಿಟ್ಟಳು. ಗಂಡನಿಗೆ ಗೊತ್ತಾಯಿತು. ಅವನು ನಿರ್ದಾಕ್ಷಿಣ್ಯವಾಗಿ ಅವಳನ್ನು ನಿರಾಕರಿಸಿಬಿಟ್ಟ. ತಂದೆ ತಾಯಿ ಅಪಮಾನ ಸಹಿಸಲಾಗದೆ ಹುಡುಗಿಯನ್ನು ಮನೆಯಿಂದಾಚೆ ನೂಕಿದರು.

— ಈ ಕಥೆ ಕೇಳು. ಹುಡುಗಿ ಸತ್ಕುಲಪ್ರಸೂತೆ. ಸದ್ವಂಶಕ್ಕೆ ಸೇರಿದವಳು. ಗಂಡ ಶುದ್ಧ ಭಂಡ. ಯಾವದೋ ಪ್ರೈವೇಟ್ ಫರ್ಮ್‌ನಲ್ಲಿ (Private Firm) ಅವನು ಟೈಪಿಸ್ಟ್ ಆಗಿದ್ದಾನೆ. ಫರ್ಮ್‌ನಲ್ಲಿ ತನ್ನ ಪ್ರಾಶಸ್ತ್ಯ ಬೆಳಸಿಕೊಳ್ಳಲು ತನ್ನ ಹೆಂಡತಿಗೂ, ಯಜಮಾನನಿಗೂ ಗಂಟು

ಹಾಕಲು ನೋಡಿದ. ಈ ಹುಡುಗಿ ಕೇಳಲಿಲ್ಲ. ಗಂಡ ಹೆಂಡರಿಗೆ ಹಣಾಹಣಿ ವ್ಯಾಜ್ಯವಾಯಿತು. ಗಂಡನ ಮನೆಬಿಟ್ಟು ಹುಡುಗಿ ನನ್ನಲ್ಲಿ ಓಡಿಬಂದಳು. ಇವರೆಲ್ಲರ ದುಃಖದ ಕಥೆ ಕೇಳಿ, ನೋಡಿ ನಾನೂ ರಾಯರೂ 'ಅಭಯಾಶ್ರಮ' ತೆಗೆದೇಬಿಟ್ಟೆವು."

"ತೆಗೆದೇಬಿಟ್ಟಿರಾ ?"

"ಈಗ ಆರುಜನ ಇದ್ದಾರೆ. ಪ್ರತಿದಿನವೂ ಹೆಣ್ಣುಮಕ್ಕಳು ಬರುತ್ತಲೇ ಇದ್ದಾರೆ. ರಾಯರು 'ಕರುಣಾಶ್ರಮ' ಕಟ್ಟಿಕೊಂಡಿದ್ದಾರೆ, ಅವರಿಗೆ ನಿಮಿಷವೂ ಬಿಡುವಿಲ್ಲ; ನಾನು 'ಸೇವಾಸದನ' ಕಟ್ಟಿಕೊಂಡಿದ್ದೇನೆ. ಈ ಕೆಲಸ ನೀನು ಒಪ್ಪಿಕೊಂಡರೆ ನಮ್ಮಿಬ್ಬರಿಗೂ ಮಹೋಪಕಾರಮಾಡಿದಂತಾಗುತ್ತದೆ. ಈ ವರ್ಷ ಮುಗಿದ ಕೂಡಲೆ ನಾನು 'ಸೇವಾಸದನ'ದ ಕೆಲಸ ಬೇರೆ ಯಾರಿಗಾದರೂ ಒಪ್ಪಿಸಿ ಸಂಪೂರ್ಣವಾಗಿ 'ಅಭಯಾಶ್ರಮ'ದ ಕೆಲಸಕ್ಕೆ ನಿಂತು ಬಿಡುತ್ತೇನೆ."

"ಈ ಕೆಲಸ ನನಗೊಪ್ಪಿಸಿ ನೀವು ನನಗೆ ಮಹೋಪಕಾರ ಮಾಡುತ್ತಿರುವಿರಿ ವ್ಯಾಡಾಂ. ಇವಕ್ಕೆ ನಾನೂ ನನ್ನ ಯಜಮಾನರೂ ದುಡಿಯಲು ಸಿದ್ಧರಾಗಿದ್ದೇವೆ. ಮುಂಬಯಿಯಲ್ಲಿಯೂ ನಾವು ಇದೇ ಚಿತ್ರವನ್ನು ಕಂಡೆವು."

ಎಂದು ನಿರ್ಮಲನ ಚರಿತ್ರೆಯನ್ನೂ, ಪ್ರಸಾದ್ ವಿವರಿಸಿದ್ದ ಅಭಾಗಿನಿಯರ ಚರಿತ್ರೆಗಳನ್ನೂ ತಿಳಿಸಿದಳು.

"ಹೆಣ್ಣುಮಕ್ಕಳು ತಮ್ಮ ಸ್ವಂತ ದುಡಿಮೆಯಿಂದ ಮರ್ಯಾದೆಯಾಗಿ ಜೀವನ ಮಾಡಲು ಸಾಧ್ಯವೆಂದು ನಾವು ತೋರಿಸಿಕೊಡಬೇಕಾಗಿದೆ. 'ಅಭಯಾಶ್ರಮ'ದ ಹೆಣ್ಣುಮಕ್ಕಳಿಗೆ ವೃತ್ತಿಶಿಕ್ಷಣ ಕೊಡಿಸಬೇಕು. ಎಲ್ಲಕ್ಕೂ ಹಣ - ಹಣ. ಈ ಕೆಲಸಕ್ಕೆ ದೊಡ್ಡ ಮನುಷ್ಯರ ಬಳಿ ಹೋಗಿ ಹಣ ಕೇಳುವುದಕ್ಕೂ ಅಂಜಿಕೆಯಾಗುತ್ತದೆ ಲಲಿತಮ್ಮ."

"ಏಕೆ ವ್ಯಾಡಾಂ ?"

"ಈ ದೊಡ್ಡ ಮನುಷ್ಯರು ತಮ್ಮ ಹಣಕ್ಕೆ ಪ್ರತಿಫಲ ಬಯಸುತ್ತಾರೆ."

"ನಿರ್ಭಾಗ್ಯರನ್ನು ಕಾಪಾಡಿದುದೇ ಹೆಚ್ಚಿದಸಲ್ಲವೇ - ಅದಕ್ಕಿಂತ ಪ್ರತಿಫಲ ಬೇಕೇ?"

"ಆಶ್ರಮದ ಹೆಣ್ಣುಮಕ್ಕಳನ್ನು ನಾವು ವೇಶ್ಯಾವೃತ್ತಿಗೆ ಇಳಿಸಲು ಸಿದ್ಧವಾಗಿದ್ದರೆ ಶ್ರೀಮಂತರ ಸಹಾಯ ದೊರೆಯುವುದು."

"ಯಾವ ನರಕಜೀವನದಿಂದ ಅವರನ್ನು ರಕ್ಷಿಸುತ್ತೇವೆಯೋ ಅದೇ ನರಕಜೀವನಕ್ಕೆ ನಾವೇ ಮತ್ತೆ ತಳ್ಳುವುದೇ ? ಬೀದಿಯಲ್ಲಿ ಭಿಕ್ಷೆಬೇಡಿ ಆಶ್ರಮ ನಡೆಸೋಣ ಮ್ಯಾಡಾಂ – ಶ್ರೀಮಂತರ ಹಂಗು ಬೇಕಿಲ್ಲ."

"ನನಗೆ ವಯಸ್ಸಾಯಿತು ಲಲಿತಮ್ಮ. ನನ್ನ ಬಗ್ಗೆ ಯಾರು ಏನೂ ಹೇಳಲು ಅವಕಾಶವಿಲ್ಲ. ನೀನು ಪ್ರಾಪ್ತವಯಸ್ಕಳು, ರೂಪಸಿ – ನಿನ್ನ ಬಗ್ಗೆ ಎಂಥ ಅಪಪ್ರಚಾರ ಆರಂಭವಾಗಬಹುದೆಂಬುದನ್ನು ಆಲೋಚಿಸು. ಅಭಯಾಶ್ರಮದ ಕೆಲಸ ಬಹಳ ಕಷ್ಟದ ಕೆಲಸ."

"ನಾನು ನಡೆದುಹೋಗುತ್ತಿರುವ ದಾರಿ ಪವಿತ್ರವಾದುದು, ಸತ್ಯಾಭಿಮುಖವಾದುದು ಎನ್ನುವ ಧೈರ್ಯ ನನಗಿರುವವರೆಗೆ ಯಾರ ನಿಂದೆಯೂ ಏನೂ ಮಾಡಲಾರದು ಮ್ಯಾಡಾಂ."

"ಯೋಚಿಸು ಲಲಿತಮ್ಮ. ನಿಮ್ಮ ಯಜಮಾನರನ್ನೂ ಕೇಳಿ ಸಾವಕಾಶವಾಗಿ ನಿರ್ಧರಿಸು. ನೊಂದ ನಿನ್ನ ಜೀವಕ್ಕೆ ಮತ್ತಷ್ಟು ನೋವುಂಟುಮಾಡಲು ನಾನು ಬಯಸುವುದಿಲ್ಲ."

ಆಗಲೆಂದು ಒಪ್ಪಿಕೊಂಡು, ಲಲಿತಮ್ಮ ಮೇಲಕ್ಕೆದ್ದಳು. ಸುಂದರಮ್ಮನವರು 'ಸೇವಾಸದನ'ದ ಆಳನ್ನು ಲಲಿತಮ್ಮನ ಜತೆ ಕಳುಹಿಸಿಕೊಟ್ಟರು.

## ೮

ವಿಜಯದಶಮಿಗೆ ಎರಡು ದಿವಸ ಮುಂಚಿತವಾಗಿಯೇ '**ಜನಸಂದೇಶ**' ಪತ್ರಿಕೆಯ ಮೊದಲನೆಯ ಸಂಚಿಕೆ ಸಿದ್ಧವಾಯಿತು. ಶೆಟ್ಟರು ಮಾಜಿಸ್ಟ್ರೇಟರ ಮನೆಗೇ ಹೋಗಿ ಡಿಕ್ಲರೆಷನ್ (Declaration) ತಮ್ಮ ಹೆಸರಿನಲ್ಲಿಯೇ ತೆಗೆದುಕೊಂಡು ಬಂದರು. ವಿಜಯದಶಮಿಯ ದಿನ ಪತ್ರಿಕೆ ಕರ್ನಾಟಕದ ಎಲ್ಲ ಭಾಗಗಳ ಓದುಗರ ಕೈಸೇರುವಂತೆ ವ್ಯವಸ್ಥೆಮಾಡಿದರು. ಮುಂಬಯಿ, ಬೆಳಗಾಂವಿ, ಮದರಾಸು, ಹೈದರಾಬಾದುಗಳಿಗೆ ಪ್ಲೇನ್ ಮೂಲಕ ಪತ್ರಿಕೆಗಳು

ಕಳುಹಿಸಲ್ಪಟ್ಟವು. ಸ್ವಯಂ ಶೆಟ್ಟರೇ ಪತ್ರಿಕೆಗಳನ್ನು ತೆಗೆಸಿಕೊಂಡು ಮೈಸೂರಿಗೆ ಹೋದರು.

ಶೆಟ್ಟರು ಡಿಕ್ಲರೇಷನ್ ತಮ್ಮ ಹೆಸರಿನಲ್ಲಿ ತೆಗೆದುಕೊಂಡ ವಿಷಯ ಆಫೀಸಿನಲ್ಲಿ ವಿವಿಧ ಊಹಾಪೋಹೆಗಳಿಗೆ ಆಸ್ಪದವಿತ್ತಿತ್ತು. ಶೆಟ್ಟರ ವರ್ತನೆ ವಿಶ್ವೇಶ್ವರಯ್ಯನಿಗೆ ಅಸಮಾಧಾನವನ್ನುಂಟುಮಾಡಿತ್ತು. ಆಫೀಸಿನಲ್ಲಿ ಪತ್ರಿಕೆ ಮುಗುಚಿಹಾಕುತ್ತ 'ಗೋಪಾಲಶೆಟ್ಟರು ಸಂಪಾದಕರು - ಪ್ರಸಾದರೂ, ನಾವೂ ಅವರ ಕೈಕೆಳಗೆ ಉಪಸಂಪಾದಕರು' ಎಂದು ವಿಶ್ವೇಶ್ವರಯ್ಯ ಮೂದಲಿಸುತ್ತ ನುಡಿದ.

"ಹಾಗಿಲ್ಲವಲ್ಲರೀ - ಶೆಟ್ಟರು ಹೆಸರಿಗೆ ಸಂಪಾದಕರು; ಪ್ರಸಾದರು ನೈಜವಾದ - ಸಂಪಾದಕರು. ನಾವೆಲ್ಲಾ ರ್‍ಯಾಂಕ್ ಅಂಡ್ ಫೈಲ್ (Rank and File)"ಎಂದು ಸೂರ್ಯನಾರಾಯಣ ವ್ಯಾಖ್ಯಾನಮಾಡಿದ.

"ಶೆಟ್ಟರ ಹೆಸರಿನಲ್ಲಿ ಡಿಕ್ಲರೇಷನ್ ತೆಗೆದುಕೊಳ್ಳಬಾರದಾಗಿತ್ತೇನು ?" ಎಂದು ಪುಟ್ಟಣ್ಣ ಕೇಳಿದ.

"ಯಾರು ಬೇಡವೆಂದವರು ಸರ್. ಶೆಟ್ಟರೇ ಪತ್ರಿಕೆಯ ಮಾಲಿಕರು. ಪತ್ರಿಕೆಗೆ ಹಣ ಸುರಿದಿರುವವರು ಅವರು. ಹಣಹಾಕಿದವರ ಹೆಸರು ಮುಂದಕ್ಕೆ ಬರದೆ ಬೇರೆಯವರ ಹೆಸರು ಮುಂದಕ್ಕೆ ಬರುವುದು ಯಾವ ನ್ಯಾಯ ?" ಎಂದು ಸೂರ್ಯನಾರಾಯಣ ವ್ಯಂಗವಾಗಿ ನುಡಿದ.

"ಪತ್ರಿಕೆಗಳಲ್ಲಿ ಸಂಪಾದಕವರ್ಗ ಬದಲಾಯಿಸುತ್ತಿರುತ್ತದೆ. ಮಾಲಿಕರು ಸಾಮಾನ್ಯವಾಗಿ ಬದಲಾಯಿಸುವುದಿಲ್ಲ. ಪತ್ರಿಕೆಯ ಧ್ಯೇಯ ಧೋರಣೆಯಲ್ಲಿ ವ್ಯತ್ಯಾಸವಾಗಬಾರದೆಂದು ಮಾಲೀಕರೇ ಡಿಕ್ಲರೇಷನ್ ತೆಗೆದುಕೊಳ್ಳುವ ಸಂಪ್ರದಾಯವಿದೆ."

"ನಮ್ಮಲ್ಲಿ ಯಾವದಕ್ಕೆ ಸಂಪ್ರದಾಯವಿಲ್ಲ ಪುಟ್ಟಣ್ಣನವರೇ. ಬೇರೆಯವರು ಬರೆದ ಇಡಿಯ ಕಾವ್ಯವನ್ನೇ ನೃಪತುಂಗ, ಕೃಷ್ಣದೇವರಾಯ ಮೊದಲಾದ ಅರಸರು ತಮ್ಮದು ಮಾಡಿಕೊಳ್ಳಲಿಲ್ಲವೇ ? ಅರಸರ ಪ್ರಭುತ್ವ ಇಂದು ಬಂಡವಾಳಗಾರರ ಪ್ರಭುತ್ವಕ್ಕೆ ಎಡೆಕೊಟ್ಟಿದೆ. ಆದರೆ ಎರಡರ ಮನೋಭಾವವೂ ಒಂದೇ"

ಎಂದು ಸೂರ್ಯನಾರಾಯಣ ತನ್ನ ವಾದ ಸಮರ್ಥಿಸಿದ.

"ನೀವು ಸಾಮ್ಯವಾದಿಗಳಂತೆ (Socialist) ಮಾತಾಡುತ್ತಿರುವಿರಿ ಸೂರ್ಯ ನಾರಾಯಣ - ಇದು ಸಾಮ್ಯವಾದಿಗಳ ಪತ್ರಿಕೆಯಲ್ಲ."

"ನೀವು ನಮ್ಮ ಪತ್ರಿಕೆಯ 'ಪ್ರಧಾನಲೇಖನ' ನೋಡಿರುವ ಹಾಗೆ ಕಾಣುವುದಿಲ್ಲ. ಸಂಪಾದಕೀಯದಲ್ಲಿ ಪ್ರಸಾದರು ವ್ಯಕ್ತಪಡಿಸಿರುವ ಅಭಿಪ್ರಾಯ ಗಳು ಬಂಡವಾಳವಾದವೋ ಸಾಮ್ಯವಾದವೋ ?"

ಸೂರ್ಯನಾರಾಯಣನ ಸವಾಲು ಪುಟ್ಟಣ್ಣನಿಗೆ ನುಂಗಲಾರದ ತುತ್ತಾಯಿತು. ಆದರೂ ಅವನು ಸೋಲನ್ನೊಪ್ಪಿಕೊಳ್ಳಲು ಸಿದ್ಧವಾಗಿರಲಿಲ್ಲ.

"ಯಜಮಾನರು ಪ್ರಸಾದರ ಪ್ರಧಾನಲೇಖನ ಮೆಚ್ಚಿಕೊಂಡಿಲ್ಲ."

"ಪ್ರಸಾದರು ಲೇಖನ ಓದಿದಾಗ ಯಜಮಾನರೂ ಇದ್ದರು- ಅವರೇ ಲೇಖನ ತೆಗೆದುಕೊಂಡು ಹೋಗಿ ಕಂಪೋಸರುಗಳ ಕೈಯಲ್ಲಿಟ್ಟರು."

"ಅದೆಲ್ಲಾ ಪಾಲಿಸಿ (Policy) ಕಣ್ರೀ. ಸ್ವಲ್ಪ ಸಾಮ್ಯವಾದದ ಅಫೀಮು ಕೊಡದಿದ್ದರೆ ಜನ ಪತ್ರಿಕೆಯನ್ನಾದರಿಸುವುದಿಲ್ಲ."

"ಇದು ಪಿಶಾಚಿ ಪವಿತ್ರಗ್ರಂಥವನ್ನು ಉಲ್ಲೇಖಿಸಿದಂತೆ (Devil Quoting the Scriptures) ಸೂರ್ಯನಾರಾಯಣ."

ಎಂದು ವಿಶ್ವೇಶ್ವರಯ್ಯ ಅಣಕವಾಡಿದ. ನೀರಿನಿಂದ ಹೊರಬಿದ್ದ ಮೀನಿನಂತಾಗಿತ್ತು ಪುಟ್ಟಣ್ಣನ ಪಾಡು.

"ನಾವು ಯಜಮಾನರ ಅನ್ನತಿನ್ನುವಾಗ ಅವರಿಗೆ ಬದ್ಧರಾಗಿರಬೇಕು."

"ಬದ್ಧರಾಗಿಲ್ಲದಿದ್ದರೆ ನಮ್ಮ ಕೆಲಸ ಹೋಗುತ್ತದೆ."

"ಯಜಮಾನರ ನೌಕರರಾಗಿದ್ದು ಅವರಿಗೆ ವಿರುದ್ಧವಾಗಿ ವರ್ತಿಸುವುದು ಯಾವ ನ್ಯಾಯ ?"

"ನಿಜ ನಿಜ - ಯಜಮಾನರು ಸಾಮ್ಯವಾದದ ಸೋಗುಹಾಕಿ ಬಂಡವಾಳ ಶಾಹಿಯನ್ನು ಸ್ಥಾಪಿಸುವುದು ಯಾವ ನ್ಯಾಯ."

"ಸಾಕು ಸುಮ್ಮನಿರ್ರೀ - ಸಾಮ್ಯವಾದ ಬಂಡವಾಳವಾದದ ವಿಷಯ ಬಹಳ ಗೊತ್ತಿದೆ ನಿಮಗೆ."

"ಸಾಮ್ಯವಾದದ ವಿಷಯ ಸ್ವಲ್ಪ ಗೊತ್ತಿದೆ ಪುಟ್ಟಣ್ಣನವರೇ. ಆದರೆ

ಬಂಡವಾಳ ವಾದದ ವಿಷಯ ಏನೂ ಗೊತ್ತಿಲ್ಲವೆಂದು ಒಪ್ಪಿಕೊಳ್ಳುತ್ತೇವೆ. ಆ ಬಗ್ಗೆ ನಿಷ್ಣಾತರಾದ ನಿಮ್ಮ ಮುಂದೆ ನಾವು ಉಸಿರೆತ್ತಲು ಸಾಧ್ಯವೇ ?"

"ನಾನು ಬಂಡವಾಳವಾದಿಯೇನ್ರೀ ?"

"ಯಜಮಾನರು ಬಂಡವಾಳವುಳ್ಳ ಬಂಡವಾಳವಾದಿಗಳು ; ನೀವು ಬಂಡವಾಳವಿಲ್ಲದ ಬಂಡವಾಳವಾದಿಗಳು - ಇಷ್ಟೇ ವ್ಯತ್ಯಾಸ"

ಎಂದು ವಿಶ್ವೇಶ್ವರಯ್ಯ ಕಟುವಾಗಿ ನುಡಿದ. ಇಬ್ಬರ ವಾದಕ್ಕೂ ಕಾವೇರಿ, ವಾದರಂಗದ ಬೇಲಿ ಕಿತ್ತುಹೋಗಿತ್ತು. ವಾದಿಗಳು ಮಲ್ಲರಾಗಲು ಹವಣಿಸುತ್ತಿದ್ದರು. ಬಸಪ್ಪ ಬೇಸರದಿಂದ

"ಹೋಗಲಿಬಿಡಿ ಸಾರ್. ಎಲ್ಲಿಯ ವಾದ. ಪ್ರಸಾದರು ಬರುತ್ತಿದ್ದಾರೆ" ಎಂದು ಎಚ್ಚರಿಸಿದ.

ಉಪಸಂಪಾದಕರು ತಮ್ಮ ಸ್ಥಾನಗಳಲ್ಲಿ ಕುಳಿತರು.

ಪ್ರಸಾದ್ ತನ್ನ ಕೋಣೆಯಲ್ಲಿ ಕುಳಿತು ಎಲ್ಲ ಉಪಸಂಪಾದಕರನ್ನೂ ಬರಮಾಡಿಕೊಂಡು, ಪತ್ರಿಕೆಯಲ್ಲಿ ಪ್ರತಿಯೊಬ್ಬರ ಹೊಣೆಗಾರಿಕೆಯನ್ನು ವಿವರಿಸುತ್ತಾ

"ಪತ್ರಿಕೆಯ ಶ್ರೇಯಸ್ಸಿನ ಬಗ್ಗೆ ಮಾಲಿಕರು ಶ್ರೀ ಗೋಪಾಲಶೆಟ್ಟರು ಉತ್ಸುಕರಾಗಿರುವಂತೆ ನಾವೂ ಉತ್ಸುಕರಾಗಿದ್ದೇವೆ. 'ಜನಸಂದೇಶ'ವನ್ನು ಕನ್ನಡದ ಏಕಮೇವಾದ್ವಿತೀಯ ಪತ್ರಿಕೆಯನ್ನಾಗಿ ಮಾಡಬೇಕೆಂಬುದು ನನ್ನ ಉತ್ಕಟಾಕಾಂಕ್ಷೆ. ಮಾಲೀಕರು, ನಾವು - ಇಬ್ಬರೂ ಈ ಪತ್ರಿಕೆಯ ಹಿತಾಹಿತಗಳ ಪಾಲುಗಾರರಾಗಿದ್ದೇವೆ. ಅವರದು ಬಂಡವಾಳದ ಪಾಲು - ನಮ್ಮದು ಕೆಲಸದ ಪಾಲು. ನಾವಿಬ್ಬರೂ ಕೂಡಿ ನಡೆದರೇ ಪತ್ರಿಕೆ ಊರ್ಜಿತವಾಗಲು ಸಾಧ್ಯ."

ನಮ್ಮ ಭಾಗದ ಕೆಲಸವನ್ನು ನಾವು ಹೇಗೆ ದಕ್ಷತೆಯಿಂದ ನಿರ್ವಹಿಸಬಹುದೆಂಬುದನ್ನು ನಾನು ಆಲೋಚಿಸಿದ್ದೇನೆ. ಪತ್ರಿಕೆಯಲ್ಲಿ ಪ್ರಕಟವಾಗುವ ಪ್ರತಿಯೊಂದು ಬರೆಹವೂ ತೂಕವೂ ಆಧಾರಸಹಿತವೂ ಆದುದಾಗಿರಬೇಕು. ಯಾವ ವ್ಯಕ್ತಿ, ಪಕ್ಷ, ಸಂಸ್ಥೆಯ ದಾಕ್ಷಿಣ್ಯಕ್ಕೂ ಕಟ್ಟುಬಿದ್ದು ನಾವು ಅಸತ್ಯ ಪ್ರಚಾರ ಮಾಡಬಾರದು.

ಪ್ರಜಾಹಿತವನ್ನೇ ಗುರಿಯಾಗಿಟ್ಟುಕೊಂಡಿರುವ ಪತ್ರಿಕೆ, ಪ್ರಜಾಹಿತ ವಿರೋಧಿಗಳನ್ನು ಬಯಲಿಗೆಳೆದು, ಅವರ ರೀತಿನೀತಿಗಳನ್ನು ಟೀಕಿಸಬೇಕಾದು ದಗತ್ಯ. ಆದರೆ ಈ ಬಗ್ಗೆ ನಾವು ಹೆಚ್ಚು ಜಾಗರೂಕರಾಗಿರಬೇಕು. ಯಾರನ್ನು ನಾವು ಟೀಕಿಸುವೆವೋ ಅವರು ನಿಜವಾಗಿ ಪ್ರಜಾಹಿತಕ್ಕೆ ವಿರುದ್ಧವಾಗಿ ಆಚರಿಸುತ್ತಿರುವರೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಅಭಿಪ್ರಾಯಭೇದಗಳಿವೆಯೆಂದು ಎದುರಾಳಿಯನ್ನು ಅಪನಿಂದೆಗೆ ಗುರಿಮಾಡುವುದು, ಅವನ ಮೇಲೆ ಇಲ್ಲಸಲ್ಲದ ಟೀಕೆ ಮಾಡುವುದು ಉತ್ತಮ ಪತ್ರಿಕೆಯ ಲಕ್ಷಣವಲ್ಲ - ಅದು ಪೀತಪತ್ರಿಕೆಗಳ (Yellow Journals) ವೈಶಿಷ್ಟ್ಯ. ಒಂದು ವೇಳೆ ನಮ್ಮಿಂದ ತಪ್ಪಾಗಿದ್ದರೆ ಶ್ರೀಮದ್ಗಾಂಭೀರ್ಯಕ್ಕೆ ಮಾರುಹೋಗದೆ ತಪ್ಪನ್ನು ಒಪ್ಪಿಕೊಳ್ಳುವುದು ಅಗೌರವವಲ್ಲ. ಈ ಬಗ್ಗೆ 'ಯಂಗ್ ಇಂಡಿಯಾ' (Young India) - 'ಹರಿಜನ' (Harijan) ಪತ್ರಿಕೆಗಳನ್ನು ನಡಸುವಾಗ ಪೂಜ್ಯ ಬಾಪೂಜಿ ಅನುಸರಿಸಿದ ನೀತಿಯನ್ನು ನಿಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಮಾನವನನ್ನೂ ಮಾನವತ್ವವನ್ನೂ ನಾವು ಗೌರವಿಸೋಣ. ಇತರರ ಛಿದ್ರಾನ್ವೇಷಣೆ ಮಾಡುವುದನ್ನು ಬಿಟ್ಟು ಅವರ ಒಳ್ಳಿತನ್ನು ಎತ್ತಿ ಹಿಡಿಯೋಣ. ಭಿನ್ನಾಭಿಪ್ರಾಯಗಳಿಗೆ ಅವಕಾಶವಿರಲಿ. ಸತ್ಯಕ್ಕೆ ಹಲವು ಮುಖಗಳಿವೆ. ನಾವು ಕಂಡಿರುವ ಮುಖವೇ ನಿತ್ಯ – ಉಳಿದವೆಲ್ಲವೂ ಅನಿತ್ಯ, ಅಸತ್ಯವೆಂದು ಭಾವಿಸುವುದು ಸಂಸ್ಕೃತಿಯ ಲಕ್ಷಣವಲ್ಲ.

ಇಂದು ನಮ್ಮ ದೇಶದ ಮೇಲೆ ಹೊರಗಿನ ರಾಜಕೀಯ ಶಕ್ತಿಗಳು ಪ್ರಭಾವ ಬೀರಲೆತ್ನಿಸುತ್ತಿವೆ. ನೂತನವಾಗಿ ಸ್ವಾತಂತ್ರ್ಯ ಪಡೆದಿರುವ ನಮ್ಮ ರಾಷ್ಟ್ರವನ್ನು ತಮ್ಮ ವಶವರ್ತಿ ಮಾಡಿಕೊಳ್ಳಲು ಸೋವಿಯಟ್ ರಷ್ಯಾ, ಸಂಯುಕ್ತ ಅಮೇರಿಕಾ ಎರಡೂ ಪ್ರಯತ್ನಿಸುತ್ತಿವೆ. ಉದಾತ್ತವೆಂದು ಹೊರಗಣ್ಣಿಗೆ ತೋರುವ ರಷ್ಯಾದ ಕಮ್ಯುನಿಸಂ ಕಡೆಗೆ ಕೆಲವರು; ಸಂಪತ್ಸಮೃದ್ಧಿಯ ಮೃಗತೃಷ್ಣೆಗೆ ಮರುಳಾಗಿ ಕೆಲವರು ಮಾಸ್ಕೋ, ವಾಷಿಂಗ್‌ಟನ್ ಕಡೆ ನೋಡುತ್ತಿದ್ದಾರೆ. ನಮ್ಮ ಕಮ್ಯುನಿಸ್ಟರಿಗೆ ಮಾಸ್ಕೋ, ಬಂಡವಾಳಗಾರರಿಗೆ ವಾಷಿಂಗ್‌ಟನ್ ಇಂದು ಕಾಶಿ, ಮೆಕ್ಕಾಗಳಿಗಿಂತ ಪವಿತ್ರಸ್ಥಳಗಳಾಗಿವೆ. ರಷ್ಯಾ, ಅಮೇರಿಕಾಗಳ ಸರ್ವಾಧಿಕಾರವನ್ನು ಒಪ್ಪಿಕೊಂಡ ರಾಷ್ಟ್ರಗಳ ಗತಿಯೇನಾಗಿದೆಯೆಂಬುದನ್ನು ನಾವು ಗಮನಿಸಬೇಕು. 'ಪೀಪಲ್ಸ್

ಡೆಮಾಕ್ರಸಿ ’ಗಳಲ್ಲಿ (People's Democracies) ರಷ್ಯಾ ವಿರುದ್ಧ ಪ್ರಬಲ ಆಂದೋಲನ ನಡೆದಿದೆ. ಬಲ್ಗೇರಿಯಾ, ರುಮಾನಿಯಾ, ಹಂಗೇರಿ ರಾಷ್ಟ್ರಗಳಲ್ಲಿ ದ್ವಿತೀಯ ಮಹಾಕ್ರಾಂತಿಯ ಸಿದ್ಧತೆ ನಡೆದಿದೆ. ಯುಗೋಸ್ಲಾವಿಯಾ ರಷ್ಯಾದ ಬೇಡಿಯನ್ನು ಕಿತ್ತೊಗೆದು, ರಾಷ್ಟ್ರಸಂಘಟನೆಯಲ್ಲಿ ತೊಡಗಿದೆ. ಚೀನಾ ಸೋವಿಯಟ್ ಬೇಡಿ ಕಳಚಿಕೊಳ್ಳಲು ಪ್ರಯತ್ನಿಸುತ್ತಿದೆ. ಅಮೇರಿಕಾದ ರಾಜಕಾರಣ ಪಾಕಿಸ್ತಾನ, ಈಜಿಪ್ಟ್, ಇರಾನ್, ಜಪಾನ್, ಕೊರಿಯಾ ರಾಷ್ಟ್ರಗಳಲ್ಲಿ ನಡೆಸಿರುವ ಅತ್ಯಾಚಾರಕ್ಕೆ ಜಗತ್ತೇ ಬೆರಗಾಗಿದೆ.

ಕೋರಿಯಾ, ಜರ್ಮನಿ, ಪಾಕಿಸ್ತಾನ, ಕಾಶ್ಮೀರಗಳಲ್ಲಿ ರಷ್ಯಾ ಅಮೇರಿಕಾ ಸರ್ವಾಧಿಕಾರದ ಸ್ಪರ್ಧೆ ನಡೆಸಿ, ಜಗತ್ತನ್ನೇ ಮತ್ತೊಂದು ಮಹಾಯುದ್ಧದಲ್ಲಿ ಕೆಡಹುವ ಪ್ರಯತ್ನ ನಡೆಸಿವೆ.

ಈ ಸನ್ನಿವೇಶದಲ್ಲಿ ಭಾರತ ಅನುಸರಿಸುತ್ತಿರುವ ನೀತಿ ಸಮಂಜಸವಾದುದಲ್ಲದೆ, ವಿಶ್ವಶಾಂತಿಗೆ ಭದ್ರವಾದ ಬುನಾದಿ ಹಾಕಿದೆ."

"ಒಂದಲ್ಲ ಒಂದು ದಿನ ಭಾರತ ಎರಡು ಗುಂಪುಗಳಲ್ಲಿ ಯಾವುದಾದರೂ ಸೇರಬೇಡವೇ ಸರ್." ಎಂದು ಪುಟ್ಟಣ್ಣ ಕೇಳಿದ.

"ಏಕೆ ಸೇರಬೇಕು. ಪರಸ್ಪರ ವಿನಿಮಯದೃಷ್ಟಿಯಿಂದ ಭಾರತ ಇಬ್ಬರ ಸಹಕಾರವನ್ನೂ ಪಡೆಯಬಹುದು."

"ರಷ್ಯಾ, ಅಮೇರಿಕಾದಂಥ ಪ್ರಬಲರಾಷ್ಟ್ರಗಳ ದೈತ್ಯಶಕ್ತಿಯನ್ನು ಭಾರತ ಎದುರಿಸಬಲ್ಲುದೇ" ಎಂದು ವಿಶ್ವೇಶ್ವರಯ್ಯ ಕೇಳಿದ.

"ಎದುರಿಸಲಾರದು. ರಷ್ಯಾ, ಅಮೇರಿಕಾ ದುರ್ಬಲ ರಾಷ್ಟ್ರಗಳ ಮೇಲೆ ಧಾಳಿ ನಡೆಸಿದರೆ ಅವುಗಳ ರಕ್ಷಣೆಗೆಂದೇ 'ಯುನೈಟೆಡ್ ನೇಷನ್ಸ್' (United Nations) ಸಂಸ್ಥೆ ಆರಂಭವಾಯಿತು. ಪ್ರೆಸಿಡೆಂಟ್ ವಿಲ್ಸನ್ ಸ್ಥಾಪಿಸಿದ 'ಲೀಗ್ ಆಫ್ ನೇಷನ್ಸ್' (League of Nations) ಸಂಸ್ಥೆಗೆ ಯಾವ ಗತಿಯಾಯಿತೋ ಅದೇ ಗತಿ ಯುನೈಟೆಡ್ ನೇಷನ್ಸ್‌ಗೆ ಆಗುತ್ತದೆ. ರಷ್ಯಾ, ಅಮೇರಿಕಾ ಯುನೈಟೆಡ್ ನೇಷನ್ಸ್ ಸಂಸ್ಥೆಯನ್ನು ಹರಿದು ಹಂಚಿಕೊಂಡಿವೆ."

"ವಿಶ್ವದ ಎಲ್ಲ ರಾಷ್ಟ್ರಗಳೂ ಈ ಉಭಯ ಮಹಾರಾಷ್ಟ್ರಗಳ ಮರೆಹೊಗುವುದು ಅನಿವಾರ್ಯ ಎಂದು ನೀವು ಹೇಳಿದಂತಾಯಿತು."

ಎಂದು ವಿಶ್ವೇಶ್ವರಯ್ಯ ಸವಾಲು ಹಾಕಿದ.

"ಅನಿವಾರ್ಯವಲ್ಲ ವಿಶ್ವೇಶ್ವರಯ್ಯನವರೇ. ಮೂರನೆಯ ಗುಂಪು ಒಂದು ಸುಸಂಘಟಿತವಾಗಬೇಕೆಂದು ಜವಹರಲಾಲ್‌ಜೀ ಹೇಳಿದುದನ್ನು ಜ್ಞಾಪಿಸಿಕೊಳ್ಳಿ. ನಾಳೆ ಕೊರಿಯಾ, ಜರ್ಮನಿ, ಫ್ರಾನ್ಸ್, ಭಾರತ, ಪಾಕಿಸ್ತಾನ, ಈಜಿಪ್ಟ್, ತುರ್ಕಿ, ಚೀಣ, ಜಪಾನ್, ಪೀಪಲ್ಸ್ ಡೆಮಾಕ್ರಸಿಯ ರಾಷ್ಟ್ರಗಳು ಒಂದುಗೂಡಿದರೆ ರಷ್ಯಾ, ಅಮೇರಿಕಾಗಳ ಪುಂಡುತನ ಅಡಗಿಹೋಗುತ್ತದೆ."

"ಈ ಸಂದರ್ಭದಲ್ಲಿ ನಾವು ಯಾವ ಧೋರಣೆಯನ್ನನುಸರಿಸಬೇಕು" ಎಂದು ಪುಟ್ಟಣ್ಣ ಪ್ರಶ್ನೆಮಾಡಿದ.

"ನಮ್ಮ ರಾಷ್ಟ್ರನಾಯಕರು ಜವಾಹರಲಾಲ್‌ಜಿ ಸೂಚಿಸಿರುವ ಮಾರ್ಗವೇ ನಮ್ಮ ಮಾರ್ಗ. ಪ್ರಗತಿಪರವಾದ ಯಾವ ನಿಯೋಜನೆ ಭಾರತ ಕೈಗೊಂಡರೂ ಅದು ಭಾರತದ ಪರಂಪರೆಗನುಗುಣವಾಗಿರಬೇಕು. ನಾವು ಸಾಮ್ಯವಾದದ ವಿಶಾಲ ತತ್ತ್ವಗಳನ್ನೊಪ್ಪಿಕೊಳ್ಳುತ್ತೇವೆ - ಆದರೆ ನಮ್ಮ ಸಾಮ್ಯವಾದ ಸ್ಟಾಲಿನ್ನನ ವೋಡ್ಕಾ (Vodka) ಶೀಷೆಯಿಂದಿಳಿದು ಬಂದ ಸಾಮ್ಯವಾದವಲ್ಲ; ಉಪನಿಷತ್ತಿನ ಋಷಿಗಳ, ಭಗವಾನ್ ಬುದ್ಧದೇವನ, ಆಚಾರ್ಯ ಶಂಕರರ ಕಮಂಡಲುವಿನಿಂದ ಬಂದ ಪವಿತ್ರೋದಕ. ನಮ್ಮ ಜನತೆಯ ಪರಂಪರೆ, ಸಂಸ್ಕೃತಿ, ಪರಿಸ್ಥಿತಿಗಳನ್ನನುಸರಿಸಿದ ಸಾಮ್ಯವಾದ ನಮಗೆ ಬೇಕು. ನಮ್ಮ ಅಧಿವ್ಯಾಧಿಯೇನೆಂಬುದನ್ನು ನಾವು ಮೊದಲು ಅರ್ಥಮಾಡಿಕೊಂಡು ಅದರ ಪರಿಹಾರಕ್ಕೆ ಅವಶ್ಯಕವಾದ ಮದ್ದನ್ನು ನಮ್ಮ ಪ್ರಯೋಗಶಾಲೆಯಲ್ಲಿಯೇ ಸಿದ್ಧಮಾಡಿಕೊಳ್ಳಬೇಕು."

ಸಮಿತಿಯ ಅಧಿವೇಶನದಲ್ಲಿ ಕುಳಿತಿದ್ದ ಮ್ಯಾನೇಜರ್ ರಾಮಚಂದ್ರ ಶೆಟ್ಟರು

"ಸರ್ವಸಮಂಜಸವಾದ ಧೋರಣೆಯನ್ನು ಸೂಚಿಸಿರುವಿ ಸರ್."

ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರಸಾದ್ ತನ್ನ ಮಾತು ಮುಂದುವರಿಸುತ್ತಾ

"ವಾರಕ್ಕೆ ಮೂರು ನಾಲ್ಕು ಬಾರಿ ನಾವು ಹೀಗೆಯೇ ಸೇರಿ ವಿಚಾರ ವಿನಿಮಯಮಾಡೋಣ. ನಮ್ಮ ಪತ್ರಿಕೆಯನ್ನೇ ನಾವು ನಿರ್ದಾಕ್ಷಿಣ್ಯವಾಗಿ ವಿಮರ್ಶಿಸೋಣ. ನನ್ನ ಲೇಖನಗಳನ್ನೂ ನೀವು ವಿಮರ್ಶಿಸಬೇಕು. ಅವರಲ್ಲಿ

ಪ್ರಮಾದವಶಾತ್ ಲೋಪದೋಷಗಳಿದ್ದರೆ ಎತ್ತಿ ತೋರಿಸಬೇಕು. ಒಂದು ಟೀಮಿನ (Team) ಹಾಗೇ ನಾವು ಕೆಲಸ ಮಾಡಿ ಈ ಪತ್ರಿಕೆಯನ್ನು ಚಿರಸ್ಥಾಯಿಗೊಳಿಸೋಣ." ಎಂದು ಹೇಳಿದ.

ಉಪಸಂಪಾದಕರು ಪ್ರಸಾದನ ಅಪ್ಪಣೆಪಡೆದು ಹೋದರು. ರಾಮಚಂದ್ರ ಶೆಟ್ಟರು ಮಾತ್ರ ಕುಳಿತ ಸ್ಥಳಬಿಟ್ಟು ಕದಲಲಿಲ್ಲ. ಪಳಿನಿಸಾಮಿಯನ್ನು ಕರೆದು ಹೊಟೇಲಿನಿಂದ ಕಾಫಿ ತರಿಸಿ, ಪ್ರಸಾದನಿಗೂಕೊಟ್ಟು ತಾವೂ ಕುಡಿಯುತ್ತ

"ನಿಮ್ಮ ಧ್ಯೇಯ ಧೋರಣೆಗೆ ಪೂರ್ಣವಿಜಯ ದೊರಕಲಿ ಎಂದು ನಾನು ಮನಃಪೂರ್ವಕವಾಗಿ ಹಾರೈಸುತ್ತೇನೆ ಪ್ರಸಾದರೇ" ಎಂದರು.

"ತಮ್ಮೆಲ್ಲರ ಸಹಕಾರವಿರುವಾಗ ಆ ಬಗ್ಗೆ ನನಗೆ ಸ್ವಲ್ಪವೂ ಭಯವಿಲ್ಲ ರಾಮಚಂದ್ರ ಶೆಟ್ಟರೇ."

"ನಿಮ್ಮ ಕೆಲಸ ಸುಲಭಸಾಧ್ಯವಾದುದಲ್ಲ. ಮಾಲಿಕರ ಮನಸ್ಸು ಅತಿ ಚಂಚಲ - ಅವರು ಯಾವ ಹೊತ್ತಿನಲ್ಲಿ ಹೇಗೆ ಹೊರಳುತ್ತಾರೆಂಬುದೇ ತಿಳಿಯುವುದಿಲ್ಲ."

"ಅವರನ್ನು ನೀವು ಬಹಳ ವರ್ಷಗಳಿಂದ ಬಲ್ಲಿರಾ?"

"ಬಲ್ಲೆ. ನನಗವರು ದೂರದ ಬಂಧುಗಳೂ ಆಗಬೇಕು, ನಾನು ರಾಲ್ಲಿ ಬ್ರದರ್ಸ್‌ನಲ್ಲಿ ಕೆಲಸಕ್ಕಿದ್ದೆ. ಆ ಕೆಲಸ ಬಿಡಿಸಿ ಇಲ್ಲಿಗೆ ಕರೆತಂದರು. ಪತ್ರಿಕಾ ಪ್ರಪಂಚದಲ್ಲಿ ದುಡಿಯಬೇಕೆಂದು ನನಗೂ ಮನಸ್ಸಿತ್ತು - ಬಂದುದಾಯಿತು."

"ಶಾಶ್ವತವಾಗಿ, ಗಟ್ಟಿಯಾಗಿ ಉಳಿಯಬೇಕೆಂದೇ ನಾವು ಮನೆ ಕಟ್ಟುತ್ತೇವೆ. ಅಜಾಗರೂಕತೆಯಿಂದಲೋ, ಅನನುಭವದಿಂದಲೋ ಪಾಯದಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾಗಿ ಮನೆ ಬಿರುಕುಬೀಳುತ್ತದೆ. ಅದನ್ನೇ ರಿಪೇರಿ ಮಾಡಿಕೊಂಡು ವಾಸಮಾಡಲೆತ್ನಿಸುತ್ತೇವೆ - ಅದು ರಿಪೇರಿಯಾಗಲು ಸಾಧ್ಯವಾಗದಿದ್ದರೆ ಮನೆ ಕೆಡವಿ ಬೇರೆ ಮನೆ ಕಟ್ಟಿಸುತ್ತೇವೆ. ಜೀವನವೂ ಹಾಗೇ ಅಲ್ಲವೇ ಶೆಟ್ಟರೇ ?"

"ಹೌದು ಸಾರ್ ಹೌದು. ನೀವು ಕಟ್ಟುತ್ತಿರುವ ಮನೆಯ ತಳಪಾಯದಲ್ಲಿ ದೋಷವಿರದಿರಲಿ ಎಂದೇ ನನ್ನ ಆಸೆ. ನಿಮ್ಮ ಜತೆ ಕೆಲಸ ಮಾಡುವುದೊಂದು ದೊಡ್ಡ ಭಾಗ್ಯ ನನಗೆ."

"ನಿಮ್ಮ ಶುಭಾಶಯಗಳಿಗೆ ನಾನು ತುಂಬ ಋಣಿ ಶೆಟ್ಟರೇ" ಎಂದು ಪ್ರಸಾದ್ ಹೇಳಿದ. ಶೆಟ್ಟರು ಎದ್ದು ಹೋಗುವಾಗ ಮೆಲ್ಲನೆ

"ಪುಟ್ಟಣ್ಣನ ವಿಚಾರದಲ್ಲಿ ಸ್ವಲ್ಪ ಜಾಗರೂಕರಾಗಿರಿ" ಎಂದರು.

"ಏಕೆ ?"

"ಅವರ ಚರ್ಚೆ ಸದ್ಯಕ್ಕೆ ಬೇಡ. ಕಾಲಕ್ರಮೇಣ ನಿಮಗೇ ಎಲ್ಲವೂ ತಿಳಿಯುತ್ತದೆ" ಎಂದರು.

ಪ್ರಸಾದ್ ಯೋಚಿಸುತ್ತ 'ಏಕೆ ಎಲ್ಲರೂ ಪುಟ್ಟಣ್ಣನ ಬಗ್ಗೆ ನನ್ನನ್ನು ಎಚ್ಚರಿಸುತ್ತಿದ್ದಾರೆ' ಎಂದು ತನ್ನನ್ನೇ ಕೇಳಿಕೊಂಡ.

೬

ಕಂಟೋನ್ಮೆಂಟಿನ ಅತ್ಯಂತ ಜನಾದರಣೀಯ ಸ್ಥಳಗಳಲ್ಲಿ 'ಸುಖಜಗತ್ತು' (Happy World) ಒಂದಾಗಿತ್ತು. ಸುಖಜಗತ್ತು ಜನಾದರಣೆ ಸಂಪಾದಿಸಿ ಕೊಳ್ಳುವುದಕ್ಕೆ ಹಲವು ಕಾರಣಗಳಿದ್ದವು. ನಲವತ್ತೇಳರ ಪೂರ್ವದಲ್ಲಿ ಆ ಸಂಸ್ಥೆಯನ್ನು ಇಂಗ್ಲೀಷಿನವರು ನಡೆಸುತ್ತಿದ್ದರು. ಇನ್‌ಬೌಂಡ್ ಫಾರ್ ಟ್ರೂಪ್ಸ್ (Inbound for Troops) ಆಗಿದ್ದುದರಿಂತ ಅದು ಟ್ರೂಪ್ಸಿಗೆ ಮೀಸಲಾಗಿತ್ತು. ಸಿವಿಲಿಯನ್ ಜನ ಅಲ್ಲಿ ಕಾಲಿಡಲು ಅಂಜುತ್ತಿದ್ದರು. ನಲವತ್ತೇಳರ ತರುವಾಯ ಒಬ್ಬ ಸ್ವದೇಶಿ ಸೇಂದಿ ಕಂಟ್ರ್ಯಾಕ್ಟರರ ಭಾವ ಮೈದುನರು ಅದನ್ನು ವಹಿಸಿಕೊಂಡು, ಸುಣ್ಣ ಬಣ್ಣಮಾಡಿಸಿ, ಹೊಸ ಹೊಸ ಸೌಕರ್ಯಗಳನ್ನು ಕಲ್ಪಿಸಿ, ನಲವತ್ತೆಂಟರ ಆಗಸ್ಟ್ ಹದಿನೈದು ಶುಭದಿವಸ 'ಸುಖಜಗತ್ತಿ'ನ ಆರಂಭೋತ್ಸವ ನಡೆಸಿದರು. ಅಂದು ಆ ಕಟ್ಟಡವಮೇಲೆ ಮೊಟ್ಟಮೊದಲಿಗೆ ರಾಷ್ಟ್ರಧ್ವಜ ಹಾರಾಡಿತು - ಹಜಾರದಲ್ಲಿ ಹಾರ ಹಾಕಿದ್ದ ಗಾಂಧೀಜಿ, ನೆಹ್ರೂ, ರಾಜೇಂದ್ರಬಾಬುಗಳ ದೊಡ್ಡ ಚಿತ್ರಗಳು ವಿಜೃಂಭಿಸಿದವು - ಧ್ವನಿವರ್ಧಕಗಳ ಮೂಲಕ ಹಿಂದೀ, ತಮಿಳು, ತೆಲುಗು ಚಿತ್ರಗಳ ಅನುರಗಾನ ಮೊಳಗಿತು. ಶ್ರೀರಾಮನವಮಿ ದಿವಸ ಪಾನಕ ಹಂಚುವಂತೆ, ಸುಖಜಗತ್ತಿನ ಹೊಸ ಮಾಲಿಕರು ತಮ್ಮ ಗಿರಾಕಿಗಳಿಗೆ ಅಂದು ಒಂದೊಂದು ಬಾಟಲು ಜರ್ಮನ್ ಬೀರನ್ನು ಉಚಿತವಾಗಿ ಹಂಚಿದರು. ಮಾಲಿಕರ

ಅನ್ಯಾದೃಶ ದೇಶಾಭಿಮಾನ ಕಂಡು ಗಿರಾಕಿಗಳಿಗೆ ಅವರ ಬಗ್ಗೆ ವಿಶ್ವಾಸ ಹುಟ್ಟಲು ಆಗಸ್ಟ್ ಮಹೋತ್ಸವವೇ ಕಾರಣವಾಯಿತು.

'ಸುಖಜಗತ್ತಿ'ನ ಪ್ರಾಶಸ್ತ್ಯ ಬೆಳೆಯುವುದಕ್ಕೆ ಆದರ ಮೇರೆಯೂ ಕಾರಣ ವಾಗಿತ್ತು. ಸುಖಜಗತ್ತಿನ ಕಟ್ಟಡ ದೊಡ್ಡ ರಸ್ತೆಗೆ ಸ್ವಲ್ಪ ದೂರದಲ್ಲಿಯೇ ಇತ್ತು. ವಿಶಾಲವಾದ ಕಾಂಪೌಂಡಿನಲ್ಲಿ ಸ್ವಲ್ಪದೂರ ನಡೆದು ಹೋದ ಮೇಲೇ ಕಟ್ಟಡ ಸಿಕ್ಕುತ್ತಿದ್ದುದು. ಕಟ್ಟಡದ ಮುಂದೆ, ಪೌಳಿಗೋಡೆಯವರೆಗೆ ಸೊಗ ಸಾದ ಹಸಿರು ಹಾಸು (Green Lawn). ಅತ್ತಿತ್ತ ಕಾರುಗಳನ್ನು ಬಿಟ್ಟು ಕೊಳ್ಳುವುದಕ್ಕೆ ವಿಶಾಲವಾದ ಸ್ಥಳ. ಪೌಳಿಗೋಡೆಯ ಹೊರಗಿದ್ದವರಿಗೆ ಒಳಗಿದ್ದವರು ಕಾಣದಂತೆ ಎತ್ತರವಾದ ಗೋಡೆಗಳು. ಹಸಿರು ಹಾಸಿನಮೇಲೆ, ಕಟ್ಟಡದ ಹಜಾರದಲ್ಲಿ, ಅಕ್ಕಪಕ್ಕದ ರೂಮುಗಳಲ್ಲಿ ಗಿರಾಕಿಗಳು ಕೂಡಲು ಅನುಕೂಲವಿದ್ದುದಲ್ಲದೆ ಮಹಡಿಯ ಮೇಲಿದ್ದ 'ತಾರಸೀವನ' (Terrace Garden) ದಲ್ಲಿಯೂ ಹಲವರು ಸುಖವಾಗಿ ಕೂಡಬಹುದಾಗಿತ್ತು. ಸಾಮಾನ್ಯ ವಾಗಿ ವಯಸ್ಕರಾದ ಗಿರಾಕಿಗಳು ಹಸಿರು ಹಾಸಿನಮೇಲೋ ಹಜಾರದಲ್ಲೋ ಕೂಡುತ್ತಿದ್ದರು. ತರುಣರಾದವರು ಮಹಡಿಯ ಮೇಲೆ ಹೋಗುತ್ತಿದ್ದರು.

'ಸುಖಜಗತ್ತು' ಬಾರ್ ಮತ್ತು ರೆಸ್ಟುರಾ ಆಗಿದ್ದುದಲ್ಲದೆ 'ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಹೌಸ್' ಕೂಡ ಆಗಿತ್ತು. ಪ್ರಧಾನ ಕಟ್ಟಡದ ಹಿಂದಿದ್ದ ಕಟ್ಟಡ ಇದಕ್ಕಾಗಿ ಮೀಸಲಾಗಿತ್ತು.

ಶ್ರೀಮಂತರು ಸಾಮಾನ್ಯವಾಗಿ ತಮ್ಮ ಕ್ಲಬ್ಬುಗಳಲ್ಲಿ ಅನುಕೂಲಮಾಡಿ ಕೊಳ್ಳುತ್ತಿದ್ದರು. ಕ್ಲಬ್ಬುಗಳಿಗೆ ಹೋಗುವ ಪರಿಪಾಠವಿಲ್ಲದ ಶ್ರೀಮಂತರು ಮುಖ್ಯವಾಗಿ ದೊಡ್ಡ ವರ್ತಕರು ಕಬ್ಬನ್ ಹೊಟೇಲ್ ಹಿಡಿಯುತ್ತಿದ್ದರು. ಮಧ್ಯಮವರ್ಗದ ಕೆಳದರ್ಜೆಯವರು (Lower Middle class) ರಸ್ತೆಯ ಮಗ್ಗುಲಲ್ಲಿ, ಕನ್‌ಸರ್ವೆನ್ಸಿಗೆ ಹತ್ತಿಕೊಂಡಿರುತ್ತಿದ್ದ ಬಾರ್‌ಗಳಲ್ಲಿ ತೃಪ್ತರಾಗು ತ್ತಿದ್ದರು. 'ಸುಖಜಗತ್ತಿ'ನ ಗಿರಾಕಿಗಳು ಈ ಎರಡು ವರ್ಗಗಳಿಗೂ ಸೇರಿದ ವರಲ್ಲ. ಅವರನ್ನು 'ಮೇಲು ದರ್ಜೆಯ ಮಧ್ಯಮವರ್ಗದವರು' (Upper Middle Class) ಎಂದು ಹೇಳಬಹುದು. ಸಾಧಾರಣ ವ್ಯಾಪಾರಸ್ಥರು, ಕಾಲೇಜ್ ಪ್ರೊಫೆಸರುಗಳು, ಸರ್ಕಾರಿ ನೌಕರರು, ಸಿನೀಮಾ ಥಿಯೇಟರು

ಗಳಲ್ಲಿ, ಡಿಸ್ಟ್ರಿಬ್ಯೂಟರ್ ಕಛೇರಿಗಳಲ್ಲಿ ಕೆಲಸ ಮಾಡುತ್ತಿದ್ದವರು, ಪತ್ರಿಕಾ ಪ್ರತಿನಿಧಿಗಳು, ಕೆಲವು ಸಂಪಾದಕರು 'ಸುಖಜಗತ್ತಿ'ನ ಪೋಷಕರಾಗಿದ್ದರು.

'ಸುಖಜಗತ್ತಿ'ನಲ್ಲಿ ತಪ್ಪದೆ ಸೇರುತ್ತಿದ್ದವರಲ್ಲಿ ರಾಘವಯ್ಯ ಅವನ ಮಿತ್ರವೃಂದವೂ ಒಂದಾಗಿತ್ತು. ಅವರು 'ತಾರಸೀವನ'ದ ಪಶ್ಚಿಮ ಮೂಲೆಯನ್ನೇ ಆಶ್ರಯಿಸಿದ್ದುದರಿಂದ ಅದಕ್ಕೆ 'ಜರ್ನಲಿಸ್ಟ್ ಕಾರ್ನರ್' (Journalists Corner) ಎಂದೂ ಹೆಸರು ಬಂದಿತ್ತು.

ಒಂದು ದಿನ ಸಂಜೆ ಏಳು ಗಂಟೆ ಇರಬಹುದು. 'ಯುಗವಾಣಿ' ಸಂಪಾದಕ ರಾಘವಯ್ಯ, 'ಕಾಲದೂತ' ಸಂಪಾದಕ ವಶಿಷ್ಠ, 'ಜನಮತ'ದ ಹರಿನಾರಾಯಣ—ಇವರೆಲ್ಲರ ಸಾಹಿತ್ಯ ಕಲಾ ವಿಮರ್ಶಕ ಹುನಗುಂದದ ಈಶ್ವರರಾಯ 'ತಾರಸೀವನ'ದಲ್ಲಿ ಸೇರಿದರು.

ನರದೌರ್ಬಲ್ಯಕ್ಕೆ ಪ್ರಸಿದ್ಧನಾಗಿದ್ದ ರಾಘವಯ್ಯ ತೋಣಚಿ ಹೊಕ್ಕಂತೆ ಆಡುತ್ತಿದ್ದ.

ಒಂದೆರಡು ಬಾರಿ ಬಾಯ್ ಬಂದು 'ಏನು ಬೇಕು ಸರ್' ಎಂದು ಕೇಳಿ 'ತಡಿ' ಎನ್ನಿಸಿಕೊಂಡು ಹೋಗಿದ್ದ.

ಮುಜುಗರ ಪಡುತ್ತಿದ್ದ ರಾಘವಯ್ಯ ವಶಿಷ್ಠನ ಕಡೆ ತಿರುಗಿ

"ಎಷ್ಟು ಹೊತ್ತಿಗೆ ಬರುತ್ತೇನೆಂದು ಹೇಳಿದ" ಎಂದು ಪ್ರಶ್ನಿಸಿದ.

"ಏಳಕ್ಕೆ ಸರಿಯಾಗಿ ಇಲ್ಲಿಗೇ ಬರುತ್ತೇನೆಂದು ಹೇಳಿದನಪ್ಪಾ - ಯಾಕೋ ತಡಮಾಡುತ್ತಿದ್ದಾನೆ."

"ಹೊಸ ಪೇಪರು. ಹೊಸದರಲ್ಲಿ ಅಗಸ ಗೋಣಿ ಎತ್ತಿತ್ತಿ ಒಗೀತಾನಂತೆ!" ಎಂದು ಹರಿನಾರಾಯಣ ಸೇರಿಸಿದ.

ಎಲ್ಲರೂ ಶಾಪ ಹಾಕುತ್ತಿರುವಂತೆ ಪುಟ್ಟಣ್ಣ ಮಹಡಿಯೇರಿ ಬಂದ. ಅವನನ್ನು ಮೊದಲು ಕಂಡ ಈಶ್ವರರಾಯ

"ಬಂದರು ಸರ್" ಎಂದ.

ಪುಟ್ಟಣ್ಣನನ್ನು ಕಂಡಕೂಡಲೆ ರಾಘವಯ್ಯ ಧ್ವನಿಯೆತ್ತರಿಸಿ

"ಯಾಕಯ್ಯಾ ಇಷ್ಟು ಲೇಟು" ಎಂದು ಕೇಳಿದ.

ಪಕ್ಕದ ಟೇಬಲ್ಲಿನ ಮುಂದಿದ್ದ ಒಂದು ಬೆತ್ತದ ಕುರ್ಚಿಯನ್ನೆಳೆದುಕೊಳ್ಳುತ್ತಾ ಪುಟ್ಟಣ್ಣ

"ಗಲಾಟೆಯ ಸಮಯ. ಹಾಳು ಬಸ್ಸುಗಳು ಸರಿಯಾಗಿ ಸಿಕ್ಕುವುದಿಲ್ಲ."

"ಸ್ವಲ್ಪ ಬೇಗ ಹೊರಡಬೇಕಾಗಿತ್ತು!"

"ನಮ್ಮ ಸಂಪಾದಕನ 'ಕಾನ್‌ಫರೆನ್ಸ್' ಕಾಟಬೇರೆ ಇದೆಯಲ್ಲಪ್ಪಾ. ಆಫೀಸಾದರೂ ತಪ್ಪಿಸಿಕೊಳ್ಳಬಹುದು - ಕಾನ್‌ಫರೆನ್ಸ್‌ಗಳಿಗೆ ತಪ್ಪಿಸಿಕೊಳ್ಳಲಾಗುವುದಿಲ್ಲ."

"ಇಷ್ಟು ಬೇಗ ಮುಗೀತೇ ?"

"ಇಲ್ಲ - ನಡೆದಿತ್ತು. ಯಾರೋ ಬಂಧುಗಳು ಬರುತ್ತಾರೆ - ನಾನು ಸ್ಟೇಷನ್ನಿಗೆ ಹೋಗಬೇಕು ಎಂದು ಹೇಳಿ ಪಾರಾದೆ."

ರಾಘವಯ್ಯ ಬಾಯ್‌ನನ್ನು ಹತ್ತಿರ ಕರೆದು

"ಐದು ಬೀರ್ – ಯಾವದಿದೆ ?"

"ಜರ್ಮನ್ – ಡಚ್ – ಫಾಲ್ಕನ್ – ಟಿನೆಟ್ಸ್"

"ಫಾಲ್ಕನ್ – ತಿನ್ನುವುದಕ್ಕೇನಿದೆ ?"

"ಎಲ್ಲಾ ಇದೆ ಸರ್."

"ಐದು ಆಮ್ಲೆಟ್ ಹೇಳು - ನೋಡು, ಎರಡು ಪ್ಯಾಕೆಟ್ ಪ್ಲೇಯರ್ಸ್ ಸಿಗರೇಟ್ ತೆಗೆದುಕೊಂಡು ಬಾ."

"ಆಗಬಹುದು ಸರ್" ಎಂದು ಹೇಳಿ ಬಾಯ್ ಹೋದ.

ಕೂದಲೇ ಬೆಳೆಯದ ತನ್ನ ಗಡ್ಡ ಉಜ್ಜಿಕೊಳ್ಳುತ್ತಾ ಉಗುರು ಮೊನೆಯನ್ನು ಪರಂಗಿ ಹುಡುಗಿಯರು ಬಿಸ್ಕತ್ತು ಕಡಿಯುವಂತೆ ಕಡಿಯುತ್ತಾ ಕುಳಿತಿದ್ದ ವಶಿಷ್ಠ

"ನಿಮ್ಮ ಸಂಪಾದಕರು ಜೋರಾಗಿರುವ ಹಾಗೆ ಕಾಣುತ್ತರಲ್ಲಾ!" ಎಂದು ಕೇಳಿದ.

"ಬೊಂಬಾಯಿಯಿಂದ ಹೊಸದಾಗಿ ಇಳಿದಿದ್ದಾರೆ - ಜೋರಾಗಿರಬೇಕಾದುದು ಸಹಜವೇ!"

"ನಿಮ್ಮ ಶೆಟ್ಟರು ಇನ್ನೂ ಕಸಿಮಾಡಿಲ್ಲವೋ ?"

"ಅವನು ನಿಧಾನದ್ರೋಹಿ - ಟೈಮ್ಸ್ ಬಾಂಬ್ (Time bomb) ಯಾವಾಗ, ಎಲ್ಲಿಡುತ್ತಾನೋ ಯಾರಿಗೆ ಗೊತ್ತಪ್ಪ."

ಬಾಯ್ ಶೀಷೆಗಳನ್ನು ಗ್ಲಾಸುಗಳನ್ನು ತಂದು, ಬಿರಡೆ ತೆಗೆದು ಗ್ಲಾಸುಗಳಿಗೆ ಬಗ್ಗಿಸಿ, ಶೀಷೆಗಳನ್ನು ಮೇಜಿನ ಮೇಲೆ ಇಟ್ಟು, ಕಿಸೆಯಿಂದ ಸಿಗರೇಟ್ ಪ್ಯಾಕೆಟ್‌ಗಳನ್ನೂ ಬೆಂಕಿ ಪೊಟ್ಟಣವನ್ನೂ ತೆಗೆದಿಟ್ಟು ಹೋದ.

ರಾಘವಯ್ಯ ಕೈಗೆ ಗ್ಲಾಸ್ ತೆಗೆದುಕೊಂಡು

"ಚೀರಿಯೊ ಪ್ಯಾಲ್ (Cheerio ! Pals !)" ಎಂದ.

ಎಲ್ಲರೂ ಸ್ವಲ್ಪ ಸ್ವಲ್ಪ ಕುಡಿದು ಗ್ಲಾಸುಗಳನ್ನು ಯಥಾಸ್ಥಳದಲ್ಲಿಟ್ಟರು.

"ಈಶ್ವರರಾಯನ ಕೆಲಸ ಏನು ಮಾಡಿದೆಯೋ ಪುಟ್ಟಣ್ಣ"

ಎಂದು ವಶಿಷ್ಠ ಕೇಳಿದ.

"ನನ್ನ ಬುದ್ಧಿಯೆಲ್ಲಾ ಖರ್ಚುಮಾಡುತ್ತಿದ್ದೀನಪ್ಪಾ – ಇನ್ನೂ ಸಫಲವಾಗಿಲ್ಲ."

"ನಿನಗೆ ಇರೋ ಬುದ್ಧೀನೇ ಸ್ವಲ್ಪ. ಅದನ್ನೂ ಖರ್ಚುಮಾಡಿಬಿಟ್ಟಿದ್ದೀ" ಎಂದು ರಾಘವಯ್ಯ ಹೇಳಿದ. ರಾಘವಯ್ಯನ ಶೀಷೆ ಖಾಲಿಯಾದುದು ಅವನ ಮುಖದ ಮೇಲೆ ಕಾಣುತ್ತಿತ್ತು.

ಮೌನಸ್ವಾಮಿಯ ಹಾಗೆ ಕುಳಿತು ತೀರ್ಥದ ಗಿಂಡಿ ಬರಿದು ಮಾಡುತ್ತಿದ್ದ ಹರಿನಾರಾಯಣ ತನ್ನ ನೀಳವಾದ ಮುಖ ಮೇಲಕ್ಕೆತ್ತಿ

"ಏನು ಪುಟ್ಟಣ್ಣ - ಶೆಟ್ಟರ ಅಂತರಂಗ ಸಚಿವ ನೀನು - ನಿನ್ನ ಕೈಯಲ್ಲಿ ಇಷ್ಟು ಕೆಲಸ ಸಾಧ್ಯವಾಗಲಿಲ್ಲವಲ್ಲ. ನ್ಯಾಯವಾಗಿ ನೀನು ಈಶ್ವರರಾಯನಿಗೆ ಸಂಪಾದಕ ಮಂಡಳಿಯಲ್ಲೇ ಸ್ಥಾನ ದೊರಕಿಸಿಕೊಡಬೇಕು."

"ನಮ್ಮ ಆಫೀಸ್ ಮ್ಯಾನೇಜರ್ ರಾಮಚಂದ್ರಶೆಟ್ಟಿಗೂ ನನಗೂ ಚೆನ್ನಾಗಿಲ್ಲಪ್ಪ. ಈಶ್ವರರಾಯನ ಬಗ್ಗೆ ನಾನು ಏನಾದರೂ ಗಟ್ಟಿಯಾಗಿ ಹೇಳಿದರೆ ನನ್ನ ತಿಥಿ ಎಲ್ಲಿ ಮಾಡಿಬಿಡುತ್ತಾನೋ ಎನ್ನೋ ಭಯ.— 'ಜನಜೀವಾಳ'ದ ದೀಪಾವಳಿ ಸಂಚಿಕೆಗೆ ಈಶ್ವರರಾಯನ ಲೇಖನ ನುಗ್ಗಿಸಿಬಿಡುತ್ತೇನೆ.' ಆ ಮೇಲೆ ಮುಂದಿನ ಮಾತು. ಈ ಸಂಪಾದಕನ ಮೂಲಕ ಹೋದರೆ ಪ್ರಯೋಜನವಿಲ್ಲ. ಶೆಟ್ಟರನ್ನೇ ಹಿಡಿದು ನಮ್ಮ ಕೆಲಸ ಆಗುಮಾಡಿಕೊಳ್ಳಬೇಕು."

"ಸಂಪಾದಕನೇನು ಬೆಂಕಿ ನವಾಬನೋ ?"

"ಅವನು ಏನೂಂತ ಹೇಳೋದೆ ಕಷ್ಟವಯ್ಯಾ - ಗಟ್ಟಿಯಾಗಿ ಕೂಡ ಯಾರ ಹತ್ತಿರಲೂ ಮಾತನಾಡುವುದಿಲ್ಲ. ಡಿಸ್ಟ್ರಿಬ್ಯೂಟರ್ಸ್ ಹುಡುಗರಿಂದ ಮೊದಲುಗೊಂಡು ಸಾವಕಾರರವರೆಗೆ ಎಲ್ಲರನ್ನೂ ಗೌರವವಾಗಿ ಕಾಣುತ್ತಾನೆ. ಅವನ ಆಫೀಸಿಗೆ ಹೋದಾಗಲೆಲ್ಲಾ ಕಾಫಿ ತರಿಸಿಕೊಡುತ್ತಾನೆ. ಕೆಲಸಗಾರರು ಯಾರು ಯಾವ ಸಹಾಯ ಕೇಳಿದರೂ ನಿರಾಕರಿಸುವುದಿಲ್ಲ - ಆದರೆ ಕೆಲಸದ ವಿಷಯದಲ್ಲಿ ಜೀವ ಹಿಂಡಿಬಿಡುತ್ತಾನಪ್ಪಾ. ಅವನೂ ರಾಕ್ಷಸನ ಹಾಗೆ ದುಡಿಯುತ್ತಾನೆ. ಮೊನ್ನೆ ಮಾರ್ಷಲ್ ಟೀಟೋದು ಒಂದು ಹೇಳಿಕೆ ಬಂತು ನೋಡು - ಆ ಸಂದರ್ಭದಲ್ಲಿ ಒಂದು ಲೇಖನ ಮಾಡೂಂತ ಹೇಳಿ ಎಂಟು ಹತ್ತು ಪುಸ್ತಕ ನನ್ನ ತಲೆಗೆ ಕಟ್ಟಿಬಿಟ್ಟ."

"ನೀನೇನು ಮಾಡಿದೆ?"

"ಮಾಡೋದೇನು – ಓದಿದ ಶಾಸ್ತ್ರ ಮಾಡಿ ಮೂರು ಮೊಳ ನೆಯ್ದೆ."

ಬಾಯ್ ಆಮ್ಲೆಟ್ಟಿನ ಪ್ಲೇಟುಗಳನ್ನು ಅವುಗಳ ವ್ಯಂಜನಗಳನ್ನೂ ತಂದಿಟ್ಟ. ರಾಘವಯ್ಯ ಇನ್ನೊಂದು ರೌಂಡ್ ಬೀರಿಗೆ ಆಜ್ಞೆಮಾಡಿದ.

"ನಿಮ್ಮ ಸಂಪಾದಕ ವಿಶೇಷ ಲೇಖನಗಳಿಗೆ ಯಾರು ಯಾರನ್ನು ಬುಕ್ ಮಾಡಿದ್ದಾನೆ" ಎಂದು ವಶಿಷ್ಠ ಪ್ರಶ್ನೆಮಾಡಿದ.

"ದೀಪಾವಳಿ ವಿಶೇಷ ಸಂಚಿಕೆಗೇ!"

"ಅಲ್ಲಯ್ಯ - ವಾರಾಂತ್ಯದ ಪುರವಣಿಗೆ."

"ಹೆಚ್ಚು ಜನಗಳನ್ನು ಕೇಳಿಲ್ಲ - ಅವನ ಹೆಂಡತಿಯೇ 'ಮಹಿಳಾಪುಟ'– 'ಮಕ್ಕಳ ಪುಟ' ನೋಡಿಕೊಳ್ಳುತ್ತಿದ್ದಾಳೆ. ವಿಮರ್ಶೆಗಳನ್ನು ನಾವು ಮಾಡುತ್ತೇವೆ. ಒಂದು ಲೇಖನ ಪ್ರಸಾದನೇ ಬರೆಯುತ್ತಾನೆ. ಅವನ ಪರಮ ಸ್ನೇಹಿತ ಗುಂಡಯ್ಯ 'ಕನ್ನಡದ ಕವಿಗಳ' ಮೇಲೆ ಬರೆಯುತ್ತಿದ್ದಾನೆ.— ಸುದರ್ಶನನ್ನು ಲೇಖನ ಬರೆಯಲು ಆಹ್ವಾನಿಸಿರುವುದಾಗಿ ಸುದ್ದಿ."

'ಸುದರ್ಶನ' ಎಂದ ಕೂಡಲೆ ರಾಘವಯ್ಯ ಬೆಚ್ಚಿಬಿದ್ದ. ಅವನ ಕೈಯಲ್ಲಿದ್ದ ಚಮಚ, ತ್ರಿಶೂಲ (Spoon and Fork) ಪ್ಲೇಟಿನೊಳಗೆ ಬಿದ್ದು ಶಬ್ದಮಾಡಿದವು.

"ಸುದರ್ಶನ ಎಂದೆಯಾ?"

"ಹೂ! ನಿನ್ನ ಪ್ರತಿಪಕ್ಷಿ ಸುದರ್ಶನ."

"ಪ್ರಸಾದ್ ಈ ಊರಿಗೆ ಹೊಸಬ – ಸುದರ್ಶನನ ಪರಿಚಯ ಇಷ್ಟು ಬೇಗ ಅವನಿಗೆ ಹೇಗಾಯಿತು ?"

"ಸಂಪಾದಕನ ಬಾಸ್ವೆಲ್ (Boswell) ಇದ್ದಾನಲ್ಲಪ್ಪಾ - ಗುಂಡುಕಲ್ಲು - ಅವನ ಕೆಲಸ ಇದು."

ವಶಿಷ್ಠನ ಬುದ್ಧಿ ಚುರುಕಾಗಿ ಓಡಿತು. ಬಾಯಿಗೆ ಒಂದುಚೂರು ಆಮ್ಲೆಟ್ ತುರುಕಿಕೊಂಡು, ಅದು ಗಂಟಲಿನಲ್ಲಿಳಿಯಲು ಮೇಲೆ ಬೀರ್ ಹುಯಿದು

"ಈ ಗುಂಡ ಸ್ಕೂಲ್‌ಮೇಷ್ಟ್ರಾಗಿದ್ದಾನಲ್ಲವೇನೋ ಪುಟ್ಟಣ್ಣ."

"ಆಗಿದ್ದಾನೇಂತ ನಾನೂ ಕೇಳಿದ್ದೀನಪ್ಪ."

"ರಾಘು ಏನಾದರೂ ಮಾಡಿ ಈ ಗುಂಡನ್ನ ಎತ್ತಂಗಡಿ ಮಾಡಿಸಬೇಕು ಕಣೋ. ಅವನು ಈ ಊರುಬಿಟ್ಟು ತೊಲಗಿದರೆ ಪ್ರಸಾದನ ಕೈಮುರಿದ ಹಾಗಾಗುತ್ತದೆ."

"ಅದು ಸರಿ - ಆದರೆ ನಮ್ಮ ಮಾತುಕೇಳಿ ಅವನನ್ನು ಡಿಪಾರ್ಟ್‌ಮೆಂಟಿನವರು ಟ್ರಾನ್ಸ್‌ಫರ್ ಮಾಡಬೇಕಲ್ಲ."

"ದೊಡ್ಡ ದೈನಂದಿನ ಪತ್ರಿಕೆ ಸಂಪಾದಕ. ಒಬ್ಬ ಸ್ಕೂಲ್‌ಮೇಷ್ಟ್ರನ್ನು ಟ್ರಾನ್ಸ್‌ಫರ್ ಮಾಡಿಸೋಕೆ ನಿನ್ನ ಕೈಯಲ್ಲಾಗುವುದಿಲ್ಲವೇನೋ ? ನಿನ್ನ ಸ್ಪೆಷಲ್ ಕಾಲಮ್ 'ಚೇಳುಬಾಣ'ದಲ್ಲಿ ಡಿ. ಪಿ. ಐ. (Director of Public Instruction) ಅವರನ್ನು ಸ್ವಲ್ಪ ವಿಚಾರಿಸಿಕೊಂಡರೆ ಸಾಕು – ಅವರೇ ನಿನ್ನ ಹುಡುಕಿಕೊಂಡು ಬಂದು ನೀನು ಹೇಳಿದ ಕೆಲಸ ಮಾಡಿಕೊಡುತ್ತಾರೆ."

"ಎಲ್ಲಿದ್ದೀಯೋ ವಶಿಷ್ಠ ! ಈಗಿನ ಡಿ. ಪಿ. ಐ ಯಾರು ಗೊತ್ತೋ ? ನಮ್ಮ ಸರ್ಕಾರದಲ್ಲಿ ಅವರು ಅತ್ಯಂತ ದಕ್ಷ ಅಧಿಕಾರಿಗಳು. ಅವರ ಕೆಲಸ, ನಡತೆ ಬಗ್ಗೆ ಚಕಾರ ಶಬ್ದವೆತ್ತುವ ಹಾಗಿಲ್ಲಮ್ಮಾ."

"ಇದೆ ರಾಘು - ಡಿ. ಪಿ. ಐ ಸಾರ್ವಜನಿಕ ಸಭೆಗಳ ವೇದಿಕೆಯ ಮೇಲೆ ಕೂಡ ಸಿಗರೇಟ್ ಸೇದುತ್ತಾರೆ. ಮಂತ್ರಿಗಳಿರುವುದನ್ನೂ ಲಕ್ಷಿಸುವುದಿಲ್ಲ. ಪ್ರಜಾಪ್ರತಿನಿಧಿಗಳಾದ ಲೋಕಮಾನ್ಯ ಮಂತ್ರಿಗಳಿಗೆ ಡಿ. ಪಿ. ಐ ಅವರು ಅಗೌರವ ತೋರಿಸುತ್ತಿದ್ದಾರೆ ಎಂದು 'ಚೇಳುಬಾಣ' ಬಿಟ್ಟರಾಯಿತು" ಎಂದು ಹರಿನಾರಾಯಣ ಗ್ರಾಸವೊದಗಿಸಿದ.

"ಅವರು ಇದಕ್ಕೆಲ್ಲಾ ಬಗ್ಗೋರಲ್ಲಾ ಕಣೋ ಮಂಕೇ."

"ಪ್ರಯೋಗಮಾಡುವುದಕ್ಕೆ ನಿನ್ನ ಗಂಟೇನು ಹೋಗತ್ತೇ. ಅಡ್ಡಗೋಡೆ ಮೇಲೆ ದೀಪವಿಟ್ಟ ಹಾಗೆ ಬರೆಯುವ ಜಾಣ್ಮೆ ನಿನಗೆ ಸಾಧಿಸಿದೆ. ನಿನ್ನ ಬಾಣ ತಗುಲಿ ಕೆಲಸವಾಯಿತು – ಸಂತೋಷ ; ಆಗಲಿಲ್ಲ – ನಷ್ಟವೇನೂ ಇಲ್ಲ."

ಚಿಗುರುಮೀಸೆಯ ಮೇಲೆ ಕುಳಿತಿದ್ದ ಈರುಳ್ಳಿ ತುಂಡು ಒರಸಿ ಕೊಳ್ಳುತ್ತಾ ರಾಘವಯ್ಯ 'ಓ ಕೆ' (O. K) ಎಂದ.

ಈಶ್ವರರಾಯನ ಪರಿಸ್ಥಿತಿ ವಶಿಷ್ಠನ ತಲೆಯನ್ನು ಕೊರೆಯುತ್ತಿತ್ತು.

"ಏನಾದರೂ ಮಾಡಿ ಈಶ್ವರನನ್ನು ನಿನ್ನ ಪೇಪರಿನಲ್ಲಿ ನುಗ್ಗಿಸದಿದ್ದರೆ ನಿನ್ನ ಶುದ್ಧ ನಿಷ್ಪ್ರಯೋಜಕ ಎಂದು ಕರೆಯಬೇಕಾಗುತ್ತದೋ ಪುಟ್ಟಣ್ಣ."

"ಸ್ವಲ್ಪ ತಡೀರಯ್ಯ ಎಂದರೆ ನಿಮಗೆ ಎಲ್ಲೂ ಇಲ್ಲದ ಅವಸರ."

"ಸರಿ - ನೀನು ಅವನಿಗೆ ಕೆಲಸಕೊಡಿಸೋ ವೇಳೆಗೆ ಅವನ ಅರ್ಧ ಪ್ರಾಣ ಹಾರಿಹೋಗಿರುತ್ತದೆ."

"ಏಕೆ ? - ಪಾರ್ಟಿ ಮಾಸಾಶನ ಕೊಡುತ್ತಿದೆಯಲ್ಲಾ ?"

"ಮಾಸಾಶನ ಕಂಡು ಮೂರು ತಿಂಗಳಾಯ್ತು. ಪಾರ್ಟೀಗೆ ಮಾಸ್ಕೋ ಜಾಪಾಳಕೊಟ್ಟುಬಿಟ್ಟಿದೆ."

"ಕಾರಣ ?"

"ಪಾರ್ಟಿಯ ಒಳಜಗಳ."

"ಈ ರೈಟ್‌ವಿಂಗ್ ಡೀವಿಯೇಷನಿಸ್ಟ್ (Right wing deviationists) ಮಾಸ್ಕೋಗೆ ನಮ್ಮ ಮೇಲೆ ಏನೇನೋ ತಿಳಿಸಿಬಿಟ್ಟಿದ್ದಾರೆ ಸಾರ್" ಎಂದು ಈಶ್ವರರಾಯ ಹೇಳಿದ.

"ರಷ್ಯಾಗೆ ಸಾಂಸ್ಕೃತಿಕ ನಿಯೋಗ (Gultural Delegation) ಕಳುಹಿಸುವುದು ಮೂಲೆಗೆ ಬಿತ್ತು."

"ಮೂಲೆಗೇಕೆ ಬೀಳತ್ತೆ ಪುಟ್ಟಣ್ಣನವರೇ - ಕಾಮ್ರೇಡ್ ಎ. ಕೆ. ಗೋಪಾಲನ್ ಮಾಸ್ಕೋಗೆ ಹೋಗಿದ್ದಾರೆ. ಅವರು ಎಲ್ಲಾ ಸರಿಮಾಡಿಕೊಂಡು ಬರುತ್ತಾರೆ. ಪಿ. ಸಿ. ಜೋಶಿ ಗುಂಪನ್ನು ಪಾರ್ಟಿಯಿಂದ ಹೊರಗೆ ಹಾಕಿದೆವು - ನಮ್ಮಲ್ಲಿ ಕಾಮ್ರೇಡ್ ಗಣೇಶನ ಸಮಾಧಿಗೆ ಅಸ್ತಿಭಾರ ಹಾಕುತ್ತಿದ್ದೇವೆ."

"ಇಲ್ಲಿ ನಿಮ್ಮ ಪಾರ್ಟಿ ಕಟ್ಟಿ ಬೆಳಸಿದವನೇ ಕಾಮ್ರೇಡ್ ಗಣೇಶ ಅಲ್ಲವೇ ಈಶ್ವರರಾವ್."

"ಅದೆಲ್ಲಾ ಹಳೇ ಮಾತು. ಈಗವನು ಪಕ್ಕಾ ಪ್ರತಿಗಾಮಿ (Reactionary) – ಮೊನ್ನೆ ಗಾಂಧಿಜಯಂತಿಯಲ್ಲಿ ಭಾಗವಹಿಸಿ ಗಾಂಧಿಯನ್ನು 'ಭಾರತದ ಲೆನಿನ್' ಎಂದು ಕರೆದ. ಸುದರ್ಶನನ ಜತೆ ಸೇರಿಕೊಂಡು ರಾಮಾಯಣ, ಭಾರತ ಹೊಗಳುವುದಕ್ಕೆ ಷುರುಮಾಡಿದ್ದಾನೆ- ಅವನ ಮೇಲೆ ಆಪಾದನೆಗಳ ಪಟ್ಟಿ (Charge Sheet) ಸಿದ್ಧಮಾಡಿ ನಾವು ಪಿಬಿಗೆ (PB: Polit Bureau) ಕಳುಹಿಸಿಕೊಟ್ಟಿದ್ದೇವೆ. ಸದ್ಯದಲ್ಲೇ ಗಣೇಶನನ್ನು ಪಾರ್ಟಿಯಿಂದ ಹೊರಗೆ ಹಾಕುತ್ತೇವೆ."

"ಅವನಿಗೆ ಸರಿಯಾದ ಶಾಸ್ತಿ – ಸುದರ್ಶನನ ಜತೆ ಸೇರಿಕೊಂಡವರನ್ನು ನಾವು ತುಳಿದುಬಿಡಬೇಕು."

ಬಾಯ್ ಬಂದು 'ಇನ್ನೇನಾದರೂ ಬೇಕೇ ಸಾರ್' ಎಂದು ಕೇಳಿದ. ರಾಘವಯ್ಯ 'ಬಿಲ್' ಎಂದ.

ಬಿಲ್ ಹಣವನ್ನು ರಾಘವಯ್ಯನೇ ತೆತ್ತ. ಐದು ಜನರೂ ತೂರಾಡಿಕೊಂಡು 'ಸುಖ ಜಗತ್ತಿ'ನ ಮಹಡಿಯಿಂದಿಳಿದರು.

— ಇಂಥ ಒಂದು ಸಂದರ್ಭದಲ್ಲಿಯೇ 'ಸುಖಜಗತ್ತಿ'ನ ಹಜಾರದಲ್ಲಿ ಕುಳಿತಿದ್ದ ರಾಮಚಂದ್ರಶೆಟ್ಟರು ಪುಟ್ಟಣ್ಣನನ್ನು ಕಂಡಿದ್ದುದು. ಶೆಟ್ಟರೂ 'ಸುಖಜಗತ್ತಿ'ನ ಪೋಷಕರಲ್ಲಿ ಒಬ್ಬರಾಗಿದ್ದು ದೇವಿಸೇವೆಯನ್ನು ಶಕ್ತ್ಯನುಸಾರ ಮಾಡುತ್ತಿದ್ದರು.

## ೧೦

ಸುಂದರಮ್ಮನವರಿಗೆ ವಾಗ್ದಾನಮಾಡಿದ್ದಂತೆ 'ಸೇವಾಸದನ'ಕ್ಕೆ ಲಲಿತಮ್ಮ ಕ್ಷಿಪ್ರವಾಗಿ ಹೋಗಲಿಲ್ಲ. 'ಜನಸಂದೇಶ'ದ ಮಹಿಳಾ, ಮಕ್ಕಳ ಪುಟಕ್ಕೆ ಲೇಖನಗಳನ್ನು ಸಿದ್ಧಗೊಳಿಸುವುದಲ್ಲದೆ 'ಸೆಂಚುರಿ'ಯ ಮಹಿಳಾವಿಭಾಗವನ್ನೂ ನಿರ್ವಹಿಸಬೇಕಾಗಿತ್ತು. 'ಜನಸಂದೇಶ'ದ ಎರಡು ವಾರದ ಪುರವಣಿಗಳು ಹೊರಬಿದ್ದಿದ್ದವು. ಸಾಹಿತ್ಯಾಂಕ ಜನತೆಯ ಮನಸ್ಸು ಸೆಳೆದಿತ್ತು. ಪ್ರಸಾದನ

'ಸಾಹಿತ್ಯ ಸಮೀಕ್ಷೆ,' ಗುಂಡಯ್ಯನ 'ಕನ್ನಡ ಕವಿಗಳು,' ಲಲಿತಮ್ಮನ 'ಮಹಿಳಾ, ಮಕ್ಕಳ ಪುಟ' ಪತ್ರಿಕೆಯ ಪುರವಣಿಗೆ ವಿಶೇಷ ಗಾಂಭೀರ್ಯ ಕೊಟ್ಟಿದ್ದವು.

ಭಾರತದ ಆಂಗ್ಲಭಾಷಾ ಪತ್ರಿಕೆಗಳಿಗೆ ಯಾವ ರೀತಿಯಲ್ಲಿಯೂ ಗುಣ, ತೂಕ, ಪಾಂಡಿತ್ಯ, ವಿಷಯ ನಿರೂಪಣೆಗಳಲ್ಲಿ ಕಡಿಮೆಯೆನಿಸಿಕೊಳ್ಳದೆ ಹೊರ ಬೀಳುತ್ತಿದ್ದ ತಮ್ಮ ಪತ್ರಿಕೆ ನೋಡಿ ಗೋಪಾಲಶೆಟ್ಟರಿಗೆ ಪರಮಾನಂದ ವಾಗಿತ್ತು. ಆದರೆ ಆನಂದ ವ್ಯಕ್ತಪಡಿಸಿ, ಸಂಪಾದಕ ವರ್ಗದವರನ್ನಭಿನಂದಿ ಸಿದರೆ ಅವರೆಲ್ಲಿ ಹೆಚ್ಚುಸಂಬಳ ಕೇಳುವರೋ ಎಂದು ಹೆದರಿ ಶೆಟ್ಟರು ಬಾಯಿ ಮುಚ್ಚಿಕೊಂಡಿದ್ದರು.

ಪ್ರಸಾದ್ ಸಂಪಾದಕವರ್ಗದ ಸಭೆಯನ್ನು ವಾರಕ್ಕೆ ಎರಡು ಮೂರು ಸಾರಿ ಕರೆದು ವಿಚಾರ ವಿನಿಮಯ ನಡೆಸುತ್ತಿದ್ದ. ಉಪಸಂಪಾದಕರ ಸಲಹೆ, ಸೂಚನೆಗಳನ್ನು ಸ್ವೀಕರಿಸುತ್ತಿದ್ದ; ಅವರ ಕೆಲಸವನ್ನು ವಿಮರ್ಶಿಸಿ ಸುಧಾರಣೆಯ ಹಾದಿಗಳನ್ನು ನಿರ್ದೇಶಿಸುತ್ತಿದ್ದ.

ಒಂದು ದಿನ ಸಭೆ ಸೇರಿತ್ತು. ಪ್ರಸಾದ್ ಕೈಯಲ್ಲಿ ಹಲವು ಕಾಗದ ಗಳನ್ನು ಹಿಡಿದುಕೊಂಡು ಬಂದು ಕುಳಿತ. ಆ ವಾರದ ಸಂಚಿಕೆಗಳ ಸಿಂಹಾವ ಲೋಕನ ಮುಗಿದಮೇಲೆ ಪ್ರಸಾದ್, ಬಸಪ್ಪನನ್ನುದ್ದೇಶಿಸಿ

"ಬಸಪ್ಪನವರೇ, ಹಿರಿಯೂರಿನ ಮುನಿಸಿಪಲ್ ಕೌನ್ಸಿಲ್ ಬಗ್ಗೆ ಒಂದು ಪತ್ರ ಪ್ರಕಟಿಸಿದಿರಲ್ಲಾ ಅದನ್ನು ಬರೆದವರು ಯಾರು ?"

"ನಮ್ಮ ಸ್ಥಳೀಯ ಪ್ರತಿನಿಧಿ ಸರ್."

"ಅವರು ಬರೆದ ವಿಷಯವೆಲ್ಲಾ ಸತ್ಯವಾದುದು ಎಂಬುದು ನಿಮಗೆ ಖಚಿತವಾಗಿತ್ತೇ ?"

"ನಮ್ಮ ಪ್ರತಿನಿಧಿ ಬಹಳ ಹಳಬ ಸರ್. ಆತ ಊರಿನವನಾದುದರಿಂದ ಸ್ಥಳೀಯ ವಿದ್ಯಮಾನಗಳು ಚೆನ್ನಾಗಿ ಗೊತ್ತಿರುತ್ತದೆ."

"ಇಲ್ಲಿ ನೋಡಿ ಈ ಕಾಗದಗಳ ಕಟ್ಟು - ಅವರು ಬರೆದಿರುವುದೆಲ್ಲಾ ಸುಳ್ಳು ಎಂದು ಊರಿನವರೇ ಬರೆಯುತ್ತಿದ್ದಾರೆ."

ಬಸಪ್ಪ ಕಾಗದಗಳನ್ನು ಸ್ಥೂಲವಾಗಿ ಅವಲೋಕಿಸಿ

"ಇದೆಲ್ಲಾ ನಮ್ಮ ಪ್ರತಿನಿಧಿಗೆ ಆಗದವರ ಮಸಲತ್ತು ಸರ್."

“ವೃತ್ತಪತ್ರಿಕೆಯ ಪ್ರತಿನಿಧಿಯಾಗಲಿ, ಉಪಸಂಪಾದಕ, ಸಂಪಾದಕರೇ ಆಗಲಿ ಯಾವ ಪಕ್ಷವನ್ನೂ ವಹಿಸಬಾರದು ಬಸಪ್ಪನವರೇ. ಪರಸ್ಥಳಗಳ ಪ್ರತಿನಿಧಿಗಳು ಪಕ್ಷಗಳನ್ನು ಕಟ್ಟಿಕೊಂಡು, ಎದುರು ಪಕ್ಷದವರ ಮೇಲೆ ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಾರೆ. ಈ ಬಗ್ಗೆ ನಾವು ತುಂಬ ಜಾಗರೂಕ ರಾಗಿರಬೇಕು. ವಿನಾಕಾರಣ ಯಾರನ್ನೂ ನಿಂದೆಗೆ ಗುರಿಮಾಡಬಾರದು. ಇಂಥ ಲೇಖನಗಳು ಬಂದರೆ ಉಭಯಪಕ್ಷದ ಅಭಿಪ್ರಾಯ ತಿಳಿಯುವುದು ನಮ್ಮ ಕರ್ತವ್ಯ. ಅವಶ್ಯಕವೆನಿಸಿದರೆ ಸಂಬಂಧಪಟ್ಟ ಊರಿಗೆ ನೀವೇ ಹೋಗಿ ನಿಜಸ್ಥಿತಿಯನ್ನು ತಿಳಿದು ಬನ್ನಿ.”

“ಇನ್ನುಮೇಲೆ ಹಾಗೇ ಮಾಡುತ್ತೇನೆ ಸರ್” ಎಂದು ಬಸಪ್ಪ ಒಪ್ಪಿಕೊಂಡ.

ಬಸಪ್ಪನಿಗೆ ತುಸು ಅಸಮಾಧಾನವಾಗಿತ್ತು. ಹೊಗೆಯಾಡುತ್ತಿದ್ದ ಅವನ ಅಸಂತೋಷಕ್ಕೆ ಆಜ್ಯಹುಯ್ಯಲೆತ್ನಿಸಿ ಪುಟ್ಟಣ್ಣ

“ಇವತ್ತು ನೀವು ಎಡದ ಮಗ್ಗುಲಲ್ಲಿ ಎದ್ದಹಾಗೆ ಕಾಣತ್ತೆ ಬಸಪ್ಪ” ಎಂದ.

ಬಸಪ್ಪ ಪುಟ್ಟಣ್ಣನಿಗೆ ಪ್ರೋತ್ಸಾಹಕೊಡಲಿಲ್ಲ. ಸ್ವಲ್ಪ ಕಾಲಾನಂತರ ವಿಶ್ವೇಶ್ವರಯ್ಯ ಬಸಪ್ಪನನ್ನೆಳೆದುಕೊಂಡು ಹೋಗಿ ಹೊಟೇಲಿನಲ್ಲಿ ಕೂಡಿಸಿ ಕೊಂಡು, ಕಾಫಿ ಉದ್ದಿನವಡೆ ತರಿಸಿಕೊಟ್ಟು

“ಪ್ರಸಾದರ ಮೇಲೆ ತುಂಬ ಕೋಪ ಬಂದಿದೆಯಲ್ಲವೇ ಬಸಪ್ಪ” ಎಂದು ಕೇಳಿದ.

“ಕೋಪ ಬರದಿರುತ್ತದೆಯೇ ಸಾರ್. ಸಂಪಾದಕರು ತಾವೇ ಸರ್ವಜ್ಞ ಮೂರ್ತಿಗಳು ಎಂದುಕೊಂಡಿರುವ ಹಾಗೆ ಕಾಣುತ್ತದೆ.”

“ನನಗೆ ಹಾಗೆ ತೋರುವುದಿಲ್ಲವೇ? ಅವರ ಲೇಖನಗಳನ್ನು ನಾವು ವಿಮರ್ಶಿಸಿದರೂ ಅವರು ಅಸಮಾಧಾನಪಟ್ಟುಗೊಳ್ಳುವುದಿಲ್ಲವಲ್ಲ! ಅವರು ಹೇಳಿದ್ದು ನ್ಯಾಯವೋ ಅನ್ಯಾಯವೋ ನೀವೇ ಹೇಳಿ ಬಸಪ್ಪ.”

“ನ್ಯಾಯವಾಗಿಯೇ ಇದೆಯೆನ್ನಿ. ಆದರೆ ಏನು ಮಾಡೋದು ಸರ್. ಹಿರಿಯೂರಿನ ಪ್ರತಿನಿಧಿ ನನ್ನ ಸಮೀಪದ ಬಂಧು. ಅವನ ಲೇಖನ ಪ್ರಕಟ ಸಲಿಲ್ಲವೆಂದರೆ ಮನೆಯಲ್ಲಿ ಮನಸ್ತಾಪ ಆರಂಭವಾಗುತ್ತದೆ. ಅವನೇನೋ ತರಲೇ ಆಸಾಮಿ. ಮುನಿಸಿಪಾಲಿಟಿಯಿಂದ ಒಂದು ಸೈಟು ಬಿಟ್ಟ ಹೊಡೆಯ

ಬೇಕೆಂದು ಪ್ರಯತ್ನಿಸಿದ. ಅದು ಸಿಕ್ಕಲಿಲ್ಲ ಎನ್ನುವ ಹೊಟ್ಟೆ ಉರೀಗೆ ಪ್ರೆಸಿಡೆಂಟರ ಮೇಲೆ ವಿಷಕಾರುತ್ತಿದ್ದಾನೆ."

"ತಿಳಿದೂ ತಿಳಿದೂ ಇಂಥ ಅನ್ಯಾಯಮಾಡುತ್ತಾರೆಯೇ ಬಸಪ್ಪ. ವೃತ್ತ ಪತ್ರಿಕಾವೃತ್ತಿಯ ಘನತೆ, ಗಾಂಭೀರ್ಯ ಕಾಪಾಡುವುದರಲ್ಲಿ ಪ್ರಸಾದರು ಎಷ್ಟು ಶ್ರದ್ಧಾಳುಗಳಾಗಿದ್ದಾರೆಂದು ನಿಮಗೇ ಗೊತ್ತಿದೆ."

"ತಪ್ಪು ಆಗಿಹೋಯಿತು ಸರ್. ಇನ್ನು ಮೇಲೆ ಇಂಥ ಮುಠ್ಠಾಳ ಕೆಲಸ ಮಾಡುವುದಿಲ್ಲ."

"ತಪ್ಪನ್ನು ಒಪ್ಪಿಕೊಳ್ಳುವುದು ದೊಡ್ಡಗುಣ ಬಸಪ್ಪ."

ಎಂದು ತನ್ನ ಸಂತೋಷ ವ್ಯಕ್ತಗೊಳಿಸಿದ.

ಅಂದೇ ಮಧ್ಯಾಹ್ನ ಪ್ರಸಾದ್ ಬಸಪ್ಪನನ್ನು ಕರೆದು ಪ್ರೀತಿಯಿಂದ ಹೆಗಲಮೇಲೆ ಕೈಹಾಕಿ

"ನಾನು ಟೀಕೆ ಮಾಡಿದೆನೆಂದು ಕೋಪಬಂತೇ ಬಸಪ್ಪ" ಎಂದು ಕೇಳಿದ.

"ಇಲ್ಲ ಸರ್. ನೀವು ಎಷ್ಟಾದರೂ ಹಿರಿಯರು. ನಮ್ಮ ತಪ್ಪುಗಳನ್ನು ನೀವಲ್ಲದೆ ಇನ್ನು ಯಾರು ತಿದ್ದಬೇಕು."

"ನಮ್ಮ ಪತ್ರಿಕೆಯ ಪ್ರತಿಯೊಬ್ಬ ಉಪಸಂಪಾದಕನೂ ಒಬ್ಬ ಹಾರ್ನಿಮನ್, ಕಸ್ತೂರಿ ರಂಗಯ್ಯಂಗಾರ್, ಲಜಪತ್‌ರಾಯ್ ಆಗಬೇಕೆಂದು ನನ್ನ ಆಸೆ ಬಸಪ್ಪ. ಪತ್ರಿಕೆಯ ಹಿತದ ದೃಷ್ಟಿಯಿಂದ ನಾನು ಒಂದು ಮಾತ ನಾಡಿದರೆ ಬೇಸರಪಟ್ಟುಕೊಳ್ಳಬೇಡಿ."

"ಇಲ್ಲ ಸಾರ್ - ಖಂಡಿತವಾಗಿಯೂ ಇಲ್ಲ"

ಎಂದು ಹೇಳಿ ಹಿಗ್ಗಿನಿಂದ ವಿಶ್ವೇಶ್ವರಯ್ಯನ ಬಳಿಗೆ ಬಂದು

"ನಾನು ಏನೋಂತಿದ್ದೆ. ಪ್ರಸಾದರು ಪರ್‌ಫೆಕ್ಟ್ ಜಂಟಲ್‌ಮನ್ (Perfect Gentleman) ಸಾರ್" ಎಂದು ಹೇಳಿದ.

ಪಕ್ಕದ ಟೇಬಲ್ಲಿನಲ್ಲಿ ಟೆಲಿಗ್ರಾಮ್‌ಗಳ ಅನುವಾದಮಾಡುತ್ತ ಕುಳಿತಿದ್ದ ಪುಟ್ಟಣ್ಣ

"ಅಯ್ಯೋ ಪೆಚ್ಚುಮುಂಡೇದೇ" ಎಂದು ಮನಸ್ಸಿನಲ್ಲಿಯೇ ಗೊಣಗಿ ಕೊಂಡ.

ಪ್ರಸಾದ್ ಆಫೀಸಿನ ಕೆಲಸ ಮುಗಿಸಿಕೊಂಡು ಮನೆಗೆ ಹೋಗಿ ವಿಶ್ರಾಂತಿ ಪಡೆಯಲೂ ಸಾಧ್ಯವಿರಲಿಲ್ಲ. ಅಂದಿನ ಪೇಪರ್ ಮುಗಿದೊಡನೆಯೇ ಮಾರನೆಯ ದಿನಕ್ಕೆ ಸಿದ್ಧತೆ ಮಾಡಿಕೊಳ್ಳಬೇಕಾಗಿತ್ತು. ಕನ್ನಡ ಪತ್ರಿಕೆಗಳು, ಭಾರತದಲ್ಲಿ ಪ್ರಕಟವಾಗುತ್ತಿದ್ದ ಇಂಗ್ಲೀಷ್ ಪತ್ರಿಕೆಗಳು, ವಿಲಾಯಿತಿಯ ಪತ್ರಿಕೆಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಓದಿ 'ಪ್ರಚಲಿತ ಅಭಿಪ್ರಾಯ'ಗಳನ್ನು ಸಂಗ್ರಹಿಸಬೇಕಾಗಿತ್ತು. 'ಹಿನ್ನೆಲೆ'ಯ ಲೇಖನಗಳಿಗೆ ಹಲವು ಗ್ರಂಥಗಳನ್ನೋದಿ ವಿಷಯಸಂಗ್ರಹ ಮಾಡಬೇಕಾಗಿತ್ತು. ಇವುಗಳ ಜತೆಗೆ ವಾರಾಂತ್ಯದ ಪುರವಣಿ – ಸೆಂಚುರಿಗೆ ಲೇಖನಗಳು. ರಾತ್ರಿ ಎರಡು ಗಂಟೆಗೆ ಮುಂಚೆ ಮಲಗಲು ಅವನಿಗೆ ಸಾಧ್ಯವಾಗುತ್ತಿರಲಿಲ್ಲ.

ಪ್ರಸಾದನ ದುಡಿಮೆ ಲಲಿತಮ್ಮನ ಮನಸ್ಸಿನಲ್ಲಿ ಕಳವಳವನ್ನು ಹುಟ್ಟಿಸಿತ್ತು.

'ಇವರು ಹೀಗೆ ದುಡಿದರೆ ಏನು ಗತಿ – ಇವರ ಆರೋಗ್ಯ ಉಳಿಯುತ್ತದೆಯೆ ?'

'ಈ ದುಡಿಮೆಯ ಸಾರ್ಥಕತೆಯೇನು ?'

'ಮುಂಬಯಿ ಬಿಟ್ಟು ಇಲ್ಲಿಗೆ ಬಂದ ಉದ್ದೇಶ, ಇವರು ಗ್ರಂಥರಚನೆ ಮುಂದುವರಿಸಲೆಂದು – ಆ ಉದ್ದೇಶ ಪೂರ್ಣವಾಗುತ್ತಿದೆಯೇ ?'

ಎಂದು ಯೋಚಿಸಲಾರಂಭಿಸಿದ್ದಳು.

ಒಂದು ರಾತ್ರಿ ಹನ್ನೆರಡು ಹೊಡೆದಿತ್ತು. ಪ್ರಸಾದ್ ತನ್ನ ಪತ್ರಿಕೆಗಳ ರಾಶಿಯಲ್ಲಿ ಅಡಗಿಹೋಗಿದ್ದ. ಲಲಿತಮ್ಮ ಒಂದೆರಡು ಬಾರಿ ಬಂದು ಅವನೆದುರಿಗೆ ಕುಳಿತು ತನ್ನ ಅತೃಪ್ತಿ ಸೂಚಿಸಿದಳು. ಪ್ರಸಾದ್ ಅವಳ ಸೂಚನೆಯನ್ನು ಗಮನಿಸಲಿಲ್ಲ.

ಲಲಿತಮ್ಮ ಮತ್ತೆ ಅರ್ಧಗಂಟೆ ಕಾದು ನೋಡಿದಳು. ಪ್ರಸಾದ್ ಬಹಿರ್ಮುಖನಾಗುವ ಚಿನ್ಹೆಯೇ ಕಂಡುಬರಲಿಲ್ಲ.

ಲಲಿತಮ್ಮ ಮೆಲ್ಲನೆದ್ದು ಪ್ರಸಾದ್ ಓದುತ್ತಿದ್ದ 'ಹಿಂದೂಸ್ಥಾನ್ ಸ್ಟ್ಯಾಂಡರ್ಡ್' (Hindustan Standard) ಪತ್ರಿಕೆಯನ್ನು ಅವನ

ಕೈಯಿಂದ ಬಿಡಿಸಿಕೊಂಡಳು. ಪ್ರಸಾದ್ ಅವಳ ಇಂಗಿತವನ್ನರಿತು ಮೇಜಿನ ಮೇಲಿದ್ದ ಪತ್ರಿಕೆಗಳನ್ನು ಜೋಡಿಸಿ ಒಂದು ಪಕ್ಕಕ್ಕೆ ತಳ್ಳಿ

"ನಿನ್ನ ಕೆಲಸವೆಲ್ಲಾ ಮುಗಿಯಿತೇ?" ಎಂದು ಕೇಳಿದ.

"ನನ್ನ ಕೆಲಸ ಮುಗಿದು ಯಾವುದೋ ಜನ್ಮವಾಯಿತು."

"ನನ್ನ ಕೆಲಸ ಮುಗಿದಿಲ್ಲ."

"ನಿಮ್ಮ ಕೆಲಸ ಮುಗಿಯೋದೇ ಇಲ್ಲ."

"ಏನು ವಿಶೇಷ?"

"ನಿಮ್ಮಲ್ಲಿ ಮಾತನಾಡಲು ನಾನು ಅಪಾಯಿಂಟ್‌ಮೆಂಟ್ (appointment) ಕೇಳಬೇಕಾಗಿದೆ."

"ಪತ್ರಿಕೆಯಿನ್ನೂ ಸರಿಯಾದ ವ್ಯವಸ್ಥೆಗೆ ಬಂದಿಲ್ಲ. ಒಂದೆರಡು ತಿಂಗಳು ಕಳೆದ ಮೇಲೆ ನನಗೆ ಸ್ವಲ್ಪ ಪುರಸತ್ತು ಸಿಕ್ಕಬಹುದು."

"ನಿಮ್ಮ ಕಾರ್ಯಕ್ರಮ ನೋಡಿದರೆ ಒಂದೆರಡು ವರ್ಷವಾದರೂ ಪುರಸತ್ತು ಸಿಕ್ಕುವ ಸಂಭವವಿಲ್ಲ."

"ನೀನೂ ನನ್ನ ಮೇಲೆ ಕೋಪಿಸಿಕೊಳ್ಳುವುದೇ ಲಲಿತಾ."

"ಕೋಪವಲ್ಲ ದೊರೆ – ದುಡಿಮೆಗೂ ಒಂದು ಮಿತಿಯಿರಬೇಕು........ ನಿಮ್ಮಲ್ಲಿ ನಾನೆಷ್ಟೋ ವಿಷಯಗಳನ್ನು ಮಾತನಾಡಬೇಕಾಗಿದೆ – ಯಾವಾಗ ಮಾತನಾಡಲಿ."

"ಈಗ ಮಾತನಾಡು."

"ಮೇಥಾಜಿ ಕಾಗದ ನೋಡಿದಿರಾ?"

"ಸ್ಥೂಲವಾಗಿ ನೋಡಿದೆ."

"ನಿರ್ಮಲನ ಗತಿಯೇನು?"

"ಅವಳು ಎಲ್ಲಿಗೆ ಹೋದಳಂತೆ!"

"ನಮ್ಮ ಕಾಗದ ಕೈ ಸೇರಿದ್ದ ಕೂಡಲೆ ಮೇಥಾಜಿ ಗನ್‌ಬೋ ಸ್ಟ್ರೀಟಿಗೆ ಹೋಗಿ ಮಂಗೂಭಾಯ್ ಮನೆ ಪತ್ತೆ ಮಾಡಿದರಂತೆ. ಮಂಗೂಭಾಯ್ ಮನೆ ಬಿಟ್ಟು, ತಾರ್‌ದೇವ್‌ಗೆ ಹೋಗಿರುವುದಾಗಿ ತಿಳಿಯಿತು. ಮಂಗೂಭಾಯ್ ಅಂಗಡಿ ಗೊತ್ತುಹಚ್ಚಿ, ಅಲ್ಲಿ ಮನೆಯ ವಿಳಾಸ ತೆಗೆದುಕೊಂಡು ತಾರದೇವ್‌ಗೆ ಹೋದರಂತೆ. ಮಂಗೂಭಾಯ್ ಮನೆಯಲ್ಲಿರಲಿಲ್ಲ. ಭದ್ರಾ

ಬರ್ಹೆ ಸಿಕ್ಕಿದರಂತೆ. ಮಂಗೂಭಾಯ್‌ಗೆ ಎರಡನೆಯ ಲಗ್ನ ಮಾಡಿ, ಆ ಹುಡುಗಿಯನ್ನು ಮನೆಗೆ ಕರೆದುಕೊಂಡು ಬಂದ ರಾತ್ರಿಯೇ ನಿರ್ಮಲಾ ಮನೆ ಬಿಟ್ಟು ಹೋದಳು."

"ಎಲ್ಲಿಗೆ ಹೋಗಿರಬಹುದು."

"ಅದೇ ಎಲ್ಲರಿಗೂ ಸಮಸ್ಯೆ. ಮಂಗೂಭಾಯ್ ಭದ್ರಾಬರ್ಹೆ ಎಲ್ಲಾ ಕಡೆಯೂ ಹುಡುಕಿಸಿದರಂತೆ – ಯಾರಿಗೂ ನಿರ್ಮಲನ ಪತ್ತೆ ಸಿಕ್ಕಿಲ್ಲ."

"ಮುಂಬಯಿಯ ಪಾಪಸಾಗರಕ್ಕೆ ಈ ನದಿಯೂ ಹೋಗಿ ಸೇರಿಕೊಂಡಿತೆಂದು ಕಾಣುತ್ತದೆ."

"ಮೇಥಾಜಿಯ ವಿಳಾಸ, ಫೋನ್ ನಂಬರು ಎಲ್ಲಾ ಕೊಟ್ಟು ಬಂದಿದ್ದೆ. ಮೇಥಾಜಿಯ ಸಹಾಯ ಪಡೆಯಲು ಇಷ್ಟವಿಲ್ಲದಿದ್ದರೆ ಬೆಂಗಳೂರಿಗೆ ಬಂದುಬಿಡು ಎಂದು ನಮ್ಮ ವಿಳಾಸವನ್ನೂ ಕೊಟ್ಟಿದ್ದೆ."

"ಪಾಪ! ಅವಳ ಮನಸ್ಸು ರೋಸಿಹೋಗಿರಬೇಕು. ಪ್ರಯತ್ನ ಮುಂದುವರಿಸಿ ಅವಳು ಎಲ್ಲಿದ್ದರೂ ಗೊತ್ತುಹಚ್ಚಿ ಇಲ್ಲಿಗೆ ಕಳುಹಿಸಿಕೊಡುವಂತೆ ನಾನು ಮೇಥನಿಗೆ ಕಾಗದ ಬರೆಯುತ್ತೇನೆ."

"ಅವಳ ಹಣೆಯಬರಹ ನೆಟ್ಟಗಿಲ್ಲ–ಅದನ್ನು ನೆಟ್ಟಗೆ ಮಾಡಬೇಕೆಂದು ನಾವು ಪಟ್ಟ ಪ್ರಯತ್ನವೂ ವಿಫಲವಾಯಿತು."

"ನಿರ್ಮಲಾ ಒಳ್ಳೆಯ ಹುಡುಗಿ. ಅವಳೆಲ್ಲಿದ್ದರೂ ತನ್ನ ಶೀಲವನ್ನು ಕಾಯ್ದುಕೊಳ್ಳಬಲ್ಲಳೆಂಬ ನಂಬಿಕೆ ನನಗಿದೆ."

ಪ್ರಸಾದನ ನಂಬಿಕೆ, ಧೈರ್ಯ ಲಲಿತಮ್ಮನಿಗಿರಲಿಲ್ಲ.

"ಈಚೆಗೆ ಸುಂದರಮ್ಮನವರನ್ನು ನೋಡಿದ್ದೆಯಾ?"

"ಅವರಿಗೆ ಮುಖ ತೋರಿಸದಂತಾಗಿದೆ."

"ಏಕೆ? ಏನು ಅಪರಾಧ ಮಾಡಿದೆ?"

"ನಿಮ್ಮನ್ನು ಕರೆದುಕೊಂಡು ಬರುತ್ತೇನೆಂದು ಹೇಳಿದ್ದೆ. 'ಅಭಯಾಶ್ರಮ' ನಿಮಗೆ ತೋರಿಸಬೇಕೆಂದು ಅವರು ಉತ್ಸುಕರಾಗಿದ್ದಾರೆ."

"ಹೋಗೋಣ."

"ನಾಳೆ."

"ನಾಳೆ ಬೇಡ-ಕೈ ತುಂಬ ಕೆಲಸವಿರುತ್ತದೆ. ಭಾನುವಾರ ಪುರಸತ್ತಿದೆ. ಸಂಜೆ ಹೋಗೋಣ."

"ನಾನು ನಾಳೆ ಅವರಿಗೆ ಕಾಗದ ಬರೆದು ತಿಳಿಸುತ್ತೇನೆ. ನೀವು ಭಾನುವಾರ ತಪ್ಪಿಸಿಕೊಂಡರೆ ನನಗೂ ನಿಮಗೂ ಜಗಳವಾಗಿಬಿಡುತ್ತದೆ."

"ಹಾಗಾದರೆ ಖಂಡಿತ ಭಾನುವಾರ ತಪ್ಪಿಸಿಕೊಳ್ಳುತ್ತೇನೆ."

"ಇದೆಂಥ ಮೊಂಡುತನ ದೊರೆ."

"ನೀನೂ ನಾನೂ ಜಗಳ ಕಾದೇ ಇಲ್ಲ. ಒಮ್ಮೆ ಅದರ ಸ್ವಾರಸ್ಯವನ್ನಾದರೂ ನೋಡೋಣ."

"ನಿಮ್ಮ ಜತೆ ಜಗಳ ಕಾಯಬೇಕೆಂದು ನಿರ್ಧರಿಸಿಕೊಂಡಿರುತ್ತೇನೆ. ಆದರೆ ಏಕೋ ಏನೋ ನಿಮ್ಮನ್ನು ನೋಡಿದ ಕೂಡಲೆ, ಸೂರ್ಯನನ್ನು ಕಂಡ ಮೋಡಗಳು ಚೆದರುವಂತೆ ನನ್ನ ನಿರ್ಧಾರ ಗಾಳಿಪಾಲಾಗಿಬಿಡುತ್ತದೆ."

"ಅದನ್ನೇ ರಸಿಕರು..........."

"ಹೋಗಿ ದೊರೆ"

ಎಂದು ಲಲಿತಮ್ಮ ನಸುನಾಚಿದಳು.

## ೧೧

ಭಾನುವಾರ ನಾಲ್ಕು ಗಂಟೆಗೇ ಲಲಿತಮ್ಮ ಗಂಡನನ್ನು ಕರೆದುಕೊಂಡು ಸುಂದರಮ್ಮನವರ ಮನೆಗೆ ಬಂದಳು. ರಾಮಚಂದ್ರರಾಯರ ಜತೆ ಮಾತನಾಡುತ್ತ ಕುಳಿತಿದ್ದ ಸುಂದರಮ್ಮನವರು ಎದ್ದು ಬಂದು ದಂಪತಿಗಳಿಗೆ ಸ್ವಾಗತ ಬಯಸಿ ಪರಸ್ಪರ ಪರಿಚಯ ಮಾಡಿಕೊಟ್ಟರು. ಪ್ರಸಾದ್ ಕೈ ಜೋಡಿಸಿ

"ಇದೇ ಸುದಿನ ಸ್ವಾಮಿ. ಕರ್ಮಯೋಗಿಗಳ ದರ್ಶನವಾಯಿತು"

ಎಂದ. ಸ್ವಭಾವತಃ ವಿನಯಶೀಲರಾದ ರಾಮಚಂದ್ರರಾಯರಿಗೆ ಪ್ರಸಾದನ ಭಕ್ತಿ ದಂಗುಬಡಿಸಿತು.

"ನಾನು ಅಲ್ಪವ್ಯಕ್ತಿ – ನನ್ನನ್ನೇಕೆ 'ಕರ್ಮಯೋಗಿ' ಎಂದು ಕರೆಯುವಿರಿ ಪ್ರಸಾದರೇ."

"ತಮ್ಮ ಪರಿಚಯ ಮಾಡಿಕೊಳ್ಳುವ ಪುಣ್ಯ ನನಗೆ ಲಭಿಸಿರಲಿಲ್ಲ. ಇಂದು ಸುಂದರಮ್ಮನವರ ಕೃಪೆಯಿಂದ ಲಭಿಸಿತು. ಏಕಾಂಗಿಗಳಾಗಿ 'ಕರುಣಾಶ್ರಮ'ದಂಥ ದೊಡ್ಡ ಸಂಸ್ಥೆ ಕಟ್ಟಿರುವ ತಾವು ಕರ್ಮಯೋಗಿಗಳಲ್ಲದೆ ಮತ್ತೇನು?"

"ಆ ಸಂಸ್ಥೆ ನಾನು ಕಟ್ಟಿದೆ ಎಂದು ಯಾವ ಬಾಯಲ್ಲಿ ಹೇಳಿಕೊಳ್ಳಲಿ ಸರ್. ನರನೂ ಅವನೇ, ನಾರಾಯಣನೂ ಅವನೇ – ನಾರಾಯಣನಾಗಿ ಸೇವೆ ಕೈಗೊಳ್ಳುತ್ತಾನೆ, ನರನಾಗಿ ಸೇವೆ ಮಾಡುತ್ತಾನೆ."

ಹಜಾರದಲ್ಲಿ ಎಲ್ಲರೂ ಕುಳಿತ ಮೇಲೆ ಲಲಿತಮ್ಮ ದೈನ್ಯದಿಂದ

"ಈ ಮೊದಲೇ ನಾವು ಬರವುದಕ್ಕಾಗಲಿಲ್ಲ – ಕ್ಷಮಿಸಿ ಮ್ಯಾಡಾಂ .... ಹಗಲೂ ರಾತ್ರಿ ಪೇಪರಿನ ಕೆಲಸವಾಗಿದೆ. ಅವರಿಗೆ ಸ್ವಲ್ಪವೂ ಪುರಸತ್ತಿಲ್ಲ."

"ಚಿಂತೆಯಿಲ್ಲಮ್ಮ. ಪೇಪರ್ ಹೊಸದು, ಕೈತುಂಬ ಕೆಲಸವಿರುವುದು ಸ್ವಾಭಾವಿಕ."

"ನಿಮ್ಮ ಪೇಪರ್ ನಾನು ನೋಡುತ್ತಿದ್ದೇನೆ ಸರ್. ತುಂಬ ಚೆನ್ನಾಗಿದೆ. ಕನ್ನಡದಲ್ಲಿ ಇದುವರೆಗೆ ಇಂಥ ಪೇಪರ್ ಇರಲಿಲ್ಲ. ನಿಮ್ಮ ವಾರಾಂತ್ಯದ ಪುರವಣಿಗಳಂತೂ ನನಗೆ ತುಂಬ ಅಚ್ಚುಮೆಚ್ಚು."

"ಪತ್ರಿಕೆ ಚೆನ್ನಾಗಿ ಮಾಡಬೇಕೆಂದು ಪ್ರಯತ್ನಿಸುತ್ತಿದ್ದೇನೆ ಸ್ವಾಮಿ. ...........ಇನ್ನೂ ಬಹಳ ಸುಧಾರಿಸಬೇಕು.

"ನೋಡಿ ಪ್ರಸಾದರೇ, ಮಾನವ ಪೂರ್ಣತೆಯನ್ನು ಸಾಧಿಸುವನಲ್ಲದೆ ಪೂರ್ಣವಾಗಿಯೇ ಹುಟ್ಟಿರುವುದಿಲ್ಲ.—ಒಂದು ವೃತ್ತಪತ್ರಿಕೆ ಸತ್ಯವನ್ನೇ ಗಮ್ಯ – ಗುರಿಯಾಗಿಟ್ಟುಕೊಂಡಿರುವುದು ನಮ್ಮ ಕಾಲದ ಒಂದು ಪವಾಡವೇ ಸರಿ. ಭಗವಂತ ನಿಮ್ಮ ಪ್ರಯತ್ನಕ್ಕೆ ಜಯ ಕೊಡಲಿ."

ಸುಂದರಮ್ಮನವರ ಮನೆಯ ಅಡಿಗೆಯವನು ಎಲ್ಲರಿಗೂ ಬಿಸ್ಕತ್ತು, ಬಾಳೆಯಹಣ್ಣು ಕಾಫಿ ತಂದಿತ್ತ. ರಾಮಚಂದ್ರರಾಯರು ತಮ್ಮ ಭಾಗದ ಬಿಸ್ಕತ್ತನ್ನು ಪ್ರಸಾದನ ಪ್ಲೇಟಿಗೆ ಹಾಕಿ ತಾವು ಬಾಳೆಯಹಣ್ಣನ್ನು ತೆಗೆದುಕೊಂಡರು.

ಪ್ರಸಾದ್ ಬಿಸ್ಕತ್ತು ಕಡಿಯುತ್ತಾ

"ಸ್ವಾಮಿ, ತಮ್ಮ 'ಕರುಣಾಶ್ರಮ'ದ ಬಗ್ಗೆ ಒಂದೆರಡು ವಿಷಯ ತಿಳಿದುಕೊಳ್ಳಬೇಕೆಂದಿದ್ದೇನೆ. ಕೇಳಬಹುದೇ?"

"ಅವಶ್ಯಕವಾಗಿ ಕೇಳಿ ಸರ್."

"ತಾವು ಶ್ರೀಮಂತರಲ್ಲ. 'ಕರುಣಾಶ್ರಮ'ದಂಥ ದೊಡ್ಡ ಸಂಸ್ಥೆಯನ್ನು ಹೇಗೆ ಕಟ್ಟಿದಿರಿ?"

"ನಾನು ಶ್ರೀಮಂತನಾಗಿದ್ದರೆ ಈ ಕೆಲಸಕ್ಕೆ ಕೈಯಿಕ್ಕುತ್ತಲೇ ಇರಲಿಲ್ಲ ಪ್ರಸಾದರೆ. ಬಡವರ ಸೇವೆಯನ್ನು ಬಡವನೇ ಮಾಡಲಿ ಎಂದು ಭಗವತ್ಸಂಕಲ್ಪವಿದ್ದ ಹಾಗೆ ಕಾಣುತ್ತದೆ.—ನಾನು ಸರಕಾರದ ಗುಮಾಸ್ತನಾಗಿ ಕೆಲಸಕ್ಕೆ ಸೇರಿದೆ. ಹಳೇ ಕಾಲದಲ್ಲಿ ಬಿ.ಎ. ಪಾಸ್ ಮಾಡಿದ್ದುದರಿಂದ ಕೆಲಸ ಸುಲಭವಾಗಿ ಸಿಕ್ಕಿತು. ಆರಂಭದಲ್ಲಿಯೇ ನಲವತ್ತು ರೂಪಾಯಿ ಸಂಬಳ. ಆ ಕಾಲವೂ ಚೆನ್ನಾಗಿತ್ತು ಅನ್ನಿ. ನಲವತ್ತು ರೂಪಾಯಿನಲ್ಲಿ ದೊರೆಜೀವನ ಮಾಡಬಹುದಾಗಿತ್ತು. ಆಫೀಸಿನ ಕ್ರಮದಂತೆ ನನಗೆ ಬಡ್ತಿ ಸಿಕ್ಕುತ್ತ ಹೋಯಿತು. ಕೊನೆಗೆ ಅಸಿಸ್ಟೆಂಟ್ ಸೆಕ್ರೆಟರಿಯಾಗಿ ರಿಟೈರಾದೆ. ಈಗಲೂ ನೂರಿಪ್ಪತ್ತು ರೂಪಾಯಿ ಪಿಂಚನಿ ಬರುತ್ತಿದೆ. ನನ್ನ ಇಪ್ಪತ್ತೇಳು ವರ್ಷಗಳ ಅಧಿಕಾರವಧಿಯಲ್ಲಿ ನಾನು ಸಂಪಾದಿಸಿದ್ದೆಲ್ಲಾ ಒಂದು ಮನೆ, ನಾಲ್ಕು ಎಕರೆ ಗದ್ದೆ. ಸಂಸಾರವೂ ದೊಡ್ಡದು. ಮನೆಯಲ್ಲಿ ಮದುವೆ ಮುಂಜಿಗಳೂ ಆದವು.—ನಾನು ಹುಟ್ಟಿದ್ದು ಬೆಳೆದದ್ದು ಎಲ್ಲಾ ಬಡತನ ದಲ್ಲಿಯೇ. ಭಿಕ್ಷಾನ್ನ, ವಾರಾನ್ನ ಮಾಡಿಕೊಂಡು ಬಿ.ಎ. ಸಂಪಾದಿಸಿಕೊಂಡೆ. ಭಿಕ್ಷಾನ್ನ, ವಾರಾನ್ನ ಮಾಡುವಾಗ ನನಗೆ ಲೋಕದರ್ಶನವಾಯಿತು. ಶ್ರೀಮಂತರಿಗೂ ಬಡವರಿಗೂ ಇರುವ ವ್ಯತ್ಯಾಸ ಗೊತ್ತಾಯಿತು. ಎಷ್ಟೋ ದಿನಗಳು ಶ್ರೀಮಂತರು ಅನ್ನ ಹಾಕದೆ ಅಟ್ಟುತ್ತಿದ್ದರು; ಬಡವರ ಮನೆಯಲ್ಲಿ ಒಂದು ದಿನವೂ ಅಂಥ ಅನುಭವವಾಗಲಿಲ್ಲ. ಬಡವರ ಅಂತಃಕರಣಕ್ಕೆ ಒಂದು ದೃಷ್ಟಾಂತ ಕೊಡುತ್ತೇನೆ. ಎ. ವಿ. ಸ್ಕೂಲ್ ಶಿಕ್ಷಣವನ್ನೆಲ್ಲಾ ಭಿಕ್ಷಾನ್ನದಲ್ಲಿ ಮುಗಿಸಿದೆ. ಹೈಸ್ಕೂಲಿಗೆ ಬಂದ ಮೇಲೆ ಕೆಲವರ ಮನೆಯಲ್ಲಿ ವಾರಗಳು ಸಿಕ್ಕಿದವು, ನಾನು ಮೆಟ್ರಿಕ್ ಕ್ಲಾಸಿನಲ್ಲಿ ಓದುತ್ತಿದ್ದೆ. ಬಸವನ ಗುಡಿಯಲ್ಲಿ ಒಬ್ಬರು ಸದ್ಗೃಹಸ್ಥರ ಮನೆಯಲ್ಲಿ ವಾರ ಸಿಕ್ಕಿತ್ತು. ಪರೀಕ್ಷೆಯ

ಕಾಲ ಸಮೀಪಿಸುತ್ತಿತ್ತು. ಅವರ ಮನೆಗೆ ನನ್ನ ವಾರದ ದಿವಸ ಊಟಕ್ಕೆ ಹೋದೆ. ಮನೆ ಯಜಮಾನರ ತಾಯಿ ವೆಂಕಮ್ಮನವರು 'ಮಗೂ, ಇವತ್ತು ಮನೆಗೆ ಪಿತೃಗಳು ಬರುತ್ತಾರಪ್ಪಾ – ಊಟ ತಡ' ಎಂದು ಹೇಳಿದರು."

"ಪಿತೃಗಳು ಬರುವುದೆಂದರೇನು ಸ್ವಾಮಿ."

"ಹಿರಿಯರ ತಿಥಿ. 'ಆಗಲಮ್ಮ' ಎಂದೆ. 'ಮಧ್ಯಾಹ್ನ ನಿನಗೆ ರಜ ವಿದೆಯಲ್ಲವೇ. ಆಗ ಬಂದು ಊಟ ಮಾಡಿಕೊಂಡು ಹೋಗು' ಎಂದರು. ನಾನು 'ಪರೀಕ್ಷೆಕಾಲ ತಾಯಿ. ಮಧ್ಯಾಹ್ನ ಬರುವುದಕ್ಕಾಗುವುದಿಲ್ಲ. ರಾತ್ರಿಗೆ ಬರುತ್ತೇನೆ' ಎಂದು ಹೇಳಿ ಹೊರಟುಬಿಟ್ಟೆ. ನಮಗೆ ಎರಡರಿಂದ ಮೂರರವರೆಗೆ ವಿರಾಮ. ಎರಡು ಗಂಟೆಗೆ ಹೊರಗೆ ಬಂದು ನೋಡುತ್ತೇನೆ– ವೆಂಕಮ್ಮನವರು ಊಟದ ಗಂಟು ಹಿಡಿದುಕೊಂಡು ಬಂದು ನನಗಾಗಿ ಕಾದಿದ್ದಾರೆ. 'ನೀವೇಕೆ ಬಂದಿರಿ ತಾಯಿ. ಬಿಸಿಲಿನಲ್ಲಿ ಇಷ್ಟು ದೂರ' ಎಂದೆ. ಆ ತಾಯಿ – ನನ್ನ ಭಾಗದ ಅನ್ನಪೂರ್ಣೇಶ್ವರಿ, 'ಅಪ್ಪಾ, ಹಾಲು ಕಂದ ನೀನು. ನೀನು ಹಸಿದುಕೊಂಡಿದ್ದರೆ ನನ್ನ ಗಂಟಲಲ್ಲಿ ಅನ್ನ ಇಳಿಯು ತ್ತದೆಯೇ?' ಎಂದರು.—ಇದು ಬಡವರ ಪ್ರೀತಿ ಸ್ವಾಮಿ.—ಬಿ.ಎ. ಪಾಸೂ ಆಯಿತು, ಕೆಲಸವೂ ಆಯಿತು. ನನ್ನ ಅನುಭವ, ಬಾಲ್ಯದಲ್ಲಿ ನಾನು ಕಂಡಿದ್ದ ಬಡತನದ ಚಿತ್ರಗಳು ಮನಸ್ಸಿನಿಂದ ಮರೆಯಾಗಲಿಲ್ಲ.

—ಸಾವಿರದ ಒಂಭೈನೂರು, ಇಪ್ಪತ್ತೋ, ಇಪ್ಪತ್ತೊಂದೇ ನನಗೆ ಸರಿಯಾಗಿ ನೆನಪಿಲ್ಲ. ಮಹಾತ್ಮ ಗಾಂಧಿಯವರು ಬೆಂಗಳೂರಿಗೆ ದಯೆ ಮಾಡಿಸಿದರು. ಗಾಂಧೀ ಮೈದಾನದಲ್ಲಿ – ಈಗ ಕನ್ನಡ ಸಾಹಿತ್ಯ ಪರಿಷತ್ತು ಇದೆ ನೋಡಿ ಅದೇ ಸ್ಥಳದಲ್ಲಿ – ಮಹಾತ್ಮರ ಭಾಷಣ. ದೂರದಲ್ಲಿ ನಿಂತು ಕೇಳಿದೆ. ಅವು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಉಗ್ರದಿನಗಳು. ಸರ್ಕಾರಿ ನೌಕರರು ಅಂಥ ಸಭೆಗಳಿಗೆ ಹೋಗುವುದು ಮಹಾಪರಾಧವಾಗಿತ್ತು. ಮಹಾತ್ಮರು ಭಾಷಣ ಮುಗಿಸಿಕೊಂಡು ತಮ್ಮ ಕಾರಿನ ಬಳಿಗೆ ಮಹದೇವ ದೇಸಾಯಿ, ಜಮ್ನಾಲಾಲ ಬಜಾಜ್, ಶಂಕರಲಾಲ್ ಬ್ಯಾಂಕರ್ ಜೊತೆ ಹೊರಟರು. ಅವರನ್ನು ಸಮೀಪದಲ್ಲಿ ನೋಡಲು ಜನರು ನುಗ್ಗಿದರು – ನಾನೂ ನುಗ್ಗಿದೆ. ಒಬ್ಬ ಹಣ್ಣುಹಣ್ಣು ಮುದುಕ ದಾರಿ ಮಾಡಿಕೊಂಡು

ಮಹಾತ್ಮರ ಬಳಿಗೆ ಬಂದು ಅವರಿಗೆ ಅಡ್ಡಬಿದ್ದ. ಬಾಪೂ ಅವನನ್ನು ಹಿಡಿದೆತ್ತಿ ಮಾತನಾಡಿಸಿದರು. ತನ್ನ ಪರಿಸ್ಥಿತಿಯನ್ನು ಮುದುಕ ಕನ್ನಡದಲ್ಲಿ ಅರಿಕೆ ಮಾಡಿಕೊಂಡ– ಯಾರೋ ನಮ್ಮವರು ಅದನ್ನು ಇಂಗ್ಲೀಷಿಗೆ ಅನುವಾದ ಮಾಡಿ ಬಾಪೂಜೀಗೆ ತಿಳಿಸಿದರು. ಬಾಪು ಮುದುಕನಿಗೆ ಧೈರ್ಯ ಹೇಳಿ ಜಮ್ನಾಲಾಲರ ಕಡೆ ನೋಡಿದರು. ಬಜಾಜರು ನಾಲ್ಕಾರು ನೋಟು ಗಳನ್ನು ತೆಗೆದು ಮುದುಕನ ಕೈಯಲ್ಲಿಟ್ಟರು. ಬಾಪೂ ಅವರ ಜತೆಯಲ್ಲಿ ಬಂದಿದ್ದವರು ಕಾರಿನಲ್ಲಿ ಕುಳಿತು ಹೊರಟುಹೋದರು.

—ಈ ದೃಶ್ಯ ನನ್ನ ಮನಸ್ಸಿನ ಮೇಲೆ ಅದ್ಭುತ ಪರಿಣಾಮವನ್ನುಂಟು ಮಾಡಿತು. ಮಲಗಿ ನಿದ್ರೆ ಮಾಡುತ್ತಿದ್ದ ನನ್ನ ವಿಚಾರಶಕ್ತಿಯನ್ನು ಬಡಿದೆಬ್ಬಿಸಿತು. 'ಬಜಾಜರು ಕೊಟ್ಟ ಹಣ ಎಷ್ಟು ದಿನಕ್ಕೆ ಸಾಲಬಹುದು. ಈ ಹಣವನ್ನು ಮುದುಕ ಉಪಯೋಗಿಸುವ ಬಗೆ ಹೇಗೆ? ಅವನು ಅನಾಥ ನಾಗಿದ್ದರೆ ಅವನ ಗತಿಯೇನು? ಅವನನ್ನು ನೋಡಿಕೊಳ್ಳುವವರು ಯಾರು? ನಿರ್ಗತಿಕರಿಗೆ ಬೀದಿಯೇ ಮನೆಯೇ? ಎಂಜಲುಕೂಳೇ ಅನ್ನವೇ? ಅವರೂ ಮನುಷ್ಯರಲ್ಲವೇ? ಬಿಸಿಲು ಮಳೆಯಿಂದ ರಕ್ಷಿಸಲು ಅವರಿಗೊಂದು ಹುಲ್ಲು ಗುಡಿಸಲಾದರೂ ಬೇಡವೇ?—ಎನ್ನುವ ನೂರಾರು ಪ್ರಶ್ನೆಗಳು ನನ್ನ ಮನಸ್ಸಿನಲ್ಲೆದ್ದವು.

—ಇದಕ್ಕೇನು ಪರಿಹಾರವೆಂದು ನಾನು ಯೋಚಿಸುತ್ತಿರುವಂತೆ ಥಟ್ಟನೆ ಒಂದು ವಿಚಾರ ಹೊಳೆಯಿತು. ನನ್ನ ಮನೆಯಲ್ಲಿ ಒಂದು ಗಾಡೀಖಾನೆ ಯಿತ್ತು. ಅದನ್ನು ಕೆಲಸಕ್ಕೆ ಬಾರದ ಸಾಮಾನಿನ ಉಗ್ರಾಣಮಾಡಿ ಕೊಂಡಿದ್ದೆವು. ಕೆಲವು ದಿನಗಳಲ್ಲಿಯೇ ಉಗ್ರಾಣ ಖಾಲಿಮಾಡಿ, ನಿರಾಶ್ರಿತ ರಾಗಿದ್ದ ಇಬ್ಬರು ಮುದುಕರನ್ನು ಅಲ್ಲಿ ಸ್ಥಾಪಿಸಿದೆ. ನನ್ನ ಹೆಂಡತಿಯೇ ಅವರಿಗೆ ಅನ್ನಮಾಡಿ ಹಾಕುತ್ತಿದ್ದಳು. ಕೆಲವು ದಿನಗಳಲ್ಲಿಯೇ ಇಬ್ಬರು ಹೋಗಿ ನಾಲ್ಕಾಯಿತು. ಈ ಸುದ್ದಿ ಹೇಗೋ ಹೊರಬಿದ್ದು ದಿನವೂ ಒಬ್ಬಿಬ್ಬರು ಬಂದು ತಮ್ಮನ್ನು ಸೇರಿಸಿಕೊಳ್ಳಬೇಕೆಂದು ಬೇಡತೊಡಗಿದರು. ನನ್ನ ಆರ್ಥಿಕ ಸ್ಥಿತಿಯಲ್ಲಿ ನಾಲ್ಕು ಜನರನ್ನು ಪೂರೈಸುವುದೇ ನನಗೆ ಸಾಕಾಗಿತ್ತು. ಏನು ಮಾಡುವುದೆಂದು ಯೋಚನೆ ಮಾಡತೊಡಗಿದೆ?

—'ಮನಸ್ಸಿದ್ದಲ್ಲಿ ಮಹಾದೇವ.' ಎನ್ನುವುದು ಸುಳ್ಳಲ್ಲ ನೋಡಿ. ದೈವಸಹಾಯವೂ ಒದಗಿತು. ನಾನು ಸರ್ಕಾರಿ ನೌಕರಿ ಮಾಡುತ್ತಿದ್ದ ಸಂದರ್ಭದಲ್ಲಿ ಎರಡು ವರ್ಷ ಸಯ್ಯದ್ ಅಬ್ದುಲ್ ಲತೀಫ್ ಸಾಹೇಬರು ಬೆಂಗಳೂರು ಡೆಪ್ಯುಟಿ ಕಮಿಷನರಾಗಿದ್ದಾಗ ನಾನು ಅವರ ಪರ್ಸನಲ್ ಅಸಿಸ್ಟೆಂಟ್ (Personal Assistant) ಆಗಿ ಕೆಲಸ ಮಾಡಿದ್ದೆ. ಸಯ್ಯದ್ ಸಾಹೇಬರು ಪರಮ ಕರುಣಾಳುಗಳು, ದೀನ ದರಿದ್ರ ಪ್ರೇಮಿಗಳು. ಅವರ ನೆನಪಾಯಿತು. ಹೋಗಿ ನೋಡಿ ನನ್ನ ದುಃಖ ತೋಡಿಕೊಂಡೆ. ಸಾಹೇಬರು ಮರುಮಾತಾಡಲಿಲ್ಲ 'ರಾಮಚಂದ್ರರಾವ್, ನೀವು ಮಾಡುತ್ತಿರುವುದು ಖುದಾ ಮೆಚ್ಚುವ ಕೆಲಸ. ನಿಮಗೆ ಸಹಾಯ ಮಾಡುವುದು ನನ್ನ ಪವಿತ್ರ ಕರ್ತವ್ಯ. ಮಾನವಸೇವೆಯೇ ದೇವರಸೇವೆ ಎಂದು ಭಗವಾನ್ ಪೈಗಂಬರರೂ ಹೇಳಿದ್ದಾರೆ. ಅಂಗಹೀನರು, ದಲಿತರು, ನಿರಾಶ್ರಿತರ ಸೇವೆ ಮಾಡಬೇಕಾದುದು ಪ್ರತಿಯೊಬ್ಬನ ಕರ್ತವ್ಯ. ಮನೆಯಲ್ಲಿಯೇ ಆಶ್ರಮ ತೆಗೆದು ನೀವು ನಮಗೆಲ್ಲಾ ಮಾದರಿಯಾಗಿದ್ದೀರಿ. ಇನ್ನುಮೇಲೆ ಒಂದು ಕೆಲಸ ಮಾಡಿ. ಬಾಡಿಗೆಗೆ ಒಂದು ಮನೆ ತೆಗೆದುಕೊಳ್ಳಿ. ಬಾಡಿಗೆ ನಾನು ಕೊಡುತ್ತೇನೆ. ಅದರ ಜತೆಗೆ ತಿಂಗಳಿಗೆ ಐವತ್ತು ರೂಪಾಯಿ ಕೊಡುತ್ತೇನೆ' ಎಂದು ಹೇಳಿದರು. ಅವರನ್ನೇ ಅಧ್ಯಕ್ಷರನ್ನಾಗಿಮಾಡಿಕೊಂಡು, ಬಾಡಿಗೆಗೆ ಮನೆ ತೆಗೆದುಕೊಂಡು 'ಕರುಣಾಶ್ರಮ'ವನ್ನು ನನ್ನ ಮನೆಯಲ್ಲಿದ್ದ ನಾಲ್ವರು, ಇನ್ನಿಬ್ಬರು – ಒಟ್ಟು ಆರು ಜನಗಳಿಂದ ಆರಂಭಿಸಿದೆ. ಸಯ್ಯದ್ ಸಾಹೇಬರು ಕೊಡುತ್ತಿದ್ದ ಐವತ್ತು ರೂಪಾಯಿಗಳ ಜತೆಗೆ ನಾನು ಮೂವತ್ತು ನಲವತ್ತು, ಹಾಕುತ್ತಿದ್ದೆ. ಸಾಹೇಬರು ಸುಮ್ಮನೆ ಕೂಡಲಿಲ್ಲ. ದಿನಕ್ಕೆ ಯಾರಾದರೂ ಶ್ರೀಮಂತರು, ಅಧಿಕಾರಿಗಳು, ಅನುಕೂಲಸ್ಥರನ್ನು ಕರೆದುಕೊಂಡು ಬಂದು ಆಶ್ರಮ ತೋರಿಸಿ ಅವರಿಂದ ಹಣ ವಸೂಲ್ಮಾಡುತ್ತಿದ್ದರು. ನಾನೂ ಚಂದಾಪಟ್ಟಿ ತೆಗೆದುಕೊಂಡು ಗುರುತು ಕಂಡವರಲ್ಲಿ ಹೋಗಲಾರಂಭಿಸಿದೆ. ಒಂದೇ ವರ್ಷದಲ್ಲಿ ಆಶ್ರಮ ಹನ್ನೆರಡು ಜನಕ್ಕೆ ಆಶ್ರಯಕೊಟ್ಟಿತು. ಮಂಡಿಪೇಟೆಯ ವರ್ತಕರು ಕೆಲವರು ಅಕ್ಕಿ, ಬೇಳೆ, ಎಣ್ಣೆ, ತುಪ್ಪ, ಇತರ ಸಾಮಾನುಗಳನ್ನು ಕೊಡಲೊಪ್ಪಿಕೊಂಡರು. ಮೂರು ವರ್ಷಗಳಲ್ಲಿ ಆಶ್ರಮದ ಸಂಖ್ಯೆ ಇಪ್ಪತ್ತು ನಾಲ್ಕಕ್ಕೆ ಬೆಳೆಯಿತು. ಸಯ್ಯದ್ ಸಾಹೇಬರ ಪ್ರಭಾವದಿಂದ

ಮುನಿಸಿಪಾಲಿಟಿಯವರು ವಿಶಾಲವಾದ ಸ್ಥಳ ಉಚಿತವಾಗಿ ಕೊಟ್ಟರು. ಕಟ್ಟಡ ಕಟ್ಟುವುದಕ್ಕೂ ಜನಸಹಾಯ ಒದಗಿಬಂತು. ಕಲ್ಲು, ಇಟ್ಟಿಗೆ, ಸಿಮೆಂಟ್ ಕಬ್ಬಿಣದ ಸಾಮಾನು, ಮರದ ಸಾಮಾನುಗಳನ್ನು ಉದಾರಿಗಳಾದ ಕಂಟ್ರ್ಯಾಕ್ಟರುಗಳು ಒದಗಿಸಿದರು. ಮೊದಲು ಒಂದು ಹಜಾರ, ಅಡಿಗೆಯ ಮನೆ, ಸ್ನಾನದ ಮನೆ ಇಷ್ಟೇ ನಾವು ಕಟ್ಟಿದ್ದು. ಆ ಕಟ್ಟಡದ ಉದ್ಘಾಟನೆಗೆ ದಿವಾನರು ಸರ್ ಮಿರ್ಜಾಸಾಹೇಬರನ್ನು ಆಹ್ವಾನಿಸಿದ್ದೆವು. ಅವರು ಸಂತೋಷ ಪಟ್ಟು, ಕಟ್ಟಡದ ವಿಸ್ತರಣೆಗಾಗಿ ಸರ್ಕಾರದಿಂದ ಇಪ್ಪತ್ತು ಸಾವಿರ ರೂಪಾಯಿ ಕೊಡಿಸಿದರು. ಮುನಿಸಿಪಾಲಿಟಿಯವರು ಐದು ಸಾವಿರ ಕೊಟ್ಟರು. ವರ್ತಕ ಮಂಡಲಿಯವರು ಚಂದಾ ಹಾಕಿ ಇಪ್ಪತ್ತೈದು ಸಾವಿರ ರೂಪಾಯಿ ಕೂಡಿಸಿಕೊಟ್ಟರು. ಐದುವರ್ಷ ತುಂಬುವುದರೊಳಗಾಗಿ ಐವತ್ತುಸಾವಿರ ರೂಪಾಯಿ ಕಟ್ಟಡ ಎಬ್ಬಿಸಿದೆವು. ಆಶ್ರಮವಾಸಿಗಳ ಸಂಖ್ಯೆ ನಲವತ್ತಕ್ಕೇರಿತು. ಹೀಗೆ ಬೆಳೆಯುತ್ತ ಬಂದು ಈಗ ದೊಡ್ಡ ಸಂಸ್ಥೆಯಾಗಿದೆ."

"ಈಗೆಷ್ಟು ಜನ ಆಶ್ರಮವಾಸಿಗಳಿದ್ದಾರೆ ಸ್ವಾಮಿ."

"ನೂರನಲವತ್ತು ಜನರಿದ್ದಾರೆ."

ಪ್ರಸಾದ್ ಬೆಕ್ಕಸ-ಬೆರಗಾಗಿ

"ಅದ್ಭುತ ಕೆಲಸ ಸ್ವಾಮಿ," ಎಂದ.

"ಈಗ ಸುಂದರಮ್ಮನವರೂ ನಾನೂ 'ಅಭಯಾಶ್ರಮ'ದ ಸ್ಥಾಪನೆಗೆ ಪ್ರಯತ್ನಿಸುತ್ತಿದ್ದೇವೆ. ಕರುಣಾಶ್ರಮದಂತೆ ಇದನ್ನೂ ಬೆಳಸಬೇಕಾದುದು ತುಂಬ ಅವಶ್ಯಕವಾಗಿದೆ. ನನ್ನ ಕಾಲ ಆಗಿಹೋಯಿತು ಪ್ರಸಾದರೇ–ವಯಸ್ಸೂ ಆಯಿತು–ದೇಹತ್ರಾಣ ತುಂಬ ಕುಂದಿದೆ. ಕರುಣಾಶ್ರಮದ ಕೆಲಸ ತೂಗಿಸಿಕೊಂಡು, ಇದನ್ನೂ ನೋಡಿಕೊಳ್ಳುವುದು ನನಗೆ ದುಸ್ಸಾಧ್ಯವಾಗಿದೆ. ನೀವೂ ಲಲಿತಮ್ಮನವರೂ 'ಅಭಯಾಶ್ರಮ' ಒಪ್ಪಿಸಿಕೊಂಡರೆ ತುಂಬ ಉಪಕಾರವಾಗುತ್ತದೆ."

"ನನಗೆ ಸ್ವಲ್ಪವೂ ವ್ಯವಧಾನವಿಲ್ಲ ರಾಯರೇ. ಆದರೂ ಆದಷ್ಟು ವೇಳೆಯನ್ನು 'ಅಭಯಾಶ್ರಮ'ಕ್ಕೆ ವಿನಿಯೋಗಿಸಲು ನಾನು ಸಿದ್ಧನಾಗಿದ್ದೇನೆ."

"ಆಶ್ರಮಕ್ಕೆ ಹೊರಡುವುದಕ್ಕೆ ಹೊತ್ತಾಗಲಿಲ್ಲವೇ ಮ್ಯಾಡಾಂ"

ಎಂದು ಲಲಿತಮ್ಮ ಕೇಳಿದಳು.

"ಹೊರಡೋಣ. ತುಂಬ ಬಿಸಿಲಾಗಿತ್ತು. ಬಿಸಿಲು ತಂಪಲಿ ಎಂದು ನಾನೇ ತಡಮಾಡಿದೆ."

ಎಂದೆದ್ದು ಸುಂದರಮ್ಮನವರು ತಮ್ಮ ಅಡಿಗೆಯವನಿಗೆ ಹೇಳಿ ಒಂದು ಗಾಡಿ ತರಿಸಿದರು.

ಮುಳ್ಳುಬೇಲಿ ಹಾಕಿದ್ದ ವಿಶಾಲ ಆವರಣ. ಅದರೊಳಗೆ ಒಂದು ಮೂಲೆಯಲ್ಲಿ ತಗಡಿನ ಒಂದು ಷಡ್ಡು. ಅದರ ಮುಂದೆ ಗಾಡಿ ನಿಂತಿತು. ಎಲ್ಲರೂ ಗಾಡಿಯಿಂದಿಳಿದು ಆವರಣದ ಒಳಕ್ಕೆ ಬಂದರು. ಪ್ರಸಾದ್ ಲಲಿತಮ್ಮ ಇಬ್ಬರಿಗೂ ಆಶ್ರಮ ತೋರಿಸುತ್ತಾ ರಾಯರು

"ಇದೇ ಸಾರ್ ನಮ್ಮ ಕರುಣಾಶ್ರಮ" ಎಂದರು.

"ಆವರಣ ವಿಶಾಲವಾಗಿದೆ."

"ಹೌದು ೪೨೦ "ಉದ್ದ ೪೮೦ ಅಡಿ ಅಗಲವಿದೆ. ನಮಗೆ ಸೇರಿದ್ದಲ್ಲ. ಬಾಡಿಗೆಗೆ ತೆಗೆದುಕೊಂಡಿದ್ದೇವೆ. ಜಾಗ ತುಂಬ ಒಳ್ಳೆಯದು. ಸುತ್ತ ಮುತ್ತ ಸಂಸಾರಿಗಳಿದ್ದಾರೆ."

ಆಶ್ರಮದ ಒಳಗೆ ಎಲ್ಲರೂ ಪ್ರವೇಶಿಸಲು ಆಶ್ರಮವಾಸಿಗಳು ಸಾಲಾಗಿ ನಿಂತು ನಮಸ್ಕರಿಸಿದರು. ಅವರಲ್ಲಿ ಅತಿ ಚಿಕ್ಕವಳೆಂದರೆ ಸುಮಿತ್ರಾ. ರಾಯರು ಅವಳ ಗಲ್ಲ ಹಿಡಿದು ಮುದ್ದಿಸಿ

"ನನ್ನ ಮಗು ಏನು ಮಾಡುತ್ತಿತ್ತು?" ಎಂದು ಕೇಳಿದರು.

"ಕವಡೆ ಆಡುತ್ತಿದ್ದೆ ತಾತಾ" ಎಂದಳು ಸುಮಿತ್ರಾ.

"ಪಾಠ ಓದಿಕೊಂಡೆಯಾ?"

"ಓ! ನನಗೆ ಹೊಸ ರೀಡರು ಬೇಕು ತಾತಾ."

"ತರಿಸಿಕೊಡುತ್ತೇನಮ್ಮ."

ಸುಂದರಮ್ಮನವರು ಮುಂದೆ ಬಂದು ಪ್ರಸಾದ್, ಲಲಿತಮ್ಮನಿಗೆ

"ಒಬ್ಬ ಹೆಣ್ಣುಮಗಳು ಮೂರು ಜನ ಮಕ್ಕಳನ್ನು ಕರೆದುಕೊಂಡು ಬಂದಳು ಎಂದು ಹೇಳಿದೆನಲ್ಲಾ ಅವರಲ್ಲಿ ಸುಮಿತ್ರೆ ಚಿಕ್ಕವಳು. ಇವರಿಬ್ಬರೂ ಅವಳ ಅಕ್ಕಂದಿರು ಕೌಸಲ್ಯಾ, ಊರ್ಮಿಳಾ. ರಾಯರ ಕರುಣಾಶ್ರಮದ ಬಳಿ ಬಂದು ಬಿದ್ದಿದ್ದವಳೇ ಈಕೆ-ಜ್ವಾಲಾಮಾಲಿನಿ; ಇನ್ನೊಂದು ಸಂಗತಿ

ತಿಳಿಸಿದೆನಲ್ಲಾ. ಅದು ಈಕೆಗೆ ಸಂಬಂಧಪಟ್ಟದ್ದು ವೀರಮ್ಮ. ಇವರೆಲ್ಲಿಲ್ಲಾ ವೀರಮ್ಮ ಸ್ವಲ್ಪ ಕಲಿತವಳು. ಈಕೆಯೇ ಎಲ್ಲರಿಗೂ ಪಾಠ ಹೇಳಿಕೊಡುತ್ತಿದ್ದಾಳೆ. ಜ್ವಾಲಾಮಾಲಿನಿಗೆ ಸ್ವಲ್ಪ ಸಂಗೀತ ಬರುತ್ತದೆ – ಅವಳು ಸಂಗೀತ ಹೇಳಿಕೊಡುತ್ತಿದ್ದಾಳೆ."

"ಅಡಿಗೆಗೆ ಏನು ಮಾಡುತ್ತಾರೆ?"

"ಸರದಿ ಪ್ರಕಾರ ಅವರೇ ಮಾಡಿಕೊಳ್ಳುತ್ತಾರೆ."

ರಾಯರು ಅತಿಥಿಗಳಿಗೆ ಮನೆ ತೋರಿಸಿದರು. ಅಲ್ಲಿದ್ದುದೆಲ್ಲಾ ಒಂದು ಹಜಾರ. ಹಜಾರದ ಚಾವಣಿಗೆ ಜಿಂಕ್ ತಗಡು (Zinc Sheets) ಹೊದಿಸಲಾಗಿತ್ತು. ಹಜಾರದ ಪಕ್ಕದಲ್ಲಿ ಅಡಿಗೆಯ ಮನೆ; ಅದರ ಪಕ್ಕದಲ್ಲಿ ಸ್ನಾನದ ಮನೆ. ಮನೆಗೆ ನಲ್ಲಿಯಿರಲಿಲ್ಲ (ನಳ); ಲೈಟೂ ಇರಲಿಲ್ಲ. ಭಾವಿಯಿಂದ ನೀರು ಸೇದಿಕೊಳ್ಳಬೇಕಾಗಿತ್ತು. ರಾಯರು ಸುಂದರಮ್ಮನವರು ಸ್ವಂತ ಖರ್ಚಿನಿಂದ ಲೈಟ್ ಹಾಕಿಸಿದ್ದರು. ನೆಲಕ್ಕೆ ಯಾವ ಹಾಸೂ ಇರಲಿಲ್ಲ; ಸಗಣಿ ಸಾರಿಸಲ್ಪಟ್ಟಿತ್ತು.

"ಇವರನ್ನು ಯಾರು ನೋಡಿಕೊಳ್ಳುತ್ತಾರೆ?" ಎಂದು ಲಲಿತಮ್ಮ ಕೇಳಿದಳು.

"ಒಬ್ಬ ಆಳುಮಗಳನ್ನು ಗೊತ್ತುಮಾಡಿದ್ದೇವೆ. ಆಕೆ ಇಲ್ಲೇ ಇರುತ್ತಾಳೆ."

"ಈ ಮನೆಯಲ್ಲಿ ಹೆಣ್ಣುಮಕ್ಕಳು ವಾಸಮಾಡುವುದು ಹೇಗೆ ರಾಯರೇ. ಜಿಂಕ್ ತಗಡುಗಳು ಬೇಸಿಗೆಯಲ್ಲಿಯೂ ಅನಾನುಕೂಲ; ಚಳಿ, ಮಳೆಗಾಲದಲ್ಲಿಯೂ ಅನಾನುಕೂಲ."

"ಹೌದು ಸಾರ್. ಮೊದಲು ಜಿಂಕ್ ತಗಡುಗಳು ತೆಗೆಸಿ ಆಸ್ಬೆಸ್ಟಾಸ್ ಷೀಟ್ಸ್ (Asbestos Sheets) ಹಾಕಿಸಿ, ನೆಲಕ್ಕೆ ಸಿಮೆಂಟ್ ಸಾರಿಸಿದರೆ ಎಷ್ಟೋ ಸುಧಾರಿಸುತ್ತದೆ."

"ಮನೆಯ ಮಾಲಿಕ ಅವುಗಳನ್ನು ಮಾಡಿಸಿಕೊಡುವುದಿಲ್ಲವೇ?"

"ಅವನು ಈ ಸೈಟ್ ಮಾರಬೇಕೆಂದಿದ್ದಾನೆ. ಇಲ್ಲಿ ಮನೆ ಕಟ್ಟಿಕೊಂಡು ತಾನೇ ವಾಸಕ್ಕೆ ಬರಬೇಕೆಂದಿದ್ದ. ಅದಕ್ಕಾಗಿಯೇ ಈ ಷೆಡ್ ಹಾಕಿಸಿದ. ಮನೆಗೆ ಗುದ್ದಲಿಪೂಜೆ ಮಾಡಿಸಿದ ದಿನವೇ ಆತನ ಹೆಂಡತಿ ತೀರಿಕೊಂಡಳು.

ಶಕುನ ಸರಿಹೋಗಲಿಲ್ಲವೆಂದು ಮನೆಕಟ್ಟುವ ಯೋಚನೆ ಬಿಟ್ಟುಬಿಟ್ಟ. ಇದು ಖಾಲಿಯೇ ಇತ್ತು. 'ಅಭಯಾಶ್ರಮ'ದ ಯೋಚನೆ ಬಂದಾಗ ನಾನು ಇದನ್ನು ಆತನಿಂದ ಬಾಡಿಗೆಗೆ ತೆಗೆದುಕೊಂಡೆ."

"ಸೈಟ್ ಮಾರುವುದಾದರೆ ಎಷ್ಟು ಕೇಳುತ್ತಾನೆ ?"

"ಮೊದಲು ಐದು ಸಾವಿರ ಹೇಳುತ್ತಿದ್ದವನು ಈಗ ಹದಿನೈದು ಸಾವಿರ ಹೇಳುತ್ತಿದ್ದಾನೆ. ಹನ್ನೆರಡು ಸಾವಿರಕ್ಕೆ ಕೊಡಬಹುದು."

"ಸದ್ಯಕ್ಕೆ ಆಸ್‌ಬೆಸ್ಟಾಸ್ ಷೀಟ್ಸ್ ಹಾಕಿಸಿ, ನೆಲಕ್ಕೆ ಸಿಮೆಂಟು ಸಾರಿಸಿ, ನಲ್ಲಿ ಹಾಕಿಸುವುದಕ್ಕೆ ಎಷ್ಟಾಗುತ್ತದೆ?"

"ಆರುನೂರು ಏಳುನೂರು ರೂಪಾಯಿಗಳಲ್ಲಿ ಆಗುತ್ತದೆ. ಜಿಂಕ್ ಷೀಟುಗಳಿಗೆ ಒಳ್ಳೆಯ ಬೆಲೆಯಿದೆ. ಇಲ್ಲಿರುವ ಷೀಟ್‌ಗಳನ್ನು ಮಾರಿದರೆ ಸುಮಾರು ಇನ್ನೂರು ರೂಪಾಯಿ ಬರಬಹುದು."

ಪ್ರಸಾದ್ ಸ್ವಲ್ಪವೂ ಅನುಮಾನಿಸದೆ

"ನಾನು ಐದುನೂರು ರೂಪಾಯಿ ಕೊಟ್ಟುಬಿಡುತ್ತೇನೆ. ಇದಿಷ್ಟು ಕೆಲಸ ಕೂಡಲೆ ಮುಗಿಸಿಬಿಡಿ ಸ್ವಾಮಿ" ಎಂದ.

"ಪ್ರಸಾದರೇ, ನಿಮ್ಮದು ಚಿಕ್ಕಪುಟ್ಟ ಸಂಸಾರ. ಅಲ್ಲದೆ ಇದೇ ಬೆಂಗಳೂರಿಗೆ ಬಂದು ಸಂಸಾರ ಹೂಡಿರುವಿರಿ. ಇಷ್ಟು ಹಣ ನೀವೊಬ್ಬರೇ ಹೇಗೆ ಕೊಡಬಲ್ಲಿರಿ?" ಎಂದು ಸುಂದರಮ್ಮನವರು ಹೇಳಿದರು.

"ಅಮ್ಮ, ನಾವು ಮುಂಬಯಿ ಬಿಟ್ಟು ಬರುವಾಗ ನನ್ನ ಮಿತ್ರರೊಬ್ಬರು ಸಾವಿರ ರೂಪಾಯಿ ಕೈಯಲ್ಲಿಟ್ಟರು. ಅದರಲ್ಲಿ ಸ್ವಲ್ಪ ಖರ್ಚು ಮಾಡಿಕೊಂಡಿದ್ದೇವೆ. ಇನ್ನೂ ಆರುನೂರು ರೂಪಾಯಿಗಳಷ್ಟು ನಮ್ಮಲ್ಲಿದೆ. ಆದನ್ನು 'ಅಭಯಾಶ್ರಮ'ಕ್ಕೆ ನಮ್ಮ ಕಾಣಿಕೆಯಾಗಿ ಸ್ವೀಕರಿಸಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡಿ."

ಎಲ್ಲರೂ ಕುಳಿತಿರುವಂತೆ ಮಕ್ಕಳು ಆಳುಮಗಳ ಕೈಯಲ್ಲಿ ನಿಂಬೇ ಹಣ್ಣು ತರಿಸಿ, ಬೆಲ್ಲ ಹಾಕಿ ಪಾನಕಮಾಡಿ ಎಲ್ಲರಿಗೂ ತಂದಿತ್ತರು.

ಪಾನಕ ಕುಡಿಯುತ್ತಿರುವಂತೆ ಲಲಿತಮ್ಮನ ಕಣ್ಣುಗಳಿಂದ ಹನಿಗಳುದುರಿದವು. ಸುಂದರಮ್ಮನವರು ಅವಳ ಪಕ್ಕಕ್ಕೆ ಸರಿದು

"ಯಾಕೆ ತಾಯಿ ?" ಎಂದು ಕೇಳಿದರು.

"ಭಗವಂತ ನಮ್ಮನ್ನೇಕೆ ಬಡವರನ್ನಾಗಿಟ್ಟಿದ್ದಾನೆ ಮ್ಯಾಡಾಂ."

ವಯಸ್ಸಿನಿಂದಲೂ, ದುಡಿಮೆಯಿಂದಲೂ ಜೀರ್ಣವಾಗಿದ್ದ ರಾಮಚಂದ್ರರಾಯರ ಕಣ್ಣುಗಳಲ್ಲಿ ಧಾರಾಪ್ರವಾಹ ಹೊರಟುಬಿಟ್ಟಿತು.

"ನೀವು ಬಡವರಲ್ಲ ತಾಯಿ – ಬಡವರಲ್ಲ. ಯಾರ ಹೃದಯದಲ್ಲಿ ಇಂಥ ದಿವ್ಯ ಭೂತಾನುಕಂಪವಿದೆಯೋ ಅವರು ಎಂದಿಗೂ ಬಡವರಲ್ಲ – ಅವರೇ ನಿಜವಾದ ಶ್ರೀಮಂತರು"

ಎಂದನ್ನುತ್ತಾ ರಾಯರು ಕಿಸೆಯಿಂದ ಗಡಿಯಾರ ತೆಗೆದು ನೋಡಿಕೊಂಡು

"ನಾನು ಆಶ್ರಮಕ್ಕೆ ಹೋಗಬೇಕಾಗಿದೆ. ಮತ್ತೆ ದರ್ಶನ ತೆಗೆದುಕೊಳ್ಳುತ್ತೇನೆ" ಎಂದು ಹೇಳಿ ಅಪ್ಪಣೆ ಪಡೆದು ಹೊರಟುಬಿಟ್ಟರು.

ಸುಂದರಮ್ಮನವರು ಲಲಿತಮ್ಮನ ಕಡೆ ತಿರುಗಿ

"ಆಶ್ರಮದಲ್ಲಿ ಇದು ಊಟದ ಹೊತ್ತು. ಆಶ್ರಮವಾಸಿಗಳು ಊಟ ಮಾಡುವಾಗ ರಾಯರು ಇದ್ದೇ ತೀರಬೇಕು. ಆ ದೃಶ್ಯ ನೀನು ನೋಡಬೇಕು ಲಲಿತಾ. ಪ್ರತಿಯೊಬ್ಬನನ್ನೂ ರಾಯರೇ ಉಪಚರಿಸುತ್ತಾರೆ. ಕುರುಡರೆದುರು ತಾವೇ ಕುಳಿತು ಅವರಿಗೆ ಉಪಚಾರ ಹೇಳಿ ಹೆಚ್ಚಾಗಿ ಮೋಳು ಕಾಳು ಹಾಕಿಸುತ್ತಾರೆ. ಆಶ್ರಮವಾಸಿಗಳು ಹೊಟ್ಟೆಯ ತುಂಬ ಸಂತೋಷವಾಗಿ ಊಟ ಮಾಡುವುದನ್ನು ನೋಡಿದ ಹೊರತೂ ರಾಯರಿಗೆ ಸಮಾಧಾನವಿಲ್ಲ."

"ಎಂಥ ಅಪರೂಪ ಜೀವ ಇದು. ನಮ್ಮ ಮನೆಯಲ್ಲಿರುವ ವಜ್ರದ ಕಾಂತಿ ನಮಗೇ ತಿಳಿಯದು."

ಅರೆಕ್ಷಣದಲ್ಲಿ 'ಅಭಯಾಶ್ರಮ'ವಾಸಿಗಳಿಗೂ ಲಲಿತಮ್ಮನಿಗೂ ನಿಕಟ ಸ್ನೇಹ ಬೆಳೆದುಬಿಟ್ಟಿತು. ಲಲಿತಮ್ಮ ಅವರ ಮಧ್ಯೆ ಕುಳಿತು ಸರಸ ಸಂಭಾಷಣೆ ನಡೆಸಿದಳು. ಸುಂದರಮ್ಮನವರು ಆಶ್ರಮವಾಸಿಗಳಿಗೆ

"ಇನ್ನು ಮೇಲೆ ಲಲಿತಮ್ಮನೇ ನಿಮ್ಮ ಮ್ಯಾಡಾಂ............ನೀವುಂಟು ಅವರುಂಟು" ಎಂದರು.

"ನೀವು ಮ್ಯಾಡಾಂ" ಎಂದು ಊರ್ಮಿಳಾ ಕಾತರಗೊಂಡು ಕೇಳಲು ಸುಂದರಮ್ಮನವರು ನಸುನಗುತ್ತಾ

"ನಾನು ಇದ್ದೇ ಇರುತ್ತೇನೆ. ಲಲಿತಮ್ಮ ನನ್ನ ಜತೆ ಆಶ್ರಮದ ಕೆಲಸ ಮಾಡಲು ಬಂದಿದ್ದಾರೆ. ಅವರಿಗೆ ತೊಂದರೆಯಾಗದಂತೆ ನೀವೆಲ್ಲಾ ನಡೆದುಕೊಳ್ಳಬೇಕು."

"ಹಾಗೇ ಆಗಲಿ ಮ್ಯಾಡಾಂ" ಎಂದು ಆಶ್ರಮನಿವಾಸಿಗಳು ಭರವಸೆಯಿತ್ತರು.

ಪ್ರಸಾದ್, ಲಲಿತಮ್ಮ, ಸುಂದರಮ್ಮ ಹೊರಟರು. ಸುಂದರಮ್ಮನವರನ್ನು ಮನೆಗೆ ತಂದುಬಿಟ್ಟು ಪ್ರಸಾದ್

"ನಾಳೆ ನಿಮ್ಮಲ್ಲಿ ನಮ್ಮ ಉಪಸಂಪಾದಕರನ್ನೂ ಫೋಟೋಗ್ರಾಫರನ್ನೂ ಕಳಿಸಿಕೊಡುತ್ತೇನೆ. ಅವರಿಗೆ ಎರಡು ಆಶ್ರಮಗಳ ಪರಿಚಯ ಮಾಡಿಕೊಡಬೇಕು."

"ಇದೆಲ್ಲಾ ಏಕಪ್ಪಾ ?"

"ಬೇಕು ತಾಯಿ. ರಾಮಚಂದ್ರರಾಯರು, ನೀವು ಮಾಡುತ್ತಿರುವ ಅಮೋಘ ಸೇವೆ ಜನಕ್ಕೆ ತಿಳಿಯಬೇಕು" ಎಂದು ಪ್ರಸಾದ್ ಹೇಳಿದ.

## ೧೨

ಮಾರನೆಯ ವಾರದ 'ಪುರವಣಿ'ಯಲ್ಲಿ 'ಕರುಣಾಶ್ರಮ' ಕುರಿತು ಸಚಿತ್ರ ಲೇಖನ ಪ್ರಕಟವಾಯಿತು. ತನಗೆ ಒಪ್ಪಿಸಲ್ಪಟ್ಟಿದ್ದ ಕೆಲಸವನ್ನು ವಿಶ್ವೇಶ್ವರಯ್ಯ ದಕ್ಷತೆಯಿಂದ ನಿರ್ವಹಿಸಿದ್ದ. ಆಶ್ರಮದ ಇತಿಹಾಸ, ರಾಮಚಂದ್ರರಾಯರ ತ್ಯಾಗಪೂರ್ಣ ಜೀವನ, ಆಶ್ರಮವಾಸಿಗಳ ಸಂಕ್ಷೇಪ ಪರಿಚಯ ಪ್ರಕಟವಾಗಿತ್ತು. ಅಬ್ದುಲ್ ಸಾಲಿಕ್ ಸೊಗಸಾದ ಚಿತ್ರಗಳನ್ನೊದಗಿಸಿದ್ದ.

ಅದರ ಮುಂದಿನ ವಾರ 'ಅಭಯಾಶ್ರಮ'ದ ಬಗ್ಗೆ ಲೇಖನ ಪ್ರಕಟವಾಯಿತು. ಸುಂದರಮ್ಮನವರ ವ್ಯಕ್ತಿ ಪರಿಚಯ ಮಾಡಿಕೊಡುತ್ತಾ ವಿಶ್ವೇಶ್ವರಯ್ಯ ಅವರೊಂದಿಗೆ ತಾನು ನಡೆಸಿದ ಸಂಭಾಷಣೆಯನ್ನೂ ವಿವರಿಸಿದ್ದ.

ಪ್ರಸಾದ್ ಎರಡು ಲೇಖನಗಳನ್ನೂ ಇಂಗ್ಲೀಷಿಗೆ ಅನುವಾದಿಸಿ, ಚಿತ್ರಗಳೊಂದಿಗೆ 'ಸೆಂಚುರಿ'ಯಲ್ಲಿ ಪ್ರಕಟಿಸಿದ.

ವಿಶ್ವೇಶ್ವರಯ್ಯನ ಖ್ಯಾತಿ ಬೆಳೆಯುವುದಕ್ಕೆ ಎರಡು ಲೇಖನಗಳೂ ಪುಟಗೊಟ್ಟವು. 'ಸೆಂಚುರಿ'ಯಲ್ಲಿ ವಿಶ್ವೇಶ್ವರಯ್ಯನ ಹೆಸರಿನಲ್ಲಿ ಪ್ರಕಟವಾದ ಲೇಖನಗಳನ್ನು ನೋಡಿ ಪುಟ್ಟಣ್ಣನಿಗೆ ತಳಮಳವಾಯಿತು. ಪ್ರಸಾದ್ ಉದ್ದೇಶಪೂರ್ವಕವಾಗಿ ವಿಶ್ವೇಶ್ವರಯ್ಯನನ್ನು ಎತ್ತುಗಟ್ಟಿ ತನ್ನನ್ನು ತುಳಿಯುತ್ತಿದ್ದಾನೆಂದು ಪುಟ್ಟಣ್ಣ ಭಾವಿಸಿಕೊಂಡ. ಹೇಗಾದರೂ ಮಾಡಿ ಪ್ರಸಾದನನ್ನು ಬುಟ್ಟಿಗೆ ಹಾಕಿಕೊಂಡು ತನ್ನ ಪ್ರಾಶಸ್ತ್ಯ ಬೆಳಸಿಕೊಳ್ಳಬೇಕೆಂಬ ಇಚ್ಛೆ ಪುಟ್ಟಣ್ಣನಿಗೆ ಉತ್ಕಟವಾಯಿತು.

ಪ್ರಸಾದನನ್ನು ಪದಚ್ಯುತನನ್ನಾಗಿಸುವುದು ಸುಲಭಸಾಧ್ಯವಲ್ಲವೆಂದು ಪುಟ್ಟಣ್ಣ ಚೆನ್ನಾಗಿ ಬಲ್ಲ. ತೇಜಃಪುಂಜವಾದ ಅವನ ಬರವಣಿಗೆ ಪತ್ರಿಕೆಗೆ ಕನ್ನಡ ಪತ್ರಿಕಾ ಪ್ರಪಂಚದಲ್ಲಿ ವಿಶಿಷ್ಟ ಸ್ಥಾನಗಳಿಸಿಕೊಟ್ಟಿತ್ತು. 'ಜನಸಂದೇಶ' ನಿಜಕ್ಕೂ ಜನಸಂದೇಶವಾಗಿ ಅಧಿಕಾರವರ್ಗಕ್ಕೆ ಪ್ರಜೆಗಳ ಕಷ್ಟಸುಖದ ಪರಿಚಯ ಮಾಡಿಕೊಡುತ್ತಿತ್ತು. ದೀರ್ಘ ಸಮಾಲೋಚನೆ, ತೂಕವಾದ ಬರವಣಿಗೆ, ಸತ್ಯದ ಸ್ಪಷ್ಟ ಆವಿಷ್ಕಾರಗಳಿಗೆ 'ಜನಸಂದೇಶ' ಹೆಸರು ಗಳಿಸಿಕೊಂಡು ಮೂಕಜನತೆಯ ಸಿಂಹವಾಣಿಯಾಗಿತ್ತು.

ದಿನದಿನಕ್ಕೆ 'ಜನಸಂದೇಶ' ಕೊಳ್ಳುವವರ ಸಂಖ್ಯೆ ಬೆಳೆಯುತ್ತಿತ್ತು. ಬೀದಿಯಲ್ಲಿ ಪತ್ರಿಕೆ ಮಾರಾಟ ಮಾಡುತ್ತಿದ್ದ ಹುಡುಗರಲ್ಲಿ ಸ್ಪರ್ಧೆ – ಬಾಜಿಗಾರಂಭವಾಗಿತ್ತು.

ತಾವು ನಿರೀಕ್ಷಿಸಿದುದಕ್ಕಿಂತ ಹೆಚ್ಚಿನ ಯಶ, ಕೀರ್ತಿ 'ಜನಸಂದೇಶ'ಕ್ಕೆ ಸಿಕ್ಕಿದುದನ್ನು ಕಂಡು ಗೋಪಾಲಶೆಟ್ಟರು ದಿಗ್ಭ್ರಾಂತರಾಗಿದ್ದರು. ಪ್ರಸಾದ್ ಒಬ್ಬ ಪವಾಡ ಪುರುಷನೆಂಬ ಭಾವನೆ ಅವರ ಮನಸ್ಸಿನಲ್ಲಿ ಹುಟ್ಟಿತ್ತು. ಅವನ ಮಾತು ಅವರಿಗೆ ವೇದವಾಕ್ಯವಾಗಿತ್ತು.

ಮಾಲಿಕನೇ ಪ್ರಸಾದನ ಭಕ್ತಾಗ್ರಣಿಯಾಗಿದ್ದಾಗ, ಅವನ ಜತೆ ನೇರವಾಗಿ ಕದನ ಹೂಡುವುದು ಅವಿವೇಕವೆಂದುಕೊಂಡು ಪುಟ್ಟಣ್ಣ ತಾತ್ಕಾಲಿಕ ಅಪಜಯವನ್ನಂಗೀಕರಿಸಿದ. ಪುಟ್ಟಣ್ಣನ ಹೃದಯಲ್ಲಿ ಪ್ರತಿಷ್ಠಿತ

ವಾಗಿದ್ದ ದ್ವೇಷ, ಈರ್ಷೆ, ಅಸಹನೆಗಳ ಮಹಾಗ್ನಿ ಹೊಗೆಯಾಡುತ್ತಾ, ಸ್ಫೋಟನವಾಗಲು ಸಮಯ ಕಾಯುತ್ತಿತ್ತು.

ಅಂದೇ ಸಂಜೆ 'ಸುಖಜಗತ್ತಿ'ನಲ್ಲಿ ಪುಟ್ಟಣ್ಣನ ಗೋಳುಕಥೆ ಕೇಳಿದ ರಾಘವಯ್ಯ ಗಹಗಹಿಸಿ ನಗುತ್ತಾ

"ನಿನ್ನ ಕೈಯಲ್ಲಿ ಏನೂ ಆಗೋದಿಲ್ವೋ ಪುಟ್ಟಣ್ಣ" ಎಂದ.

"ಏಕಯ್ಯಾ ?"

"ಸಾಹುಕಾರರ ಮನಸ್ಸು ಮಂಗನ ಮನಸ್ಸಿದ್ದ ಹಾಗೆ – ನಿಂತಲ್ಲಿ ನಿಲ್ಲುವುದು, ಕುಳಿತಲ್ಲಿ ಕೂಡುವುದು ಅವರ ಸ್ವಭಾವಕ್ಕೇ ವಿರೋಧ. ಇಂದು ಪ್ರಸಾದನಿಗೆ 'ಜೀಹಾ ಸರ್ಕಾರ್' ಎಂದು ಹೇಳುತ್ತಿರುವ ನಿನ್ನ ಗೋಪಾಲಶೆಟ್ಟಿ ನಾಳೆ ಅವನ ಬದ್ಧದ್ವೇಷಿಯಾಗುವುದರಲ್ಲಿ ಆಶ್ಚರ್ಯವೇನು ? ನಾನು ತಿಳಿದಂತೆ ಗೋಪಾಲಶೆಟ್ಟಿ ಹಟಮಾರಿ – ಅವನು ಪತ್ರಿಕೆ ಆರಂಭಿಸುವುದು ಪ್ರಸಾದನನ್ನು ಉದ್ಧಾರ ಮಾಡುವುದಕ್ಕೂ ಅಲ್ಲ; ಕನ್ನಡನಾಡನ್ನು ಬೆಳಗಿಸುವುದಕ್ಕೂ ಅಲ್ಲ. ಪತ್ರಿಕೆ ಅವನ ಭವಿಷ್ಯತ್ತಿನ ಸಾಧನ. ಸರ್ಕಾರ ಬೆದರಿಸಿ ಕಂಟ್ರಾಕ್ಟುಗಳು, ಲೈಸನ್ಸ್‌ಗಳನ್ನು ಹೊಡೆದುಕೊಳ್ಳುವುದಕ್ಕೆ ರಾಜಮಾರ್ಗ. ಪ್ರಸಾದನೂ ಹಟಮಾರಿ – ಅತುಲ ಆತ್ಮಾಭಿಮಾನಿ – ತತ್ತ್ವಪ್ರಿಯ. ಪ್ರಸಾದನ ಮೇಲೆ ತನ್ನ ಅಭಿಪ್ರಾಯಗಳನ್ನು ಹೇರಿ, ಅವನನ್ನೂ ಪತ್ರಿಕೆಯನ್ನೂ ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳಲು ಗೋಪಾಲಶೆಟ್ಟಿ ಪ್ರಯತ್ನಿಸಿಯೇ ಪ್ರಯತ್ನಿಸುತ್ತಾನೆ – ಪ್ರಸಾದ್ ಅವನನ್ನು ವಿರೋಧಿಸಿ ಸಿಡಿದು ನಿಲ್ಲುತ್ತಾನೆ. ಇಬ್ಬರಿಗೂ ಘರ್ಷಣೆ ಅನಿವಾರ್ಯ. ಆ ಸಮಯ ಕಾದು ನೀನು ಪ್ರವೇಶಿಸಬೇಕು. ಅವರಲ್ಲಿ ಹುಟ್ಟಿದ ಅಸಮಾಧಾನ ಉಪಶಾಂತವಾಗದಂತೆ ಪುಳ್ಳೆಹಾಕಬೇಕು – ತಾಳ್ಮೆ ಬೇಕು ಪುಟ್ಟಣ್ಣ – ಪ್ರಬಲ ಶತ್ರುವಿನೊಂದಿಗೆ ಕಾದುವಾಗ ಕ್ಷಿಪ್ರಫಲ ನಿರೀಕ್ಷಿಸಬಾರದು."

"ಪ್ರಸಾದ ಆಫೀಸಿನಲ್ಲಿಯೂ ತನ್ನದೇ ಒಂದು ಗುಂಪುಕಟ್ಟಿಕೊಂಡಿದ್ದಾನಯ್ಯಾ. ವಿಶ್ವೇಶ್ವರ ಅವನ ಪರಮಭಕ್ತ; ಬಸಪ್ಪನೂ ಅವನ ಭಕ್ತ ಕೋಟಿಗೆ ಸೇರುವುದರಲ್ಲಿದ್ದಾನೆ. ಮ್ಯಾನೇಜರ್ ರಾಮಚಂದ್ರಶೆಟ್ಟರೂ ಅವನ ಮಾತಿಗೆ ಪ್ರತಿ ಹೇಳುವುದಿಲ್ಲ."

"ಸಾಹುಕಾರರ ಮರ್ಜಿ ಹಿಡಿದು ಅವರು ರಾಗಕ್ಕೆ, ತಾಳಹಾಕುವುದು ನೌಕರರ ಲಕ್ಷಣ. ಇವತ್ತು ನಿಮ್ಮ ಸಾಹುಕಾರ 'ಪ್ರಸಾದನ ಸಮಾನ ಸಂಪಾದಕನೇ ಇಲ್ಲ' ಎಂದು ಹೇಳಿದರೆ ರಾಮಚಂದ್ರಶೆಟ್ಟಿ, ವಿಶ್ವೇಶ್ವರಯ್ಯ, ಬಸಪ್ಪ – ಎಲ್ಲರೂ 'ಹೌದು ಮಹಾಸ್ವಾಮಿ ಅವರು ಸರಸ್ವತಿಯ ವರಪುತ್ರರು' ಎನ್ನುತ್ತಾರೆ; ನಾಳೆ ಸಾಹುಕಾರ 'ಪ್ರಸಾದ ಶುದ್ಧ ಅಯೋಗ್ಯ – ಅವನಿಗೆ ನಾಲ್ಕು ಪಂಕ್ತಿ ಬರೆಯುವುದಕ್ಕೆ ಬರದು' ಎಂದು ಹೇಳಿದರೆ ಇವರೇ 'ನಿಜ ಮಹಾಸ್ವಾಮಿ, ಪ್ರಸಾದ ಶುದ್ಧ ಮುಠ್ಠಾಳ, ತನ್ನ ಹೆಸರು ಕೂಡಾ ಸರಿಯಾಗಿ ಬರೆಯಲಾರ' ಎಂದು ಹೇಳುತ್ತಾರೆ. ಪ್ರಸಾದನ ಬಗ್ಗೆ ಸಾಹುಕಾರನ ಮನಸ್ಸು ಕೆಡುವವರೆಗೆ ನೀನು ಕಾಯಬೇಕು. ಅವನ ಮನಸ್ಸು ಬೇಗ ಕೆಡುವಂತೆ ಪ್ರಯತ್ನಿಸಬೇಕು – ನಿನಗೆ ಬೇಕಾದ ಸಹಾಯ ಮಾಡುವುದಕ್ಕೆ ನಾವು ಸಿದ್ಧವಾಗಿರುವಾಗ ನೀನೇಕಯ್ಯ ಭಯಪಡಬೇಕು."

ವಶಿಷ್ಠ, ಈಶ್ವರರಾಯ, ಹರಿನಾರಾಯಣರೂ ರಾಘವಯ್ಯನ ಮಾತನ್ನೇ ಸಮರ್ಥಿಸಿದರು. ಈ ಪ್ರಬಲಮಿತ್ರರ ಸಹಕಾರದಿಂದ ತಾನು ಒಂದಲ್ಲ ಒಂದು ದಿನ ಪ್ರಸಾದನ ಬುಡಬೇರನ್ನೇ ಅಲುಗಿಸಿ ಅವನ ಸ್ಥಾನದಲ್ಲಿ ಬಂದು ಕೂಡುವ ಕನಸಿನಲ್ಲಿ ಪುಟ್ಟಣ್ಣ ಮೈಮರೆತ."

## ೧೩

'ಜನಸಂದೇಶ' ಪತ್ರಿಕೆಯ ಜನಪ್ರಿಯತೆಗೆ ಅದರಲ್ಲಿದ್ದ ವಿಷಯ ವೈವಿಧ್ಯ, ಅಧಿಕೃತ ನಿರೂಪಣೆ, ವಿಚಾರಪೂರ್ಣ ಪ್ರತಿಪಾದನೆ ಕಾರಣವಾಗಿದ್ದಂತೆ ಮೂರ್ತಿಯ ವ್ಯಕ್ತಿತ್ವವೂ ಕಾರಣವಾಗಿತ್ತು. ಪತ್ರಿಕಾ ಕಛೇರಿಗೆ ಬರುತ್ತಿದ್ದ ಸುದ್ದಿಗಳು, ವರದಿಗಳು, ಲೇಖನಗಳನ್ನು ಅಚ್ಚುಹಾಕಿ ಪುಟ ತುಂಬಿಸುವುದಷ್ಟೇ ಸಂಪಾದಕನ ಕೆಲಸವೆಂದು ಮೂರ್ತಿ ಭಾವಿಸಿರಲಿಲ್ಲ. ಪ್ರತಿಯೊಂದು ಸುದ್ದಿ, ವರದಿಯೂ ಆಧಾರಸಹಿತವಾಗಿರಬೇಕು; ವ್ಯಕ್ತಿನಿಂದೆಗೆ ಅವಕಾಶವಿರಬಾರದು; ಯಾವ ತತ್ತ್ವ, ಪಕ್ಷವನ್ನು ಹೀಗಳೆಯಬಾರದು ಎನ್ನುವ ಪತ್ರಿಕಾಧರ್ಮವನ್ನು ಅವನು ನಿಷ್ಠೆಯಿಂದ ಪಾಲಿಸಿದ್ದುದಲ್ಲದೆ ಪತ್ರಿಕೆಯನ್ನು ಜನತೆಯ ವಾಣಿಯನ್ನಾಗಿ ಮಾಡಲು ಪ್ರಯತ್ನಿಸಿದ್ದ.

ಸಂಪಾದಕೀಯ ಲೇಖನಗಳ ಮೇಲೆ ಟೀಕೆಗಳು ಬಂದರೆ, ಅವುಗಳನ್ನೂ ಪ್ರಕಟಿಸಿ, ವಿನಯದಿಂದ ಉತ್ತರಿಸುತ್ತಿದ್ದ.

ಪತ್ರಿಕೆಯಲ್ಲಿ 'ವಾದರಂಗ'ವಿರಬೇಕೆನ್ನುವ ವಿಷಯದಲ್ಲಿ ಹಾಗೂ ಉಭಯ ಪಕ್ಷಗಳ ವಾದ ವಿವಾದವನ್ನು ಪ್ರಕಟಿಸಬೇಕೆನ್ನುವ ವಿಷಯದಲ್ಲಿ ಪುಟ್ಟಣ್ಣ ವಿರೋಧಿಯಾಗಿರಲಿಲ್ಲ. ತತ್ತ್ವಾರ್ಥ ಮಥನದಿಂದ ಪತ್ರಿಕೆಯ ಪ್ರಸಾರ ಹೆಚ್ಚುವುದಲ್ಲದೆ, ಓದುಗರಿಗೂ ಪತ್ರಿಕೆಗೂ ನಿಕಟ ಸಂಬಂಧ ಏರ್ಪಡುತ್ತದೆಂಬುದನ್ನೂ ಅವನು ಮನಗಂಡಿದ್ದ. ಆದರೆ ಸಂಪಾದಕೀಯ ಲೇಖನಗಳ ಬಗ್ಗೆ ಬರುತ್ತಿದ್ದ ಟೀಕೆಗಳನ್ನು ಪ್ರಕಟಿಸುವುದರ ಬಗ್ಗೆ ಅವನು ಅಸಂತುಷ್ಟನಾಗಿದ್ದ.

ಒಂದು ದಿನ ಉದ್ಯೋಗಿಗಳ ಗೋಷ್ಠಿಯಲ್ಲಿ ಪುಟ್ಟಣ್ಣ ಈ ವಿಷಯ ಪ್ರಸ್ತಾಪಿಸಿ

"ಪತ್ರಿಕೆಯ ಸಂಪಾದಕನೆಂದರೆ ಅದರ ಸರ್ವಾಧಿಕಾರಿ. ತನ್ನ ಲೇಖನಗಳ ಮೇಲೆ ಬರುವ ಟೀಕೆಗಳನ್ನವನು ಪ್ರಕಟಿಸಿದರೆ ತನ್ನ ತೂಕವನ್ನೇ ಕಡಿಮೆ ಮಾಡಿಕೊಂಡಂತಾಗುತ್ತದೆ" ಎಂದು ಹೇಳಿದ.

"ಪತ್ರಿಕೆ ಒಂದು ಸಂಸ್ಥೆ ಪುಟ್ಟಣ್ಣ. ಸಂಪಾದಕ ಜನಪದದ ವಾಣಿಯಾಗಿ, ಅವರ ಕ್ರೋಢೀಕೃತ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾನೆ. ಒಂದುವೇಳೆ ಪತ್ರಿಕೆ ಯಾವದಾದರೊಂದು ರಾಜಕೀಯ ಪಕ್ಷಕ್ಕೆ ಕಟ್ಟು ಬಿದ್ದಿದ್ದರೆ ತನ್ನ ಪಕ್ಷದ ಅಭಿಪ್ರಾಯಗಳನ್ನು ಸಮರ್ಥಿಸುತ್ತಾನೆ. ಒಂದು ದೃಷ್ಟಿಯಲ್ಲಿ ಪತ್ರಿಕಾ ಸಂಪಾದಕ ನ್ಯಾಯಾಧೀಶ – ಇನ್ನೊಂದು ದೃಷ್ಟಿಯಲ್ಲಿ ಅವನು ನ್ಯಾಯವಾದಿ. ಭಿನ್ನಾಭಿಪ್ರಾಯಗಳುಳ್ಳ ಪಕ್ಷಗಳ ವಾದವನ್ನು ತೂಗಿ ನೋಡಿ, ಅವುಗಳಲ್ಲಿ ಸಮಂಜಸವಾದುದು ಯಾವದು – ದೇಶದ ಕಲ್ಯಾಣಕ್ಕೆ ನೆರವಾಗುವುದು ಯಾವದು ಅದನ್ನು ಪ್ರತಿಪಾದಿಸುತ್ತಾನೆ. ಒಮ್ಮೊಮ್ಮೆ ಜನಾಭಿಪ್ರಾಯಕ್ಕೆ ವಿರುದ್ಧವಾದ ಆದರೆ ಶಾಶ್ವತ ಹಿತಪರಿಣಾಮವನ್ನುಂಟು ಮಾಡುವ ತತ್ತ್ವವನ್ನು ಯಾವನೋ ಮಹಾಪುರುಷ ಪ್ರತಿಪಾದಿಸುತ್ತಾನೆ. ಜನಾಭಿಪ್ರಾಯಕ್ಕೆ ವಿರೋಧವಾಗಿ ನಡೆಯಬೇಕಲ್ಲಾ ಎಂದು ಪತ್ರಿಕಾಕರ್ತ ಹೆದರದೆ ಆ ಮಹಾಪುರುಷನ ಅಭಿಮತವನ್ನು ಸಮರ್ಥಿಸಲೇ ಬೇಕು. ದೃಷ್ಟಾಂತಕ್ಕೆ ತೆಗೆದುಕೊಳ್ಳಿ – ಖಾದಿಯಿಂದಲೇ

ಮೋಕ್ಷ, ಖಾದಿಯಿಂದಲೇ ಭಾರತದ ಬಿಡುಗಡೆ ಎಂದು ಗಾಂಧೀಜಿ ಸಾರಿದರು. ಇಡಿಯ ದೇಶವೇ ಅವರ ಅಭಿಪ್ರಾಯವನ್ನು ವಿರೋಧಿಸಿತು. ಗಾಂಧೀಜಿಯ ಅಂತರಂಗಭಕ್ತರಿಗೆ ಕೂಡ ಖಾದಿಯಲ್ಲಿ ನಂಬಿಕೆಯಿರಲಿಲ್ಲ. ಲ್ಯಾಂಕ್‌ಷೈರ್, ಮ್ಯಾಂಚೆಸ್ಟರ್‌ಗಳ ವಿಪುಲ ನಿರ್ಮಾಣದ ಮುಂದೆ ಕೈರಾಟೆ ನಿಲ್ಲಬಲ್ಲುದೇ? ಮೂವತ್ತುಮೂರು ಕೋಟಿ ಜನತೆಯ ವಸ್ತ್ರಸಮಸ್ಯೆಯನ್ನು ಕೈರಾಟೆ ನೀಗಬಲ್ಲುದೇ? ಎಂಬ ಸಹಜ ಸಂದೇಹ ಎಲ್ಲರ ಮನಸ್ಸನ್ನೂ ಆವರಿಸಿತ್ತು. ಗಾಂಧೀಜಿಯುವರ ತಪೋಭಾವನೆಯ ಮಟ್ಟಕ್ಕೇರುವುದು ಬಹು ಮಂದಿಗೆ ದುಸ್ಸಾಧ್ಯವಾಗಿತ್ತು. ಕೇವಲ ಅರ್ಥದೃಷ್ಟಿಯಿಂದ ಗಾಂಧೀಜಿ ರಾಟೆಯನ್ನು ರಾಷ್ಟ್ರಸಂಕೇತ ಮಾಡಲಿಲ್ಲ. ಅದರ ಶಕ್ತಿಮಿತಿಗೆ ಅಜೇಯ್ಯ ವಿಸ್ತಾರವನ್ನು ಕಲ್ಪಿಸಿಕೊಟ್ಟರು. ರಾಟೆಯನ್ನು ಚಿತ್ತೈಕಾಗ್ರತೆ, ತೃಪ್ತಿ, ಸಹನೆ, ಶ್ರಮ ಜೀವನ, ನಿರ್ಮಲಾನಂದಗಳ ಪ್ರತೀಕವನ್ನಾಗಿ ಮಾಡಿದರು. ಈ ಸನ್ನಿವೇಶ ದಲ್ಲಿ ಪತ್ರಿಕಾಕರ್ತ ಜನಾಭಿಪ್ರಾಯವನ್ನು ಸಮರ್ಥಿಸಬೇಕೇ, ಗಾಂಧೀಜಿ ಯುವರ ತಪೋಭಾವನೆಯನ್ನು ಮಾನಿಸಬೇಕೇ?"

"'ಜನಾಭಿಪ್ರಾಯ'ಕ್ಕೆ ವಿರೋಧವಾಗಿ ನಡೆದರೆ ಪತ್ರಿಕೆ ಉಳಿಯು ವುದೇ?"

"ಜನಾಭಿಪ್ರಾಯ ಯಾವಾಗಲೂ ಸಹಜಗುಣದಿಂದ (Instinct) ಪ್ರೇರಿತವಾದದ್ದು – ಎತ್ತು ಈಯಿತೆಂದರೆ ಕೊಟ್ಟಿಗೆಗೆ ಕಟ್ಟು ಎನ್ನುವಂತೆ – ಮೊನ್ನೆ ನಡೆದ ಸಂಗತಿಯನ್ನೇ ಜ್ಞಾಪಿಸಿಕೊಳ್ಳಿ. ಆಡುತ್ತಿದ್ದ ಮಗುವಿಗೆ ಪ್ರೀತಿಯಿಂದ ಬೈರಾಗಿ ಮಿಠಾಯಿ ಕೊಟ್ಟ. ಬೆದರಿದ ತಾಯಿ ಬೈರಾಗಿ ಮಂಕುಬೂದಿ ಚೆಲ್ಲಿ ಮಗುವನ್ನು ಹಾರಿಸಿಕೊಂಡು ಹೋಗುವ ಪ್ರಯತ್ನ ಮಾಡುತ್ತಿದ್ದಾನೆಂದು ಭಾವಿಸಿ ಗುಲ್ಲೆಬ್ಬಿಸಿದಳು. ಅವಳ ಕೂಗು ಕೇಳಿ ನೆರೆಹೊರೆಯವರು ಬಂದರು; ಪೂರ್ವಾಪರ ಜ್ಞಾನವಿಲ್ಲದೆ ಬೈರಾಗಿ ಯನ್ನು ಬಡಿದರು. ಪೋಲೀಸಿನವರು ಬಂದರು. ಅವರೂ ಬೈರಾಗಿಯನ್ನು ನಿಷ್ಕರುಣೆಯಿಂದ ಬಡಿದರು. ಸುದ್ದಿ ಬಂದಕೂಡಲೆ ನಾನು ಪೋಲೀಸ್ ಸ್ಟೇಷನ್ನಿಗೆ ಹೋಗಿ ಬೈರಾಗಿಯ ದರ್ಶನ ಪಡೆದು ನಿಜಸ್ಥಿತಿಯೇನೆಂದು ಕೇಳಿದೆ. ಬೈರಾಗಿ ಹೇಳಿದ 'ಮಾರಾಜ್, ನಾನು ಮಗುವನ್ನು ಕದ್ದು ಕೊಂಡು ಹೋಗಲು ಪ್ರಯತ್ನಿಸಲಿಲ್ಲ. ನಾನು ಒಂದು ಕಾಲದಲ್ಲಿ

ಬಿ.ಎನ್.ಆರ್. (B.N.R.) ರೈಲ್ವೆಯಲ್ಲಿ ಟಿಕೆಟ್ ಎಕ್ಸಾಮಿನರ್ (Ticket Examiner) ಆಗಿದ್ದೆ. ನನಗೂ ಹೆಂಡತಿಯಿದ್ದಳು – ಒಂದು ಮಗುವೂ ಇತ್ತು. ಕಾಲರಾ ಬೇನೆಗೆ ತುತ್ತಾಗಿ ನನ್ನ ಹೆಂಡತಿ ಸತ್ತುಹೋದಳು – ಮಗುವನ್ನು ನಾನೇ ಲಾಲನೆಪಾಲನೆ ಮಾಡುತ್ತಿದ್ದೆ. ಒಂದು ದಿನ ಡ್ಯೂಟಿ ಮುಗಿಸಿಕೊಂಡು ನಾನು ಮನೆಗೆ ಬರುವಲ್ಲಿ ನನ್ನ ಮಗುವಿನ ಮೃತದೇಹ ವನ್ನು ಮನೆಯಲ್ಲಿ ಮಲಗಿಸಿದ್ದರು. ಮಗು ಬೀದಿಯಲ್ಲಿ ಆಡುತ್ತಿತ್ತಂತೆ. ರಸ್ತೆ ಯಲ್ಲಿ ಹೋಗುತ್ತಿದ್ದ ಒಂದು ಮೋಟಾರುಕಾರು ಅದರ ಮೇಲೆ ಹರಿದು ಹೋಗಿತ್ತು. ಮಗುವನ್ನು ಮಣ್ಣುಮಾಡಿದೆ – ಅಂದೇ ನನ್ನ ಲೋಕಜೀವನ ವನ್ನೂ ಮಣ್ಣುಪಾಲು ಮಾಡಿದೆ. ಜೀವನದಲ್ಲಿ ಜಿಹಾಸೆ ಹುಟ್ಟಿತು. ಕೆಲಸ ಬಿಟ್ಟು ಬೈರಾಗಿಯಂತೆ ಅಲೆದಾಡತೊಡಗಿದೆ. ಕಾಶಿ, ಕೇದಾರ, ಪ್ರಯಾಗ ಪುರಿಗಳಿಗೆ ಹೋದರೂ ನನ್ನ ಗತಶಿಶು ನನ್ನ ಬೆನ್ನುಹತ್ತಿತ್ತು. ಹೀಗೇ ಅಲೆದಾಡುತ್ತ ಇತ್ತ ಬಂದೆ. ಭಿಕ್ಷೆ ಬೇಡುತ್ತಿದ್ದೆ. ಒಂದು ಮಗು ಆಡುತ್ತಿತ್ತು – ಮನಸ್ಸಿನಲ್ಲಿ ಮಮತೆ ಮೊಳೆಯಿತು. ಸ್ವಲ್ಪ ಮಿಠಾಯಿ ಕೊಂಡು ಮಗುವಿನ ಕೈಯಲ್ಲಿಟ್ಟೆ – ಇದೇ ನಾನು ಮಾಡಿದ ಮಹಾಪರಾಧ' ಎಂದ. ಅವನು ಹೇಳುತ್ತಿದ್ದುದು ಸತ್ಯವೆಂದು ನನ್ನ ಮನಸ್ಸಿಗೆ ಭಾಸವಾಯಿತು. ಆ ಬಗ್ಗೆ ನಾನು ಬರೆದ ಲೇಖನ ನೀವು ನೋಡಿರುವಿರಿ – ಸಹಜಗುಣಪ್ರೇರಿತರಾದ ಜನ ವಿವೇಚನೆ ಮಾಡುವಷ್ಟು ಶ್ರಮ ತೆಗೆದು ಕೊಳ್ಳುವುದಿಲ್ಲ. ಒಮ್ಮೊಮ್ಮೆ ನಮ್ಮ ಸಹಜಗುಣ ನಮ್ಮನ್ನು ತಪ್ಪು ದಾರಿ ತುಳಿಸುತ್ತವೆ. ಆ ಕಾಲದಲ್ಲಿ ಪತ್ರಿಕಾಕರ್ತ ಆಳವಾಗಿ ವಿವೇಚಿಸಿ ಸತ್ಯದ ಮೇಲೆ ಬೆಳಕು ಚೆಲ್ಲಬೇಕು."

"ಸಂಪಾದಕನೇ ಪತ್ರಿಕೆಯ ಮಾಲಿಕನಾಗಿದ್ದರೆ ಹಾಗೆ ಮಾಡಬಹುದು ಸರ್. ಯಾರದೋ ಪತ್ರಿಕೆಯ ಬಗ್ಗೆ ಸಂಪಾದಕ ಸರ್ವತಂತ್ರ ಸ್ವಾತಂತ್ರ್ಯ ವಹಿಸುವುದು ಯಾವ ನ್ಯಾಯ ?"

ಪುಟ್ಟಣ್ಣ ಉದ್ದೇಶಪೂರ್ವಕವಾಗಿಯೇ ಚುಚ್ಚುಮಾತು ಆಡಿದ್ದ. ಮೂರ್ತಿಯ ಸಂಪಾದಕೀಯ ನೀತಿಗೂ, ಮಾಲಿಕನ ದೃಷ್ಟಿಪಥಕ್ಕೂ ಅಜಗಜಾಂತರ ವ್ಯತ್ಯಾಸವಿದೆಯೆಂದು ಪರ್ಯಾಯವಾಗಿ ಸೂಚಿಸಿದ್ದ.

"ಸಂಪಾದಕ, ಮಾಲಿಕರಲ್ಲಿ ಒಮ್ಮತಿಸಮ್ಮತಿಯಿಲ್ಲದಿದ್ದರೆ ಪತ್ರಿಕೆ ನಡೆಸಲು ಸಾಧ್ಯವೇ ಪುಟ್ಟಣ್ಣ. ಸಂಪಾದಕ ಮಾಲಿಕರಿಗೆ ಹೊಂದಿಕೊಳ್ಳಬೇಕು; ಹಾಗಿಲ್ಲದಿದ್ದರೆ ಮಾಲಿಕರು ಸಂಪಾದಕನಿಗೆ ಹೊಂದಿಕೊಳ್ಳಬೇಕು."

"ಈ ವಿಷಯಗಳಲ್ಲಿ ನೀವು ಮಾಲಿಕರ ಅಭಿಪ್ರಾಯವನ್ನು ಹೆಚ್ಚು ಗಮನಿಸುವುದೊಳ್ಳೆಯದು ಸರ್."

"ನಾನು ಅನುಸರಿಸುತ್ತಿರುವ ಮಾರ್ಗದಿಂದ ಮಾಲಿಕರಿಗೆ ಅನ್ಯಾಯವಾಗುವುದಿಲ್ಲ ಪುಟ್ಟಣ್ಣ. ಪತ್ರಿಕೆಯ ಗೌರವ – ಅವರ ಗೌರವ ಹಾಸುಹೊಕ್ಕಾಗಿ ಹೊಂದಿಕೊಂಡಿವೆ."

"ಮಾಲಿಕರ ಹಿತವನ್ನು ನೀವು ಅಷ್ಟಾಗಿ ಗಮನಿಸುತ್ತಿಲ್ಲವೆಂದು ಜನ ಆಡಿಕೊಳ್ಳುತ್ತಿದ್ದಾರೆ."

"ಯಾರವರು ? ಅವರ ಪರಿಚಯ ಮಾಡಿಕೊಡಿ."

"ನನ್ನಲ್ಲಿ ರಹಸ್ಯ ಹೇಳಿದವರನ್ನು ನಾನು ಬಯಲಿಗೆಳೆಯುವುದಕ್ಕಾಗುತ್ತದೆಯೆ ?"

"ನನಗೆ ಕಂಡವರ ಅಭಿಪ್ರಾಯ ಬೇಕಿಲ್ಲ–ನಿಮ್ಮ ಅಭಿಪ್ರಾಯವೇನು ?"

ಮೂರ್ತಿಯ ನೇರವಾದ ಪ್ರಶ್ನೆ ಪುಟ್ಟಣ್ಣನನ್ನು ತೊಂದರೆಗೀಡುಮಾಡಿತು. ಉತ್ತರ ಕೊಡಲು ಅವನು ಹಿಂದೆಮುಂದೆ ನೋಡುತ್ತಿದ್ದಾಗ ವಿಶ್ವೇಶ್ವರಯ್ಯ ಉದ್ವಿಗ್ನನಾಗಿ

"ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳಲಂಜುವವರು ಅವುಗಳನ್ನು ಕಂಡವರ ಬಾಯಲ್ಲಿ ಹಾಕುವುದು ವಾಡಿಕೆ ಸರ್" ಎಂದ.

"ನನ್ನ ಅಭಿಪ್ರಾಯ ತಿಳಿಸಲು ನಾನು ಎಂದಿಗೂ ಅಂಜುವುದಿಲ್ಲ ವಿಶ್ವೇಶ್ವರಯ್ಯ" ಎಂದು ಪುಟ್ಟಣ್ಣನೂ ಉದ್ವೇಗಗೊಂಡು ನುಡಿದ.

ಈ ವಿಷಯ ಇತ್ಯರ್ಥಕ್ಕೆ ಬರಲೆಂದು ವಿಶ್ವೇಶ್ವರಯ್ಯ

"ಹಾಗಾದರೆ ನಿಮ್ಮ ಅಭಿಪ್ರಾಯವೇನು !" ಎಂದು ಕೇಳಿದ.

"ಸಂಪಾದಕರು ಮಾಲಿಕರ ಅಭಿಮತಕ್ಕೆ ವಿರೋಧವಾಗಿ ಹೋಗುತ್ತಿದ್ದಾರೆ."

"ಸಂಪಾದಕರಿಗೆ ಎಚ್ಚರಿಕೆಕೊಡುವುದು ಮಾಲಿಕರ ಜವಾಬ್ದಾರಿ – ನಿಮಗೂ ಅದಕ್ಕೂ ಏನು ಸಂಬಂಧ ?"

"ಮಾಲಿಕರು ನನಗೆ ಅನ್ನವಿಟ್ಟು ಕಾಪಾಡುತ್ತಿದ್ದಾರೆ. ಅವರ ಹಿತಾಹಿತಗಳನ್ನು ಗಮನಿಸುವುದು ನನ್ನ ಕರ್ತವ್ಯ."

"ಸಂಪಾದಕೀಯ ನೀತಿ ನಿಯಮದ (Editorial Policy) ಬಗ್ಗೆ ಮಾಲಿಕರು ನನಗೆ ಪೂರ್ಣ ಸ್ವಾತಂತ್ರ್ಯಕೊಟ್ಟಿರುವುದು ನಿಮಗೆ ಗೊತ್ತಿಲ್ಲವೇ ಪುಟ್ಟಣ್ಣ" ಎಂದು ಮೂರ್ತಿ ಕೇಳಿದ.

"ಗೊತ್ತಿದೆ ಸರ್ – ಗೊತ್ತಿದೆ" ಎಂದುಕೊಂಡು ಪುಟ್ಟಣ್ಣ ಸಭಾ ವಿಸರ್ಜನೆ ಮಾಡಿ ಹೊರಟುಹೋದ.

ಪುಟ್ಟಣ್ಣನ ವರ್ತನೆ ಮೂರ್ತಿ, ವಿಶ್ವೇಶ್ವರಯ್ಯನಿಗೆ ಬೇಸರವನ್ನುಂಟು ಮಾಡಿದುದಲ್ಲದೆ, ಅವನ ಅಭಿಮಾನಿಗಳಾಗಿದ್ದ ಉಪಸಂಪಾದಕರಿಗೂ ಬೇಸರವನ್ನುಂಟುಮಾಡಿತು.

"ಇವನೊಬ್ಬ ತಲೆಹತ್ತಿ ಮೆರೆಯುತ್ತಿದ್ದಾನೆ" ಎಂದು ಬಸಪ್ಪ ಗೊಣಗಿಕೊಂಡ.

೧೪

ಲಲಿತಮ್ಮನಿಗೂ 'ಅಭಯಾಶ್ರಮ'ಕ್ಕೂ ಋಣಾನುಬಂಧ ಬಲಿಯುತ್ತ ಬಂದಿತು. ಸುಂದರಮ್ಮನವರ ಸ್ನೇಹ, ಸೌಜನ್ಯ ಅವಳ ಅಭಿಮಾನಕ್ಕೆ ಕಾರಣವಾದಂತೆ ಜ್ವಾಲಾಮಾಲಿನಿ, ಊರ್ಮಿಳಾ, ವೀರಮ್ಮ, ಕೌಸಲ್ಯಾ, ಸುಮಿತ್ರಾ ಇವರ ಅಸಹಾಯಕ ಸ್ಥಿತಿ, ದುರಂತ ಜೀವನವೂ ಅವಳ ನಿಷ್ಠೆಗೆ ಕಾರಣವಾದವು.

ದುಡಿದು ದುಡಿದು ಹಣ್ಣಾಗಿ, ಬಳಲುತ್ತಿದ್ದ ಸುಂದರಮ್ಮನವರು ಆಗಾಗ್ಗೆ

"ಲಲಿತಾ, ನನ್ನ ಬೇಗ ರಿಟೈರ್ (Retire) ಮಾಡಿಸಿಬಿಡಮ್ಮ" ಎಂದು ಕೇಳುತ್ತಿದ್ದರು.

"ರಿಟೈರ್ ಎಂದರೇನು ಮ್ಯಾಡಾಂ?"

"ನನಗೂ ವಯಸ್ಸಾಯಿತು. ಹೆಚ್ಚುದಿನ ದುಡಿಯಲಾರೆ. ಆಶ್ರಮದ

ಒಳವ್ಯವಸ್ಥೆಯನ್ನಾದರೂ ನೀನು ನೋಡಿಕೊಂಡರೆ, ನಾನು ಹೊರಗೆ ಹೋಗಿ ನಾಲ್ಕುಕಾಸು ಭಿಕ್ಷನೆತ್ತಿಕೊಂಡು ಬರಲನುಕೂಲವಾಗುತ್ತದೆ."

"ಆಶ್ರಮದ ಮಕ್ಕಳ ಮೇಲ್ವಿಚಾರಣೆಗೆ ಒಬ್ಬರನ್ನು ಗೊತ್ತುಮಾಡ ಬಹುದು – ಆದರೆ ನಿಮ್ಮ ಮಾತೃಹೃದಯವನ್ನೆಲ್ಲಿಂದ ತರೋಣ ಮ್ಯಾಡಾಂ."

"ನನಗಿಂತ ದಕ್ಷಳಾದ ಉತ್ತರಾಧಿಕಾರಿಯನ್ನು ನಾನು ಗೊತ್ತುಮಾಡಿ ದ್ದೇನೆ ಲಲಿತಾ ?"

"ಆ ಪುಣ್ಯಾತ್ಗಿತ್ತಿ ಯಾರು ?"

"ಯಾರು ನೀನೇ ಹೇಳು ?"

"ನಾನೇ ? ! "

"ನೀನೇ ಲಲಿತಾ – ನೀನೇ ! "

"ಮನೆಯಲ್ಲಿ ಅವರ ಯೋಗಕ್ಷೇಮ ನೋಡಿಕೊಳ್ಳುವುದಕ್ಕೂ ನನಗೆ ವ್ಯವಧಾನವಿಲ್ಲವಾಗಿದೆ ಮ್ಯಾಡಾಂ. 'ಜನಸಂದೇಶ' ಪತ್ರಿಕೆಯಲ್ಲಿ ಮಹಿಳಾ ವಿಭಾಗದ ಶೀರ್ಷಿಕೆ, ಅಭಯಾಶ್ರಮದ ಕೆಲಸ ನನ್ನೆಲ್ಲ ಕಾಲವನ್ನೂ ಕಬಳಿಸು ತ್ತಿದೆ."

"ಅದನ್ನು ನಾನು ಬಲ್ಲೆ ಲಲಿತಾ. ಆಶ್ರಮಕ್ಕೆ ನೀನು ಮಾಡುತ್ತಿರುವ ಉಪಕಾರವನ್ನು ನಾನು ಕಡೆಗಾಣಿಸುತ್ತಿದ್ದೇನೆಂದು ಭಾವಿಸಬೇಡ. ಆದರೆ ಆಶ್ರಮದ ಕೆಲಸ ಅವಿಚ್ಛಿನ್ನವಾಗಿ ಮುಂದುವರಿಯಬೇಕಾದರೆ ನಿನ್ನ ನೆರವು ಅತ್ಯಗತ್ಯ. ಈ ಕೆಲಸಕ್ಕೆ ಕೇವಲ ದಕ್ಷತೆ ಸಾಲದು; ಅಂತಃಕರಣವೂ ಬೇಕು. ಎರಡು ಗುಣಗಳೂ ನಿನ್ನಲ್ಲಿ ಸೊಗಸಾಗಿ ಮೇಳವಿಸಿವೆ."

"ಸದ್ಯಕ್ಕೆ ಆ ವಿಚಾರಬೇಡ ಮ್ಯಾಡಾಂ – ಮುಂದಕ್ಕೆ ಆಲೋಚಿಸೋಣ. ಆಶ್ರಮದ ಪುರೋಭಿವೃದ್ಧಿಯ ಬಗ್ಗೆ ನಾನೂ ತುಂಬಾ ಆಸಕ್ತಳಾಗಿದ್ದೇನೆ" ಎಂದು ಹೇಳಿದಳು.

ಪತ್ರಿಕೆ, ಪತ್ರಿಕಾಕಛೇರಿಯ ಸುದ್ದಿಯನ್ನು ಮನೆಯಲ್ಲಿ ಮಾತನಾಡ ಕೂಡದೆಂಬ ಒಪ್ಪಂದಕ್ಕೆ ಮೂರ್ತಿ, ಲಲಿತಾ ಇಬ್ಬರೂ ಬದ್ಧರಾಗಿದ್ದರು.

ಒಂದು ದಿನ ಮೂರ್ತಿ ವಿಷಾದದಿಂದ

"ಲಲಿತಾ, ನಮ್ಮ ಒಪ್ಪಂದ ನಾನೇ ಮುರಿಯಬೇಕಾಗಿದೆ" ಎಂದ.

"ಯಾವ ಒಪ್ಪಂದ?"

"ಮನೆಯಲ್ಲಿ ಕಛೇರಿ ಸುದ್ದಿ ಮಾತನಾಡಕೂಡದೆಂಬ ಒಪ್ಪಂದ."

"ಎಲ್ಲ ಒಪ್ಪಂದಕ್ಕೂ ಅನಿವಾರ್ಯದ ವಿನಾಯಿತಿಯಿದೆ ಎಂದು ರಾಜಕಾರಣಿಗಳು ಹೇಳುವುದಿಲ್ಲವೇ?"

"ನಾನು ರಾಜಕಾರಣಿಯಾಗದಿರುವುದೇ ದೊಡ್ಡ ನ್ಯೂನತೆಯಾಗಿದೆ."

"ಕಛೇರಿಯಲ್ಲಿ ಮತ್ತೆ ಕುರುಕ್ಷೇತ್ರವೇ?"

"ಮೂರು ದಿವಸಗಳ ಮುಂಚೆ ಪುಟ್ಟಣ್ಣ ನನ್ನ ಸಂಪಾದಕೀಯ ಧೋರಣೆಯನ್ನು ಪ್ರತಿಭಟಿಸಿದ."

"ಪುಟ್ಟಣ್ಣನ ಗುಂಪು ಮೊದಲಿನಿಂದಲೂ ನಿಮ್ಮ ಮೇಲೆ ಕತ್ತಿ ಕಟ್ಟಿದೆ."

"ಅದಕ್ಕಾಗಿ ನಾನು ಯೋಚಿಸುವುದಿಲ್ಲ. ಪುಟ್ಟಣ್ಣನನ್ನು ಮಾಲಿಕರೇ ಚಿತಾವಣೆ ಮಾಡುತ್ತಿರಬಹುದೆಂಬ ಅನುಮಾನ ಬಂದಿದೆ."

"ಕೆಲಸ ಹೋಗುತ್ತದೆಂದು ಭಯವಾಗುತ್ತದೆಯೇ?"

"ಕೆಲಸ ಬಿಡುವುದಕ್ಕೆ ನಾನು ದುಃಖಪಡುವುದಿಲ್ಲ. ಆದರೆ ಮಾಲಿಕರು ನನ್ನನ್ನು ಕೆಲಸದಿಂದ ತೆಗೆದುಹಾಕಬಾರದಷ್ಟೆ! ಆದರ್ಶವನ್ನು ವಾಸ್ತವ ಜೀವನಕ್ಕೆ ಕಸಿಮಾಡುವುದು ಬಹಳ ಕಷ್ಟ. ಲೋಕವ್ಯಾಪಾರ ನೋಡುತ್ತಾ ನನಗೆ ಮಾನವ್ಯದಲ್ಲಿಯೇ ನಂಬಿಕೆ ಹೋಗುತ್ತಿದೆ."

"ತತ್ತ್ವಕ್ಕಾಗಿ ಹೋರಾಡುವುದೂ, ಮಾನವ ಕಲ್ಯಾಣ ಬಯಸುವುದೂ, ಮಾನವ ಜೀವನದ ಮುಂದೆ ಭವ್ಯಾದರ್ಶನಗಳನ್ನು ಇಡುವುದೂ ಮಹಾಪರಾಧವೇ?"

"ಅಪರಾಧವಲ್ಲ. ದೊಡ್ಡ ಕೆಲಸ ಕೈಗೊಳ್ಳುವವನು ಅದನ್ನು ನಿರ್ವಹಿಸಬಲ್ಲ ಸಾಮರ್ಥ್ಯ ಪಡೆದಿರಬೇಕು. ಪ್ರಾಯಶಃ ನನ್ನ ಶಕ್ತಿ ಮೀರಿದ ಉದ್ಯೋಗವನ್ನು ನಾನು ಕೈಗೊಂಡಿರಬೇಕು. ದ್ವೇಷಾಸೂಯೆಯನ್ನು ದ್ವೇಷಾಸೂಯೆಯಿಂದಲೆ ಪ್ರತಿಭಟಿಸುವುದೊಂದು ದಾರಿ; ಅವುಗಳನ್ನು ತನ್ನ ಮಹೋನ್ನತ ಗುಣದಿಂದ ಗೆದ್ದು ಯಶಸ್ವಿಯಾಗುವುದೊಂದು ದಾರಿ–ಎರಡು ದಾರಿಯಲ್ಲಿಯೂ ನಡೆಯಲಾಗದ ದೌರ್ಬಲ್ಯ ನನ್ನಲ್ಲಿ ತುಂಬಿರುವಾಗ ನಾನು ಇತರರನ್ನು ಏಕೆ ಆಕ್ಷೇಪಿಸಲಿ?"

"ಆತ್ಮಸ್ತುತಿಯಷ್ಟೇ ಆರ್ತಭರ್ತ್ಸನೆ ಅನುಚಿತವಾದುದಲ್ಲವೇ ?"

"ನಿಜ – ಆದರೆ ನಾನೇನು ಮಾಡಲಿ ಲಲಿತಾ – ಕನ್ನಡ ಪತ್ರಿಕೆಯ ಸಂಪಾದಕನಾಗಿ ನಾನು ಬಂದುದು, ಕನ್ನಡದ ಹಿತ ಸಾಧಿಸಿ ಶಕ್ತ್ಯನುಸಾರ ಕನ್ನಡದ ಸೇವೆ ಮಾಡುವುದಕ್ಕೆ. ಈಗ ನಾನು ಮಾಡುತ್ತಿರುವುದು ಒಳಶತ್ರುಗಳನ್ನೆದುರಿಸಿ, ನನ್ನ ಸ್ಥಾನ ಕಾಯುವ ಕೆಲಸ."

"ನಿಮ್ಮ ಆತ್ಮಗೌರವ ಬದಿಗಿರಿಸಬೇಕಾದ ದಿವಸ, ನೀವು ಸಂಪಾದಕತ್ವಕ್ಕೆ ರಾಜೀನಾಮೆ ಕೊಡಬೇಕು. ನಮ್ಮ ಆರ್ಥಿಕಸ್ಥಿತಿಯಾಗಲಿ, ಮನೆಯ ಸುಭದ್ರತೆಯಾಗಲಿ ನಿಮ್ಮ ಆತ್ಮಗೌರವದ ಮುಂದೆ ಗೌಣ."

"ಅದೂ ಅಪರಾಧವಾಗುತ್ತದೆ. ಇವನು ಎಲ್ಲಿಯೂ ಬಾಳುವುದಿಲ್ಲ – ಮೂರೇ ದಿವಸಗಳಲ್ಲಿ ಎಲ್ಲರ ಕೈಯಲ್ಲಿಯೂ ಜಗಳವಾಡುತ್ತಾನೆ ಎಂದು ಪ್ರಸಾರವಾಗುತ್ತದೆ."

"ಸ್ವಾರ್ಥಕ್ಕಾಗಿ ಸತ್ಯವನ್ನು ಬಲಿಗೊಟ್ಟನೆಂಬ ಆಪಾದನೆಗಿಂತಲೂ ಈ ಆಪಾದನೆ ಘೋರವೇ !"

"ಇಲ್ಲ ಇಲ್ಲ – ಯಾವ ಕಾರಣಕ್ಕೂ ನಾನು ಸತ್ಯವನ್ನು ಬಲಿಗೊಡುವುದಿಲ್ಲ ಲಲಿತಾ – ನಾನು, ನನ್ನದು ಎನ್ನುವುವೆಲ್ಲಾ ಅಸ್ಥಿರ – ಕ್ಷಣಿಕ; ಸತ್ಯವೊಂದೇ ಶಾಶ್ವತ – ಅನಂತ"

ಎಂದು ಮೂರ್ತಿ ಉದ್ವಿಗ್ನನಾಗಿ ನುಡಿದ.

೧೫

'ಹಿಂದೂಸ್ಥಾನ್ ವಿಮಾನ ಕಾರ್ಖಾನೆ'ಯ ಬದಿಗಿದ್ದ ರಸ್ತೆಯಲ್ಲಿ ಕಾರು ಬಂದು ನಿಂತಾಗ ರಾತ್ರಿ ಎಂಟುಗಂಟೆಯಾಗಿತ್ತು. ಷಿಫ್ಟ್ (Shift) ಮುಗಿಸಿಕೊಂಡು ಹೋಗುತ್ತಿದ್ದ ಕೆಲವು ಕಾರ್ಮಿಕರಲ್ಲದೆ ರಸ್ತೆಯಲ್ಲಿ ಯಾರೂ ಓಡಿಯಾಡುತ್ತಿರಲಿಲ್ಲ.

ರಾಘವಯ್ಯ, ಪುಟ್ಟಣ್ಣ, ಈಶ್ವರರಾಯ, ವಶಿಷ್ಠ ಕಾರಿನಿಂದ ಕೆಳಗಿಳಿದರು.

ಈಶ್ವರರಾಯ ತಿಂಡಿ ಪೊಟ್ಟಣಕ್ಕೆ ಕೈಹಾಕಿ ಪಕೋಡಾ ಮೆಲ್ಲಲಾರಂಭಿಸಿದ್ದ. ಪುಟ್ಟಣ್ಣ ಗೇರುಬೀಜದ ಸವಿ ನೋಡಿ ಬಾಯಿ ಚಪ್ಪರಿಸುತ್ತಿದ್ದ.

ರಾಘವಯ್ಯ ಕೈಯಲ್ಲಿ ಬೀರ್ ಬಾಟಲ್ ಹಿಡಿದು ಅಸಮಾಧಾನದಿಂದ "ಓಪನರ್ (Opener) ತರಬೇಕೆಂದು ಯಾರಿಗೂ ಹೊಳೆಯಲಿಲ್ಲವೇನಯ್ಯಾ – ಈಗೇನು ಮಾಡುವುದು."

"ಜಾನೀಸ್ ಮೌತ್‌ಫಲ್ (Johnnie's mouthful) ಮಾಡುವುದು" ಎಂದು ವಶಿಷ್ಠ ಸಲಹೆಯಿತ್ತ.

"ನಿನ್ನ ಗಂಟೇನು ಹೋಗಬೇಕು ಹೇಳು – ಬಾಟಲಿನ ಕುತ್ತಿಗೆ ಮುರಿದರೆ ಅರ್ಧಕ್ಕರ್ಧ ಚೆಲ್ಲಿಯೇ ಹೋಗುತ್ತದೆ."

ರಾಘವಯ್ಯನ ಕಷ್ಟ ನೋಡಲಾರದೆ ಪುಟ್ಟಣ್ಣ ಒಂದು ಬಾಟಲ್ ಕೈಗೆತ್ತಿಕೊಂಡು ಹಲ್ಲಿನಿಂದಲೇ ಅದರ ಮುಚ್ಚಳ ತೆಗೆದು ಅವನ ಕೈಗಿತ್ತ. ರಾಘವಯ್ಯ ಎರಡು ಮೂರು ಗುಟುಕು ಸೇವಿಸಿ

"ಪರವಾಗಿಲ್ಲ ಪುಟ್ಟಣ್ಣ – ಹಲ್ – ಸಾಹಸ ನಾನು ಸರ್ಕಸ್ಸಿನಲ್ಲಿ ಮಾತ್ರ ನೋಡಿದ್ದೆ. ನಿನ್ನ ಹಲ್ ಇಷ್ಟು ಗಟ್ ಎಂತಾ ನನಗೆ ತಿಳಿದಿರಲಿಲ್ಲ."

"ನನ್ನ ಹಲ್ – ಕಟ್ ಮಾಡ್ತೀಯೇನಯ್ಯಾ ?"

"ಹಲ್ – ಕಟ್ ಅಲ್ಲವ್ರೋ ಮಡೆಯಾ ಹಲ್ – ಗಟ್."

ದಂತಪ್ರಯೋಗ ಸಾಧನದಿಂದ ಉಳಿದವದ ಬಾಟಲ್‌ಗಳ ಮುಚ್ಚಳ ತೆಗೆದುಕೊಡುವ ಕೆಲಸ ಪುಟ್ಟಣ್ಣ ನಿರ್ವಹಿಸಬೇಕಾಯಿತು.

ಗೆಳೆಯರು ತಂದಿದ್ದ ಚೌಚೌ ಜತೆಯಲ್ಲಿ ಫಾಲ್ಕನ್ (Falcon) ಮುಗಿಸಲಾರಂಭಿಸಿದರು. ನಿಶ್ಶಬ್ದವಾಗಿ ಬಾಟಲ್ ಖಾಲಿ ಮಾಡುತ್ತಿದ್ದ ಈಶ್ವರರಾಯನನ್ನು ನೋಡಿ ರಾಘವಯ್ಯ

"ನಮ್ಮ ಈಶ್ವರ ಸರಿಕಣ್ರಯ್ಯಾ – ಉಭಶುಭ ಎನ್ನದೆ ಬಾಟಲ್ ಹೀರುವುದರಲ್ಲಿ ನಿಸ್ಸೀಮ."

"ದೊಡ್ಡವರು – ನಿಮ್ಮ ಎದುರಿಗೆ ಏನು ಮಾತನಾಡಲಿ ಸಾರ್"

ಎಂದು ಈಶ್ವರರಾಯ ವಿನಯ ಪ್ರಕಟಿಸಿದ. ರಾಘವಯ್ಯ ಸಂತುಷ್ಟನಾಗಿ

"ಪುಟ್ಟಣ್ಣ – ನೀನು ಶುದ್ಧ ಯೂಸ್‌ಲೆಸ್ ಫೆಲೋ (Useless fellow) ಕಣೋ" ಎಂದ.

"ನೋಡು ರಾಘು – ನೀನಲ್ಲದೆ ಈ ಮಾತು ಇನ್ನು ಯಾರಾದರೂ ಹೇಳಿದ್ದರೆ ಅವರನ್ನು ಸೀಳಿಬಿಡುತ್ತಿದ್ದೆ."

"ನಾನು ಹೇಳಿದ್ದರಿಂದ............"

"ಒಪ್ಪಿಕೊಳ್ಳುತ್ತೇನೆ."

ಎಲ್ಲರೂ ಗಹಗಹಿಸಿ ನಗುತ್ತಿರುವಂತೆ ರಾಘವಯ್ಯ

"ನಿನ್ನ ಸಂಪಾದಕನ ತಿಥಿ ಯಾವಾಗಯ್ಯಾ ?" ಎಂದು ಕೇಳಿದ.

"ಉದ್ದಿನ ಬೇಳೆ ನೆನೆಹಾಕಿದ್ದೀನಿ – ಬಾಣಲೆ, ಎಣ್ಣೆ ತರಿಸಿಟ್ಟಿದ್ದೀನಿ. ಅಡಿಗೆಯವನು ಬರಬೇಕಷ್ಟೆ !"

"ಇದರಲ್ಲಿ ಅಡಿಗೆಯವನು ಯಾರು ?" ಎಂದು ವಶಿಷ್ಠ ಕೇಳಿದ.

"ಇನ್ನು ಯಾರು – ನಮ್ಮ ಮಾಲಿಕ ಗೋಪಾಲಶೆಟ್ಟಿ"

ಎಂದು ನುಡಿದು ತಾನು ಮೂರ್ತಿಗೆ ಕೊಡುತ್ತಿದ್ದ ಕಿರುಕುಳವನ್ನು ವಿವರಿಸಿದ.

"ನಿಮ್ಮ ಪೇಪರಿನಲ್ಲಿ ಈಶ್ವರನಿಗೊಂದು ಸ್ಥಾನ ಸಿಕ್ಕಿಬಿಟ್ಟರೆ ನನ್ನ ಮನಸ್ಸಿಗೆ ನೆಮ್ಮದಿಯಾಗುತ್ತದೆ" ಎಂದು ರಾಘವಯ್ಯ ಹೇಳಿದ.

"ಇಷ್ಟು ಹೇಳೋನು ನೀನೇ ಏಕೆ ಕೆಲಸ ಕೊಡಬಾರದು – ಹೇಗೂ ನೀನು ಪ್ರಧಾನ ಸಂಪಾದಕ."

"ಕೊಡುತ್ತಿದ್ದೆ ಕಣಯ್ಯಾ – ಹಾಳು ಆಫೀಸಿನಲ್ಲಿ ರಿಟ್ರೆಂಚ್‌ಮೆಂಟ್ (Retrenchment) ಷುರುವಾಗಿದೆ. ನಮ್ಮ ಪತ್ರಿಕೆ ಸರ್‌ಕ್ಯುಲೇಷನ್ ಏರಿದರೆ ರಿಟ್ರೆಂಚ್‌ಮೆಂಟ್ – ಸರ್ ಕ್ಯು ಲೇ ಷ ನ್ ಕೆಳಗೆ ಬಿದ್ದರೆ ರಿಟ್ರೆಂಚ್‌ಮೆಂಟ್."

"ಸುಮ್ಮನೆ ಸರ್ಕಾರ ಬಯ್ಯುತ್ತಿದ್ದರೆ ಸರ್‌ಕ್ಯುಲೇಷನ್ ಹೇಗೆ ಏರತ್ತೆ ?"

"ಲೋ ಪುಟ್ಟಣ್ಣ – ನಿಜವಾಗಿ ಹೇಳು – ನಿಮ್ಮ ಪೇಪರ್ ಎಷ್ಟು ಪ್ರಿಂಟ್ ಮಾಡಿಸುತ್ತೀರೋ ?"

"ಹತ್ತರಿಂದ ಹನ್ನೆರಡು ಸಾವಿರ."

"ನಮ್ಮದು ಹದಿನೈದು ಸಾವಿರ ಹೋಗುತ್ತಿದೆ. ಏಕೆ ಗೊತ್ತೋ?"

"ಏಕೆ?"

"ನಮ್ಮ ಮಾಲಿಕರು ನಿಮ್ಮ ಮಾಲಿಕನ ಹಾಗೆ ಸರ್ಕಾರಕ್ಕೆ ಬೆಣ್ಣೆ ಹೊಡೆಯುವುದಿಲ್ಲ. ಬ್ರಿಟಿಷ್ ಸರ್ಕಾರ ಆಡಳಿತ ನಡಸುತ್ತಿದ್ದಾಗ ಕಾಂಗ್ರೆಸ್ ಪಕ್ಷ ಅದನ್ನು ನಿರ್ದಾಕ್ಷಿಣ್ಯವಾಗಿ ಬಯ್ಯುತ್ತಿತ್ತು. ಸರ್ಕಾರ ಬಯ್ದಲ್ಲದೆ ನಾಯಕರು ಉಳಿಯುವುದು ಸಾಧ್ಯವಿರಲಿಲ್ಲ. ಜನಕ್ಕೆ ಅದೇ ರೂಢಿಯಾಯಿತು. ಈಗ ದೇಶೀ ಸರ್ಕಾರ ಬಂದಿದ್ದರೂ ಜನ ಸರ್ಕಾರದ ನಿಂದೆಯನ್ನೇ ಅಪೇಕ್ಷಿಸುತ್ತಾರೆ. ಸರ್ಕಾರದ ಬೆನ್ನು ತಟ್ಟುವ ಪೇಪರು ಬದುಕುವುದು ಸಾಧ್ಯವಿಲ್ಲ ಕಣಯ್ಯಾ."

"ನಮ್ಮ ಸಂಪಾದಕ ಹಾಗೆ ಹುಚ್ಚುಹುಚ್ಚಾಗಿ ಸರ್ಕಾರ ಹೊಗಳುವುದಿಲ್ಲ ಕಣಯ್ಯಾ. ಬಯ್ಯುವಾಗ ಬಯ್ತಾನೆ – ಹೊಗಳುವಾಗ ಹೊಗಳುತ್ತಾನೆ. ಅವನ ಭಾಷೆಯು ಅತಿ ಗಾಂಭೀರ್ಯದಿಂದ ಅವನು ಬಯ್ದದ್ದೂ ಜನಕ್ಕೆ ಗೊತ್ತಾಗುವುದಿಲ್ಲ."

"ನೀನು ಏನೇ ಹೇಳು ಪುಟ್ಟಣ್ಣ – ನಿಮ್ಮ ಸಂಪಾದಕನ ಶೈಲಿ ಮೆಚ್ಚಿಕೊಳ್ಳಲೇ ಬೇಕು."

"ಓಹೋ – ಇವನೊಬ್ಬ ಮೂರ್ತಿ ಫ್ಯಾನ್ (Fan) ಕಣಪ್ಪಾ"

ಎಂದೆಲ್ಲರೂ ವಶಿಷ್ಠನನ್ನು ಹಾಸ್ಯ ಮಾಡಿದರು.

"ನನಗೆ ನಿಮ್ಮ ಆಫೀಸಿನಲ್ಲಿ ನಿಜವಾಗಿ ಕೆಲಸ ಕೊಡಿಸುವಿರಾ ಪುಟ್ಟಣ್ಣನವರೇ?"

ಎಂದು ಈಶ್ವರರಾಯ ವಿನಮ್ರನಾಗಿ ಕೇಳಿದ.

"ನಿನಗೆ ಕೆಲಸ ಕೊಡಿಸಬೇಕೂಂತ ನಾನು ಮಾಡಬಾರದ್ದನ್ನು ಮಾಡುತ್ತಾ ಇದ್ದೀನಯ್ಯಾ"

ಎಂದು ಪುಟ್ಟಣ್ಣ ತುಸು ಬೇಸರದಿಂದಲೇ ನುಡಿದ.

ಗೆಳೆಯರು ಕಾರು – ಬಾರ್ ಮುಗಿಸಿಕೊಂಡು ಮನೆ ಸೇರುವ ವೇಳೆಗೆ ರಾತ್ರಿ ಹನ್ನೊಂದು ಗಂಟೆಯಾಗಿತ್ತು.

೧೬

ಯಾವ ಕಾರಣಕ್ಕೂ ಮೂರ್ತಿ ಕಛೇರಿಯ ವೇಳೆಗಳಲ್ಲಿ ಮನೆಯ ಕಡೆ ಸುಳಿಯುತ್ತಿರಲಿಲ್ಲ. ಅತಿ ಜರೂರಾದ ಕೆಲಸವಿದ್ದರೆ ಚೀಟಿ ಬರೆದು ಲಲಿತಮ್ಮ ನಿಗೆ ಕಳಿಸುವುದು ಅವನ ಪದ್ಧತಿಯಾಗಿತ್ತು.

ಅಂದು ಕಛೇರಿಯ ವೇಳೆಯಲ್ಲಿ ಮನೆಗೆ ಬಂದ ಮೂರ್ತಿಯನ್ನು ಕಂಡು ಲಲಿತಮ್ಮ ಆಶ್ಚರ್ಯಚಕಿತಳಾಗಿ

"ಇದೇನು! ಇವತ್ತು ಸೂರ್ಯ ಪಶ್ಚಿಮದಲ್ಲಿ ಹುಟ್ಟಿದನೇನು?" ಎಂದು ಕೇಳಿದಳು.

"ಹೌದು – ಸನ್ನಿವೇಶ ಹಾಗೇ ಇದೆ – ಇಲ್ಲಿ ನೋಡು."

ಎಂದು ಮೇಥಾಜಿ ಬರೆದಿದ್ದ ಕಾಗದವನ್ನು ಅವಳ ಕೈಯಲ್ಲಿತ್ತ.

ಕಾಗದವನ್ನು ಓದುತ್ತ ಓದುತ್ತ ಲಲಿತಮ್ಮನ ಕಣ್ಣುಗಳಿಂದ ಆನಂದ ಭಾಷ್ಪಗಳುದುರಿದವು.

"ದೇವರು ದೊಡ್ಡವನು" ಎಂದಳು.

ಲಲಿತಮ್ಮನ ಆವೇಗ ಹತೋಟಿಗೆ ಬರಲೆಂದು

"ಕಾಗದ ಓದು ಲಲಿತಾ" ಎಂದ.

ತೇವಗೊಂಡಿದ್ದ ಕಣ್ಣುಗಳನ್ನು ಸೆರಗಿನ ಕೊನೆಯಿಂದ ಒರಸಿಕೊಂಡು ಲಲಿತಮ್ಮ ಓದಲಾರಂಭಿಸಿದಳು

'ಪ್ರಿಯ ಬಂಧು,

ಈಚೆಗೆ ನಿನ್ನಿಂದಾಗಲಿ ಸೋದರಿ ಲಲಿತಮ್ಮನಿಂದಾಗಲಿ ಕಾಗದಗಳು ಬಂದಿಲ್ಲ. ನಿಮ್ಮ ಯೋಗಕ್ಷೇಮ ತಿಳಿಯದೆ ಮನಸ್ಸಿಗೆ ತುಂಬಾ ವ್ಯಥೆ ಯಾಗಿದೆ. ನೀವು ಇಲ್ಲಿ – ನಮ್ಮ ಜತೆಯಲ್ಲಿಲ್ಲದಿರುವುದು ಮನಸ್ಸಿಗೆ ನೆಮ್ಮದಿ ಯಿಲ್ಲವಾಗಿದೆ. ನಿನ್ನ ಸಂಪಾದಕೀಯ ಹೊಣೆಗಾರಿಕೆಯಿಂದ ನಾಲ್ಕುದಿನ ವಿಶ್ರಾಂತಿ ಪಡೆದು ಇಲ್ಲಿಗೆ ಬಂದು ಹೋಗಬಾರದೇ?

ನಿನಗೆ ಒಂದು ಮುಖ್ಯ ವಿಷಯ ತಿಳಿಸುವುದಕ್ಕಾಗಿಯೇ ಈ ಪತ್ರ ಬರೆಯುತ್ತಿದ್ದೇನೆ. ಮುಂಬಯಿ ಪಟ್ಟಣವನ್ನೆಲ್ಲಾ ಶೋಧಿಸಿ ಕೊನೆಗೆ ಸರ್ದಾರ್ ತಾರಾಸಿಂಗ್ ನಿರ್ಮಲಾದೇವಿಯ ಪತ್ತೆಹಚ್ಚಿದ. ಆ ತಾಯಿ

ಅನುಭವಿಸಿದ ಕಷ್ಟಪರಂಪರೆಯನ್ನು ಕಾಗದದಲ್ಲಿ ನಾನು ವರ್ಣಿಸಲಾರೆ; ವರ್ಣಿಸುವ ಸಾಮರ್ಥ್ಯವೂ ನನಗಿಲ್ಲ. ಸರ್ದಾರ್ ಮತ್ತು ಸೆಲೀ್ ಬಹಳ ಪ್ರಯಾಸದಿಂದ ಅವಳನ್ನು ನಮ್ಮ ಮನೆಗೆ ಕರೆದುಕೊಂಡು ಬಂದರು. ಸದ್ಯಕ್ಕೆ ಅವಳು ನಮ್ಮ ಮನೆಯಲ್ಲಿದ್ದಾಳೆ.

ನಿರ್ಮಲಾದೇವಿಯ ಭವಿಷ್ಯತ್ತಿನ ಬಗ್ಗೆ ನಾನೂ ಸೆಲೀನ್ ದೀರ್ಘಾಲೋಚನೆ ಮಾಡಿದೆವು. ಆಕೆ ಕೆಲವು ಕಾಲ ಮುಂಬಯಿ, ಮುಂಬಯಿಯ ವಾತಾವರಣ, ಮುಂಬಯಿಯಲ್ಲಿ ಸಾಗಿದ ತನ್ನ ದುರಂತಜೀವನವನ್ನು ಮರೆಯುವುದು ಅತ್ಯಗತ್ಯ.

ಸದ್ಯ ನಿರ್ಮಲಾದೇವಿ ನಿರ್ಜೀವ ಯಂತ್ರದಂತಿದ್ದಾಳೆ. ಆಕೆಯ ನರನಾಡಿಗಳಿಗೆ ಎಂಥ ಆಘಾತವಾಗಿದೆಯೆಂಬುದನ್ನು ನೀನು ಜ್ಞಾಪಿಸಿಕೊಂಡರೆ ಈ ಪರಿಸ್ಥಿತಿ ಅನಿವಾರ್ಯವೆಂಬುದು ಮನವರಿಕೆಯಾಗುತ್ತದೆ. ನಮ್ಮೆಲ್ಲರ ವಿಶ್ವಾಸ ಆಕೆಯನ್ನು ಬದುಕಿಸಬೇಕು.

ನೀನೂ ಲಲಿತಮ್ಮ ಒಪ್ಪುವುದಾದರೆ ನಿರ್ಮಲಾದೇವಿಯನ್ನು ಬೆಂಗಳೂರಿಗೆ ಕಳಿಸಿಕೊಡುತ್ತೇವೆ. ನನ್ನ ಸೋದರಿ ಲಲಿತಮ್ಮನ ಆರೈಕೆಯಿಂದ ನಿರ್ಮಲಾ ಗುಣಹೊಂದುತ್ತಾಳೆಂಬ ಭರವಸೆ ನನಗಿದೆ. ಸೆಲೀನ್ ಅಭಿಪ್ರಾಯವೂ ಇದೇ ಆಗಿದೆ. ನೀನೂ ಲಲಿತಮ್ಮ ಈ ಬಗ್ಗೆ ವಿಚಾರಮಾಡಿ ಪತ್ರ ಬರೆಯಿರಿ. ನಿಮ್ಮ ಪತ್ರ ನೋಡಿ ಮುಂದಿನ ವಿಷಯ ಆಲೋಚಿಸಿದರಾಯಿತು.

'ಸೆಂಚುರಿ' ನಡೆದಿದೆ. ವರ್ಷ ವರ್ಷ ಪತ್ರಿಕೆಗೆ ಶೇಖರವಾಗುತ್ತಿದ್ದ ನಷ್ಟ ತಪ್ಪಿದೆ ಎಂದು ತಿಳಿಸಲು ನಾನು ಸಂತೋಷಿಸುತ್ತೇನೆ. ಪತ್ರಿಕೆಯ ಪ್ರಸಾರ ಹತ್ತು ಸಾವಿರಕ್ಕೇರಿರುವುದು ಆಶಾದಾಯಕವಾಗಿದೆ.

ಈಗಲಾದರೂ ನಿನ್ನ ಪತ್ರ ಬೇಗ ಬರಲಿ ಎಂದು ನಿರೀಕ್ಷಿಸುವ

ಆತ್ಮೀಯ "ಮೇಥಾ."

ಲಲಿತಮ್ಮ ಮಂತ್ರಮುಗ್ಧಳಂತೆ ಕುಳಿತಳು. ಅವಳ ಕಣ್ಣುಗಳಿಂದ ಹನಿಗಳು ತೊಟ್ಟಿಕ್ಕಿದವು. ಸಹಾನುಭೂತಿಯಿಂದ ಮೂರ್ತಿ ಅವಳನ್ನು ನೇವರಿಸುತ್ತಾ

"ದುಃಖಿಸುತ್ತ ಕುಳಿತರೇನು ಪ್ರಯೋಜನ ಲಲಿತಾ" ಎಂದ.

"ನಿರ್ಮಲಾ ಯಾವ ಅಪರಾಧ ಮಾಡಿದ್ದಕ್ಕೆ ಇಂಥ ಘೋರ ಶಿಕ್ಷೆ ಅನುಭವಿಸಬೇಕಾಯಿತು? ಹೆಣ್ಣು ಜಾತಿಯಲ್ಲಿ ಹುಟ್ಟಿದ್ದೇ ಅವಳ ತಪ್ಪೇ?"

"ಜೀವನಸೂತ್ರಗಳು ಒಮ್ಮೊಮ್ಮೆ ಗೋಜಾದ ದಾರದುಂಡೆಯಂತಾಗುತ್ತದೆ. ಸಿಕ್ಕನ್ನು ತಾಳ್ಮೆಯಿಂದ ಬಿಡಿಸಲೆತ್ನಿಸಬೇಕು?"

"ನಿರ್ಮಲನ ವಿಷಯ ಏನು ಮಾಡೋಣ?"

"ಏನು ಮಾಡುವುದು. ಆಕೆಯನ್ನಿಲ್ಲಿ ಕರೆತರುವಂತೆ ಬರೆಯುತ್ತೇನೆ. ಮೇಥಾ ಬರೆದಿರುವಂತೆ ಮುಂಬಯಿಯ ವಾತಾವರಣ ಅವಳು ಮರೆಯಬೇಕಾದುದವಶ್ಯಕ. ಒಂದು ತಿಂಗಳು ವಿಶ್ರಾಂತಿ ಪಡೆಯಲಿ. ನೀನೂ ಸ್ವಲ್ಪ ಬಿಡುವು ಮಾಡಿಕೊಂಡು ಅವಳನ್ನು ಕರೆದುಕೊಂಡು ಹೋಗಿ ಮೈಸೂರು, ಬೇಲೂರು, ಹಳೆಯಬೀಡು ತೋರಿಸಿಕೊಂಡು ಬಾ."

ಲಲಿತಮ್ಮ ಯೋಚನಾಮಗ್ನಳಾಗಿ

"ನಿರ್ಮಲಾ ಮನೆಬಿಟ್ಟು ಹೋಗದಿದ್ದರೆ ಚೆನ್ನಾಗಿತ್ತು!" ಎಂದಳು.

"ನಮ್ಮ ಅನೇಕ ಸಮಸ್ಯೆಗಳಿಗೆ 'ರೇ ರಾಜ್ಯ'ದಲ್ಲಿ ಪರಿಹಾರ ಪಡೆಯಲೆತ್ನಿಸುತ್ತೇವೆ ಲಲಿತಾ. ಹೌದು, ನಿರ್ಮಲಾ ಮನೆಬಿಡುವ ಮುನ್ನ ನಮಗೆ ಒಂದು ಮಾತು ಹೇಳಿದ್ದರೆ ಚೆನ್ನಾಗಿತ್ತು. ಅವಳು ಅನುಭವಿಸಿದ ನರಕಯಾತನೆಯನ್ನು ನಾವು ಹೇಗಾದರೂ ತಪ್ಪಿಸಬಹುದಾಗಿತ್ತು. ಆದರೆ – ಅವಳ ಮನೆಬಿಟ್ಟು ಹೋದಳು – ನರಕಯಾತನೆಯನ್ನೂ ಅನುಭವಿಸಿದಳು – ಅದೃಷ್ಟವಶಾತ್ ಸರ್ದಾರನಿಗೆ ಆವಳ ಪತ್ತೆ ಸಿಕ್ಕಿತು. ಇನ್ನು ಮುಂದೇನು ಮಾಡಬೇಕೆಂಬುದನ್ನು ಆಲೋಚಿಸೋಣ. ಚೆಲ್ಲಿಹೋದ ಹಾಲಿಗೆ ಅಳುತ್ತ ಕುಳಿತರೇನು ಪ್ರಯೋಜನ."

"ಇಂದೇ ಕಾಗದ ಬರೆಯಿರಿ."

"ಕಾಗದ ಬರೆಯುವುದು ಮಾತ್ರವಲ್ಲ – ಟ್ರಂಕ್‌ಕಾಲ್ (Trunk Call) ಮಾಡಿ ನಾನು ಮೇಥನೊಂದಿಗೆ ಮಾತನಾಡಿ ನಿರ್ಮಲನನ್ನು ಕೂಡಲೆ ಇಲ್ಲಿಗೆ ಕಳಿಸುವಂತೆ ತಿಳಿಸುತ್ತೇನೆ."

"ದೊರೆ – ನಿಮ್ಮ ಮೇಲೆ ನಾನೆಷ್ಟು ಜವಾಬ್ದಾರಿ ಹೊರೆಸುತ್ತಿದ್ದೇನೆ."

"ಈ ಬಗೆಯ ಜವಾಬ್ದಾರಿ ಹೆಗಲಮೇಲೆ ಬಿದ್ದರೇ ಜೀವ ಪಕ್ವವಾಗುವುದು ಲಲಿತಾ. ಮನುಷ್ಯನಿಗೆ ವೈಯಕ್ತಿಕ ಬಾಳು ಇರುವಂತೆ ಸಾಂಘಿಕ

ಬಾಳೂ ಇದೆ– ಅವನು ಸಂಘಜೀವನ ಹಾಗೂ ಸಂಘಕ್ಕೂ ತನಗೂ ಇರುವ ಸಂಬಂಧದಿಂದ ದೂರವಾಗಬಾರದು. ಕರ್ತವ್ಯಪರಾಙ್ಮುಖತೆಯಿಂದ ಮನುಷ್ಯತ್ವವೇ ನಾಶವಾಗುತ್ತದೆ."

ಆರ್ತಳಾಗಿ ಕತ್ತೆತ್ತಿ ನೋಡಿದ ಲಲಿತಮ್ಮನ ಗಲ್ಲ ಹಿಡಿದು ಮೂರ್ತಿ ಮುದ್ದಿಸಿ

"ನನ್ನ ಪ್ರಿಯೆ ಹೀಗೇ ಯಾವಾಗಲೂ ಕತ್ತೆತ್ತಿ ನೋಡಬೇಕು– ಅವನತಮುಖಿಯಾಗಿರಬಾರದು" ಎಂದು ನುಡಿದ.

## ೧೭

ನಿರ್ಮಲಾದೇವಿಯ ಪೂರ್ವಕತೆಯನ್ನು ಕೇಳಿದ್ದ ಸುಂದರಮ್ಮನವರು ಅವಳು ಬೆಂಗಳೂರಿಗೆ ಬರುವ ವಿಷಯ ಕೇಳಿ ಸಂತೋಷಿಸಿ

"ಒಂದು ಜೀವ ಉದ್ಧಾರವಾದರೆ ಸಾಕು" ಎಂದರು.

"ಇಂಥ ನಿರ್ಭಾಗ್ಯೆಯರು ಈ ದೇಶದಲ್ಲಿ ಎಷ್ಟು ಸಹಸ್ರ ಮಂದಿ ಇದ್ದಾರೆಯೋ" ಎಂದು ಲಲಿತಮ್ಮ ಉದ್ಗಾರ ತೆಗೆದಳು.

"ಇದ್ದಾರಮ್ಮ ಇದ್ದಾರೆ."

"ಅವರ ಗತಿಯೇನು ಮ್ಯಾಡಾಂ. ಪ್ರಕೃತ ಜೀವನಪರಿಸ್ಥಿತಿ ನಿಸರ್ಗಕ್ಕೆ ವಿರುದ್ಧವಾಗಿ ನಿಂತಿದೆ. ಭಾವೀಸಂತಾನ ಬೆಳಸಿ, ಲೋಕಕ್ಕೆ ಪುಣ್ಯಶೀಲ ಪುತ್ರಪುತ್ರಿಯರನ್ನು ನೀಡಬೇಕಾದ ಹೆಣ್ಣು ಬೀದಿಯ ಧೂಳಾಗಿದ್ದಾಳೆ; ಕಾಲಿನ ಕಸವಾಗಿದ್ದಾಳೆ. ನಿರ್ಮಲನಂಥ ಒಬ್ಬೊಬ್ಬ ಹೆಣ್ಣುಮಕ್ಕಳನ್ನು ನಾವು ಕಾಪಾಡಿದರೆ ಆಗುವುದೇನು?"

"ಹಾಗಲ್ಲ ಲಲಿತಮ್ಮ. ನಿಸರ್ಗದ ದರ್ಪರಥದ ಕೆಳಗೆ ಸಿಕ್ಕಿ ನುಚ್ಚು ನೂರಾಗುವ ಎಲ್ಲರನ್ನೂ ನಾವು ರಕ್ಷಿಸುತ್ತೇವೆಂದು ಭಾವಿಸುವುದು ಅಹಂಕಾರ ವಾಗುತ್ತದೆ. ನಮ್ಮ ಶಕ್ತಿ, ಸಾಮರ್ಥ್ಯ, ಸೇವಾಕ್ಷೇತ್ರವನ್ನು ನಾವು ನಿರ್ಧರಿಸಿಕೊಳ್ಳಬೇಕು. ನೂರು ಮಾಡಲು ಹೋಗಿ ಒಂದನ್ನೂ ನಿರ್ವಹಿಸ ಲಾರದೆ ದುಃಖಪಡುವುದಕ್ಕಿಂತ ನಿರ್ದಿಷ್ಟವಾಗಿ ಒಂದೇ ಕೆಲಸ ಹಿಡಿದು,

ಅದನ್ನು ಸಾಧಿಸುವುದು ವಿವೇಕವಲ್ಲವೆ?—ನನಗಿಂತ ಚಿಕ್ಕವಳಾದ ನೀನು, ನನಗಿಂತ ಹೆಚ್ಚು ಆಶಾವಾದಿಯಾಗಿರಬೇಕು–ಏಕೆ ನಿರಾಶಾವಾದಿಯಾಗಿರುವೆ? ನಾನೂ ನೀನೂ ನಿರ್ವಹಿಸಬಲ್ಲ ಕೆಲಸದ ಹತ್ತರಷ್ಟು ನಿರ್ಮಲಾ ನಿರ್ವಹಿಸ ಬಲ್ಲಳು. ಪರೋಪಕಾರ ನಮಗೆ ಪ್ರೇರಕಶಕ್ತಿಯಾದರೆ ದಲಿತೋದ್ಧಾರ ಅವಳ ಕ್ರತುಶಕ್ತಿಯಾಗುತ್ತದೆ. ನಾಳೆ 'ಅಭಯಾಶ್ರಮ'ವನ್ನು ನಿರ್ಮಲನೇ ನಡೆಸಬೇಕೆಂದು ನನ್ನ ಆಕಾಂಕ್ಷೆ. ನೊಂದ ಜೀವ ನೋವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲುದು."

"ಅಪಾರ ಕಷ್ಟಾನುಭವದಿಂದ ನಿಮ್ಮ ಜೀವ ಪಕ್ವವಾಗಿದೆ ಮ್ಯಾಡಾಂ."

"ನಿನ್ನದು ಅಪಕ್ವ ಜೀವನವಲ್ಲ ಲಲಿತಮ್ಮ"

ಎಂದು ಸುಂದರಮ್ಮನವರು ನಸುನಗುತ್ತಾ ನುಡಿದು

"ನಾನು ಬಂದ ಕೆಲಸವನ್ನೇ ಮರೆತುಬಿಟ್ಟೆ!" ಎಂದರು.

"ಏನು ಕೆಲಸ ಹೇಳಿ."

"ಡಿಸೆಂಬರ್ ತಿಂಗಳಲ್ಲಿ ಮೈಸೂರಿನಲ್ಲಿ 'ಅಖಿಲ ಭಾರತ ಮಹಿಳಾ ಪರಿಷತ್ತಿ'ನ ಅಧಿವೇಶನ ಕರೆದಿದ್ದಾರೆ. ಶ್ರೀಮನ್ಮಹಾರಾಣಿಯವರು ಉದ್ಘಾಟನ ಸಮಾರಂಭ ನೆರವೇರಿಸುತ್ತಾರೆ. ಸುಪ್ರಸಿದ್ಧ ಸಮಾಜ ಸೇವಿಕೆಯ ರಾದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಅಧ್ಯಕ್ಷರಂತೆ. ನನಗೂ ಆಹ್ವಾನ ಬಂದಿದೆ"

ಎಂದು ಕಾರ್ಯದರ್ಶಿನಿ ಮಾಲತಿ ಪಾಂಡೆ ಬರೆದಿದ್ದ ಕಾಗದವನ್ನು ಸುಂದರಮ್ಮನವರು ಲಲಿತನ ಕೈಗಿತ್ತರು.

ಲಲಿತ ಸಾವಕಾಶವಾಗಿ ಪತ್ರಗಳನ್ನೂ, ಅವುಗಳೊಂದಿಗಿದ್ದ ಅಚ್ಚಾಗಿದ್ದ ಪುರವಣಿಗಳನ್ನು ಓದಿಕೊಂಡು

"ಹೋಗಿ ಬನ್ನಿ ಮ್ಯಾಡಾಂ – ಬಹಳ ಸಂತೋಷ" ಎಂದಳು.

"ಬಾಯಲ್ಲಿ ಸಂತೋಷವೆಂದರೂ ಮನಸ್ಸಿನಲ್ಲಿ ನಿನಗೆ ಸಂತೋಷವಿರು ವಂತಿಲ್ಲ ಲಲಿತಾ!"

"ಇಲ್ಲ ಮ್ಯಾಡಾಂ."

"ಏಕೆ?"

"ಈ ಮಹಿಳಾ ಪರಿಷತ್ತುಗಳೆಲ್ಲಾ ಜಾರ್ಜೆಟ್, ಟೆಸ್ಸ್ಯೂ ಸೀರೆಗಳ ಪ್ರದರ್ಶನಗಳಾಗಿವೆ. ಭಾರತದ ನಿಜವಾದ ಮಹಿಳೆಯರು ಹೊಲ ಗದ್ದೆಗಳಲ್ಲಿ ಫ್ಯಾಕ್ಟರಿ, ವರ್ಕ್ಷಾಪ್‌ಗಳಲ್ಲಿ, ಮನೆಮನೆಗಳಲ್ಲಿ ತಮ್ಮ ಬಾಳು ದೂಡುತ್ತಿರುವಾಗ ನಾವು ನಾಲ್ಕುಜನ ವಿದ್ಯಾವತಿಯರು ಸೇರಿಕೊಂಡು, ನಿರರ್ಥಕ ನಿರ್ಣಯಗಳನ್ನು ಮಾಡಿದರೇನು ಫಲ ?"

"ನೀನು ಹೇಳುವುದು ನಿಜ ಲಲಿತಮ್ಮ. ಆದರೆ ಈ ಕೆಲಸ ಯಾರಾದರೂ ಆರಂಭಿಸಬೇಕು. ನಾಲ್ಕುಜನ ವಿದ್ಯಾವತಿಯರು ಕೆಲಸ ಆರಂಭಿಸಿದ್ದಾರೆ–ನಾಳೆ ಪರಿಷತ್ತಿನ ಕಾರ್ಯಕಲಾಪಗಳನ್ನು ಶ್ರಮಜೀವಿಗಳಾದ ಮಹಿಳೆಯರೇ ನಡೆಸಲಿ. ಅವರ ಕೆಲಸ ಹಗುರ ಮಾಡುವುದಕ್ಕೇ ವಿದ್ಯಾವತಿಯರು ಹೊರಟಿದ್ದಾರೆಂದು ಭಾವಿಸಬಾರದೇಕೆ ?"

"ನೀವು ಹೋಗಿ ಬನ್ನಿ ಮ್ಯಾಡಾಂ."

"ನೀನೂ ಬರಬೇಕು. ಈ ಸಂದರ್ಭದಲ್ಲಿ ನಮ್ಮ 'ಅಭಯಾಶ್ರಮ'ದ ಪರಿಚಯ ಎಲ್ಲರಿಗೂ ಮಾಡಿಕೊಡುವುದಕ್ಕೆ ನೀನೇ ಸಮರ್ಥಳು."

"ನೀವು ಬಾ ಎಂದರೆ ಒಲ್ಲೆ ಎನ್ನಲು ಸಾಧ್ಯವೇ ?"

"ಲಲಿತಾ, ಪರಿಷತ್ತಿನವರು 'ಭಾರತ ಮಹಿಳೆಯರ ಸ್ಥಿತಿಗತಿ'ಗಳನ್ನು ಕುರಿತು ಒಂದು ವಿಚಾರಸಂಕಲನ ಗ್ರಂಥ ಪ್ರಕಟಿಸುತ್ತಾರಂತೆ. '**ಪತಿತ ಮಹಿಳೆಯರ ಪುನರುದ್ಧಾರ**'ದ ಬಗ್ಗೆ ನಾನು ಲೇಖನ ಬರೆಯಬೇಕೆಂದು ಕೋರಿದ್ದಾರೆ."

"ನಿಮಗದು ಕಷ್ಟಸಾಧ್ಯವಾದ ಕೆಲಸವಲ್ಲ !"

"ನಾನು ವಿಷಯ ಸಂಗ್ರಹಿಸಿ ಕೊಡುತ್ತೇನೆ. ಬರೆಯುವ ಕೆಲಸ ನೀನು ಒಪ್ಪಿಕೊಳ್ಳಬೇಕು. ನಿನ್ನ ಯಜಮಾನರು ಒಮ್ಮೆ ಹಸ್ತಪ್ರತಿ ನೋಡಿ ಸೂಕ್ತ ಬದಲಾವಣೆಗಳನ್ನು ಸೂಚಿಸಿದರೆ ಉಪಕಾರವಾಗುತ್ತದೆ."

"ನನ್ನ ಶಕ್ತಿಮೀರಿದ ಜವಾಬ್ದಾರಿ ಹೊರಿಸುತ್ತಿರುವಿರಿ ಮ್ಯಾಡಾಂ."

"ಇಲ್ಲಪ್ಪಾ– ನಿನ್ನ ಶಕ್ತಿಗೆ ಈ ಜವಾಬ್ದಾರಿ ಹೆಚ್ಚಿನದೇನಲ್ಲ ಎಂದು ನಾನು ಚೆನ್ನಾಗಿ ಬಲ್ಲೆ."

"ನನ್ನ ಬಗ್ಗೆ ಎಷ್ಟು ನಂಬಿಕೆ ನಿಮಗಿದೆ ಮ್ಯಾಡಾಂ ?"

"ಪ್ರತಿಯೊಬ್ಬ ವ್ಯಕ್ತಿಯ ಶಕ್ತಿ, ಸಾಮರ್ಥ್ಯ, ತೇಜಸ್ಸಿನ ಬಗ್ಗೆ ನಾವು ನಂಬಿಕೆ ತಳೆಯಬೇಕು. ನಮಗೆ ಆ ನಂಬಿಕೆ ಇದೆ ಎನ್ನುವುದನ್ನು ವ್ಯಕ್ತಿಗೆ ತಿಳಿಸುತ್ತಲೂ ಬರಬೇಕು. ಅನೇಕ ವೇಳೆ ನಮ್ಮ ನಂಬಿಕೆಯೇ ವ್ಯಕ್ತಿಗೆ ಶಕ್ತಿಯೊದಗಿಸಿ, ಅವನನ್ನು ದೊಡ್ಡ ದೊಡ್ಡ ಕೆಲಸಗಳಿಗೆ ಪ್ರೇರೇಪಿಸುತ್ತದೆ. ಮಕ್ಕಳೊಂದಿಗೆ ಜೀವಮಾನ ಕಳೆದಿರುವ ನಾನು ಈ ಅಂಶವನ್ನು ಚೆನ್ನಾಗಿ ಬಲ್ಲೆ. 'ನೀನು ದಡ್ಡಿ – ಮಡ್ಡಿ ಸಾಂಬ್ರಾಣಿ' ಎಂದು ಮಗುವನ್ನು ಹೀಗಳೆಯುತ್ತಾ ಬಂದರೆ, ಅದರ ಮನಸ್ಸಿನಲ್ಲಿ ನಾನು 'ದಡ್ಡಿ – ಮಡ್ಡಿ ಸಾಂಬ್ರಾಣಿ' ಎನ್ನುವ ಭಾವನೆ ಬಲವಾಗಿ ಬೇರೂರುತ್ತದೆ. ದಡ್ಡಿಯಾಗಿರುವ ಮಗುವನ್ನು ನಾವು ಪ್ರೀತ್ಯಾದರಗಳಿಂದ ಕಂಡು, ಅದರ ಗುಣ ಮೆಚ್ಚುತ್ತ ಬಂದರೆ ಸುಪ್ತಚೈತನ್ಯ ಜಾಗ್ರತವಾಗಿ ದಡ್ಡಿ ಮಹಾಜಾಣೆ ಯಾಗುತ್ತಾಳೆ – ಈ ಮಾತು ನಿನಗನ್ವಯಿಸುವುದಿಲ್ಲ ಲಲಿತಾ."

"ನಾನು ದಡ್ಡಿಯೇ ಮ್ಯಾಡಾಂ – ನೀವು ಹಾಗಂದರೆ ನನಗೇನೂ ಕೋಪ ಬರುವುದಿಲ್ಲ."

"ನೀನೇ ದಡ್ಡಿಯಾದರೆ ನಾನೇನಾಗಬೇಕೇ ಲಲಿತಾ"

ಎಂದು ಸುಂದರಮ್ಮನವರು ಅಭಿಮಾನಪೂರ್ವಕವಾಗಿ ನುಡಿದರು.

## ೧೮

ಮೂರ್ತಿ ತಂದಿತ್ತ ಸರ್ದಾರನ ತಾರು ನೋಡಿದ ಕೂಡಲೆ ಲಲಿತಮ್ಮ

"ಸಂಜೆಗೆ ನಿಮಗೆ ಪುರಸತ್ತಾಗುವುದೇ ?" ಎಂದು ಕೇಳಿದಳು.

"ಪುರಸತ್ತು ಮಾಡಿಕೊಳ್ಳುತ್ತೇನೆ. ರೈಲು ಬರುವುದು ಆರೂವರೆಗೆ – ಆರಕ್ಕೆ ಮನೆಬಿಟ್ಟರಾಯಿತು. ಸ್ಟೇಷನ್ನಿಗೆ ನೀನೂ ಬರುವೆಯಾ ?"

"ನಾನು ಬರದೇ ಉಂಟೇ ?"

ಸಂಜೆ ಗುಂತಕಲ್ಲು ಗಾಡಿ ಆರೂನಲವತ್ತೈದಕ್ಕೆ ಬೆಂಗಳೂರು ನಿಲ್ದಾಣ ಮುಟ್ಟಿತು.

ಇಂಟರ್ ಡಬ್ಬಿಯಿಂದ ಸರ್ದಾರ್ ತಾರಾಸಿಂಗ್ ಇಳಿದು, ಮೆಲ್ಲನೆ ನಿರ್ಮಲನನ್ನು ಕೆಳಗಿಳಿಸಿದ. ಕೂಲಿ ಸಾಮಾನುಗಳನ್ನು ಹೊರಗಿಟ್ಟ.

ಮೂರ್ತಿಯನ್ನು ಕಂಡೊಡನೆಯೇ ಸರ್ದಾರ್ ಅವನನ್ನು ಬಿಗಿದಪ್ಪಿದ. ಅವನ ತುರುಚಲು ಗಡ್ಡದ ಮೇಲೆ ಆನಂದಭಾಷ್ಪಗಳುದುರಿದವು.

ನಿರ್ಮಲಾ ಲಲಿತಮ್ಮನನ್ನು ಬಿಗಿದಪ್ಪಿ ಕಂಬನಿಗರೆದಳು.

"ಸಮಾಧಾನ ತಂದುಕೋ ಬಹೆನ್" ಎಂದು ಲಲಿತಮ್ಮ ಸಮಾಧಾನ ಹೇಳಿದಳು.

ಮನೆಮುಟ್ಟಿದ ಕೂಡಲೆ ಸರ್ದಾರ್ ಮೂರ್ತಿಗೆ

"ನಾನು ಯಾವುದಾದರೂ ಹೋಟಲಿಗೆ ಹೋಗುತ್ತೇನೆ" ಎಂದ.

"ಏಕೆ ಭಾಯ್ ಸಾಹೇಬ್."

"ನಿಮಗೂ ಸೋದರಿಗೂ ತುಂಬ ತೊಂದರೆಯಾಗುತ್ತದೆ."

"ಈ ಮನೆಯಲ್ಲಿ ನಿಮಗೆ ಯಾವಾಗಲೂ ಸ್ಥಳವಿದೆ ಸರ್ದಾರ್."

"ಬಡತಂಗಿಯ ಮನೆ ಕಂಡು ಬೇಸರಬಂತೇ ಅಣ್ಣಾ"

ಎಂದು ಲಲಿತಮ್ಮ ಕೇಳಿದಳು.

"ನಾನು ಯಾವ ಅರಮನೆಯಲ್ಲಿ ವಾಸಮಾಡುತ್ತಿದ್ದೇನೆ ಬಹೆನ್. ನನ್ನ ಫ್ಲ್ಯಾಟಿಗೆ (Flat) ಹೋಲಿಸಿದರೆ ನಿಮ್ಮ ಮನೆ ಮಹಾಮನೆಯಾಗಿದೆ."

"ಲಲಿತಾ, ಮೊದಲು ಸರ್ದಾರನಿಗೂ ನಿರ್ಮಲನಿಗೂ ಚಹಾ ಮಾಡಿಕೊಡು"

ಎಂದು ಮೂರ್ತಿ ಸೂಚಿಸಿದ.

ಲಲಿತಮ್ಮ ನಿರ್ಮಲನನ್ನು ಜತೆಯಲ್ಲಿ ಕರೆದುಕೊಂಡು ಒಳಕ್ಕೆ ಹೋದಳು.

ಸರ್ದಾರ್ ಮುಖ ಚಿಕ್ಕದು ಮಾಡಿಕೊಂಡು

"ಭಾಯ್ ಸಾಹೇಬ್, ನಮ್ಮನ್ನೆಲ್ಲಾ ಮರೆತೇಬಿಟ್ಟಿರುವಿರಿ!" ಎಂದ.

"ಹೇಗೆ ಮರೆಯಲು ಸಾಧ್ಯ ಸರ್ದಾರ್. ಕೈತುಂಬ ಕೆಲಸ. ಕೆಲಸಕ್ಕೂ ಹೆಚ್ಚಾಗಿ ಕಛೇರಿಯ ರಾಜಕಾರಣ – ಸಣ್ಣಪುಟ್ಟ ಕಿರುಕುಳಗಳ ಬಾಧೆ."

"ಸೋದರಿ, ನೀವು ಸುಖವಾಗಿರುವಿರಾ?"

"ನಿಮ್ಮ ಸೋದರರ ಸಖ್ಯದಿಂದ ನಾನೆಲ್ಲಿದ್ದರೂ ಸುಖವಾಗಿಯೇ ಇರುತ್ತೇನೆ ಸರ್ದಾರ್. ಮುಂಬಯಿಯ ಗೆಳೆಯರು ಹೇಗಿದ್ದಾರೆ?"

"ಎಲ್ಲರೂ ಚೆನ್ನಾಗಿದ್ದಾರೆ. ನೀವು ಮುಂಬಯಿಗೆ ಬರಲಿಲ್ಲವೆನ್ನು ವುದೇ ಎಲ್ಲರ ವ್ಯಥೆ – ಈಗ ನನ್ನ ಜತೆ ಏಕೆ ಹೊರಡಬಾರದು."

"ನೀವಿನ್ನೂ ಬರುವುದಕ್ಕೆ ಇಲ್ಲ – ಆಗಲೇ ಹೊರಡುವ ಮಾತಾಡು ತ್ತಿರುವಿರಿ."

"ಕ್ಷಮಿಸಿ ಮೂರ್ತಿ ಭಯ್ಯಾ – ತಾರದೇವ್‌ನಲ್ಲಿ ಒಂದು ಬಂಗಲೆ ಕಂಟ್ರಾಕ್ಟ್ ತೆಗೆದುಕೊಂಡಿದ್ದೇನೆ – ದಸರಾ ವೇಳೆಗೆ ಬಂಗಲೆ ಕೆಲಸ ಮುಗಿಸ ಬೇಕಾಗಿದೆ."

"ನಿಮ್ಮ ದುಡಿಮೆಗೆ ಕೊನೆಮೊದಲೇ ಇಲ್ಲವಲ್ಲಾ ಸರ್ದಾರ್ !"

"ಹೌದು – ನೀವೂ ನಾನೂ ಒಂದೇ ದೋಣಿಯಲ್ಲಿ ಪ್ರಯಾಣಮಾಡು ತ್ತಿದ್ದೇವೆ."

"ಸರ್ದಾರ್ – ಈಗ ನಿಮ್ಮ ಪರಿಸ್ಥಿತಿ ಹೇಗಿದೆ."

"ಅನುಕೂಲವಾಗಿದೆ ಭಾಯ್. ಸ್ವಲ್ಪ ಹಣ ಕೂಡಿಟ್ಟಿದ್ದೇನೆ. ಒಂದೆ ರಡು ತಿಂಗಳು ನಾನು ಕೆಲಸವಿಲ್ಲದೆ ಕುಳಿತರೂ ಹೊಟ್ಟೆಯ ಪಾಡಿಗೆ ಯೋಚನೆ ಮಾಡಬೇಕಾಗಿಲ್ಲ."

"ಇನ್ನಾದರೂ ಮದುವೆ ಯೋಚನೆ ಮಾಡಬಾರದೇ ಸರ್ದಾರ್."

"ನನ್ನ ಭವಿಷ್ಯ ಕುರಿತು ನಾನೇಕೆ ಯೋಚನೆ ಮಾಡಲಿ? ನೀವೂ ಪ್ರೇಮಾಜಿ ಹೇಳಿದಂತೆ ಕೇಳುವುದಷ್ಟೇ ನನ್ನ ಕರ್ತವ್ಯ."

ಸರ್ದಾರನ ಪರಿಶುದ್ಧಾಂತಃಕರಣ, ಅವನ ಅಸೀಮ ಪ್ರೇಮ ಮೂರ್ತಿಯ ಹೃದಯ ಕಲಕಿತು. ಮೌನವ್ರತ ಧರಿಸಿ ಕುಳಿತಿದ್ದ ಅವನನ್ನು ಚಹ ಹಿಡಿದು ಬಂದ ಲಲಿತಮ್ಮ ನೋಡಿ

"ನನ್ನ ಯಜಮಾನರಂಥ ಸಂಘಜೀವಿಗಳೇ ಜಗತ್ತಿನಲ್ಲಿಲ್ಲ ಸರ್ದಾರ್ ಭಾಯ್" ಎಂದು ನಸುನಗುತ್ತ ನುಡಿದಳು.

"ಏಕೆ ಬಹೆನ್."

"ಅಪರೂಪಕ್ಕೆ ನೀವು ಬಂದಿರುವಿರಿ – ಇವರನ್ನು ನೋಡಿ – ಜಗತ್ತನ್ನೇ ತಲೆಯ ಮೇಲೆ ಹೊತ್ತಿರುವಂತೆ ಮೌನವಾಗಿ ಕುಳಿತಿರುವರು. ನಿಮ್ಮ ಯೋಗ ಕ್ಷೇಮ ವಿಚಾರಿಸುವುದೂ ಇವರಿಗೆ ತಿಳಿಯದಾಗಿದೆ."

ಸರ್ದಾರ್ ಲಲಿತಮ್ಮನ ಕೈಯಿಂದ ಚಹದ ಕಪ್ಪು, ಬಸಿ ಸ್ವೀಕರಿಸುತ್ತ

"ಮೌನದಲ್ಲಿ ಬಹಳ ಅರ್ಥವಿದೆ ಸೋದರಿ. ಪ್ರಸಾದ್ ಭಾಯ್ ಮಾತನಾಡದೆಯೇ ತಮ್ಮ ಭಾವನೆ ವ್ಯಕ್ತಮಾಡಬಲ್ಲರು" ಎಂದ.

ಮೂರ್ತಿಯೂ ಚಹದ ಕಪ್ಪು ಬಸಿ ಕೈಗೆ ತೆಗೆದುಕೊಂಡು

"ನಿರ್ಮಲನಿಗೆ ಚಹಾ ಕೊಟ್ಟೆಯಾ ?" ಎಂದ.

"ಕೊಟ್ಟೆ."

"ಆಕೆ ಎಷ್ಟು ಇಳಿದುಹೋಗಿದ್ದಾಳೆ. ಮುಂಬಯಿಯಲ್ಲಿ ನಾವು ನೋಡುತ್ತಿದ್ದ ನಿರ್ಮಲಾ ಈಕೆಯೇ ಎಂದು ಹೇಳುವುದೇ ಸಾಧ್ಯವಿಲ್ಲವಾಗಿದೆ."

ಸರ್ದಾರನ ಕೈ ನಡುಗಿತು. ಬಸಿಯ ಒಳಗಿದ್ದ ಕಪ್ಪು ತನ್ನ ಸಮತೋಲನೆಯನ್ನು ಕಾಪಾಡಿಕೊಳ್ಳಲು ಸಾಹಸ ಮಾಡಲಾರಂಭಿಸಿತು. ಕಣ್ಣುಗಳಿಂದ ಧುಮುಕಲು ಹವಣಿಸುತ್ತಿದ್ದ ಕಂಬನಿಗಳನ್ನು ಬಲವಂತವಾಗಿ ಒಳಗೆ ತಳ್ಳುತ್ತಾ ಸದಾರ್

"ನಿರ್ಮಲಾ ಬಹೆನ್ ಅಲ್ಪಸ್ವಲ್ಪ ಕಷ್ಟ ಅನುಭವಿಸಿಲ್ಲ ಪ್ರಸಾದ್ ಭಾಯ್. ಇಷ್ಟು ಅನುಭವಿಸಿಯೂ ಆಕೆ ಜೀವ ಧರಿಸಿರುವುದೇ ನನಗೆ ಆಶ್ಚರ್ಯವನ್ನುಂಟುಮಾಡುತ್ತದೆ."

"ಆಕೆಯ ಧರ್ಮದೇವತೆಗಳಾಗಿ ನೀವಿರುವಾಗ ಭಯವೇನು ?"

"ನಾವು ಯಾರೂ ಆಕೆಗೆ ಯಾವ ಉಪಕಾರವನ್ನೂ ಮಾಡಲಾಗಲಿಲ್ಲ ಭಾಯ್ – ನಿಮ್ಮ ತಾರು ನಿರ್ಮಲಾದೇವಿಗೆ ಸಂಜೀವಿನಿಯನ್ನೆರೆಯಿತು."

ಲಲಿತಮ್ಮ ಒಳಕ್ಕೆ ಹೋಗಿ ನಿರ್ಮಲನ ಕೈಹಿಡಿದು ಕರೆತಂದು ಹಜಾರದಲ್ಲಿ ಕೂಡಿಸಿ, ತಾನೂ ಅವಳ ಬಳಿ ಕುಳಿತುಕೊಂಡಳು.

ಮೂರ್ತಿ ಆಕೆಯನ್ನು ನೋಡಿ

"ಇದು ನಿನ್ನ ಮನೆ ನಿರ್ಮಲಾ ಬಹೆನ್. ಯಾವ ಸಂಕೋಚವೂ ಇಟ್ಟುಕೊಳ್ಳದೆ ನೀನಿರಬೇಕು."

ದೀನವದನಳಾಗಿದ್ದ ನಿರ್ಮಲಾ ಒಮ್ಮೆ ಕತ್ತೆತ್ತಿ ನೋಡಿ

"ಪ್ರಸಾದ್ ಭಾಯ್" ಎಂದಳು.

ಅವಳ ಕಣ್ಣುಗಳಿಂದ ತಡಸಲಿನಂತೆ ಪ್ರವಾಹ ಹೊರಟಿತು. ಲಲಿತಮ್ಮ ನಿರ್ಮಲನನ್ನಪ್ಪಿ ಸಮಾಧಾನಪಡಿಸಲೆತ್ನಿಸಿದಳು. ಮೂರ್ತಿ ಗಂಭೀರವಾಗಿ

"ಅಳಬೇಡ ನಿರ್ಮಲಾ – ಜೀವನ ಕೇವಲ ಅಳುವೂ ಅಲ್ಲ – ನಗುವೂ ಅಲ್ಲ. ಪ್ರಕೃತಿಗೆ ಹೇಗೆ ಉತ್ತರಾಯನ ದಕ್ಷಿಣಾಯನಗಳಿವೆಯೋ ಹಾಗೆ ಜೀವನಕ್ಕೂ ಇದೆ. ನಿನ್ನ ಕಾರಿರುಳು ಕಳೆದುಹೋಯಿತು – ಇನ್ನು ನೀನು ಬೆಳಕನ್ನು ಕಾಣಲೇ ಬೇಕು. ಅಳಬೇಡ ತಂಗೀ – ಅಳಬೇಡ."

"ಅಣ್ಣಾ – ನಾನು ಮಹಾಪಾಪಿ – ನಿಮಗೂ ಲಲಿತಾ ಬಹೆನ್‌ಗೂ ಮುಖ ತೋರಿಸದೆ ಓಡಿಹೋದೆ. ಯಾರಿಗೂ ಬೇಡವಾದ ಈ ಬಾಳು ಮುಗಿಸಿಬಿಡಬೇಕೆಂದೇ ನಾನು ಹೋದುದು. ಆದರೆ ನನ್ನ ಕರ್ಮ ನನ್ನ ಬೆನ್ನುಹತ್ತಿತು. ಜುಹೂ ಸಮುದ್ರತೀರದಲ್ಲಿ ನಾನು ಆತ್ಮಹತ್ಯೆ ಮಾಡಿ ಕೊಳ್ಳಲು ಹವಣಿಸುತ್ತಿದ್ದೆ. ಇಬ್ಬರು ಹೆಣ್ಣುಮಕ್ಕಳ ಜತೆಗೆ ವಾಯು ವಿಹಾರಕ್ಕೆ ಬಂದಿದ್ದ ಒಬ್ಬ ಮುದುಕಿ ನನ್ನ ಕೈಹಿಡಿದಳು. ದುಃಖ ತಡೆಯ ಲಾಗದೆ ಅವಳಿಗೆ ನನ್ನ ಗೋಳಿನ ಕಥೆ ನಿರೂಪಿಸಿದೆ. ಮುದುಕಿ ಒಳ್ಳೆಯ ಮಾತನಾಡಿದಳು. ನನ್ನ ಬಗ್ಗೆ ಕನಿಕರ ತೋರಿಸಿ, ತಾನು ರಕ್ಷಣೆ ನೀಡುವು ದಾಗಿ ಭರವಸೆಯಿತ್ತಳು. ಬೇರೆ ದಾರಿಗಾಣದೆ ನಾನು ಆಕೆಯ ಜತೆ ಹೋದೆ. ಒಂದೆರಡು ವಾರ ನನ್ನನ್ನು ಮುದುಕಿ ಚೆನ್ನಾಗಿ ಆದರಿಸಿದಳು. ನನಗೇ ಪ್ರತ್ಯೇಕವಾಗಿ ಒಂದು ಕೋಣೆಯನ್ನಿತ್ತು ತನ್ನ ಆಶ್ರಯದಲ್ಲಿದ್ದ ಇಬ್ಬರು ಹುಡುಗಿಯರನ್ನು ನನ್ನ ಶಿಶ್ರೂಷೆಗೆ ನಿಲ್ಲಿಸಿದಳು.

ಮುದುಕಿಯ ಮನೆ, ವಹಿವಾಟು, ಟೆಲಿಫೋನು, ಕಾರು, ಸೇವಕ ವರ್ಗ ಎಲ್ಲವನ್ನೂ ಕಂಡು ಈಕೆ ದೊಡ್ಡ ಜಮೀನ್ದಾರಿಣಿ ಇರಬೇಕು ಎಂದು ನಾನು ಭಾವಿಸಿದೆ.

ನನ್ನ ಶಿಶ್ರೂಷೆಗಿದ್ದ ಇಬ್ಬರು ಹುಡುಗಿಯರಲ್ಲಿ ಒಬ್ಬಳ ಹೆಸರು ಪ್ರಫುಲ್ಲಾ. ಆಕೆ ಬಂಗಾಳಿಯೆಂದು ನನಗೆ ತರುವಾಯ ಗೊತ್ತಾಯಿತು. ಪ್ರಫುಲ್ಲನಿಗೂ ನನಗೂ ಸ್ನೇಹ ಬೆಳೆಯಿತು.

ಒಂದು ದಿನ ನಾನು ಪ್ರಫುಲ್ಲನನ್ನು ಕೇಳಿದೆ.

'ಮಾತಾಜಿ ತುಂಬ ಒಳ್ಳೆಯರಲ್ಲವೇ ಪ್ರಫೂ........'

'ತುಂಬ ಒಳ್ಳೆಯವರು'

ಅವಳ ಮಾತಿನಲ್ಲಿ ವ್ಯಂಗ್ಯ ಅಡಕವಾಗಿತ್ತು.

'ಏಕೆ ಹೀಗನ್ನುವೆ ಪ್ರಫೂ........ನಿರ್ಭಾಗ್ಯೆಯಾದ ನನ್ನನ್ನು ಅವರು ಕಾಪಾಡಿಲ್ಲವೇ. ಅಂದವರು ಜುಹೂ ಸಮುದ್ರತೀರದಲ್ಲಿ ನನ್ನನ್ನು ರಕ್ಷಿಸದಿದ್ದರೆ ಈ ವೇಳೆಗೆ ನಾನು ಮೀನು ಮೊಸಳೆಗಳ ಪಾಲಾಗುತ್ತಿದ್ದೆ.'

'ಹಾಗಾಗಿದ್ದರೇ ನೆಟ್ಟಗಾಗುತ್ತಿತ್ತು ನಿರ್ಮಲಾ!'

'ಏಕೆ ಪ್ರಫೂ........'

'ಮಾತಾಜಿ ಯಾರೆಂದು ಭಾವಿಸಿರುವೆ?'

'ನನಗೆ ತಿಳಿಯದು - ಅವರೊಬ್ಬ ದೊಡ್ಡ ಜಮೀನ್ದಾರಿಣಿ ಇರಬೇಕೆಂದು ನನ್ನ ಕಲ್ಪನೆ.'

'ಅಯ್ಯೋ ಹುಚ್ಚಿ! ಅವಳೊಬ್ಬ ದೊಡ್ಡ ಮಧ್ಯಸ್ಥಗಾತಿ — ಫೋನಿನ ಮೇಲೆ ವ್ಯವಹಾರ ನಡಸುತ್ತಾಳೆ. ಅವಳ ಈ ಸಂಪತ್ತೆಲ್ಲಾ ನನ್ನಂಥ ನಿರ್ಭಾಗ್ಯೆಯರು ದುಡಿದಿರುವುದು. ನಮ್ಮ ಜೀವನ ಮಣ್ಣುಗೂಡಿಸಿದಂತೆ ನಿನ್ನ ಜೀವನವನ್ನೂ ಮಣ್ಣುಗೂಡಿಸುತ್ತಾಳೆ.'

ಪ್ರಫುಲ್ಲನ ಮಾತು ಕೇಳಿ ನಾನು ಚಕಿತಳಾದೆ. ಅವಳು ನನ್ನನ್ನೇ ದಿಟ್ಟಿಸಿ ನೋಡಿ

'ನಿರ್ಮಲಾ - ಇಲ್ಲಿ ನೋಡು.'

ನಾನು ಕತ್ತೆತ್ತಿ ನೋಡಿದೆ.

'ನನ್ನ ಮುಖ ದಿಟ್ಟಿಸಿ ನೋಡು - ಈಗ ಹೇಳು, ನನ್ನ ವಯಸ್ಸೆಷ್ಟು?'

'ಮೂವತ್ತು - ಮೂವತ್ತೆರಡು ಇರಬಹುದು.'

'ಇದೇ ಇಪ್ಪತ್ತೆರಡು ಮುಗಿಯುತ್ತಿದೆಯೆಂದು ಹೇಳಿದರೆ ನಿನಗೆ ಆಶ್ಚರ್ಯವಾಗಬಹುದಲ್ಲವೇ?'

'ಇಪ್ಪತ್ತೆರಡೇ! ನಿಜವಾಗಿ!!'

'ಸತ್ಯವಾಗಿ - ನಿನ್ನಲ್ಲಿ ಸುಳ್ಳು ಏಕೆ ಹೇಳಲಿ, ಮಾತಾಜಿಯ ಆಶ್ರಯಕ್ಕೆ ಬಂದು ನಾಲ್ಕೇ ವರ್ಷಗಳಾದವು. ನಾಲ್ಕು ವರ್ಷಗಳಲ್ಲಿ ನನ್ನಲ್ಲಿ ಇಷ್ಟು ವ್ಯತ್ಯಾಸವಾಗಿದೆ.'

'ನೀನು ಒಳ್ಳೆಯ ಮನೆಯವಳೆಂದು ಕಾಣುತ್ತಿದೆ ಪ್ರಫೂ........'

'ನನ್ನ ತಂದೆ ಬಾಲಿಗಂಜ್‌ನಲ್ಲಿ ಪೋಸ್ಟ್‌ಮಾಸ್ಟರಾಗಿದ್ದರು - ಶ್ರೀಮಂತ ರಲ್ಲ, ಅನುಕೂಲಸ್ಥರು. ನನಗೆ ಹದಿನಾಲ್ಕು ನಡೆಯುತ್ತಿರುವಾಗಲೇ ಮದುವೆಯಾಯಿತು. ಎರಡು ವರ್ಷಗಳ ತರುವಾಯ ಗಂಡನೊಂದಿಗೆ ಮುಂಬಯಿಗೆ ಬಂದೆ.'

'ನಿನ್ನ ಗಂಡ ಏನಾಗಿದ್ದರು ?'

'ಮಾರವಾಡಿಗಳ ರಾಮನಾರಾಯಣ ಬ್ಯಾಂಕ್ಸಿನಲ್ಲಿ ಅಕೌಂಟೆಂಟ್ ಆಗಿದ್ದರು.'

'ವಿವಾಹಿತಳಾಗಿದ್ದ ನಿನಗೆ ಈ ದುಸ್ಥಿತಿ ಹೇಗೆ ಒದಗಿತು ?'

'ಅದೊಂದು ದೊಡ್ಡ ಕತೆ – ಕೇಳುವೆಯಾ ?'

'ನೀನು ಹೇಳುವುದಾದರೆ ಕೇಳುವೆನು.'

'ಇದು ನಮ್ಮಿಬ್ಬರಲ್ಲಿಯೇ ಇರಬೇಕು – ಆ ಹುಡುಗಿ ಭಾಟಿಯಾಗೆ ತಿಳಿದರೆ ನಮ್ಮಿಬ್ಬರ ಪಾಡೂ ನಾಯಿಪಾಡಾಗುತ್ತದೆ.'

'ನಿನ್ನ ರಹಸ್ಯ ನಾನು ಬಿಟ್ಟುಕೊಡುವುದಿಲ್ಲ.'

'ನಾನೂ ನನ್ನ ಗಂಡ ಎರಡು ವರ್ಷ ಸುಖಸಂಸಾರ ನಡೆಸಿದೆವು. ಆತ ನನಗೇತಕ್ಕೂ ಕಡಿಮೆ ಮಾಡಿರಲಿಲ್ಲ. ಆಫೀಸ್ ಮುಗಿದೊಡನೆಯೇ ಮನೆಗೆ ಬರುತ್ತಿದ್ದರು. ಆ ವೇಳೆಗೆ ನಾನು ಅಲಂಕರಿಸಿಕೊಂಡು ಸಿದ್ಧವಾಗಿರು ತ್ತಿದ್ದೆ. ಇಬ್ಬರೂ ಬೀಚಿಗೋ ಸಿನೀಮಾಕ್ಕೊ ಹೋಗಿಬರುತ್ತಿದ್ದೆವು. ಅವರಿಗೆ ೨-೩ ದಿವಸ ರಜೆ ಸಿಕ್ಕಿದರೆ ಕಲ್ಯಾಣ, ಜೋಗೇಶ್ವರಿ, ಕಾರ್ಲಾ, ಎಲಿಫ್ಯಾಂಟಾ ಗಳಿಗೆ ಹೋಗಿ ಬರುತ್ತಿದ್ದೆವು. ನಮ್ಮ ದಾಂಪತ್ಯ ಆದರ್ಶದಾಂಪತ್ಯ ವಾಗಿತ್ತು.

ನನ್ನ ಪತಿಗೆ ಒಂದು ಹುಚ್ಚು. ಯಾರು ಹೇಗೆ ಅಲಂಕರಿಸಿಕೊಂಡರೆ, ನಾನು ಹಾಗೆ ಅಲಂಕಾರ ಮಾಡಿಕೊಳ್ಳಬೇಕು. ಗಂಡಸರು, ಹೆಂಗಸರು ಎಲ್ಲರೊಂದಿಗೂ ನಾನು ಸಲಿಗೆಯಿಂದ ವರ್ತಿಸಬೇಕು. ಪಾರ್ಸಿ ಹುಡುಗಿಯ ರಂತೆ ನಾನು ಅರ್ಧ ಎದೆ ಕಾಣುವ, ತೋಳಿಲ್ಲದ ಕುಪ್ಪಸ ಧರಿಸಬೇಕೆಂದು ಅವರ ಇಚ್ಛೆ. ಈ ವಿಷಯಕ್ಕೆ ನನಗೂ ಅವರಿಗೂ ವಿವಾದವಾಗುತ್ತಿತ್ತು. ನಾನು ಹಳೆಯ ಸಂಪ್ರದಾಯದಲ್ಲಿ ಹುಟ್ಟಿ ಬೆಳೆದವಳು. ನನ್ನ ಪತಿಯ ವಿಶ್ವಾಸ, ಸ್ನೇಹ, ಸಹವಾಸವಲ್ಲದೆ ನನಗೆ ಯಾವದೂ ಬೇಕಾಗಿರಲಿಲ್ಲ.

ಅವರಿಗೆ ಮಾತಾಜಿಯ ಪರಿಚಯ ಹೇಗಾಯಿತೋ ನಾನರಿಯೆ. ಒಂದುದಿನ ಮಾತಾಜಿಯ ಮನೆಗೆ ಅವರೇ ನನ್ನನ್ನು ಚಹಾಕ್ಕೆ ಕರೆದುಕೊಂಡು ಹೋದರು. ನಾಲ್ಕಾರು ಗಂಡಸರು, ಎಂಟುಹತ್ತು ಹೆಂಗಸರಿದ್ದರು. ಸರಸವಾಗಿ ಮಾತು ಕತೆಯಾಯಿತು. ಕೆಲವು ಗಂಡಸರು, ಹೆಂಗಸರು ಹಗುರವಾಗಿಯೂ ಮಾತನಾಡುತ್ತಿದ್ದರು. ಈ ವಾತಾವರಣ ನನಗೆ ಸಹ್ಯವಾಗಲಿಲ್ಲ. 'ನಾನಿನ್ನು ಈಕೆಯ ಮನೆಗೆ ಬರುವುದಿಲ್ಲ' ಎಂದು ನನ್ನ ಪತಿಗೆ ಹೇಳಿದೆ. 'ಛೆ! ಹಾಗನ್ನಬಾರದು. ಮಾತಾಜಿ ದೊಡ್ಡ ಸೊಸೈಟಿಯ ರಾಣಿ (Society Queen). ಊರಿನ ಗಣ್ಯಮಹನೀಯರು, ಮಹಿಳೆಯರೆಲ್ಲಾ ಆಕೆಯ ಸ್ನೇಹಿತರು. ಮಾತಾಜಿಯ ಪರಿಚಯದಿಂದ ನಮಗೆ ಊರಿನ ಗಣ್ಯವರ್ಗದಲ್ಲಿ ಸ್ಥಾನ ಸಿಕ್ಕುತ್ತದೆ' ಎಂದು ನನ್ನ ಬಾಯಿ ಮುಚ್ಚಿಸಿದರು. ಮಾತಾಜಿ ಆಗಾಗ್ಗೆ ನಮ್ಮ ಮನೆಗೆ ಬರುತ್ತಿದ್ದರು. ಒಂದೊಂದು ಮಧ್ಯಾನ್ಹ ತಾವೇ ಬಂದು ನನ್ನನ್ನು ತಮ್ಮ ಮನೆಗೆ ಕರೆದೊಯ್ಯುತ್ತಿದ್ದರು.

ಒಂದು ಮಧ್ಯಾನ್ಹ ನನ್ನನ್ನು ತಮ್ಮ ಮನೆಗೆ ಕರೆದೊಯ್ದು ಮಾತಾಜಿ ಒಬ್ಬ ಅಪರಿಚಿತ ವ್ಯಕ್ತಿಯ ಪರಿಚಯ ನನಗೆ ಮಾಡಿಕೊಟ್ಟು

'ಇವರು ಯಾರು ಗೊತ್ತೇ ಪ್ರಭಾ' ಎಂದರು.

'ಯಾರೋ ಗೊತ್ತಿಲ್ಲ.'

'ನಿನ್ನ ಯಜಮಾನರ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್.'

'ಬಹಳ ಸಂತೋಷ.'

'ಹೋಗು. ಅವರ ಜತೆಯಲ್ಲಿ ಮಾತನಾಡಿಕೊಂಡು ಬಾ.'

'ಅವರಲ್ಲಿ ನಾನೇನು ಮಾತನಾಡಬೇಕು.'

'ರೂಮಿಗೆ ಹೋದರೆ ನಿನಗೇ ತಿಳಿಯುತ್ತದೆ.'

'ಇದೇನು ಮಾತನಾಡುತ್ತಿರುವಿರಿ ಮಾತಾಜಿ.'

'ಹುಚ್ಚಿ – ಯಾರ ನೆರವೂ ಇಲ್ಲದೆ ಈ ಜಗತ್ತಿನಲ್ಲಿ ನಾವು ಬಾಳಲು ಸಾಧ್ಯವೇ ?'

'ಇಂಥ ಬಾಳು ನನಗೆ ಬೇಕಿಲ್ಲ.'

'ನಿನಗೆಂಥ ಬಾಳು ಬೇಕು.'

'ನನ್ನ ಗಂಡ ಮೈಮುರಿದು, ದುಡಿದು ಸಂಪಾದಿಸುತ್ತಾರೆ – ಅದರಲ್ಲಿ ನಾವು ಸಂತೋಷವಾಗಿದ್ದೇವೆ.'

'ಇವರ ಸಹಾಯವಿಲ್ಲದೆ ನಿನ್ನ ಗಂಡ ಸಂಪಾದಿಸಲು ಸಾಧ್ಯವಿಲ್ಲ.'

'ಬೇಡಿ – ಕೆಲಸಕ್ಕೆ ರಾಜೀನಾಮೆ ಕೊಟ್ಟು ಅವರು ಬೇರೆ ಉದ್ಯೋಗ ಮಾಡುತ್ತಾರೆ.'

'ಇವರು ತುಂಬ ಒಳ್ಳೆಯವರು ಪ್ರಫೂ – ನಿನ್ನ ಗಂಡನಿಗೆ ಬಡ್ತಿ ಕೊಟ್ಟು ಹೆಡ್ ಅಕೌಂಟೆಂಟ್ ಮಾಡಬೇಕೆಂದಿದ್ದಾರೆ.'

'ಅದಕ್ಕೆ ಪ್ರತಿಯಾಗಿ ನಾನು...........'

'ಹೌದು.'

'ನಾನಿಲ್ಲಿ ಕ್ಷಣಕಾಲ ನಿಲ್ಲಲಾರೆ – ಬಿಡಿ, ನಾನು ಮನೆಗೆ ಹೋಗಬೇಕು'

ಎಂದು ಹೊರಡಲುದ್ಯುಕ್ತಳಾದೆ. ಅನಂತರ ಏನಾಯಿತೋ ನಾನು ಕಾಣೆ. ನಾನು ಕಣ್ಣುಬಿಟ್ಟು ನೋಡುವಲ್ಲಿ ಆ ಪುರುಷಾಧಮ ತನ್ನ ಕಾಮ ಪಿಪಾಸೆ ಪೂರೈಸಿಕೊಂಡು ಬಿಸಿಯುಸಿರನ್ನು ಬಿಡುತ್ತ ನನ್ನ ಬಳಿ ಕುಳಿತಿದ್ದ.

ಗಂಡನ ಕೆಲಸ ಹೋಗುವ ಭಯವೊಂದು ಕಡೆ, ನನ್ನ ಪತನ ರಹಸ್ಯ ಹೊರಬೀಳುವ ಚಿಂತೆಯೊಂದು ಕಡೆ ನನ್ನನ್ನು ಕಾಡಲಾರಂಭಿಸಿದವು. ಮಾತಾಜಿಯ ಕೈಗೆ ನಾನು ಸಂಪೂರ್ಣವಾಗಿ ಸಿಕ್ಕಿಬಿಟ್ಟೆ – ಆಕೆ ನನ್ನನ್ನು ಕೀಲುಗೊಂಬೆಯಂತೆ ಕುಣಿಸಲಾರಂಭಿಸಿದಳು. ದಿನಕ್ಕೊಬ್ಬೊಬ್ಬರ ಪರಿಚಯವಾಗುತ್ತ ಬಂದಿತು.

ಒಂದುದಿನ – ನಾನೊಬ್ಬನೊಂದಿಗೆ ಸಲಿಗೆಯಿಂದ ವರ್ತಿಸುತ್ತಿದ್ದಾಗ ನನ್ನ ಪತಿ ಬಂದು ಎದುರಿಗೆ ನಿಂತರು. ಮಾತಾಜಿಯೇ ಉದ್ದೇಶಪೂರ್ವಕವಾಗಿ ಅವರನ್ನು ಅಲ್ಲಿಗೆ ಬರಮಾಡಿರಬೇಕೆಂದು ನನಗೆ ಭಾಸವಾಯಿತು. ಅಂದೇ ನನಗೂ ನನ್ನ ಪತಿಗೂ ಇದ್ದ ಋಣ ಹರಿದುಹೋಯಿತು.

ನನ್ನ ಒಡವೆವಸ್ತ್ರಗಳನ್ನು ಮಾತಾಜಿಯ ಮನೆಗೆ ಕಳುಹಿಸಿ, ಅವರು ಕೆಲಸಕ್ಕೆ ರಾಜೀನಾಮೆಯಿತ್ತು ಹೊರಟುಹೋದರು.

ಎಲ್ಲಿಗೆ ಹೋದರೋ ಕಾಣೆ!

ನಾಲ್ಕು ವರ್ಷಗಳು ಮಾತಾಜಿಯ ಆಶ್ರಯದಲ್ಲಿ ಈ ಬಾಳು ದೂಡಿದ್ದೇನೆ. ನನ್ನಂತೆ ಅಧಃಪತನಕ್ಕಿಳಿದ ಹಲವಾರು ಹೆಣ್ಣುಮಕ್ಕಳ ದುರಂತಜೀವನ ನೋಡಿದ್ದೇನೆ. ಈಗ ನನ್ನ ಮನಸ್ಸು ಕಲ್ಲಾಗಿದೆ – ಎಲ್ಲ ದುಃಖ, ನೋವು ಸಹಿಸಿಕೊಳ್ಳುವ ಶಕ್ತಿ ಬಂದಿದೆ.'

ನಾನು ಅಧೀರಳಾಗಿ ಪ್ರಫುಲ್ಲನ ಕುತ್ತಿಗೆಯುಪ್ಪಿ

'ಅಕ್ಕಾ – ನನ್ನ ಗತಿಯೇನು ?' ಎಂದು ಕೇಳಿದೆ.

'ನೀನು ಸಮುದ್ರದ ಪಾಲಾಗಿದ್ದರೆ ಚೆನ್ನಾಗಿತ್ತು.'

'ಅದೂ ಸಾಧ್ಯವಾಗಲಿಲ್ಲವಲ್ಲಾ !'

'ಈ ಮನೆಯ ಜೀವನ ನಿನಗೆ ಬೇಕೇ ?'

'ಇಲ್ಲ ಅಕ್ಕಾ – ಖಂಡಿತವಾಗಿ ಬೇಕಿಲ್ಲ. ಇಲ್ಲಿಂದ ನಾನು ಹೇಗೆ ಪಾರಾಗಬಹುದು ತಿಳಿಸು.'

'ಇಲ್ಲಿ ಬಂದಮೇಲೆ ಪಾರಾಗುವುದು ಸಾಧ್ಯವೇ ಇಲ್ಲ. ಮನೆಯ ಸುತ್ತ ಪಠಾಣರ ಸರ್ಪಕಾವಲು – ಒಂದು ವೇಳೆ ಅವರ ಕಣ್ಣು ತಪ್ಪಿಸಿ ನೀನು ನುಸುಳಿಕೊಂಡರೆ, ಪೋಲೀಸಿನವರೇ ನಿನ್ನನ್ನು ಹಿಡಿದು ತಂದು ಮಾತಾಜಿಗೆ ಒಪ್ಪಿಸುತ್ತಾರೆ.'

'ಪೋಲೀಸಿನವರು ನನಗೆ ಸಹಾಯ ಮಾಡುವುದಿಲ್ಲವೇ ?'

'ಹೇಗೆ ಮಾಡುತ್ತಾರೆ. ಅವರೆಲ್ಲಾ ಮಾತಾಜಿಯ ಆಶ್ರಿತರು. ಈ ಭಾಗದ ಡಿ.ಎಸ್.ಪಿ. ಸಂಜೆಗೆ ಬರುತ್ತಾರೆ ತೋರಿಸುತ್ತೇನೆ ಸುಮ್ಮನಿರು. ಕಾಂಗ್ರೆಸ್ ಪುಢಾರಿಗಳು, ಮಂತ್ರಿಗಳು ಎಲ್ಲರೂ ಮಾತಾಜಿಯ ವಿಶ್ವಾಸಿಗಳು.'

'ನಾನೇನು ಮಾಡಲಕ್ಕಾ !"

'ತಡೀ ನೋಡುವ – ಆರೋಗ್ಯವಿಲ್ಲವೆಂದು ನಟಿಸುತ್ತಾ ಕಾಲ ತಳ್ಳಿಕೊಂಡು ಬಾ. ನಾನು ಸಮಯ ಸಾಧಿಸಿ ನಿನ್ನ ಬಿಡುಗಡೆಯ ಪ್ರಯತ್ನ ಮಾಡುತ್ತೇನೆ.'

ನಮ್ಮ ಸಂಭಾಷಣೆ ಘಾಟೆಯಾ ಕೇಳಿಸಿಕೊಂಡುದನ್ನು ನಾವಿಬ್ಬರೂ ಗಮನಿಸಲಿಲ್ಲ.

ಮಾರನೆಯ ದಿನ ನನಗೆ ಚಹಾ ತಂದುಕೊಟ್ಟವಳು ಪ್ರಫುಲ್ಲೆಯಲ್ಲ – ಭಾಟಿಯಾ !

'ಪ್ರಫುಲ್ಲೆಯೆಲ್ಲಿ ?' ಎಂದು ನಾನು ಕೇಳಿದೆ.

ಭಾಟಿಯಾ ವಿಗಡವಾಗಿ ನಕ್ಕು

'ನಿನಗೆ ಪ್ರಫುಲ್ಲೆಯೇ ಬೇಕಲ್ಲವೇ ?'

'ಏಕೆ ಭಾಟಿಯಾ ! ಪ್ರಫುಲ್ಲೆಗೇನಾಯಿತು.'

'ಏನೂ ಆಗಿಲ್ಲ. ಬಡ್ತಿಯಾಯಿತು. ಮಾತಾಜಿ ಅವಳನ್ನು ದಾದರಿಗೆ ವರ್ಗಾಯಿಸಿದ್ದಾರೆ.'

'ದಾದರಿನಲ್ಲಿ ಯಾರಿದ್ದಾರೆ ?'

'ಮಾತಾಜಿಯ ಇನ್ನೊಂದು ಮನೆಯಿದೆ. ಇಲ್ಲಿ ತಪ್ಪಿ ನಡೆಯುವವರಿಗೆ ಅಲ್ಲಿ ಶಿಕ್ಷೆಯಾಗುತ್ತದೆ. ಇಲ್ಲಿಂದ ಓಡಿಹೋಗುವ ಯೋಚನೆ ಬಿಟ್ಟುಬಿಡು ನಿರ್ಮಲಾ. ನೀನು ಪಾತಾಳದಲ್ಲಿ ಅಡಗಿಕೊಂಡರೂ ಮಾತಾಜಿ ಹುಡುಕಿಸಿ ತರುತ್ತಾರೆ.'

'ಭಾಟಿಯಾ – ನೀನೂ ನನ್ನ ಹಾಗೆ ಹೆಂಗಸು. ನನ್ನ ಶೀಲವನ್ನು ಕಾಪಾಡುವುದು ನಿನ್ನ ಧರ್ಮವಲ್ಲವೆ ?'

'ಮಾತಾಜಿಗೆ ದ್ರೋಹ ಮಾಡೆನ್ನುವೆಯಾ ?'

'ಮಾತಾಜಿಯ ಹೊಲಸು ಜೀವನದ ಪಾಪದ ಹೊರೆಯನ್ನು ನೀನು ಹೊರಲಿಚ್ಛಿಸುವೆಯಾ ?'

ಭಾಟಿಯಾ ಬಾಯಿಮಾತಿನಲ್ಲಿ ಉತ್ತರ ಹೇಳಲಿಲ್ಲ. ಅವಳ ವಿಶಾಲ ಹಸ್ತಮುಷ್ಟಿ ನನ್ನೆರಡು ಕೆನ್ನೆಗಳ ಮೇಲೂ ಅಚ್ಚೊತ್ತಿದಂತೆ ಮೂಡಿದವು.

ಮೂರೇ ತಿಂಗಳಲ್ಲಿ ಮಾತಾಜಿ, ಭಾಟಿಯಾ ನನ್ನನ್ನು ' ಹದ ' ಮಾಡಿಬಿಟ್ಟರು. ಅನಂತರ ನಾನು ಮುಂಬಯಿಯ ನಿರ್ಭಾಗ್ಯ ಪತಿತ ಸ್ತ್ರೀಯರ ಸೈನ್ಯದಲ್ಲಿ ಒಬ್ಬಳಾಗಿಬಿಟ್ಟೆ."

ಲಲಿತಮ್ಮ, ಮೂರ್ತಿ, ಸರ್ದಾರ್ ಮೂಕವೇದನೆಯನ್ನನುಭವಿಸುತ್ತ ದುಃಖಿಸುತ್ತ ಕುಳಿತಿದ್ದರು.

ಮೂರ್ತಿಯೇ ತುಸು ಸಮಾಧಾನ ತಂದುಕೊಂಡು

"ತಂಗೀ, ನಿನ್ನ ಬಿಡುಗಡೆ ಹೇಗಾಯಿತು ?" ಎಂದು ಕೇಳಿದ.

"ಅದನ್ನು ನಾನು ವಿವರಿಸುತ್ತೇನೆ ಭಾಯ್‌ಸಾಬ್. ನಿರ್ಮಲಾ ಸುಮಾರು ಆರೆಂಟು ತಿಂಗಳು ಮಾತಾಜಿ ಮನೆಯಲ್ಲಿ ಕಳೆದಿರಬಹುದು. ಅವಳ ಮೇಲಿದ್ದ ಹತ್ತೋಟಿ, ಕಾವಲು ಕಡಿಮೆಯಾಯಿತು, ಅವಳು ಪೇಟೆಯ ಕಡೆ ಹೋಗಿಬರಲು ಮಾತಾಜಿಯ ಅನುಮತಿ ದೊರೆಯಿತು. ನಾನು ಕಾಲ್ಬಾದೇವಿಯಲ್ಲಿ ಒಂದು ಮನೆಯ ಜೀರ್ಣೋದ್ಧಾರ ಕೆಲಸ ಒಪ್ಪಿಕೊಂಡು ನಿರ್ವಹಿಸುತ್ತಿದ್ದೆ. ಭಾಟಿಯಾ, ನಿರ್ಮಲಾ ಇಬ್ಬರೂ ಟ್ಯಾಕ್ಸಿಯಲ್ಲಿ ಬಂದು ಒಂದು ಗಡಿಯಾರದ ಅಂಗಡಿಗೆ ಹೋದರು. ನಾನು ಅವರನ್ನೇ ಹಿಂಬಾಲಿಸಿದೆ. ಅವರು ಅಂಗಡಿಯಿಂದ ಹಿಂದಿರುಗಿದ ಮೇಲೆ ಧೈರ್ಯವಾಗಿ ಹೋಗಿ ನಿರ್ಮಲಳನ್ನು ಮಾತನಾಡಿಸಿದೆ.

'ಇವರು ಯಾರು' ಎಂದು ಭಾಟಿಯಾ ಕೇಳಿದಳು.

ಕಕ್ಕಾಬಿಕ್ಕಿಯಾಗಿದ್ದ ನಿರ್ಮಲಾ ತಪ್ಪು ನುಡಿದಾಳೆಂದು ಹೆದರಿ ನಾನೇ 'ನಿರ್ಮಲಾ ನನ್ನ ಹಳೆಯ ಸ್ನೇಹಿತೆ. ಅವಳನ್ನು ನೋಡಿ ಬಹಳ ದಿವಸವಾಯಿತು' ಎಂದೆ.

ನಿರ್ಮಲಾ ನನ್ನ ಮಾತನ್ನು ಅನುಮೋದಿಸುವಂತೆ ತಲೆದೂಗಿ ಮುಗುಳ್ನಗೆ ಬೀರಿದಳು.

'ಈಗೆಲ್ಲಿದ್ದೀ ನಿರ್ಮಲಾ' ಎಂದು ಕೇಳಿದೆ.

'ನೀವು ಬರಬೇಕೇನು' ಎಂದು ಭಾಟಿಯಾ ಕೇಳಿದಳು.

'ಹೂ! ಹಳೆಯ ಸ್ನೇಹ ಮರೆಯಲು ಸಾಧ್ಯವೇ?'

'ಬನ್ನಿರೆಂದು ಹೇಳಲೇ ನಿರ್ಮಲಾ'

ಎಂದು ಭಾಟಿಯಾ ನಿರ್ಮಲಳನ್ನು ಕೇಳಿದಳು.

'ಹೇಳು - ಅವರು ಬರಲಿ'

ಎಂದು ನಿರ್ಮಲಾ ನುಡಿದಳು.

ಭಾಟಿಯಾ ನನಗೆ ಮಾತಾಜಿಯ ಮನೆ ವಿಳಾಸ, ಫೋನ್ ನಂಬರು ಇತ್ತು. 'ಸಂಜೆ ಆರು ಗಂಟೆಗೆ ಬನ್ನಿ' ಎಂದಳು.

'ಬರುವುದಕ್ಕೆ ಮೊದಲು ಫೋನ್ ಮಾಡಲೇ?'

'ಮಾಡಿದರೆ ಒಳ್ಳೆಯದು.—ಮಾತಾಜಿ ಮನೆಯಲ್ಲಿ ಹಳೆಯ ಸ್ನೇಹ ನಡೆಯುವುದಿಲ್ಲ. ಕೈತುಂಬ ದುಡ್ಡು ತೆಗೆದುಕೊಂಡು ಬನ್ನಿ.'

'ದುಡ್ಡಿಗೇನೂ ಯೋಚನೆ ಮಾಡಬೇಡ. ಅರ್ಧ ಮುಂಬಯಿಯ ಮಾಲಿಕ ನಾನು' ಎಂದು ಜಂಬ ಕೊಚ್ಚಿಕೊಂಡೆ.

ಸಂಜೆ ಐದೂವರೆಗೆ ಫೋನ್ ಮಾಡಿ, ಆರಕ್ಕೆ ಸರಿಯಾಗಿ ಮಾತಾಜಿಯ ಮನೆಗೆ ಹೋದೆ.

ಮಾತಾಜಿಯೇ ನನಗೆ ಸ್ವಾಗತ ಬಯಸಿದಳು. ನನಗೆ ಲಿಮನ್ ತರಿಸಿಕೊಟ್ಟು, ನನ್ನ ಮತ್ತು ನಿರ್ಮಲನ ಪೂರ್ವಸಂಬಂಧದ ಕಥೆಯನ್ನು ಕೇಳಿಲಿಚ್ಛಿಸಿದಳು. ನಾನು ಸುಳ್ಳು ಹೇಳಲು ಸ್ವಲ್ಪವೂ ಅನುಮಾನಿಸದೆ ಒಂದು ಕಥೆ ಕಟ್ಟಿ ಹೇಳಿದೆ.

'ನೀವು ಎಷ್ಟು ಹೊತ್ತಿಗೆ ಇಲ್ಲಿಂದ ಹೋಗಬೇಕು'

ಎಂದು ಮಾತಾಜಿ ಕೇಳಿದಳು.

'ಬೆಳಿಗ್ಗೆ'

'ನೂರು ರೂಪಾಯಿ ಕೊಡಬೇಕಾಗುತ್ತದೆ.'

ನಾನು ಮರುಮಾತನಾಡದೆ ಮಾತಾಜಿಯ ಕೈಯಲ್ಲಿ ನೂರು ರೂಪಾಯಿಯಿತ್ತೆ.

ನಾನೂ ನಿರ್ಮಲಾ ಅವಳ ಕೋಣೆ ಸೇರಿದ ಮೇಲೆ ನಿರ್ಮಲಾ ಕಟುವಾಗಿ ನಕ್ಕು

'ಸರ್ದಾರ್‌ಜೀ – ನಾಳೆ ಬೆಳಿಗ್ಗೆಯವರೆಗೆ ನಾನು ನಿಮ್ಮವಳು – ಹೇಳಿ ನಿಮ್ಮ ಸೇವೆ ಹೇಗೆ ಮಾಡಲಿ' ಎಂದಳು.

ನಿರ್ಮಲನ ಮನಸ್ಸು ವಜ್ರಕಾಠಿಣ್ಯ ಪಡೆದಿತ್ತೆಂಬುದಕ್ಕೆ ನನಗೆ ಬೇರೆ ಸಾಕ್ಷ್ಯವೇ ಬೇಕಿರಲಿಲ್ಲ.

'ತಂಗೀ – ನಾನು ಯಾರು ಬಲ್ಲೆಯಾ' ಎಂದು ಕೇಳಿದೆ.

'ಬಲ್ಲೆ – ನೀವು ಸರ್ದಾರ್ – ಈ ರಾತ್ರಿಯ ಪ್ರಿಯತಮ.'

'ಅಲ್ಲ ತಂಗೀ – ಎಲ್ಲ ದಿನಗಳ ಸೋದರ.'

'ಇಲ್ಲ ಸರ್ದಾರ್. ನಾನು ಹೆಣ್ಣು – ಬಾಡಿಗೆಗೆ ದೇಹ ದುಡಿಸುವ ಹೆಣ್ಣು – ಈ ರಾತ್ರಿ ಈ ದೇಹ ನಿಮ್ಮದು.—ನನ್ನಿಂದ ನಿಮಗೆ ಮೋಸವಾಗ ಬಾರದು.'

'ಜಗತ್ತಿನಲ್ಲಿ ಹಣವೊಂದೇ ಮುಖ್ಯವೇ?'

'ಇನ್ನು ಯಾವದಕ್ಕೆ ಬೆಲೆಯಿದೆ ಸರ್ದಾರ್'

'ಸತ್ಯ – ಪ್ರೇಮ – ತ್ಯಾಗ.'

ನಿರ್ಮಲಾ ಗಹಗಹಿಸಿ ನಕ್ಕು

'ಸರ್ದಾರ್, ನೀವು ಯಾವದೋ ಹಳೆಯ ಪುಸ್ತಕದ ಮಾತುಗಳ ನ್ನಾಡುತ್ತಿರುವಿರಿ. ನೀವು ಹೇಳಿದ ಶಬ್ದಗಳು ಶ್ರೀರಾಮನ ಕಾಲದವು – ನಮ್ಮ ಕಾಲಕ್ಕೆ ಅವು ಅನ್ವಯಿಸುವುದಿಲ್ಲ.'

'ಅನ್ವಯಿಸುತ್ತವೆ ನಿರ್ಮಲಾ ಬಹೆನ್. ನಿನ್ನ ಮತ್ತು ನಮ್ಮೆಲ್ಲರ ಜೀವನ ಕಟ್ಟಿದ ಸೋದರ ಸೋದರಿ ಪ್ರಸಾದ್, ಲಲಿತಮ್ಮನವರನ್ನು ಸ್ಮರಿಸಿಕೋ. ಅವರ ಜೀವನ ನಿನಗೆ – ನನಗೆ ಮಾದರಿಯಾಗಿರಬೇಡವೆ? ನೀನು ಮನೆಬಿಟ್ಟು ಹೋದಮೇಲೆ ಅವರು ಎಷ್ಟು ಹುಡುಕಿದರು – ಎಷ್ಟು ಮರುಗಿದರು ಬಲ್ಲೆಯಾ?'

'ಈಗವರು ಎಲ್ಲಿದ್ದಾರೆ! – ಮುಂಬಯಿಯಲ್ಲಿಯೇ ಇದ್ದಾರೆಯೇ?'

'ಇಲ್ಲ – ಬೆಂಗಳೂರಿಗೆ ಹೋಗಿದ್ದಾರೆ. ಪ್ರಸಾದ್ ಈಗ ದೊಡ್ಡ ಪತ್ರಿಕೆಯ ಸಂಪಾದಕರಾಗಿದ್ದಾರೆ.'

'ಭಗವಂತ ಅವರನ್ನು ಚೆನ್ನಾಗಿಡಲಿ.'

'ನಿನ್ನ ಜೀವನ ಹೀಗಾಯಿತೆಂದು ತಿಳಿದರೆ ಅವರಿಗೆ ಬಹಳ ದುಃಖ ವಾಗುತ್ತದೆ.'

'ಸರ್ದಾರ್ – ದಯಮಾಡಿ ನನ್ನ ಚರಿತ್ರೆ ಅವರಿಗೆ ತಿಳಿಸಬೇಡಿ. ನಿರ್ಮಲಾ ಸತ್ತುಹೋದಳೆಂದು ಹೇಳಿಬಿಡಿ.'

'ತಂಗೀ – ನಿನ್ನ ಜೀವನ ಸುಧಾರಿಸಿದ ಹೊರತು ನಮ್ಮಲ್ಲಿ ಯಾರಿಗೂ ಶಾಂತಿಯಿಲ್ಲ – ತೃಪ್ತಿಯಿಲ್ಲ.'

'ಯಾರಿಗೂ ಬೇಡವಾದ ಈ ವಸ್ತುವಿನಲ್ಲೇಕೆ ಇಷ್ಟು ಮರುಕ ತೋರು ವಿರಿ ಸರ್ದಾರ್. ನನ್ನ ಜೀವನ ಮುಗಿದುಹೋಯಿತು. ಮಾತಾಜಿಯ ಆಶ್ರಯದಲ್ಲಿ ನನ್ನ ಬಾಳು ದೂಡಿ ಒಂದುದಿನ ಬೀದಿಯ ನಾಯಿಯಂತೆ ನಾನು ಸಾಯುತ್ತೇನೆ – ಯಾರಾದರೂ ಪುಣ್ಯಾತ್ಮರು ಈ ದೇಹವನ್ನು ಕಸದ ಕುಪ್ಪೆಗೆ ಒಗೆಯುತ್ತಾರೆ.'

‘ಅದೆಂದಿಗೂ ಸಾಧ್ಯವಿಲ್ಲ ನಿರ್ಮಲಾ – ಜೀವನದ ಅಗ್ನಿಪರೀಕ್ಷೆಗೊಳಗಾಗಿರುವ ನಿನ್ನ ದೇಹ, ಆತ್ಮ ಎರಡೂ ಪುಟಗೊಂಡಿದೆ. ಒಂದು ಬಾಳು ಕಳೆಯಿತು – ಎರಡನೆಯ ಬಾಳನ್ನು ನೀನು ಆರಂಭಿಸಬೇಕು. ನಿನ್ನ ನೆರವಿಗೆ ನಾವೆಲ್ಲಾ ಇಲ್ಲವೇ? ನಮ್ಮ ವಿಶ್ವಾಸ, ನಂಬಿಕೆ ಕಡೆಗಾಣಿಸುವುದು ಧರ್ಮವೇ?’

‘ಯಾವ ಧರ್ಮ ನನ್ನನ್ನು ಕಾಪಾಡಿದೆ ಸರ್ದಾರ್?’

‘ಧರ್ಮ ನಿನ್ನನ್ನು ಕಾಪಾಡಲು ಹಾತೊರೆಯುತ್ತಿದೆ. ನೀನು ಧರ್ಮದ ಪ್ರಯತ್ನಕ್ಕೆ ಸಹಕಾರ ನೀಡಬೇಕು.’

ಬೆಳಗು ಹರಿಯುವವರೆಗೆ ಇದೇ ತೆರನ ವಾದವಿವಾದವಾಯಿತು. ನಿರ್ಮಲನ ಮೃತಚೇತನವನ್ನು ನಾನು ಬದುಕಿಸಬೇಕಾಯಿತು.

ಉಷಃಕಿರಣ ಕೋಣೆಯ ಕಿಟಕಿಗಳಲ್ಲಿ ಇಣಿಕಿ ಹಾಕಲಾರಂಭಿಸಿತು. ನಿರ್ಮಲಾ ಎದ್ದು ನಿಂತು

‘ಇನ್ನು ನಾನು ಹೊರಡಬೇಕು...............ನೀವೂ ಹೊರಡಬೇಕು ಸರ್ದಾರ್’ ಎಂದಳು.

ನನ್ನ ಮನಸ್ಸು ಅಲ್ಲಕಲ್ಲೋಲವಾಗಿತ್ತು. ಕೃಪಾಣ ಹಿರಿದು ನಿರ್ಮಲಾ, ಮಾತಾಜಿ, ಆ ಪಾಪಗೃಹದ ಇತರ ನಿವಾಸಿಗಳೆಲ್ಲರನ್ನೂ ಸೀಳಿಬಿಡಬೇಕೆನಿಸಿತು. ನನ್ನ ವಾದದಿಂದ ನಿರ್ಮಲನ ಮನಸ್ಸಿನ ಮೇಲೆ ಯಾವ ಪರಿಣಾಮವೂ ಆದಂತೆ ಕಂಡುಬರಲಿಲ್ಲ. ನಾನು ದುಃಖಿಸುತ್ತ ನಿಂತಿರಲು ನಿರ್ಮಲಾ ನನ್ನ ಎರಡು ಪಾದಗಳಿಗೂ ಮಣಿದು

‘ಅಣ್ಣಾ – ನನ್ನನ್ನು ಕ್ಷಮಿಸಿ. ನನ್ನ ಈ ಹೇಯಬಾಳುವೆಯಲ್ಲಿ ನಿಮ್ಮ ಪರಿಶುದ್ಧ ಪ್ರೇಮವೇ ರಕ್ಷಾಕವಚ’ ಎಂದಳು.

ನಿರಾಶೆಗೊಂಡಿದ್ದ ನನ್ನಲ್ಲಿ ಆಶಾಂಕುರವಾಯಿತು. ನಿರ್ಮಲನ ಕೈಗಳನ್ನು ಹಿಡಿದು

‘ಸೋದರಿ – ನನ್ನ ಮಾತು ಕೇಳುವೆಯಾ’ ಎಂದೆ.

‘ಏನು ಹೇಳಿ.’

‘ನನ್ನ ಜತೆ ಬರುವೆಯಾ?’

'ಮಾತಾಜಿ ಬಂಧನದಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.'

'ನಿನ್ನ ಬಿಡುಗಡೆ ದೊರಕಿಸುವ ಜವಾಬ್ದಾರಿ ನನಗಿರಲಿ.'

'ಹೊಲಸಿನಿಂದ ತುಂಬಿರುವ ಈ ಒಡಕುಪಾತ್ರೆಯಿಂದ ನಿಮಗೇನು ಪ್ರಯೋಜನ.'

'ಪ್ರಯೋಜನದ ಮಾತು ಹಾಗಿರಲಿ. ನನ್ನ ಜತೆ ಬರಲು ಸಿದ್ಧಳಾಗಿರುವೆಯಾ ?'

'ನನಗೆ ಈ ನರಕ ತಪ್ಪಿಸುವಿರಾ ?'

'ಖಂಡಿತವಾಗಿ.'

'ಈ ಕ್ಷಣ ನಿಮ್ಮ ಜತೆ ಬರಲು ನಾನು ಸಿದ್ಧವಾಗಿದ್ದೇನಣ್ಣಾ' ಎಂದಳು.

ನಾನು ಕೂಡಲೆ ಮಾತಾಜಿಯ ಭೆಟ್ಟಿ ಮಾಡಿದೆ. ಸೋಫಾದ ಮೇಲೆ ಮಹಾರಾಣಿಯಂತೆ ಠೀವಿಯಿಂದ ಕುಳಿತು ಆ ಕುಂಟಲಗಿತ್ತಿ ನನ್ನನ್ನು ಉದಾಸೀನದಿಂದ ನೋಡುತ್ತಾ

'ನನ್ನನ್ನು ನೋಡಬಯಸಿದರಂತೆ ಸರ್ದಾರ್‌ಜೀ' ಎಂದಳು.

'ಹೌದು – ಒಂದು ಮುಖ್ಯ ವಿಷಯ ನಿಮ್ಮಲ್ಲಿ ಪ್ರಸ್ತಾಪಿಸಬೇಕಾಗಿತ್ತು.'

'ಹೇಳಿ.'

'ನನ್ನ ಕೆಲಸ ಆಗುಮಾಡಿಕೊಟ್ಟು ನೀವು ನನಗೆ ಉಪಕಾರ ಮಾಡಬೇಕು.'

'ನಾನಿರುವುದೇ ನಿಮ್ಮಂಥವರಿಗೆ ಉಪಕಾರ ಮಾಡುವುದಕ್ಕೆ.'

'ನಿನ್ನೆ ನನ್ನ ಜತೆಯಲ್ಲಿದ್ದ ನಿರ್ಮಲಾ............'

'ಅವಳು ನಿಮ್ಮ ಹಳೆಯ ಸ್ನೇಹಿತಳಂತೆ !'

'ಹೌದು – ಅವಳನ್ನು ಕಂಡರೆ ನನಗೆ ಪಂಚಪ್ರಾಣ.'

'ಬಹಳ ಸಂತೋಷ. ನಿತ್ಯ ಬನ್ನಿ.'

'ನಾನು ನಿಮ್ಮನ್ನು ಕೇಳಬೇಕೆಂದಿರುವುದು ನಿತ್ಯ ಬರುವುದಕ್ಕೆ ಅಪ್ಪಣೆಯನ್ನಲ್ಲ!'

'ಇನ್ನೇನನ್ನು ?'

'ನಿರ್ಮಲನನ್ನು ನನ್ನ ಜತೆ ಕಳಿಸಿಕೊಡಿ.'

'ಎಲ್ಲಿಗೆ?'

'ನನ್ನ ಮನೆಗೆ.'

'ಅವಳನ್ನು ಮದುವೆಯಾಗುವಿರಾ?'

'ಆದರೂ ಆಗಬಹುದು.'

'ನಿರ್ಮಲಾ ನನ್ನ ಮನೆಯ ಬಂಗಾರದ ಗಣಿ – ಅವಳನ್ನು ಕಳುಹಿಸಿ ಕೊಟ್ಟು ನಾನು ಭಿಕ್ಷಕ್ಕೆ ಹೊರಡಲೇ?'

'ನಿರ್ಮಲನಂಥ ಮುಗ್ಧ ಸ್ತ್ರೀಯರ ಜೀವನ ಮಣ್ಣುಗೂಡಿಸುವ ಅಧಿಕಾರ ನಿಮಗಿಲ್ಲ.'

ಮಾತಾಜಿ ತಿರಸ್ಕಾರಪೂರ್ವಕವಾಗಿ ನಕ್ಕು

'ನನಗೆ ಬೇಕಾದ ಅಧಿಕಾರ ನಾನೇ ತೆಗೆದುಕೊಳ್ಳುತ್ತೇನೆ ಸರ್ದಾರ್‌ಜೀ– ಅವನ್ನು ಯಾರಿಂದಲೂ ಭಿಕ್ಷೆ ಬೇಡಿ ಪಡೆದುಕೊಂಡಿಲ್ಲ' ಎಂದಳು.

ಈ ಹೆಂಗಸಿನ ಜತೆ ನಯವಾಗಿ ವರ್ತಿಸದಿದ್ದರೆ ಕೆಲಸ ಕೆಡುವುದೆಂದು ತಿಳಿದು ನಾನು

'ಮಾತಾಜಿ – ದಯೆಯಿಟ್ಟು ನಿರ್ಮಲನನ್ನು ನನಗಾಗಿ ಬಿಟ್ಟುಕೊಡಿ' ಎಂದು ಬೇಡಿದೆ.

'ನಿಮ್ಮ ಪ್ರಾರ್ಥನೆಯಲ್ಲಿ ಸ್ವಲ್ಪವೂ ನ್ಯಾಯವಿಲ್ಲ ಸರ್ದಾರ್‌ಜೀ.'

'ಹೋಗಲಿ – ಅವಳನ್ನು ಕಳಿಸುವುದಕ್ಕೆ ಯಾವ ಪ್ರತಿಫಲ ನಿರೀಕ್ಷಿಸು ವಿರಿ ಅದನ್ನಾದರೂ ತಿಳಿಸಿ.'

'ನಾನು ಕೇಳುವ ಪ್ರತಿಫಲ ಕೊಡುವಿರಾ?'

'ನನ್ನ ಶಕ್ತಿಮೀರದಿದ್ದರೆ ಆಗಬಹುದು.'

'ಬಯಸಿದ ವಸ್ತುವಿನ ಬೆಲೆ ಯಾವಾಗಲೂ ಅಧಿಕ.'

'ಬಯಕೆ ಬಿಡಲಾರೆ!'

'ಹಾಗಾದರೆ ಅದರ ಬೆಲೆ ಕೊಡುವುದೊಂದೇ ಪರಿಹಾರ.'

'ಬೆಲೆಯೆಷ್ಟು?'

'ಐದುಸಾವಿರ ರೂಪಾಯಿ.'

'ಇದರಲ್ಲಿ ನನಗೆ ಯಾವ ಸ್ವಪ್ರಯೋಜನವೂ ಇಲ್ಲ ಮಾತಾಜಿ.'

'ನನ್ನ ಬೆಲೆ ಹೇಳಿದ್ದೇನೆ – ಇದರ ಮೇಲೆ ನಿಮ್ಮಿಷ್ಟ.'

'ಎರಡು ಸಾವಿರಕ್ಕೆ ಒಪ್ಪಿಕೊಳ್ಳಿ.'

'ಸಾಧ್ಯವಿಲ್ಲ. ತಿಂಗಳಿಗೆ ಎರಡು ಸಾವಿರ ಸಂಪಾದಿಸುವ ಯೋಗ್ಯತೆ ನಿರ್ಮಲಸಿಗಿದೆ—ನಿರ್ಮಲನ ಮೇಲೆ ಅಸಾಧ್ಯ ಪ್ರೇಮವಿದೆಯೆಂದು ಹೇಳುತ್ತಿರುವಿರಿ. ಅವಳಿಗಾಗಿ ಇಷ್ಟು ತ್ಯಾಗ ಮಾಡುವುದು ನಿಮಗೆ ಸಾಧ್ಯ ವಿಲ್ಲವೇ ?'

ಮಾತಾಜಿಯ ಜತೆ ಅರ್ಧಗಂಟೆ ಚಡಿದಾಡಿ ಕೊನೆಗೆ ನಾಲ್ಕುಸಾವಿರಕ್ಕೆ ವ್ಯಾಪಾರ ಕುದುರಿಸಿದೆ.

'ನಾನು ನಿರ್ಮಲನನ್ನು ಯಾವಾಗ ಕರೆದೊಯ್ಯಬಹುದು.'

'ಹಣ ಕೊಟ್ಟಕೂಡಲೆ. ನನಗೆ ನಗದು ಹಣ ಬೇಕು – ಚೆಕ್ ನಾನು ಸ್ವೀಕರಿಸುವುದಿಲ್ಲ.'

'ಆಗಬಹುದು. ಅವಳು ಹೊರಡಲು ಸಿದ್ಧವಾಗಲಿ. ನಾನು ಒಂದೆರಡು ಗಂಟೆಗಳಲ್ಲಿ ಬರುತ್ತೇನೆ.'

ಎಂದು ಹೇಳಿ ಅಲ್ಲಿಂದ ಹೊರಟೆ.

ನಾಲ್ಕುಸಾವಿರ ರೂಪಾಯಿಗಳನ್ನು ಒಂದೆರಡು ಗಂಟೆಗಳಲ್ಲಿ ಹೇಗೆ ಸಂಗ್ರಹಿಸುವುದೆಂಬ ಯೋಚನೆ ನನಗೆ ಹಿಡಿಯಿತು. ನನ್ನ ಕೈಯಲ್ಲಿ ನಗದು ಹಣವಿರಲಿಲ್ಲ. ನನ್ನ ಹಣವನ್ನೆಲ್ಲಾ ವ್ಯಾಪಾರಕ್ಕೆ ಸುರಿದಿದ್ದೆ.

ಈ ವಿಷಯ ಮೇಥಾಜಿಯಲ್ಲಿ ಸಮಾಲೋಚನೆ ಮಾಡಿ ಇತ್ಯರ್ಥಕ್ಕೆ ಬರುವುದೊಳ್ಳೆಯದೆಂದು ಒಂದು ಟ್ಯಾಕ್ಸಿ ಮಾಡಿಕೊಂಡು ನೇರವಾಗಿ ಮಲಬಾರ್ ಹಿಲ್ಸ್‌ಗೆ (Malabar Hills) ಹೋದೆ.

ಮೇಥಾಜಿ ಮನೆಯಲ್ಲಿರಲಿಲ್ಲ. ಸೋದರಿ ಸೆಲೀನ್ ನನಗೆ ಸ್ವಾಗತ ಬಯಸಿದರು. ಅವರಿಗೆ ವಿಶದವಾಗಿ ಎಲ್ಲವನ್ನೂ ನಿರೂಪಿಸಿ

'ಈಗೇನು ಮಾಡುವುದು ?' ಎಂದು ಕೇಳಿದೆ.

'ಇಲ್ಲಿಗೆ ಹೇಗೆ ಬಂದಿರಿ ಸರ್ದಾರ್‌ಜೀ' ಎಂದು ಸೆಲೀನ್ ಕೇಳಿದರು.

'ಟ್ಯಾಕ್ಸಿ ಮಾಡಿಕೊಂಡು ಬಂದೆ.'

'ಟ್ಯಾಕ್ಸಿ ಕಳಿಸಿಬಿಡಿ. ನನ್ನ ಕಾರಿದೆ. ಹೋಗೋಣ' ಎಂದರು.

ನಾನು ಟ್ಯಾಕ್ಸಿ ಬಾಡಿಗೆ ಕೊಟ್ಟು ಕಳಿಸಿಬಿಟ್ಟು ಬರುವಲ್ಲಿ ಸೋದರಿ ಸೆಲೀನ್ ಸಿದ್ಧವಾದರು. ಅವರೂ ನಾನೂ ಮಾತಾಜಿ ಮನೆಗೆ ಹೋಗಿ ಮುದುಕಿಯ ಕೈಗೆ ನಾಲ್ಕುಸಾವಿರ ರೂಪಾಯಿ ಸುರಿದು ನಿರ್ಮಲನನ್ನು ಕರೆದುಕೊಂಡು ಬಂದೆವು.

ಮೇಥಾಜಿಯ ಮನೆಗೆ ಬಂದ ಒಂದೆರಡು ದಿವಸಗಳಲ್ಲಿಯೇ ನಿರ್ಮಲಾ ಹಾಸಿಗೆ ಹಿಡಿದು ಮಲಗಿದಳು. ಅವಳ ಸಮಸ್ತ ಉಪಚಾರವನ್ನೂ ಸೆಲೀನ್ ಪೂರೈಸಿದರು. ನಿರ್ಮಲ ಗುಣಮುಖವಾಗಲು, ಎಲ್ಲರೂ ಕುಳಿತು ಆಲೋಚಿಸಿ, ಸ್ವಲ್ಪ ಕಾಲ ಅವಳನ್ನು ನಿಮ್ಮಲ್ಲಿಗೆ ಕಳಿಸಿಕೊಡುವುದೇ ಯೋಗ್ಯವೆಂದು ತೀರ್ಮಾನಿಸಿದೆವು. ಸಕಾಲಕ್ಕೆ ನಿಮ್ಮ ಮಾರುತ್ತರವೂ ಬಂದಿತು. ನಾವೂ ಇಲ್ಲಿಗೆ ಬಂದೆವು."

ಸರ್ದಾರನ ಪ್ರಯತ್ನ, ತ್ಯಾಗ ಲಲಿತಮ್ಮ ಮೂರ್ತಿ ಇಬ್ಬರನ್ನೂ ಅಚ್ಚರಿಗೊಳಿಸಿತು. ಮೂರ್ತಿ ಸರ್ದಾರನ ಕೈ ಹಿಡಿದು

"ಬಂಧು, ನಿನ್ನ ಉಪಕಾರದ ಋಣ ನಾವು ಯಾರೂ ತೀರಿಸಲಾರೆವು"

ಎಂದು ನುಡಿದ.

## ೧೯

ಸರ್ದಾರ್, ನಿರ್ಮಲಾ ಬೆಂಗಳೂರು ತಲುಪಿ ಮೂರು ದಿವಸಗಳಾಯಿತು. ಸರ್ದಾರ್ ಊರಿಗೆ ಪ್ರಯಾಣಮಾಡಲು ಚಡಪಡಿಸತೊಡಗಿದ.

"ನಮ್ಮ ಮಾತು ಮುಗಿದೇ ಇಲ್ಲವಲ್ಲ ಸರ್ದಾರ್. ನೀನು ಈಗಲೇ ಹೇಗೆ ಪ್ರಯಾಣ ಮಾಡುವೆ."

"ನಿಮ್ಮ ಸಂಗ – ಸಹವಾಸ ಬಿಟ್ಟುಹೋಗಲು ನಾನು ಆತುರನಾಗಿಲ್ಲ. ಮುಂಬಯಿಯಲ್ಲಿ ಒಪ್ಪಿಕೊಂಡಿರುವ ಕೆಲಸ ಮುಗಿಸಬೇಕಾದುದು ನನ್ನ ಕರ್ತವ್ಯವಾಗಿದೆ........ನಿರ್ಮಲನ........"

"ನಿರ್ಮಲನ ಯೋಚನೆ ಇಟ್ಟುಕೊಳ್ಳಬೇಡ ಸರ್ದಾರ್. ಅವಳ ಜೀವನ ತಿದ್ದಿ ಅದಕ್ಕೊಂದು ಸ್ವರೂಪ ಕೊಡುವ ಕೆಲಸ ಲಲಿತಾ ಒಪ್ಪಿಕೊಂಡಿದ್ದಾಳೆ. ಅವಳುಂಟು, ಲಲಿತ ಉಂಟು."

"ಭಾಯ್ - ನಾಲ್ಕು ದಿನವಾದರೂ ಪುರಸತ್ತು ಮಾಡಿಕೊಂಡು ಮುಂಬಯಿಗೆ ಬನ್ನಿ."

"ಖಂಡಿತ ಬರುತ್ತೇವೆ."

ಸರ್ದಾರನ ಪ್ರಯಾಣ ನಿಶ್ಚಯವಾದ ಮೇಲೆ ಲಲಿತಮ್ಮ ಅವನಿಗೆ ಔತಣ ಮಾಡಬೇಕೆಂದು ಹಟಹಿಡಿದಳು.

ಔತಣದ ಊಟ ಮುಗಿಸಿಕೊಂಡು ಸರ್ದಾರ್ ಹೊರಡಲು ಸಿದ್ಧನಾಗಿ ಅಳುತ್ತ ನಿಂತಿದ್ದ ನಿರ್ಮಲನ ಬಳಿಗೆ ಬಂದು

"ಅಳಬೇಡ ನಿರ್ಮಲಾ – ನಿನ್ನ ಕಷ್ಟಗಳೆಲ್ಲಾ ಮುಗಿದುಹೋದವು" ಎಂದು ಸಮಾಧಾನಪಡಿಸಿದ.

ಮೂರ್ತಿ ಸರ್ದಾರನ ಜತೆ ಸ್ಟೇಷನ್ನಿಗೆ ಹೋಗಿ ಅವನನ್ನು ಕಳುಹಿಸಿ ಬಂದ.

ಅಂದು ರಾತ್ರಿ ನಿರ್ಮಲಾ ಕಣ್ಣು ಮುಚ್ಚಲಿಲ್ಲ. ಲಲಿತ ಅವಳನ್ನು ತನ್ನ ಪಕ್ಕದಲ್ಲಿ ಮಲಗಿಸಿಕೊಂಡು ದುಃಖ ಮರೆಸಲೆತ್ನಿಸಿದಳು.

"ಸರ್ದಾರ್ ಚೊಕ್ಕ ಬಂಗಾರ - ಈ ಪಾಪಿ ಜಗತ್ತಿನಲ್ಲಿ ಇಂಥವರೂ ಇದ್ದಾರೆಂದು ನಂಬುವುದೇ ಕಷ್ಟವಾಗಿದೆ."

"ಲಲಿತಾ ಬಹೆನ್ - ನನ್ನ ಮನಸ್ಸಿನಲ್ಲಿರುವುದನ್ನು ನಿಮ್ಮಲ್ಲಿ ಹೇಳದಿದ್ದರೆ ನನಗೆ ಶಾಂತಿಯಿಲ್ಲ - ಹೇಳಲೇ ?"

"ಹೇಳು ತಂಗಿ - ನನ್ನಲ್ಲೇಕೆ ಸಂಕೋಚ."

"ನಾನು ನಿಮಗೆ ಹೊರೆಯಾಗುವುದಿಲ್ಲವೇ ?"

"ನನ್ನ ಒಡಹುಟ್ಟಿದ ಒಬ್ಬ ತಂಗಿಯಿದ್ದು, ಅವಳು ತೊಂದರೆಗೆ ಸಿಕ್ಕಿ, ನನ್ನ ಬಳಿಗೆ ಬಂದರೆ ಅವಳು ನನಗೆ ಹೊರೆಯೇ ?"

"ನಾನು ನಿಮ್ಮ ಒಡಹುಟ್ಟಿದವಳಲ್ಲ !"

"ರಕ್ತಬಾಂಧವ್ಯಕ್ಕೂ ಮಿಗಿಲಾದದ್ದು ಅಂತಃಕರಣ ಬಾಂಧವ್ಯ."

"ಅಕ್ಕ, ನಾನು ಮತ್ತೆ ಪಾಪದ ಹಾದಿ ಹಿಡಿಯುವುದಿಲ್ಲ."

"ನನಗೆ ಆ ಧೈರ್ಯವಿದೆ ನಿರ್ಮಲಾ."

"ನಾನು ಮೂಢಳು - ನನಗೆ ವಿವೇಕ ಹೇಳಿ."

ಅಗತ್ಯವಾಗಿ ಆಗಲಿ."

"ಹತ್ತು ಜನಕ್ಕೆ ಹೇಗೆ ನೆರವಾಗಿ ನನ್ನ ಜನ್ಮ ಸಾರ್ಥಕಪಡಿಸಿಕೊಳ್ಳಬೇಕೆಂಬುದನ್ನು ತಿಳಿಸಿ."

"ಇಲ್ಲಿಯೊಂದು 'ಅಭಯಾಶ್ರಮ'ವಿದೆ. ಅದರ ಸೂಪರಿಂಟೆಂಡೆಂಟ್ ಸುಂದರಮ್ಮನವರು ನನ್ನ ಮಾತೃಸ್ವರೂಪರಾಗಿದ್ದಾರೆ. ಅವರ ಪರಿಚಯ ಮಾಡಿಕೊಡುತ್ತೇನೆ. ನಿನಗೆ ಒಪ್ಪಿಗೆಯಾದರೆ ಅಭಯಾಶ್ರಮದಲ್ಲಿ ಕೆಲಸ ಮಾಡಬಹುದು"

ಎಂದು ಅಭಯಾಶ್ರಮದ ಪರಿಚಯ ಮಾಡಿಕೊಟ್ಟು

"ದುರ್ದೈವದಿಂದ ದಾರಿ ಬಿಟ್ಟುಹೋದ ನಿರ್ಭಾಗ್ಯ ಹೆಣ್ಣುಮಕ್ಕಳ ರಕ್ಷಣೆ, ಪೋಷಣೆಗಾಗಿಯೇ ಅಭಯಾಶ್ರಮ ಸ್ಥಾಪಿತವಾಗಿರುವುದು. ನೀನೂ ನೊಂದವಳು – ದುಃಖಿನಿ; ಆಶ್ರಮವಾಸಿಗಳೂ ನೊಂದವರು – ದುಃಖಿಗಳು. ನಿನ್ನ ಸೇವೆಯಿಂದ ಆಶ್ರಮಕ್ಕೆ ಮಹೋಪಕಾರವಾಗುತ್ತದೆ."

ತನ್ನ ಜೀವನಕ್ಕೂ ಒಂದು ಗುರಿಯಿದೆ, ಅದರಿಂದಲೂ ಲೋಕಸೇವೆ ಮಾಡಬಹುದೆಂಬ ನಂಬಿಕೆ ನಿರ್ಮಲನಿಗೆ ಹೊಸ ಜೀವವನ್ನಿತ್ತಿತು.

ನಿರ್ಮಲನ ಮನಸ್ಸಿನಲ್ಲಿ ನಡೆಯುತ್ತಿದ್ದ ತುಮುಲವಿಪ್ಲವವನ್ನು ಗ್ರಹಿಸಿದ ಲಲಿತಮ್ಮ

"ನಿರ್ಮಲಾ, ಸರ್ದಾರ್ ಹೊರಟುಹೋದುದು ನಿನಗೆ ತುಂಬ ವ್ಯಥೆಯನ್ನುಂಟುಮಾಡಿದೆಯಲ್ಲವೇ?"

"ಇಲ್ಲವೆಂದು ಹೇಗೆ ಹೇಳಲಿ. ಅವರು ಮನಸ್ಸು ಮಾಡದಿದ್ದರೆ ನಾನು ಮತ್ತೆ ನಿಮ್ಮ ಮುಖವನ್ನೇ ನೋಡಲಾಗುತ್ತಿರಲಿಲ್ಲ."

"ನಾವೆಲ್ಲಾ ಸೇರಿ ಅವರ ಮದುವೆ ಮಾಡಿಸಬೇಕು ನಿರ್ಮಲಾ – ಎಷ್ಟು ದಿವಸ ಸರ್ದಾರ್ ಈ ಒಂಟಿಬಾಳು ಬಾಳುವುದು."

"ಹೌದು – ಆ ನನ್ನ ದೇವರು ಸುಖವಾಗಿದ್ದರೆ ಸಾಕು."

"ನಿನಗೆ ತಿಳಿದಂತೆ ಒಳ್ಳೆಯ ಹುಡುಗಿಯರು ಯಾರಿದ್ದಾರೆ."

"ಸಮಾಜಬಾಹಿರಳಾದ ನನ್ನನ್ನೇಕೆ ಈ ಪ್ರಶ್ನೆ ಕೇಳುವಿರಿ ಲಲಿತಾ ಬಹೆನ್."

"ಅದಕ್ಕೊಂದು ಉದ್ದೇಶವಿದೆ ತಂಗಿ. ನೀನು ಒಪ್ಪುವ ಹೆಣ್ಣನ್ನೇ ಸರ್ದಾರ್ ಮದುವೆ ಮಾಡಿಕೊಳ್ಳಬೇಕು."

"ನಿಮ್ಮ ಮಾತು ನನಗರ್ಥವಾಗುತ್ತಿಲ್ಲ ಬಹೆನ್."

"ನಿರ್ಮಲಾ – ಸರ್ದಾರ್ ಯಾರನ್ನಾದರೂ ಪ್ರೀತಿಸುತ್ತಿದ್ದಾರೆಯೇ ?"

"ನನಗೆ ಹೇಗೆ ಗೊತ್ತಾಗಬೇಕು. ಆ ವಿಷಯ ಅವರು ನನ್ನಲ್ಲಿ ಮಾತಾಡಿಲ್ಲ. ನಿಮ್ಮ ಊಹೆಗೇನು ಕಾರಣ ?"

"ಸರ್ದಾರರ ಕಣ್ಣುಗಳಲ್ಲಿ ಪ್ರೇಮ ತುಂಬಿ ತುಳುಕುತ್ತಿತ್ತು."

"ಅಕ್ಕಾ..........."

"ಹೌದು ತಂಗಿ."

"ದಯೆಯಿಟ್ಟು ಇಂಥ ಮಾನಾಡಬೇಡಿ. ಕುಲಗೆಟ್ಟ ಈ ನನ್ನ ದೇಹವನ್ನು ನನ್ನ ಸ್ವಾಮಿಗೆ ಬಡಿಸಲಾರೆ."

"ಗಂಗಾಜಲವನ್ನು ತನ್ನ ಉದರದಲ್ಲಿ ಧರಿಸುವ ಮಣ್ಣಿನಮಡಕೆಯೂ ಪವಿತ್ರವಾಗುವುದಲ್ಲವೇ ?"

"ಹೌದು – ಆದರದು ಪವಿತ್ರ ಗಂಗಾಜಲ."

"ಅದಕ್ಕೂ ಪವಿತ್ರವಾದುದು ನಿರ್ಮಲ ಪ್ರೇಮ."

"ಲಲಿತಾ ಬಹೆನ್ – ನೀವೇ ನನ್ನ ತಾಯಿ; ನನ್ನ ದೇವಿ – ನನ್ನ ಸರ್ವಸ್ವ"

ಎಂದು ಉದ್ವಿಗ್ನಳಾಗಿ ನಿರ್ಮಲಾ ಲಲಿತಮ್ಮನನ್ನು ಅಪ್ಪಿದಳು.

ಮಾರನೆಯದಿನ ಲಲಿತಮ್ಮನೇ ನಿರ್ಮಲನನ್ನು 'ಅಭಯಾಶ್ರಮ'ಕ್ಕೆ ಕರೆದುಕೊಂಡು ಹೋಗಿ ಸುಂದರಮ್ಮ. ಆಶ್ರಮನಿವಾಸಿಗಳ ಪರಿಚಯ ಮಾಡಿಕೊಟ್ಟಳು. ಊರ್ಮಿಳಾ, ಕೌಸಲ್ಯಾ, ಸುಮಿತ್ರಾ, ಜ್ವಾಲಾಮಾಲಿನಿ, ವೀರಮ್ಮ ನಿರ್ಮಲನ ಸುತ್ತುಗಟ್ಟಿದರು. ಅವರೊಂದಿಗೆ ಮನಬಿಚ್ಚಿ ಮಾತನಾಡಬೇಕೆಂದು ನಿರ್ಮಲನ ಮಹದಾಸೆ – ಪರಸ್ಪರ ಭಾಷಾಪರಿಚಯ ವಿಲ್ಲದೆ ಉಭಯರೂ ಸಂಜ್ಞೆಗಳಲ್ಲಿ, ಮೂಕಾಭಿನಯದಲ್ಲಿ ತೃಪ್ತರಾಗಬೇಕಾ ಯಿತು.

ಈ ಗೊಂದಲ ಕಂಡು ಸುಂದರಮ್ಮನವರು ನಸುನಗುತ್ತಾ

"ಇನ್ನುಮೇಲೆ ನಿರ್ಮಲಾ ಆಶ್ರಮನಿವಾಸಿಗಳಿಗೆ ಹಿಂದಿ ಹೇಳಿಕೊಡಲಿ. ವೀರಮ್ಮ ನಿರ್ಮಲನಿಗೆ ಕನ್ನಡ ಹೇಳಿಕೊಡಲಿ" ಎಂದರು.

ನಿರ್ಮಲಾ ಅವರ ಸಲಹೆಯನ್ನು ಸಂತೋಷವಾಗಿ ಅಂಗೀಕರಿಸಿದಳು.

ಎರಡು ವಾರಗಳು ಕಳೆಯುವುದರೊಳಗೆ ನಿರ್ಮಲಾ 'ಅಭಯಾಶ್ರಮ'ಕ್ಕೆ ಹಳಬಳಾದಳು. ಭಾಷೆಯ ಅಡ್ಡಿ ಆತಂಕವೂ ಅವಳ, ಆಶ್ರಮ ನಿವಾಸಿಗಳ ಸ್ನೇಹ ಸೌಹಾರ್ದಕ್ಕೆ ಅಡ್ಡಿಬರಲಿಲ್ಲ. ಆಶ್ರಮನಿವಾಸಿಗಳು 'ಉಟ್, ಬೈಟ್, ಆವ್, ಜಾವ್' ಎಂದು ಕೆಲವು ಹಿಂದೀ ಶಬ್ದಗಳನ್ನು ಕಲಿತರು. ನಿರ್ಮಲಾ 'ಬಾ, ಹೋಗು, ಕೂಡು, ನಿಲ್ಲು' ಮೊದಲಾದ ಕೆಲವು ಕನ್ನಡ ಶಬ್ದಗಳನ್ನಾಡತೊಡಗಿದಳು.

ತಾನು ವಿನಾಕಾರಣ ಲಲಿತಮ್ಮನಿಗೆ ಹೊರೆಯಾಗಿದ್ದೇನೆಂಬ ಭಾವನೆ ನಿರ್ಮಲನ ಮನಸ್ಸಿನಿಂದ ಅಳಿಸಿಹೋಗಿರಲಿಲ್ಲ. ಒಂದುದಿನ ತಾನೇ ಮಾತು ತೆಗೆದು

"ಪ್ರತಿನಿತ್ಯ ಎರಡು ಸಲ ಅಭಯಾಶ್ರಮಕ್ಕೆ ಹೋಗಿ ಬರುವುದರಿಂದ ಬಹಳ ಕಾಲ ಅನ್ಯಾಯವಾಗಿ ವೆಚ್ಚವಾಗುತ್ತದೆ ಲಲಿತಾ ಬಹೆನ್" ಎಂದಳು.

"ಅದಕ್ಕೇನು ಮಾಡೆನ್ನುವೆ ನಿರ್ಮಲಾ."

"ನೀವು ಒಪ್ಪುವುದಾದರೆ ನಾನು 'ಅಭಯಾಶ್ರಮ'ದಲ್ಲಿಯೇ ಇರುತ್ತೇನೆ."

"ನನ್ನ ಜತೆಯಲ್ಲಿ ನೀನಿರಬೇಕೆಂದು ನನ್ನ ಆಕಾಂಕ್ಷೆಯಾಗಿತ್ತು."

"ಆಶ್ರಮದ ಕೆಲಸದಲ್ಲಿ ಹೆಚ್ಚು ಭಾಗವಹಿಸಲು ನನಗೆ ಆಸೆಯಾಗುತ್ತಿದೆ."

"ಹಾಗೇ ಆಗಲಿ ನಿರ್ಮಲಾ – ಆಶ್ರಮದ ಅಭಿಮಾನದಿಂದ ನಮ್ಮನ್ನು ಮರೆಯಬೇಡ."

"ಲಲಿತಾ ಬಹೆನ್ – ನಿಮ್ಮನ್ನು ನಾನು ಮರೆಯುವುದೇ ?"

ಮಾರನೆಯ ದಿನವೇ ನಿರ್ಮಲಾ ಆಶ್ರಮಕ್ಕೆ ಹೋಗಿ ನೆಲಸಿ ಆಶ್ರಮವಾಸಿಯಾದಳು. ನಿರ್ಮಲಾ ಆಶ್ರಮಕ್ಕೆ ಬಂದು ನೆಲಸಿದುದು ಸುಂದರಮ್ಮನವರ ಕೆಲಸ ಹಗುರವಾಯಿತು. ಅವಳಿಗೆ ಕ್ರಮೇಣ ಶಿಕ್ಷಣವನ್ನಿತ್ತು, ಆಶ್ರಮದ ಪೂರ್ಣಜವಾಬ್ದಾರಿ ಅವಳಿಗೇ ವಹಿಸಬೇಕೆಂದು ಸುಂದರಮ್ಮನವರು ಮನಸ್ಸು ಮಾಡಿದರು.

## ೨೦

'ಅಖಿಲ ಭಾರತ ಮಹಿಳಾ ಪರಿಷತ್ತಿ'ನ ಅಧಿವೇಶನಕ್ಕೆ ಸಕಲ ಸಿದ್ಧತೆಗಳೂ ಮೈಸೂರಿನಲ್ಲಿ ಭರದಿಂದ ಸಾಗಿತ್ತು. ಸರ್ಕಾರ ಪೂರ್ಣ ನೆರವಿತ್ತು ಆಮಂತ್ರಿತರ ಆತಿಥ್ಯದ ಹೊಣೆ ಹೊತ್ತಿತ್ತು. ಪ್ರತಿನಿಧಿಗಳು ಇಳಿದುಕೊಳ್ಳುವುದಕ್ಕೆ ಮಹಾರಾಣೀ ಹೈಸ್ಕೂಲಿನ ವಿಶಾಲ ಕಟ್ಟಡದಲ್ಲಿ ವ್ಯವಸ್ಥೆಮಾಡಲಾಗಿತ್ತು.

ಪರಿಷತ್ತಿಗೆ ಯಾರು ಯಾರು ಹೋಗಬೇಕೆಂಬುದರ ಬಗ್ಗೆ 'ಅಭಯಾಶ್ರಮ'ದಲ್ಲಿ ದೊಡ್ಡ ಜಿಜ್ಞಾಸೆಯೆದ್ದಿತು. ಸುಂದರಮ್ಮನವರು ಒಬ್ಬರು ಹೋಗಿ ಬಂದರೆ ಸಾಕೆಂದು ಲಲಿತನ ಅಭಿಪ್ರಾಯ; ಲಲಿತಮ್ಮ ಜತೆಯಲ್ಲಿ ಬರದಿದ್ದರೆ ತಾವು ಪರಿಷತ್ತಿಗೆ ಹೋಗುವುದಿಲ್ಲವೆಂದು ಸುಂದರಮ್ಮನವರು ಹಟಹಿಡಿದರು.

"ನಿರ್ಮಲನನ್ನೂ ಜತೆಯಲ್ಲಿ ಕರೆದುಕೊಂಡು ಹೋಗೋಣವೇ ಮ್ಯಾಡಾಂ" ಎಂದು ಲಲಿತ ಕೇಳಿದಳು.

"ಅಗತ್ಯವಾಗಿ ಆಗಬಹುದು. ಆಶ್ರಮ ನೋಡಿಕೊಳ್ಳುವವರು ಯಾರು ?"

"ವೀರಮ್ಮ-ಜ್ವಾಲಾ ನೋಡಿಕೊಳ್ಳುತ್ತಾರೆ. ಆಶ್ರಮದ ಜವಾಬ್ದಾರಿ ಕೆಲವು ದಿನ ಅವರ ಮೇಲೆ ಹೊರಿಸುವುದರಿಂದ, ಅವರಿಗೆ ಸ್ವಾವಲಂಬನವನ್ನೂ ಕಲಿಸಿದಂತಾಗುತ್ತದೆ."

ಹೇಗೂ ಲಲಿತ ಮೈಸೂರಿಗೆ ಹೋಗುವುದರಿಂದ ಅವಳು ವಿಶೇಷ ಪ್ರತಿನಿಧಿಯಾಗಿ ಪರಿಷತ್ತಿನ ಕಾರ್ಯಕಲಾಪಗಳನ್ನು 'ಜನಸಂದೇಶ'ಕ್ಕೆ ವರದಿ ಮಾಡಬೇಕೆಂದು ಮೂರ್ತಿ ಸಲಹೆಯಿತ್ತ.

ತಳಿರು, ತೋರಣ, ಬಾವುಟಗಳಿಂದ ಅಲಂಕೃತವಾಗಿದ್ದ ಕ್ರಾಫರ್ಡ್ ಹಾಲ್‌ನಲ್ಲಿ (Crawford Hall) ಮಹಿಳಾ ಪರಿಷತ್ತು ಆರಂಭವಾಯಿತು. ಪರಿಷತ್ತಿನ ಗೌರವಾರ್ಥವಾಗಿ ಪ್ರಕಟಿಸಿದ್ದ ಗ್ರಂಥವನ್ನು ಸಭೆಗೆ ಒಪ್ಪಿಸುತ್ತಾ ಕಾರ್ಯದರ್ಶಿನಿ ಪಾಂಡೆ, ಅದರಲ್ಲಿನ ಕೆಲವು ಲೇಖನಗಳನ್ನೂ ಪ್ರಶಂಸಿದರು.

ತಮ್ಮ ಲೇಖನದ ಬಗ್ಗೆ ಪಾಂಡೆ ಆಡಿದ ಮೆಚ್ಚುಗೆಯ ಮಾತುಗಳನ್ನು ಕೇಳಿ ಸುಂದರಮ್ಮನವರು ನಸುನಾಚಿದರು.

ಬೆಳಿಗ್ಗೆಯ ಅಧಿವೇಶನ ಮುಗಿಸಿಕೊಂಡು ವಸತಿಗೃಹಕ್ಕೆ ಬಂದ ಮೇಲೆ ಕೇಳಿ ಸುಂದರಮ್ಮನವರು

"ನೋಡಿದೆಯಾ ಲಲಿತಾ, ಹೂವಿನಿಂದ ನಾರು ಹೇಗೆ ಸ್ವರ್ಗಕ್ಕೇರಿತು."

"ಯಾವ ವಿಷಯಕ್ಕೆ ಅನ್ವಯಿಸಿ ಹೇಳುತ್ತಿರುವಿರಿ ಮ್ಯಾಡಾಂ"

"ಗ್ರಂಥಕ್ಕೆ ಲೇಖನ ಬರೆದವಳು ನೀನು - ಪ್ರಶಂಸೆ ಪಡೆದವಳು ನಾನು."

"ನಾನು ಮಾಡಿದ್ದು ಕೇವಲ ಕಾರಕೂನಿಕೆ. ಮ್ಯಾಡಾಂ....ಬೆಳಿಗ್ಗೆಯ ಅಧಿವೇಶನಕ್ಕೆ ಬಂದಿದ್ದ ಅತಿಥಿ ಅಭ್ಯಾಗತರನ್ನು ನೋಡಿದಿರಾ ?"

"ಏಕೆ ?"

"ನಮ್ಮ ಯಜಮಾನರ ಮಾವಂದಿರು ನಾರಾಯಣರಾಯರು, ಪತ್ನಿ ಗಿರಿಜಮ್ಮ ಬಂದಿದ್ದರು - ನೀವು ನೋಡಲಿಲ್ಲವೇ ?"

"ಇಲ್ಲ - ನೀನು ತೋರಿಸಬೇಕಾಗಿತ್ತು. ಅವರು ನಿನ್ನನ್ನು ನೋಡಿದರೇ ?"

"ನೋಡಿರಬಹುದು. ಮ್ಯಾಡಾಂ, ನೀವು ನನಗೊಂದು ಉಪಕಾರ ಮಾಡಬೇಕು."

"ಏನು ಹೇಳು."

"ನಾರಾಯಣರಾಯರ ಮನೆಯೆಲ್ಲಿದೆ ವಿಚಾರಿಸಿ ನನಗೆ ತಿಳಿಸಬೇಕು."

"ಏಕೆ - ಅವರ ಮನೆಗೆ ಹೋಗಿ ಬರುವೆಯಾ ?"

"ಹೂ - ಹೋಗಿ ಗಿರಿಜಮ್ಮನನ್ನು ಕಂಡು ಬರಬೇಕೆಂದಿದ್ದೇನೆ."

"ನೀನಿಂಥ ಅವಿವೇಕಿಯೆಂದು ನಾನು ತಿಳಿದಿರಲಿಲ್ಲ ಲಲಿತಾ."

"ಏಕೆ ಮ್ಯಾಡಾಂ."

"ಮೂವರ ಜೀವನದಲ್ಲಿ ವಿನಾಕಾರಣ ಬಿರುಗಾಳಿಯನ್ನೆಬ್ಬಿಸುವೆಯಾ ?"

"ಹ್ಹಾಗೆಂದರೇನು ?"

"ಗಿರಿಜಮ್ಮ ನಿಮ್ಮ ಯಜಮಾನರನ್ನು ತಿರಸ್ಕರಿಸಿ ಎಂದೋ ಹೊರಟು ಹೋದಳು. ಗಂಡನ ಜತೆ ಬಾಳುವುದಕ್ಕಿಂತ ತಂದೆಯ ಮನೆಯಲ್ಲಿರುವುದೇ ಅವಳಿಗೆ ಸುಖವಾಗಿದೆ. ಒಲ್ಲದ ಹೆಂಡತಿಯ ಜತೆ ಬಾಳುವೆಮಾಡಿ ಪಡ ಬಾರದ ಕಷ್ಟ ಅನುಭವಿಸಿದ ಮೂರ್ತಿರಾಯರು ಈಗ ಸ್ವಲ್ಪ ಶಾಂತಿಯನ್ನು ಕಂಡಿದ್ದಾರೆ. ಅವರ ಜೀವನದಲ್ಲಿ ವಿಪ್ಲವವೆದ್ದರೆ ಅವರು ಈ ದೇಶವನ್ನೇ ತ್ಯಜಿಸಿಬಿಡುತ್ತಾರೆ. ಈ ಗೊಂದಲದಲ್ಲಿ ನಿನ್ನ ಪಾಡೇನಾಗುತ್ತದೆ ಯೋಚಿಸಿರುವೆಯಾ?"

"ಯೋಚಿಸಿದ್ದೇನೆ ವ್ಯಾಡಾಂ. ಗಂಡಹೆಂಡತಿಯ ಮಧ್ಯೆ ನಾನು ಬಂದು ಅವರ ದಾಂಪತ್ಯಜೀವನಕ್ಕೆ ಅಡ್ಡಿಯೊದಗಿಸಿದೆ. ಈ ದುಃಖ ನನ್ನ ಮನಸ್ಸಿನಿಂದ ಮಾಸಿಲ್ಲ. ಇಂದಲ್ಲ ನಾಳೆ ಇವರಿಬ್ಬರನ್ನೂ ಕೂಡಿಸಬೇಕೆಂಬ ಆಕಾಂಕ್ಷೆ ನನ್ನ ಮನಸ್ಸಿನಲ್ಲಿ ಪ್ರಬಲವಾಗಿ ಮೂಡಿದೆ."

"ನೀನು ಕೂಡಿಸುವುದಕ್ಕೆ ಸಿದ್ಧಳಾಗಿರಬಹುದು – ಆದರಿದು ಕೂಡುವ ದಾಂಪತ್ಯವೇ? ಗಿರಿಜಮ್ಮನ ಮನೋಭಾವ, ಅವಳು ಬೆಳೆದಿರುವ ಬಗೆ, ಅವಳ ಮನೆಯ ವಾತಾವರಣಗಳೆಲ್ಲವನ್ನೂ ಗಮನಿಸಿದರೆ ಮೂರ್ತಿ ರಾಯರು, ಅವಳು ಸುಖಸಂಸಾರ ಮಾಡುವುದು ಎಂದಿಗಾದರೂ ಸಾಧ್ಯವೇ?"

"ವ್ಯಾಡಾಂ – ಗಂಡಹೆಂಡತಿ ಪರಸ್ಪರ ಮುಖದರ್ಶನ ಮಾಡಿ ನಾಲ್ಕು ವರ್ಷಗಳಾದವು. ವಿರಸ ಹುಟ್ಟಿದಾಗ ಇಬ್ಬರೂ ಕೋಪದಲ್ಲಿ ಕೆಲವು ಮಾತು ಗಳನ್ನಾಡಿರಬಹುದು. ಈ ದೀರ್ಘಾವಧಿಯ ವಿಯೋಗದಿಂದ ಇಬ್ಬರಿಗೂ ಪಶ್ಚಾತ್ತಾಪವಾಗಿರಲೇ ಬೇಕು. ತಪ್ಪನ್ನು ಒಪ್ಪಿಕೊಂಡು ವಿಶ್ವಾಸ ದೊರಕಿಸ ಬೇಕೆಂಬ ಆಕಾಂಕ್ಷೆಯಿದ್ದರೂ ಅಹಂಕಾರದಿಂದ ಇಬ್ಬರೂ ತೆಪ್ಪಗಿರಬಹುದು. ನಾನೇಕೆ ಶಾಂತಿಸಂಧಾನ ನಡೆಸಿ ಇವರ ಜೀವನ ಬೆಸೆಯಬಾರದು."

"ನಿನ್ನ ಥಿಯರಿ (Theory) ಬಹಳ ಚೆನ್ನಾಗಿದೆ."

"ನನ್ನ ಮನಸ್ಸನ್ನು ಕೊರೆಯುತ್ತಿರುವ ಇನ್ನೊಂದು ವಿಷಯ ಹೇಳಿಬಿಡುತ್ತೇನೆ—ಸ್ತ್ರೀಯರ ಉದ್ಧಾರ, ಸ್ತ್ರೀಪುರುಷರ ಸಮಾನಾಧಿಕಾರದ ಬಗ್ಗೆ ನಾವೆಲ್ಲಾ ಬೇಕಾದಷ್ಟು ಉತ್ಸುಕರಾಗಿದ್ದೇವೆ. ಆ ಬಗ್ಗೆ ಹಗಲೂ ರಾತ್ರಿ ಚಳುವಳಿ ಮಾಡುತ್ತಿದ್ದೇವೆ. ಈ ಪರಿಷತ್ತಿಗೆ ನಾವು ಬಂದಿರುವ

ಉದ್ದೇಶವಾದರೂ ಅದೇ ಆಗಿದೆ. ಸ್ತ್ರೀಸ್ವಾತಂತ್ರ್ಯವಾದಿನಿಯಾದ ನಾನೇ ಒಂದು ಸಂಸಾರ ಮುರಿದುಬೀಳುವುದಕ್ಕೆ ಕಾರಣಗಳಾಗುವುದು ಯಾವ ನ್ಯಾಯ? ನಾವು ಪ್ರತಿಪಾದಿಸುವ ತತ್ತ್ವಗಳನ್ನು ಕೃತಿಯಲ್ಲಿ, ಆಚರಣೆಯಲ್ಲಿ ತರದಿದ್ದರೆ ಆ ತತ್ತ್ವಗಳಿಗೇನು ಬೆಲೆ ಬಂದೀತು?"

"ಸರಿಸರಿ! ಈ ಸಂದರ್ಭದಲ್ಲಿ ನೀನು ವರನನ್ನು ಮರೆತು ಮದುವೆ ಮಾಡುವುದಕ್ಕೆ ಹೊರಟಂತಾಗಿದೆ."

"ವರನನ್ನು ಮರೆತೇ?"

"ಗಿರಿಜಮ್ಮನ ಜತೆಯಲ್ಲಿ ಸಂಸಾರ ಹೂಡುವುದರ ಬಗ್ಗೆ ಮೂರ್ತಿ ರಾಯರ ಅಭಿಪ್ರಾಯವೇನೆಂಬುದನ್ನು ಕೇಳಿ ತಿಳಿದುಕೊಂಡಿರುವೆಯಾ?"

"ನಾನು ಕೇಳಿ ತಿಳಿಯಬೇಕಾದ ಅಗತ್ಯವಿಲ್ಲ. ನನ್ನ ಸ್ವಾಮಿಯ ಮನಸ್ಸನ್ನು ನಾನು ಚೆನ್ನಾಗಿ ಬಲ್ಲೆ. ಕನಸುಮನಸ್ಸಿನಲ್ಲಿಯೂ ಅವರು ಯಾರಿಗೂ ಅನ್ಯಾಯ ಮಾಡುವವರಲ್ಲ. ಒಂದು ಜೀವಿಯ ಉದ್ಧಾರಕ್ಕಾಗಿ ಅವರು ತಮ್ಮನ್ನೇ ಬಲಿದಾನವಾಗಿ ಅರ್ಪಿಸಿಕೊಳ್ಳಬೇಕಾದ ಪ್ರಸಂಗ ಬಂದರೆ ಅದಕ್ಕೆ ಸಿದ್ಧವಾಗಿರುತ್ತಾರೆ."

"ನೀನಿಲ್ಲದೆ ನಿನ್ನ ಸ್ವಾಮಿಯ ಜೀವನರಥ ಮುಂದೆ ಸಾಗಬಲ್ಲುದೇ ಲಲಿತಾ."

"ನಮ್ಮ ಬಾಂಧವ್ಯ ಇಂದು ವ್ಯವಹಾರಲೋಕ ದಾಟಿದೆ ಮ್ಯಾಡಾಂ. ಪರಸ್ಪರ ಹಿತಕ್ಕಾಗಿ ನಾವಿಬ್ಬರೂ ಎಷ್ಟುದೂರ ಬೇಕಾದರೂ ಹೋಗಲು ಸಿದ್ಧರಾಗಿದ್ದೇವೆ. ನಮ್ಮ ನಿಷ್ಕಳಂಕ ಪ್ರೇಮ ಈ ತ್ಯಾಗವನ್ನು ಅಪೇಕ್ಷಿಸುವು ದಾದರೆ ಅದಕ್ಕೆ ನಾವು ಸಿದ್ಧವಾಗಲೇ ಬೇಕು. **ಪ್ರೇಮದ ಕಸೋಟಿ ಭೋಗವಲ್ಲ – ತ್ಯಾಗ.**"

"ಹುಚ್ಚಿ – ಹುಚ್ಚಿ – ನಿನಗೆ ಯಾರು ವಿವೇಕ ಹೇಳಲು ಸಾಧ್ಯ ವಾದಮಾಡಿ ನಿನ್ನನ್ನು ನಾನು ಒಪ್ಪಿಸಲಾರೆ – ಆದರೆ ನೀನು ಯೋಚಿಸು ತ್ತಿರುವ ಮಾರ್ಗದಿಂದ ಯಾರಿಗೂ ಪ್ರಯೋಜನವಿಲ್ಲ – ಸುಖವಿಲ್ಲ."

"ದಯೆಯಿಟ್ಟು ನಾರಾಯಣರಾಯರ ಮನೆಯೆಲ್ಲಿದೆ ವಿಚಾರಮಾಡಿ ಮ್ಯಾಡಾಂ"

ಎಂದು ಲಲಿತಮ್ಮ ಗಂಭೀರವಾಗಿ ನುಡಿದಳು.

ಮೂರು ದಿನ ಸತತವಾಗಿ ಮಹಿಳಾ ಪರಿಷತ್ತಿನ ಕಾರ್ಯಕಲಾಪಗಳು ನಡೆದವು. ಸುಂದರಮ್ಮ, ಲಲಿತ ಇಬ್ಬರೂ ಕೆಲವು ನಿರ್ಣಯಗಳ ಮೇಲೆ ಭಾಷಣ ಮಾಡಿದರು. ಕಾರ್ಯಸಮಿತಿ ಚುನಾವಣೆ ನಡೆದಾಗ ಲಲಿತಮ್ಮನ ಹೆಸರು ಸೂಚಿಸಲ್ಪಟ್ಟಿತು. ಲಲಿತಮ್ಮ ತನ್ನ ಹೆಸರನ್ನು ಹಿಂದಕ್ಕೆ ತೆಗೆದುಕೊಂಡು ಸುಂದರಮ್ಮನವರ ಹೆಸರನ್ನು ಸೂಚಿಸಿದಳು. ಕಾರ್ಯಸಮಿತಿಯಲ್ಲಿ ಒಬ್ಬ ಕನ್ನಡಿತಿಗೆ ಸ್ಥಾನ ಸಿಕ್ಕಿದುದಕ್ಕೆ ಮೈಸೂರು ಪ್ರತಿನಿಧಿಗಳು ಸಂತೋಷಿಸಿದರು.

ಸುಂದರಮ್ಮನವರು ನಾರಾಯಣರಾಯರ ಮನೆಯ ವಿಳಾಸದ ಚೀಟಿಯನ್ನು ಲಲಿತನ ಕೈಯಲ್ಲಿಟ್ಟು

“ಈಗಲೂ ಹೇಳುತ್ತೇನೆ. ಅವರ ಮನೆಗೆ ಹೋಗಬೇಡ ಲಲಿತಾ. ನಿನ್ನ ಪ್ರಯತ್ನದಿಂದ ಲಾಭವಾಗುವುದಿಲ್ಲ – ಅನವಶ್ಯಕ ಗೊಂದಲವೇಳುತ್ತದೆ” ಎಂದರು.

“ನಿಮ್ಮ ಯಾವ ಮಾತನ್ನೂ ನಾನು ಉಲ್ಲಂಘಿಸಿಲ್ಲ ಮ್ಯಾಡಾಂ. ಈ ವಿಷಯದಲ್ಲಿ ಮಾತ್ರ ನಿಮ್ಮ ಮನಸ್ಸಿಗೆ ವಿರುದ್ಧವಾಗಿ ನಡೆಯಲು ನಾನು ನಿರ್ಧರಿಸಿದ್ದೇನೆ.”

“ನಿನ್ನ ಇಷ್ಟ. ಇವತ್ತೇ ನಾರಾಯಣರಾಯರ ಮನೆಗೆ ಹೋಗಿ ಬರುವೆಯಾ ?”

“ಮೂರು ಗಂಟೆಗೆ ಹೋಗುತ್ತೇನೆ.”

“ಒಬ್ಬಳೇ!”

“ನನಗೇನು ಭಯ.”

“ಜತೆಯಲ್ಲಿ ನಾನು ಬೇಕಾದರೆ ಬರುತ್ತೇನೆ.”

“ಬೇಡಿ.”

“ನಿರ್ಮಲನನ್ನು ಕರೆದುಕೊಂಡು ಹೋಗು.”

“ಆಗಬಹುದು ”

ಎಂದು ಲಲಿತಮ್ಮ ಒಪ್ಪಿಕೊಂಡಳು.

ಲಲಿತಮ್ಮ, ನಿರ್ಮಲಾ ಕುಳಿತಿದ್ದ ಷಹಪಸಂದ್ ಗಾಡಿ ಮೂರು

ಗಂಟೆಯ ವೇಳೆಗೆ ಒಂಟಿಕೊಪ್ಪಲು ಬಡಾವಣೆ ಸೇರಿತು. ಗಾಡಿಯವನು ಕೆಳಗಿಳಿದು ಓಡಿಯಾಡಿ, ನಾರಾಯಣರಾಯರ ಮನೆಯ ಪತ್ತೆ ಹಚ್ಚಿದ.

ನಾರಾಯಣರಾಯರ 'ಸ್ವಗೃಹ' ಸಾಕಷ್ಟು ಭವ್ಯವಾಗಿದ್ದುದಲ್ಲದೆ, ಸೊಗಸಾದ ಕೈದೋಟದಿಂದ ಅಲಂಕೃತವಾಗಿತ್ತು. ತೋಟದ ಕೆಲಸ ಮಾಡುತ್ತಿದ್ದ ಮಾಲಿ ಗೇಟು ತೆಗೆದು

"ಯಾರು ಬೇಕ್ರವ್ವಾ" ಎಂದು ಕೇಳಿದ.

"ಗಿರಿಜಮ್ಮನವರನ್ನು ನೋಡಬೇಕಾಗಿತ್ತು" ಎಂದು ಲಲಿತ ಉತ್ತರಿಸಿದಳು.

"ಒಳಗೆ ಬನ್ರವ್ವಾ – ಅಮ್ಮಾವರು ಅವ್ರೆ."

ಎಂದು ಲಲಿತ, ನಿರ್ಮಲನನ್ನು ವೆರಾಂಡದಲ್ಲಿ ಕುಳ್ಳಿರಿಸಿ ಗಿರಿಜಮ್ಮನಿಗೆ ಸುದ್ದಿ ಮುಟ್ಟಿಸಿದ.

ಮಧ್ಯಾಹ್ನ ಮಲಗಿದ್ದು ಅದೇ ಎದ್ದಿದ್ದ ಗಿರಿಜಾ ತಲೆಬಾಚಿಕೊಂಡು, ಮುಖಕ್ಕೆ ತೆಳುವಾಗಿ ಪೌಡರ್ ಲೇಪಿಸಿಕೊಂಡು ವೆರಾಂಡಕ್ಕೆ ಬಂದಳು.

ಲಲಿತಮ್ಮ ಎದ್ದು ನಿಂತು ಕೈಮುಗಿದು

"ನನ್ನ ಪರಿಚಯ ನಿಮಗೆ ಮರೆತುಹೋಗಿರಬೇಕು" ಎಂದಳು.

"ಕ್ಷಮಿಸಬೇಕು – ಮರೆತುಹೋಗಿದೆ."

"ನಾನು ಲಲಿತ."

"ಯಾವ ಲಲಿತ!"

"ಮೂರ್ತಿರಾಯರ ಎರಡನೆಯ..........."

ಗಿರಿಜಮ್ಮನ ಮುಖ ಕೆಂಪೇರಿತು. ಅತಿಥಿಗಳನ್ನು ಕೂಡಿರೆಂದು ಹೇಳಲೂ ಅವಳಿಗೆ ಸಮಾಧಾನವಿರಲಿಲ್ಲ. ಕುರ್ಚಿಯ ಮೇಲೆ ಕುಕ್ಕರಿಸಿ

"ಇಲ್ಲಿಗೇಕೆ ಬಂದೀರಿ ?" ಎಂದಳು.

"ನಿಮ್ಮನ್ನು ನೋಡುವುದಕ್ಕೇ ಬಂದೆ."

"ನನ್ನನ್ನು ನೋಡುವ ಅಗತ್ಯವಿರಲಿಲ್ಲ."

"ಅಗತ್ಯವಿದ್ದುದಕ್ಕೆ ಬಂದಿರುವುದು. ನೀವು ಸ್ವಲ್ಪ ಸಮಾಧಾನದಿಂದ ವರ್ತಿಸಿದರೆ ನಾನು ಮಾತನಾಡಲು ಸಾಧ್ಯವಾಗುತ್ತದೆ."

"ಹೇಳಬೇಕೆಂದಿರುವುದನ್ನು ಬೇಗ ಹೇಳಿ ಮುಗಿಸಿ – ತಂದೆಯವರು ಬರುವ ವೇಳೆಯಾಯಿತು. ಅವರು ನಿಮ್ಮನ್ನು ನೋಡಿದರೆ ರಾದ್ಧಾಂತವಾಗುತ್ತದೆ."

"ಅವರನ್ನೂ ನೋಡಬೇಕೆಂದೇ ನಾನು ಬಂದುದು. ಅವರು ಬರುವವರೆಗೆ ಕಾಯೋಣವೇ ?"

"ಅಗತ್ಯವಿಲ್ಲ."

"ಗಿರಿಜಮ್ಮ – ನಾನೂ ಹೆಂಗಸು – ನೀವೂ ಹೆಂಗಸು."

"ಇರಬಹುದು."

"ಹೆಂಗಸನ್ನು ಹೆಂಗಸು ಅರ್ಥಮಾಡಿಕೊಳ್ಳಬೇಕು."

"ಅರ್ಥಮಾಡಿಕೊಂಡರಲ್ಲಾ !"

"ಹಳೆಯ ಕಥೆ ತೆಗೆದು ಛಿದ್ರಾನ್ವೇಷಣ ಮಾಡುವುದರಿಂದ ಪ್ರಯೋಜನವಿಲ್ಲ. ನಿಮ್ಮ ಭವಿಷ್ಯತ್ತು ಸುಗಮವಾಗುವುದಕ್ಕೇ ನಾನು ಸಹಾಯ ಮಾಡಲು ಬಂದಿದ್ದೇನೆ."

"ನನ್ನ ಭವಿಷ್ಯತ್ತಿನ ಬಗ್ಗೆ ಇದ್ದಕ್ಕಿದ್ದಂತೆ ನಿಮಗೇಕೆ ಆಸಕ್ತಿ ಹುಟ್ಟಿತು.– ಮೂರ್ತಿರಾಯರು ನಿಮ್ಮನ್ನು ಒದ್ದು ಹೊರಗೆ ಹಾಕಿದರೇನು ?"

ಗಿರಿಜೆಯ ಮೌಢ್ಯ ಕಂಡು ಲಲಿತಮ್ಮ ತನ್ನಷ್ಟಕ್ಕೇ ನಕ್ಕು

"ಅವರು ಯಾರನ್ನೂ ಒದ್ದು ಹೊರಗೆ ಹಾಕುವವರಲ್ಲ ಗಿರಿಜಮ್ಮ, ಮೂರ್ತಿರಾಯರ ಹೃದಯವನ್ನರಿಯಲು ಸ್ವಲ್ಪ ಪ್ರಯತ್ನ ಮಾಡಿ."

"ಅವರ ಹೃದಯ ನಿಮ್ಮ ವಶವಾದ ಮೇಲೆ ನನಗೆ ಹೇಗೆ ಅರ್ಥವಾಗಬೇಕು. ಈಗೇನಾಗಬೇಕು – ಬೇಗ ಹೇಳಿ ಮುಗಿಸಿ."

"ನೀವೂ ಮೂರ್ತಿರಾಯರೂ ವೈಮನಸ್ಯ ಬಿಟ್ಟು ಸಂಸಾರ ಮಾಡಿಕೊಂಡಿರಬೇಕೆಂದು ನನ್ನ ಆಸೆ."

"ನೀವು !"

"ನಿಮ್ಮ ಮನೆಯಲ್ಲಿ ಸ್ವಲ್ಪ ಸ್ಥಳ ಕೊಡುವುದಾದರೆ ನಾನು ನಿಮ್ಮಿಬ್ಬರ ಸೇವೆ ಮಾಡಿಕೊಂಡಿರಲು ಸಿದ್ಧಳಾಗಿದ್ದೇನೆ. ಅದೂ ನಿಮಗೆ ಅಪ್ರಿಯವಾದರೆ ಮುಂಬಯಿಗೆ ಹೊರಟುಹೋಗುತ್ತೇನೆ."

"ನಿಮ್ಮ ಸಲಹೆಯಲ್ಲಿ ಏನೋ ಮೋಸವಿದೆ."

"ಸತ್ಯವಾಗಿ ಮೋಸವಿಲ್ಲ. ನಿಮಗೆ ಮೋಸ ಮಾಡಿ ನಾನು ಏನನ್ನೂ ಸಾಧಿಸಬೇಕಾಗಿಲ್ಲ. ನಾನು ಮಧ್ಯೆ ಬಂದುದರಿಂದ ನಿಮ್ಮ ದಾಂಪತ್ಯಜೀವನ ಕೊನೆಗಂಡಿತಲ್ಲಾ ಎಂಬ ಕೊರಗು ನನ್ನನ್ನು ಬಾಧಿಸುತ್ತದೆ. ನನ್ನಿಂದ ಆಗಿರುವ ಅನ್ಯಾಯ ಸರಿಪಡಿಸಬೇಕೆಂಬುದೊಂದೇ ನನ್ನ ಆಶಯ."

"ನನ್ನ ಜೀವನ ಹೇಗಿದ್ದರೆ ನಿಮಗೇನು ?"

"ನಾನು ಹೆಣ್ಣು – ಒಂದು ಹೆಣ್ಣು ಕಂಬನಿಗರೆಯುವುದು ನಮಗೆ ಶ್ರೇಯಸ್ಸಲ್ಲ. ನನ್ನ ಮಾತು ಹಾಗಿರಲಿ – ಅವರಿಗೆ ಶ್ರೇಯಸ್ಸಲ್ಲ."

"ಅವರು – ಅವರು – ಅವರ ತಲೆಗೆಡಸಿ ನಿಮ್ಮ ಸೆರಗಿಗೆ ಹಾಕಿಕೊಂಡು ಸರ್ವನಾಶ ಮಾಡಿಬಿಟ್ಟರಲ್ಲಾ !"

"ಗಿರಿಜಮ್ಮ – ಹೆಣ್ಣು ಹೆಣ್ಣಾಗಿದ್ದರೇ ಲೋಕ ಉಳಿಯುವುದು. ಹೆಣ್ಣು ಗಂಡಿನಂತೆ ಕ್ಷಾತ್ರ ತಾಳಿದರೆ ಮನೆಯೂ ಉಳಿಯುವುದಿಲ್ಲ – ಲೋಕವೂ ಉಳಿಯುವುದಿಲ್ಲ. ಮೂರ್ತಿರಾಯರನ್ನು ನೀವು ಅರ್ಥಮಾಡಿಕೊಳ್ಳಲಿಲ್ಲ. ಅವರ ಸುಖದುಃಖ, ಆಸೆನಿರಾಸೆ, ಸಾಹಿತ್ಯಸೃಷ್ಟಿಯ ಉಮ್ಮಳವನ್ನು ನೀವು ಅರ್ಥಮಾಡಿಕೊಂಡಿದ್ದರೆ ಅವರು ನಿಮ್ಮ ಬಗ್ಗೆ ಜಿಹಾಸೆ ತಾಳುತ್ತಿರಲಿಲ್ಲ."

"ಅವರೇಕೆ ನನ್ನನ್ನು ಅರ್ಥಮಾಡಿಕೊಳ್ಳಲಿಲ್ಲ."

"ನಿಮ್ಮಲ್ಲಿ ನನ್ನಲ್ಲಿ ಅರ್ಥಮಾಡಿಕೊಳ್ಳಬೇಕಾದ ಮಹತ್ತ್ವವೇನೂ ಇಲ್ಲ. ಲೋಕದಲ್ಲಿರುವ ಲಕ್ಷಾಂತರ ಸ್ತ್ರೀಯರಂತೆ ನಾವೂ ಸ್ತ್ರೀಯರು. ಮೂರ್ತಿರಾಯರ ವಿಷಯ ಹಾಗಲ್ಲ – ಲಕ್ಷಕ್ಕೊಬ್ಬರು ಮೂರ್ತಿರಾಯರಂಥ ವ್ಯಕ್ತಿ ಸಿಕ್ಕುವುದು ದುರ್ಲಭ. ನಮ್ಮ ಪೂರ್ವಜನ್ಮ ಸುಕೃತದಿಂದ ಅವರು ನಮ್ಮವರಾದರು. ಅವರ ಜೀವನ, ಕೃತಿಗೆ ನೆರವಾಗುವುದು ನಮ್ಮ ಕರ್ತವ್ಯ-ಪ್ರತಿಬಂಧಕವಾಗುವುದಲ್ಲ."

"ನೀವು ನೆರವಾಗಿ ಯಾವ ಮಹತ್ಕಾರ್ಯ ಸಾಧಿಸಿದಿರಿ"

"ಅದಕ್ಕೆ ಉತ್ತರ ಹೇಳಬೇಕಾದವರು ನಮ್ಮ ಯಜಮಾನರು – ನಾನಲ್ಲ."

"ನಮ್ಮ ಯಜಮಾನರು ಎನ್ನಬೇಡಿ – ನೀವು ಎಷ್ಟಾದರೂ ಅವರ...."

"ಸೂಳೆ."

"ಅಲ್ಲವೇನು ?"

"ಅಲ್ಲ. ನನಗೂ ಅವರಿಗೂ ಶಾಸ್ತ್ರೋಕ್ತವಾಗಿ ವಿವಾಹವಾಗಿದೆ. ವಿವಾಹ ಸಂಸ್ಕಾರ ನಿಮಗೊದಗಿಸುವ ಅಧಿಕಾರವನ್ನೇ ನನಗೂ ಒದಗಿಸಿದೆ. ನಿಮಗೆ ಅವರು ಹೇಗೆ ಪತಿಯೋ ಹಾಗೇ ನನಗೂ ಪತಿಯಾಗಿದ್ದಾರೆ. ನಾನು ಮೈತ್ರಿ ಭಾವನೆಯಿಂದ ಇಲ್ಲಿಗೆ ಬಂದೆನಲ್ಲದೆ ನಿಮ್ಮೊಂದಿಗೆ ಜಗಳ ಕಾಯುವುದಕ್ಕಲ್ಲ – ನಿಮ್ಮಿಂದ ಕೆಟ್ಟ ಮಾತು ಕೇಳುವುದಕ್ಕಲ್ಲ."

"ನಿಮ್ಮ ಸಲಹೆಯನ್ನು ಅವರು ಒಪ್ಪಿದ್ದಾರೆಯೋ ?"

"ಅವರನ್ನು ಒಪ್ಪಿಸುವ ಭಾರ ನನಗಿರಲಿ."

ಗಿರಿಜಮ್ಮ ಉಗ್ರಾವತಾರ ತಾಳಿದಳು. ಕೋಪದ ಭರದಲ್ಲಿ ಅವಳ ಆಪಾದಮಸ್ತಕ ಬೆವರಿ, ಮೈ ಕಂಪಿಸಲಾರಂಭಿಸಿತು.

"ಅವರನ್ನು ನೀವು ಒಪ್ಪಿಸುವುದು! ಗಂಡಹೆಂಡತಿಯನ್ನು ಕೂಡಿಸುವವಳು ಒಬ್ಬ ಕುಲಟೆ! ನನಗೆ ನಿಮ್ಮ ಸಹಾಯವೂ ಬೇಕಿಲ್ಲ – ಅವರ ಸಹವಾಸವೂ ಬೇಕಿಲ್ಲ.—ನನಗೆ ಪುನಃ ಮುಖ ತೋರಿಸಬೇಡಿ. ಇಂಥ ಸಂಧಾನಗಳಿಗೆ ನಾನು ಮನಸೋಲುವುದಿಲ್ಲವೆಂದು ಅವರಿಗೂ ತಿಳಿಸಿ. ನೀವು ತಿಂದು ಬಿಸುಡಿದ ಸಿಪ್ಪೆಯನ್ನು 'ಮಹಾಪ್ರಸಾದ'ವೆಂದು ಸ್ವೀಕರಿಸಲು ನಾನು ಸಿದ್ಧಳಾಗಿಲ್ಲ. ನೀವು ಬಂದ ಕೆಲಸವಾಯಿತಲ್ಲ – ಇಲ್ಲಿಂದ ಹೊರಡಿ"

ಎಂದು ಹುಚ್ಚಳಂತೆ ಅರಚಿದಳು.

ಲಲಿತ ಮರುಮಾತನಾಡಲಿಲ್ಲ. ನಿರ್ಮಲನನ್ನು ಕರೆದುಕೊಂಡು ಗಾಡಿ ಹತ್ತಿದಳು.

ಮ್ಲಾನವದನಳಾಗಿ ಕುಳಿತಿದ್ದ ಲಲಿತಮ್ಮನ ಬಳಿ ಸರಿದು ನಿರ್ಮಲಾ ಮೃದುವಾಗಿ

"ಅವರೇಕೆ ಹಾಗೆ ಅರಚಿಕೊಂಡರಕ್ಕಾ – ನಿಮ್ಮನ್ನು ಬಯ್ದರೇ ?— ಅವರು ಆಡಿದ ಒಂದು ಮಾತೂ ನನಗರ್ಥವಾಗಲಿಲ್ಲ – ಆದರೆ ಮಾತು ತುಟಿ ಮೀರಿತ್ತೆಂದು ಭಾಸವಾಯಿತು – ಅವರು ಯಾರಕ್ಕಾ ?"

"ಅವರು ನನ್ನ ಯಜಮಾನರ ಮೊದಲನೆಯ ಹೆಂಡತಿ ನಿರ್ಮಲಾ."

"ಮೊದಲನೆಯ ಹೆಂಡತಿಯೋ ?! ಈಕೆ ಹೆಂಗಸಲ್ಲ – ಮಹಾಮಾರಿ."

"ಹಾಗನ್ನ ಬಾರದು ನಿರ್ಮಲಾ – ಅದೂ ನೊಂದ ಜೀವ."

ನಿರ್ಮಲನ ಎದುರು ಮನಃಸ್ಥೈರ್ಯ ಕಾಪಾಡಿಕೊಂಡ ಲಲಿತ, ಸುಂದರಮ್ಮನವರೆದುರು ಕುಸಿದುಬಿದ್ದಳು. ಸುಂದರಮ್ಮ ಲಲಿತನನ್ನು ಎತ್ತಿ ಹಿಡಿದು, ಆದರಿಸಿ, ಅವಳ ತಲೆಯನ್ನು ತಮ್ಮ ತೊಡೆಯ ಮೇಲಿಟ್ಟು ಕೊಂಡು ನೇವರಿಸುತ್ತಾ

"ಅಲ್ಲಿಗೆ ಹೋಗಬೇಡವೆಂದು ನಾನು ಹೇಳಿದೆ – ನೀನು ಹಟ ಮಾಡಿದೆ– ನನ್ನ ಮಾತು ಕೇಳಲಿಲ್ಲ."

"ಗಿರಿಜಮ್ಮನ ಒಂದೊಂದು ಮಾತೂ ಶೂಲದಂತಿತ್ತು ಮ್ಯಾಡಾಂ."

"ಇತರರ ಮನಸ್ಸ ನೋಯಿಸಿ, ಅವರ ಜೀವನಕ್ಕೆ ಕೊಳ್ಳಿಯಿಡುವ ಕಲೆಯನ್ನು ಕೆಲವರು ಸಾಧಿಸಿಕೊಂಡಿರುತ್ತಾರೆ – ಅಂಥವರಲ್ಲಿ ಗಿರಿಜಮ್ಮನೂ ಒಬ್ಬಳು.—ಗಿರಿಜಮ್ಮನ ಮನೆಯಲ್ಲಿ ಏನಾಯಿತು ಲಲಿತಾ ?"

ಲಲಿತ ಎಲ್ಲವನ್ನೂ ಸಾದ್ಯಂತವಾಗಿ ನಿರೂಪಿಸಿ

"ಮ್ಯಾಡಾಂ – ನಾನು ಈಗಲೇ ಬೆಂಗಳೂರಿಗೆ ಹೊರಡಬೇಕು. ನನ್ನ ಸ್ವಾಮಿಯ ಮುಖ ನೋಡಿದ ಹೊರತೂ ನನ್ನ ಮನಸ್ಸಿಗೆ ಸಮಾಧಾನವಿಲ್ಲ."

"ನಾನು ಜತೆಯಲ್ಲಿ ಬರುವ ಹಾಗಿಲ್ಲವಲ್ಲಾ ಲಲಿತ. ನಾಳೆ ಕಾರ್ಯ ಸಮಿತಿಯ ಸಭೆಯಿದೆಯಲ್ಲ."

"ನೀನು ಸಭೆ ಮುಗಿಸಿಕೊಂಡು ನಾಳೆ ಬನ್ನಿ – ನಾನೂ ನಿರ್ಮಲಾ ಬಸ್ಸಿನಲ್ಲಿ ಹೊರಟುಬಿಡುತ್ತೇವೆ."

ಲಲಿತ ಪ್ರಯಾಣಮಾಡುವುದಕ್ಕೆ ಸುಂದರಮ್ಮನವರು ಬೇಡವೆನ್ನಲಿಲ್ಲ.

ಸರ್ಕಾರದ ಬಸ್ ಬೆಂಗಳೂರು ಸೇರುವ ವೇಳೆಗೆ ರಾತ್ರಿ ಒಂಭತ್ತೂವರೆ ಗಂಟೆಯಾಗಿತ್ತು. ನಿರ್ಮಲನನ್ನು ಜತೆಯಲ್ಲಿಯೇ ಇಟ್ಟುಕೊಂಡಿದ್ದು ಬೆಳಿಗ್ಗೆ 'ಅಭಯಾಶ್ರಮ'ಕ್ಕೆ ಕಳಿಸಿಕೊಡುವುದೆಂದು ಲಲಿತ ನಿಶ್ಚಯಿಸಿದಳು.

ಪೂರ್ವಸೂಚನೆ ಕೊಡದೆ ಏಕಾಏಕಿ ಬಂದಿಳಿದ ಲಲಿತನನ್ನು ನೋಡಿ ಮೂರ್ತಿಗೆ ಆಶ್ಚರ್ಯವೇ ಆಯಿತು.

"ಇದೇನು ಲಲಿತಾ – ಸುಂದರಮ್ಮನವರೆಲ್ಲಿ ?" ಎಂದು ಕೇಳಿದ.

"ಅವರು ನಾಳೆ ಕಾರ್ಯಸಮಿತಿ ಸಭೆ ಮುಗಿಸಿಕೊಂಡು ಬರುತ್ತಾರೆ."

"ಪರಿಷತ್ತು ಯಶಸ್ವಿಯಾಯಿತೇ ?"

"ಆಯಿತು."

"ನೀನು ಕಳಿಸಿದ ವರದಿ, ಲೇಖನಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾದವು ಲಲಿತಾ. ಗೋಪಾಲಶೆಟ್ಟರು ಅವುಗಳನ್ನು ಹಾಡಿ ಹೊಗಳಿದರು."

ಮೂರ್ತಿಯಾಡಿದ ಒಂದು ಮಾತೂ ಲಲಿತಮ್ಮನ ಕಿವಿಯ ಮೇಲೇ ಬೀಳಲಿಲ್ಲ.

"ನಿನ್ನ ಮನಸ್ಸಿಗೆ ಬೇಸರವಾದಂತಿದೆಯಲ್ಲ ಲಲಿತಾ."

ಲಲಿತಮ್ಮನ ದುಃಖದ ಕಟ್ಟೆಯೊಡೆದು ಬಂತು. ಮೂರ್ತಿಯ ಕುತ್ತಿಗೆಯಪ್ಪಿ

"ನನ್ನನ್ನು ಕ್ಷಮಿಸಿ ಸ್ವಾಮಿ – ನಾನು ಮಹಾಪರಾಧಮಾಡಿದ್ದೇನೆ."

"ಏನಾಯಿತು ಲಲಿತ – ಹೇಳು, ಸುಮ್ಮನೆ ದುಃಖಪಡಬೇಡ."

"ಕ್ಷಮಿಸಿದ್ದೇನೆಂದು ಹೇಳಿ."

"ಹುಚ್ಚಿ! ಕ್ಷಮಿಸಿದ್ದೇನೆ ಹೇಳು – ನೂರು ಬಾರಿ ಕ್ಷಮಿಸಿದ್ದೇನೆ."

"ಈಗ ಬೇಡಿ. ನಿರ್ಮಲಾ ಕಾದಿದ್ದಾಳೆ. ಊಟ ಮುಗಿಸಿಬಿಡೋಣ."

ಊಟ ಮುಗಿದ ಮೇಲೆ, ಗೌರಮ್ಮನವರು ಅಡಿಗೆಯ ಮನೆಯ ಕೆಲಸ ಮುಗಿಸಿಕೊಂಡು ಹೊರಬಂದರು. ಹಜಾರದಲ್ಲಿ ಅವರ ಬಳಿಯಲ್ಲಿಯೇ ನಿರ್ಮಲನಿಗೆ ಹಾಸಿಗೆ ಹಾಸಿಕೊಡಲಾಯಿತು.

ಲಲಿತ ಶಯ್ಯಾಗೃಹ ಸೇರಿದ ಮೇಲೆ ಮೈಸೂರಿನಲ್ಲಿ ನಡೆದ ಪ್ರಕರಣವನ್ನು ಕೂಲಂಕಷವಾಗಿ ಮೂರ್ತಿಗೆ ವರದಿಮಾಡಿದಳು.

ಮೂರ್ತಿಯ ಮುಖ ಗಂಭೀರವಾಯಿತು. ಅತೀವ ದುಃಖ ಅವನ ಮುಖದ ಮೇಲೆ ಗೆರೆಗಳನ್ನು ಮೂಡಿಸಿದವು.

"ನಿನ್ನನ್ನು ನಾನು ಕ್ಷಮಿಸಬಾರದಾಗಿತ್ತು ಲಲಿತಾ" ಎಂದ.

"ಏಕೆ ಸ್ವಾಮಿ."

"ಗಿರಿಜೆಯನ್ನು ನೋಡಲು ಹೋಗುವ ವಿಷಯ ನೀನು ನನಗೆ ತಿಳಿಸಿದ್ದೆಯಾ?"

"ಇಲ್ಲ."

"ನಿನ್ನ ಸಂಧಾನ ಸಫಲವಾಗಿದ್ದರೂ ನಾನು ಅವಳ ಜತೆ ಬಾಳ್ವೆಮಾಡುತ್ತಿದ್ದೆನೆಂದು ಭಾವಿಸಿರುವೆಯಾ?"

"ನಾನು ನಿಮ್ಮ ಕಾಲುಗಳ ಮೇಲೆಬಿದ್ದು ಬೇಡಿಕೊಳ್ಳುತ್ತಿದ್ದೆ."

"ನಿನಗೂ ನನ್ನ ಮೇಲೆ ಕನಿಕರವಿಲ್ಲವೇ?"

"ಏಕೆ ಸ್ವಾಮಿ – ಹಾಗನ್ನುವಿರಿ?"

"ಅವಳ ಜತೆ ಬಾಳ್ವೆಮಾಡಿ ನಾನು ಅನುಭವಿಸಿದುದನ್ನು ಮರೆತಿರುವೆಯಾ?"

"ಮರೆತಿಲ್ಲ. ಒಂದು ಹೆಣ್ಣಿನ ಹಿತಕ್ಕಾಗಿ ನಾನು ನಿಮ್ಮ ಸುಖ ಸಂತೋಷವನ್ನೂ ಬಲಿಗೊಡಲು ಸಿದ್ಧಳಾಗಿದ್ದೆ."

"ಇದು ಕುಬ್ಜ ಜಗತ್ತು – ನೀನು ಮಹೋನ್ನತಿಯಿಂದ ತ್ರಿವಿಕ್ರಮಾವತಾರ ತಳೆದು ನಿಂತರೆ 'ಇದೊಂದು ಪಿಶಾಚಿ' ಎಂದು ಜನ ಅಪಹಾಸ್ಯ ಮಾಡುತ್ತಾರೆ. ಲಲಿತಾ – ನೀನು ಎಷ್ಟು ಕಠಿಣಚಿತ್ತಳೇ? ನನ್ನ ಕೈಬಿಡುವುದು ನಿನಗೆ ಬಹು ಸುಲಭವೆನಿಸಿತಲ್ಲವೇ?"

"ಇಲ್ಲ ಸ್ವಾಮಿ – ಹಾಗನ್ನಬೇಡಿ – ಆ ದೃಷ್ಟಿಯಿಂದ ನೋಡಬೇಡಿ. ನಾನು ಎಷ್ಟು ಜನ್ಮ ಹೊತ್ತು ಬಂದರೂ ನೀವೇ ನನ್ನ ಪತಿ - ಮತಿ - ಸರ್ವಸ್ವ. ಸತಿಪತಿಜೀವನ ಹಾಲು ಸಕ್ಕರೆಯಂತೆ. ಗಿರಿಜಮ್ಮನ ಮನಸ್ಸು ನಿಮ್ಮ ಮನಸ್ಸು ಹಾಲು ಸಕ್ಕರೆಯಂತೆ ಬೆರೆಯಬೇಕೆಂದು ನಾನು ಆಶಿಸಿದೆ."

"ಅದು ಒಡೆದ ಹಾಲು ಲಲಿತಾ - ಮತ್ತೆ ಸರಿಯಾಗುವುದಿಲ್ಲ. ಅವಳಲ್ಲಿ ಮನುಷ್ಯತ್ವದ ಒಂದು ಕಣವಿದ್ದಿದ್ದರೆ - ಅವಳಿಗೂ ಹೃದಯವಿದ್ದಿದ್ದರೆ ನಾನು ಅವಳನ್ನು ದೂರಮಾಡುತ್ತಿರಲಿಲ್ಲ - ಅವಳ ಸಂಪರ್ಕ ಬೇಡವೆಂದು ಮುಂಬಯಿಗೆ ಓಡಿಹೋಗುತ್ತಿರಲಿಲ್ಲ. ಗಿರಿಜಾ ಅಲ್ಪತನ, ಅಹಂಕಾರಗಳಿಂದ ಮಾಡಿದ ಮೊಟ್ಟೆ. ಅವಳ ಜಗತ್ತು, ನನ್ನ ಜಗತ್ತು ಒಂದೇ ಎಡೆಯಲಿಲ್ಲ ಲಲಿತಾ. ದಯೆಯಿಟ್ಟು ಪುನಃ ಇಂಥಾ ವ್ಯವಹಾರಕ್ಕೆ ಕೈಹಾಕಬೇಡ."

"ತಪ್ಪಾಯಿತು - ಕ್ಷಮಿಸಿ - ಕ್ಷಮಿಸಿ ಸ್ವಾಮಿ"

ಎಂದು ಆರ್ತಳಾಗಿ ಲಲಿತಮ್ಮ ಪ್ರಾರ್ಥಿಸಿದಳು.

## ೨೧

ಆರುತಿಂಗಳ ಅವಧಿಯಲ್ಲಿ ನಿರ್ಮಲಾ 'ಅಭಯಾಶ್ರಮ'ಕ್ಕೆ ಹೊಂದಿಕೊಂಡುದಲ್ಲದೆ, ಅದರ ಉಪಯುಕ್ತ ಸದಸ್ಯೆಯಾದಳು. ಭಾಷಾಬಂಧನವೂ ಕ್ರಮಕ್ರಮೇಣ ಕಳಚಿ, ಅವಳು ಕನ್ನಡದಲ್ಲಿ ಸಾಮಾನ್ಯ ಸಂಭಾಷಣೆಯನ್ನು ಮಾಡಲು ಸಮರ್ಥಳಾದಳು.

ಸುಂದರಮ್ಮನವರು ಚಂದಾ ವಸೂಲಿಗೆ ಹೋಗುತ್ತಿದ್ದಾಗ ತಪ್ಪದೆ ನಿರ್ಮಲನನ್ನು ಜತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಗಾಂಧೀ ನಗರ, ಕುಮಾರಾಪಾರ್ಕ್ ವಿಸ್ತರಣೆಗಳಲ್ಲಿದ್ದ ಗುಜರಾತಿ ಶ್ರೀಮಂತರ ನೆರವು ದೊರಕಿಸಲು ನಿರ್ಮಲನ ಸಹಾಯ ಅವರಿಗೆ ಅತ್ಯಗತ್ಯವಾಗಿತ್ತು.

ಗುಜರಾತಿಗಳ ಮನೆಗೆ ಚಂದಾ ವಸೂಲಿಗೆ ಹೋಗುತ್ತಿದ್ದಾಗ ನಿರ್ಮಲನಿಗೆ ಕಷ್ಟಕ್ಕಿಟ್ಟುಕೊಳ್ಳುತ್ತಿತ್ತು. ಸೊಗಸಾಗಿ ಗುಜರಾತಿ ಮಾತನಾಡುತ್ತಿದ್ದ ನಿರ್ಮಲಾ ಗುಜರಾತಿಯೇ ಎನ್ನುವುದರ ಬಗ್ಗೆ ಅವರಿಗೆ ಸಂದೇಹವಿರಲಿಲ್ಲ. ಸಹಜ ವಾತ್ಸಲ್ಯದಿಂದ ಒಂದು ದಿನ ಝವೇರಿ ಹೆಂಡತಿ ಪೂತಲಿಬಾಯ್ ನಿರ್ಮಲನ ಪೂರ್ವಕಥೆ ತಿಳಿಯಲಿಚ್ಛಿಸಿದಳು. ಸಮಯಕ್ಕೆ ನಾಲ್ಕು ಮಾತು ಜೋಡಿಸಿ ಹೇಳಿ ಪೂತಲಿಬಾಯಿಯ ಕುತೂಹಲ ಉಪಶಮನ ಮಾಡುವುದಕ್ಕೆ ನಿರ್ಮಲನಿಗೆ ಸಾಕುಸಾಕಾಯಿತು.

"ಇನ್ನುಮೇಲೆ ಚಂದಾವಸೂಲಿಗೆ ನಾನು ಗುಜರಾತಿಗಳ ಮನೆಗಳಿಗೆ ಹೋಗುವುದಿಲ್ಲ ಮ್ಯಾಡಾಂ"

ಎಂದು ನಿರ್ಮಲಾ ಸುಂದರಮ್ಮನವರಿಗೆ ಹೇಳಿದಳು.

"ನೀನು ಹೋಗುವುದರಿಂದ ಆಶ್ರಮಕ್ಕೆ ನಾಲ್ಕುಕಾಸು ಬರುತ್ತಿದೆ ನಿರ್ಮಲಾ – ನೀನು ಅಸಹಕಾರ ಹೂಡಿದರೆ ಆಶ್ರಮಕ್ಕೆ ತುಂಬಾ ತೊಂದರೆಯಾಗುತ್ತದೆ."

"ನನ್ನ ಚರಿತ್ರೆ ಹೊರಬೀಳುವುದಲ್ಲಾ ಎಂದು ಭಯವಾಗುತ್ತದೆ."

"ನೋಡು ನಿರ್ಮಲಾ, ಯಾವ ಸುಳ್ಳಿನ ಅಸ್ತಿಭಾರದ ಮೇಲೂ ನಾವು ಆಶ್ರಮ ಕಟ್ಟಿಲ್ಲ. ಆಶ್ರಮವಾಸಿಗಳೆಲ್ಲರ ಚರಿತ್ರೆ ಲೋಕವಿದಿತವಾಗಿದೆ.

ಅವರನ್ನು ಖಂಡಿಸಲು ಮುಂದೆ ಬರುವವರು ಅವರ ಚರಿತ್ರೆ, ಅದರ ಹಿನ್ನೆಲೆಯನ್ನೂ ತಿಳಿದಿರುವುದು ಮೇಲು."

ಸುಂದರಮ್ಮನವರ ಮನಸ್ಸಿಗೆ ಬೇಸರವಾಗುವುದೆಂದು ನಿರ್ಮಲಾ ಗುಜರಾತಿಗಳ ಮನೆಗಳಿಗೆ ಹೋಗಿ ಬರುತ್ತಿದ್ದಳು.

ಒಂದು ದಿನ ಝೂವೇರಿ ಮನೆಯ ಮಹಡಿಯ ಮೇಲೆ ಝೂವೇರಿ ಜತೆ ಚಹಾ ಸೇವಿಸುತ್ತ ಕುಳಿತಿದ್ದ ವಶಿಷ್ಠ ನಿರ್ಮಲಾ ಬಂದು ಹೋದುದನ್ನು ಕಂಡ.

ಝೂವೇರಿ ಬೆಂಗಳೂರಿಗೆ ನಿರ್ಗತಿಕನಾಗಿ 'ಅರೋರಾ ಫಿಲ್ಮ್ ಕಂಪೆನಿ'ಯ (Aurora film company) ಪ್ರತಿನಿಧಿಯಾಗಿ ಬಂದ. ಮೂರು ನಾಲ್ಕು ವರ್ಷಗಳಲ್ಲಿ ಝೂವೇರಿ ಬೆಂಗಳೂರಿನಲ್ಲಿ ತಳವೂರಿ ಕುಳಿತು ತನ್ನದೇ ಫಿಲ್ಮ್ ಡಿಸ್ಟ್ರಿಬ್ಯೂಷನ್ ಕಛೇರಿ (Film distribution office) ಆರಂಭಿಸಿ ದಕ್ಷವ್ಯಾಪಾರಿಯೆಂದು ಹೆಸರು ಪಡೆದ.

ಝೂವೇರಿಯ ಮನೋವೃತ್ತಿ ಚಿತ್ರವಿಚಿತ್ರವಾಗಿತ್ತು. ವ್ಯಾಪಾರದಲ್ಲಿ ಅವನು ಯಾರ ಮನೆ, ಯಾವ ಹೊತ್ತಿನಲ್ಲಿ ಹಾಳಾಗುವುದಕ್ಕೂ ಹೇಸುತ್ತಿರಲಿಲ್ಲ. ಅವನನ್ನು ನಂಬಿದ ಸಣ್ಣಪುಟ್ಟ ಚಿತ್ರ ನಿರ್ಮಾಪಕರು (Producers) ದಿವಾಳಿ ತೆಗೆದಿದ್ದರು. ತನಗೆ ಬರಬೇಕಾದ ಹಣದಲ್ಲಿ ಚಿಕ್ಕಾಸು ಕಡಿಮೆ ಯಾದರೂ ಝೂವೇರಿ ಸುಮ್ಮನಿರುತ್ತಿರಲಿಲ್ಲ. ತಾನು ಕೊಡುವಾಗಲೂ ಅಷ್ಟೇ ಕ್ರಮ – ಅಷ್ಟೇ ಶಿಸ್ತು. ಹೇಳಿದ ತಾರೀಖಿನ ದಿನ ಹೇಳಿದ ಗಂಟೆಗೇ ಹಣ ಕೊಡಬೇಕು – ಹಣ ತೆಗೆದುಕೊಳ್ಳಬೇಕು. ವ್ಯವಹಾರದ ವಿಷಯ ದಲ್ಲಿ ಝೂವೇರಿ ಖಂಡಿತವಾದಿಯಾದರೂ ಔದಾರ್ಯದಲ್ಲಿ ಖಂಡಿತವಾದಿ ಯಾಗಿರಲಿಲ್ಲ. ಅನಾಥಾಶ್ರಮಗಳು, ಅಶಕ್ತಪೋಷಕ ಸಭೆಗಳು, ಗೋರಕ್ಷಣ ಸಂಸ್ಥೆಗಳಿಗೆ ಅವನು ಧಾರಾಳವಾಗಿ ಹಣ ಸಹಾಯಮಾಡುತ್ತಿದ್ದ. ಕಾಂಗ್ರೆಸ್ಸಿಗಂತೂ ಅವನು ಕೊಡುಗೈಯಿಂದ ಹಣ ಸಹಾಯ ಮಾಡಿದ್ದ.

ಝೂವೇರಿ ವ್ಯಾಪಾರ ಬಲಿತಮೇಲೆ ಅವನ ಕೈಯಲ್ಲಿ ಅರವತ್ತು ಫಿಲ್ಮ್ ಡಬ್ಬಗಳು ಸಂಗ್ರಹಿತವಾದವು. ಅವುಗಳು ಪ್ರದರ್ಶನವಾದ ಹೊರತೂ ಝೂವೇರಿ ಹಣ ಕಾಣುವಂತಿರಲಿಲ್ಲ. ಥಿಯೇಟರ್ ಮಾಲಿಕರು ಕೆಲವರು ಒಂದು ಒಪ್ಪಂದಕ್ಕೆ ಬಂದು ಕನ್ನಡಿಗರ ಚಿತ್ರ ಹಂಚಿಕೆಯ ಕಛೇರಿಗಳಿಂದಲೇ

ಫಿಲ್ಮ್‌ಗಳನ್ನೂ ಪ್ರದರ್ಶನಕ್ಕೆ ತೆಗೆದುಕೊಳ್ಳುವುದೆಂದು ನಿರ್ಧರಿಸಿದ್ದರು. ಈ ನಿರ್ಧಾರದಿಂದ ಬೆಂಗಳೂರಿನ ಹಲವು - ಉತ್ತಮ ಚಿತ್ರಮಂದಿರಗಳು ಝೂವೇರಿಯ ಕೈಬಿಟ್ಟು ಹೋಗಿದ್ದವು. ಉಳಿದಿದ್ದ ಕೆಲವು ಮಂದಿರಗಳ ಮಾಲಿಕರಾದ ಗುಜರಾತಿಗಳು ಸ್ವಯಂಚಿತ್ರ ಹಂಚಿಕೆಗಾರರಾಗಿದ್ದರು - ಅವರ ಚಿತ್ರಮಂದಿರಗಳಲ್ಲಿಯೂ ಝೂವೇರಿಗೆ ಅವಕಾಶ ದೊರೆಯುತ್ತಿರಲಿಲ್ಲ.

ಈ ಕುತ್ತಿನಿಂದ ಹೇಗೆ ಪಾರಾಗುವುದೆಂದು ಝೂವೇರಿ ಯೋಚಿಸುತ್ತಿರುವಂತೆ 'ಶ್ರೀಗುರು ಚಿತ್ರಮಂದಿರ'ದ ಮಾಲಿಕರಾದ ಶರಭಣ್ಣನವರು ಝೂವೇರಿಯನ್ನು ಹುಡುಕಿಕೊಂಡು ಬಂದರು.

ಕುಶಲಪ್ರಶ್ನೆಗಳಾದ ಮೇಲೆ ಝೂವೇರಿ "ಶರಭಣ್ಣನವರೇ, ನಿಮ್ಮ ಚಿತ್ರ ಹೇಗೆ ಸಾಗಿದೆ. ಯಾವಾಗ ಪ್ರದರ್ಶನಕ್ಕೆ ಬರುತ್ತದೆ'' ಎಂದು ಲೋಕಾಭಿರಾಮವಾಗಿ ಕೇಳಿದ.

"ನಡೆದಿದೆ ಸ್ವಾಮಿ. ಆ ವಿಷಯ ಮಾತನಾಡುವುದಕ್ಕೆ ನಾನು ಬಂದೆ."

"ಹೇಳಿ. ನನ್ನಿಂದೇನಾದರೂ ಸಹಾಯವಾಗಬೇಕಾಗಿತ್ತೇ ?"

"ತಾವೇ ಸಹಾಯಮಾಡಿ ನನ್ನನ್ನು ದಡಮುಟ್ಟಿಸಬೇಕು."

"ಏನು ಶರಭಣ್ಣನವರೇ - ಹೀಗೆ ಹೇಳುತ್ತಿರುವಿರಿ. ಬೆಂಗಳೂರಿನಲ್ಲೇ ನಿಮ್ಮದು ಮೂರು·ಥಿಯೇಟರಿದೆ, ಬೇರೆ ಬೇರೆ ಊರುಗಳಲ್ಲಿ ಎಂಟು ಎಂಭತ್ತು ಥಿಯೇಟರುಗಳಿವೆ.—ನೀವು ನನ್ನನ್ನು ಪರಿಹಾಸ್ಯ ಮಾಡುತ್ತಿರುವಿರಿ."

"ಪರಿಹಾಸ್ಯವಲ್ಲ ಸ್ವಾಮಿ - ಬಹಳ ಪೇಚಿಗೆ ಸಿಕ್ಕಿಕೊಂಡಿದ್ದೇನೆ. ನಾನು ಎಪ್ಪತ್ತೈದು ಸಾವಿರ, ಒಂದು ಲಕ್ಷದಲ್ಲಿ ಚಿತ್ರ ಮುಗಿಸಿಕೊಂಡು ಕಾಲತಳ್ಳುತ್ತಿದ್ದೆ. ನನ್ನ ಚಿತ್ರಗಳಿಂದ ಹೆಚ್ಚಿನ ವರಮಾನ, ಲಾಭ ಬರದಿದ್ದರೂ ನಷ್ಟವಾಗಿರಲಿಲ್ಲ. ನಮ್ಮ ಸಿದ್ದಬಸವ ಒಂದು ದಿನ ಬಂದು 'ಹಾವು ಸಾಯಲಿಲ್ಲ, ಕೋಲು ಮುರಿಯಲಿಲ್ಲ' ಅನ್ನೋಹಾಗೆ ಚಿತ್ರ ಮಾಡುತ್ತ ಕುಳಿತರೆ ಏನಾಗುತ್ತದಣ್ಣಾ. ನಡೀ ಮದರಾಸಿಗೆ ಹೋಗಿ ಬರೋಣ' ಎಂದು ನನ್ನನ್ನು ಮದರಾಸಿಗೆ ಕರೆದುಕೊಂಡು ಹೋಗಿ ಎಚ್‌. ವಿ. ಎಮ್‌. (H. V. M.) ಸ್ಟೂಡಿಯೋ ಮಾಲಿಕರು ವೆಂಕಟಾಚಲ

ಮೊದಲಿಯಾರರಿಗೆ ಭೆಟ್ಟಿಮಾಡಿಸಿದ. ನನ್ನಲ್ಲಿದ್ದ 'ಅಪೂರ್ವ ಸುಂದರಿ' ಕಥೆ ನೋಡಿ ಮೊದಲಿಯಾರರು 'ಇದು ಒಳ್ಳೆಯ ಚಿತ್ರವಾಗುತ್ತದೆ. ಇಬ್ಬರೂ ಸೇರಿ ಮಾಡೋಣ. ತಮಿಳು ಮತ್ತು ಕನ್ನಡ. ವೆಚ್ಚ, ಲಾಭ ಎರಡನ್ನೂ ಸಮಸಮವಾಗಿ ಹಂಚಿಕೊಳ್ಳೋಣ. ಸ್ಟೂಡಿಯೋ, ಕಚ್ಚಾಮಾಲು (Raw Material) ನನ್ನದು; ಆರ್ಟಿಸ್ಟಗಳು, (artist) ಅವರ ಯೋಗ ಕ್ಷೇಮ, ಸಂಗೀತ ಭಾಗ ನಿಮ್ಮದು' ಎಂದರು. ನನ್ನ ಗ್ರಹಚಾರ ಚೆನ್ನಾಗಿರಲಿಲ್ಲವೆಂದು ಕಾಣುತ್ತದೆ– ಒಪ್ಪಿಕೊಂಡು ಅಗ್ರಿಮೆಂಟಗೆ ಸಹಿಮಾಡಿದೆ. ಈಗಾಗಲೇ ಮೂರೂವರೆ ಲಕ್ಷ ನನ್ನ ಕೈಬಿಟ್ಟುಹೋಗದೆ. ಇನ್ನು ಒಂದೂವರೆ ಲಕ್ಷ ನನ್ನ ಪಾಲು ಕೊಡಬೇಕಾಗಿದೆ."

"ಹಾಗಾದರೆ ಚಿತ್ರಕ್ಕೆ ಹತ್ತುಲಕ್ಷ ಖರ್ಚು ಮಾಡಿದಂತಾಯಿತು."

"ಹೌದು – ಮೊದಲಿಯಾರರು ಲೆಕ್ಕ ತೋರಿಸಿರುವುದು ಹಾಗೆ."

"ಚಿತ್ರ ಈಗ ಎಷ್ಟಾಗಿದೆ?"

"ಒಂಭತ್ತು ಸಾವಿರ ಓ. ಕೆ. (O. K.) ಆಗಿದೆ."

"ಇನ್ನೆಷ್ಟಾಗುತ್ತದೆ."

"ಇನ್ನು ಏಳು ಸಾವಿರವಾಗಬಹುದು."

"ಉಳಿದಿರುವ ಏಳುಸಾವಿರ ಮೂರು ಲಕ್ಷದಲ್ಲಿ ಮುಗಿಸುವ ಭರವಸೆಯಿದೆಯೇ?"

"ಸಾಧ್ಯವಾಗುತ್ತದೆಂದು ಮೊದಲಿಯಾರರು ಹೇಳುತ್ತಿದ್ದಾರೆ."

ಝೂವೇರಿ ಮಾರನೆಯ ದಿನವೇ ಶರಭಣ್ಣನವರ ಜತೆಯಲ್ಲಿ ಮದರಾಸಿಗೆ ಹೋಗಿ 'ಅಪೂರ್ವ ಸುಂದರಿ' ಚಿತ್ರದ ಒಂಭತ್ತು ರೀಲುಗಳನ್ನು ನೋಡಿ ಬಂದು

"ಈಗ ನಿಮಗೆಷ್ಟು ಹಣ ಬೇಕಾಗಿದೆ ಶರಭಣ್ಣನವರೇ" ಎಂದು ಕೇಳಿದ.

"ಒಂದೂವರೆ ಲಕ್ಷ."

"ಕೊಡುತ್ತೇನೆ. ನಿಮ್ಮ ಚಿತ್ರ ಇನ್ನು ಮೂರು ತಿಂಗಳಲ್ಲಿ ಹೊರಬೀಳಬಹುದೋ?"

"ಖಂಡಿತವಾಗಿ – ನವರಾತ್ರಿಯಲ್ಲಿ ನಾವದನ್ನು ಪ್ರದರ್ಶಿಸಲೇಬೇಕು."

"ನೀವು ನನಗೆ ಡಿಸೆಂಬರ್ ತಿಂಗಳಲ್ಲಿ ಹಣ ಹಿಂದಕ್ಕೆ ಕೊಡಬೇಕು."

"ಅಗತ್ಯವಾಗಿ ಆಗಲಿ."

"ಎರಡು ಲಕ್ಷಕ್ಕೆ ಪತ್ರ ಬರೆದುಕೊಡಬೇಕು."

"ಆರು ತಿಂಗಳಿಗೆ ಐವತ್ತು ಸಾವಿರ ರೂಪಾಯಿ ಬಡ್ಡಿಯೇ ?"

"ಇದು ಲಾಟರಿ ವ್ಯಾಪಾರ ಶರಭಣ್ಣನವರೇ. ನಿಮ್ಮ ಚಿತ್ರ ಯಶಸ್ವಿಯಾದರೆ ನೀವು ಕ್ರೋರಪತಿಗಳಾಗುತ್ತೀರಿ. ಈಗ ನಿಮ್ಮ ಚಿತ್ರ ಮುಗಿಯಬೇಕಾದರೆ ನನ್ನ ಹಣವೇ ದಾರಿ."

ನಿರ್ವಾಹವಿಲ್ಲದೆ ಶರಭಣ್ಣನವರು

"ಆಗಲಿ ಸ್ವಾಮಿ" ಎಂದರು.

"ಇನ್ನೊಂದು ಮಾತು. ನಿಮ್ಮ 'ಶ್ರೀಗುರು ಚಿತ್ರಮಂದಿರ'ವನ್ನು ಆಧಾರ ಮಾಡಿಕೊಡಬೇಕು."

"ನನ್ನ ಮಾತು ಸಾಲದೇ ?"

"ವ್ಯಾಪಾರದಲ್ಲಿ ನಂಟಸ್ಥನವಿಲ್ಲ ಶರಭಣ್ಣನವರೇ – ಆಧಾರವಿಲ್ಲದೆ ಒಂದೂವರೆ ಲಕ್ಷ ಚೆಲ್ಲಲು ನಾನು ಮೂರ್ಖನೇ."

ಶರಭಣ್ಣನವರು 'ಶ್ರೀಗುರು ಚಿತ್ರಮಂದಿರ'ವನ್ನು ಆಧಾರಮಾಡಿ ಕೊಟ್ಟು, ಎರಡು ಲಕ್ಷ ರೂಪಾಯಿಗಳಿಗೆ ಪತ್ರ ಬರೆದುಕೊಟ್ಟು ಒಂದೂವರೆ ಲಕ್ಷ ರೂಪಾಯಿ ಪಡೆದು, 'ಅಪೂರ್ವ ಸುಂದರಿ'ಯನ್ನು ಮುಗಿಸಲು ಮದರಾಸಿಗೆ ಪ್ರಯಾಣ ಮಾಡಿದರು.

ಮೂರು ತಿಂಗಳಲ್ಲಿ 'ಅಪೂರ್ವಸುಂದರಿ'ಯನ್ನು ವೆಂಕಟಾಚಲ ಮೊದಲಿಯಾರ್ ಮುಗಿಸಲಿಲ್ಲ! ಶರಭಣ್ಣನವರ ಒಂದೂವರೆ ಲಕ್ಷ ರೂಪಾಯಿ ಮುಗಿಸಿದ.

ಶರಭಣ್ಣನವರು ಮತ್ತೆ ಬೆಂಗಳೂರಿಗೆ ಓಡಿಬಂದು ಒಂದೂವರೆ ಲಕ್ಷಕ್ಕೆ ಪತ್ರ ಬರೆದುಕೊಟ್ಟು ಒಂದು ಲಕ್ಷರೂಪಾಯಿ ಪಡೆದು ಹೋದರು. ಝೂವೇರಿಯಿಂದ ಅವರು ತೆಗೆದುಕೊಂಡಿದ್ದುದು ಒಟ್ಟು ಎರಡೂವರೆ ಲಕ್ಷವಾದರೂ ಮೂರೂವರೆ ಲಕ್ಷರೂಪಾಯಿ ಸಾಲ ತಲೆಯ ಮೇಲೆ ಕುಳಿತಿತು.

ಮಾರ್ಚಿ ತಿಂಗಳಲ್ಲಿ ‘ಅಪೂರ್ವಸುಂದರಿ’ ದಕ್ಷಿಣಭಾರತದ ಅರವತ್ತು ನಾಲ್ಕು ಕೇಂದ್ರಗಳಲ್ಲಿ ಬಿಡುಗಡೆಯಾಯಿತು. ಬೆಂಗಳೂರಿನಲ್ಲಿ ಶರಭಣ್ಣ ನವರು ತನ್ನ ಸ್ವಕೀಯ ‘ಶ್ರೀಗುರು ಚಿತ್ರಮಂದಿರ’ದಲ್ಲಿ ಚಿತ್ರ ಪ್ರದರ್ಶಿಸಿ ದರು.

ಚಿತ್ರ ಖಾಲಿ ಡಬ್ಬವಾಯಿತು.

ಬೆಂಗಳೂರಿನಲ್ಲಿ ಮೊದಲನೆಯವಾರ ಆರುಸಾವಿರ ಸಂಗ್ರಹಿಸಿದ ‘ಅಪೂರ್ವಸುಂದರಿ’ ಎರಡನೆಯ ವಾರದಲ್ಲಿ ಮೂರು ಸಾವಿರ; ಮೂರನೆಯ ವಾರದಲ್ಲಿ ಒಂದೂವರೆ ಸಾವಿರಕ್ಕಿಳಿದು ನಾಲ್ಕನೆಯ ವಾರದ ವೇಳೆಗೆ ತನ್ನ ಕಥೆ ಮುಗಿಸಿಬಿಟ್ಟಿತು.

ಶರಭಣ್ಣನವರ ‘ಶ್ರೀಗುರು ಚಿತ್ರಮಂದಿರ’ದ ಕಥೆಯೂ ಮುಗಿದು, ಮಂದಿರ ಝೂವೇರಿಯ ಕೈವಶವಾಯಿತು.

ಸ್ಥಳೀಯ ಸಾಹುಕಾರನ ಇತಿಶ್ರೀ ಮಾಡಿದ ಅಪಖ್ಯಾತಿ ಬಡಿಯುವು ದೆಂಬ ಭಯದಿಂದ ಝೂವೇರಿ ಕೆಲವು ಪತ್ರಿಕಾಕರ್ತರನ್ನೂ, ಸಿನೀಮಾ ಟೀಕಾ ಕಾರರನ್ನೂ ಒಳಹಾಕಿಕೊಂಡು, ಅವರಿಗೆ ಶಾಕಾಯುಲವಣಾಯ ಒಪ್ಪಿಸಿದ್ದ.

ಅವನ ಉದ್ಯಮದಲ್ಲಿ ಹೆಚ್ಚು ನೆರವು ನೀಡಿ, ಉಳಿದ ಪತ್ರಿಕೋದ್ಯಮಿ ಗಳ ಸಹಕಾರ ದೊರಕಿಸಿಕೊಟ್ಟವನು ‘**ಕಾಲದೂತ**’ ಪತ್ರಿಕೆಯ ವಶಿಷ್ಠ. ಅಂದಿನಿಂದ ವಶಿಷ್ಠನಿಗೂ ಝೂವೇರಿಗೂ ಪರಿಚಯ ಬೆಳೆದಿತ್ತು.

ಝೂವೇರಿ ಮನೆಯಿಂದ ನಿರ್ಮಲಾ ಹೊರಬಿದ್ದುದನ್ನು ಕಂಡ ವಶಿಷ್ಠ

“ಆಕೆ ಯಾರು ಶೇಟ್‌ಜೀ” ಎಂದು ಕೇಳಿದ.

“ಈ ಊರಿನ ‘ಅಭಯಾಶ್ರಮ’ದ ಸ್ವಯಂಸೇವಿಕೆ. – ಅಭಯಾ ಶ್ರಮದ ಪರಿಚಯ ನಿಮಗಿರಬೇಕಲ್ಲ.”

“ಓಹೋ! ಬೇಕಾದಷ್ಟಿದೆ.— ನೀವು ಬೆಳ್ಳಗಿರುವುದೆಲ್ಲಾ ಹಾಲು ಎಂದು ತಿಳಿಯುವಿರಿ ಝೂವೇರಿಯವರೇ!”

“ಏಕೆ ಹಾಗನ್ನುವಿರಿ.”

“ ‘ಅಭಯಾಶ್ರಮ’ದಲ್ಲಿ ಏನು ನಡೆಯುತ್ತಿದೆ ಬಲ್ಲಿರಾ”

“ದಲಿತ ಸ್ತ್ರೀಯರ ರಕ್ಷಣೆ.”

"ಅದು ಅಭಯಾಶ್ರಮದ ವರದಿಯಲ್ಲಿ - ನಿಜಕ್ಕೂ ಅದೊಂದು ದುರ್ವ್ಯಾಪಾರದ ಸಂಸ್ಥೆ."

"ನಿಮ್ಮ ಮಾತು ನನಗರ್ಥವಾಗುತ್ತಿಲ್ಲ"

"ನೋಡಿ – ನಮ್ಮ ನಿರ್ಭಾಗ್ಯ ಸ್ತ್ರೀಯರ ರಕ್ಷಣೆಯಾಗಬೇಕು–ಅವರು ಮರ್ಯಾದೆಯಾಗಿ ಜೀವನ ನಡೆಸಲು ಸರಿಯಾದ ದಾರಿ ಕಲ್ಪಿಸಿಕೊಡಬೇಕು, ಆ ವಿಷಯದಲ್ಲಿ ನಿಮ್ಮಂಥ ಶ್ರೀಮಂತರು ನನ್ನಂಥ ಪತ್ರಿಕಾಕರ್ತರು ಆಸಕ್ತಿ ವಹಿಸಬೇಕು ಎನ್ನುವ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ನಮ್ಮ ಸದುದ್ದೇಶಕ್ಕೆ ಯಾವ ಗತಿ ಒದಗುತ್ತದೆ ಬಲ್ಲಿರಾ – ಅಭಯಾಶ್ರಮದಂಥ ಸಂಸ್ಥೆಗಳು ವೇಶ್ಯಾಗೃಹಗಳಾಗುತ್ತವೆ. ಅವುಗಳ ಸಹಾಯಕ್ಕೆ ನಿಲ್ಲುವ ಮೂರ್ತಿಯಂಥವರು ಸಹಕಾರ ನೀಡುವ ನೆಪದಲ್ಲಿ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ."

"ಮೂರ್ತಿ ಯಾರು?"

" 'ಜನಸಂದೇಶ'ದ ಸಂಪಾದಕ."

ವಶಿಷ್ಠನ ಆಪಾದನೆ ನಂಬಲು ಝೂವೇರಿ ಮನಸ್ಸು ಒಡಂಬಡಲಿಲ್ಲ.

"ಏನು ಮಾತು ಹೇಳುತ್ತಿರುವಿರಿ ವಶಿಷ್ಠರೇ. ಮೂರ್ತಿಯವರಿಗಿಂತ ಶೀಲವಂತ ಪತ್ರಿಕಾಕರ್ತರು ಇನ್ನು ಯಾರಿದ್ದಾರೆ?"

"ಲೋಕದ ಕಣ್ಣಿಗೆ ಒಮ್ಮೆ ಮಣ್ಣೆರಚಬಹುದು – ಯಾವಾಗಲೂ ಎರಚಲು ಸಾಧ್ಯವಿಲ್ಲ ಝೂವೇರಿಯವರೇ. ಮೂರ್ತಿಯ ಬಗ್ಗೆ ನನಗೇನೂ ಅಸಹನೆಯಿಲ್ಲ. ಅವರೂ ನಾನೂ ಒಂದೆ ವೃತ್ತಿಯವರು. ಮೂರ್ತಿ ಪತ್ರಿಕೆಯನ್ನು ದಕ್ಷತೆಯಿಂದ ನಡೆಸುತ್ತಿರುವ ವಿಷಯ ನಮಗೆಲ್ಲಾ ಅಭಿಮಾನಾಸ್ಪದವಾಗಿದೆ. ಆದರೆ ಲೋಕಕ್ಕೆ ನೀತಿಯುಪದೇಶ ಮಾಡುವವರು ತಮ್ಮ ಜೀವನ ಚೊಕ್ಕಟವಾಗಿಟ್ಟುಕೊಳ್ಳದಿದ್ದರೆ ಬೇಸರವಾಗುತ್ತದೆ."

"ಮೂರ್ತಿಯವರ ಜೀವನ ಅಶುದ್ಧವಾದುದೇ?"

"ಕೊಳೆತು ನಾರುತ್ತಿದೆ. ಮದುವೆಯಾದ ಹೆಂಡತಿಯನ್ನು ಬಿಟ್ಟು ಒಬ್ಬ ಶಾಲಾಮಾಸ್ತರಿಣಿಯನ್ನು ಗಂಟು ಹಾಕಿಕೊಂಡರು. ಈಗ ಅವರಿಬ್ಬರೂ ಸಂಸಾರಮಾಡುತ್ತಿದ್ದಾರೆ. ಮಾಸ್ತರಿಣಿ ಸಾಲದೆಂದು ಮುಂಬಯಿಯಲ್ಲಿದ್ದ ತನ್ನ ಹಳೆಯ ಗೆಳತಿ ನಿರ್ಮಲನನ್ನೂ ಕರೆಸಿಕೊಂಡಿದ್ದಾನೆ.

ಇಬ್ಬರು ನಲ್ಲೆಯರು ಮನೆಯಲ್ಲಿದ್ದರೆ ಹಗರಣವಾಗುತ್ತದೆಂದು, ನಿರ್ಮಲ ನನ್ನ ಅಭಯಾಶ್ರಮ ಸೇರಿಸಿದ್ದಾನೆ. ನೀವು ಅಭಯಾಶ್ರಮಕ್ಕೆ ಕೊಡುವ ಚಂದಾಹಣ ಮೂರ್ತಿಯ ವಿಲಾಸಕ್ಕೆ ವಿನಿಯೋಗವಾಗುತ್ತಿದೆಯಲ್ಲಾ ಎಂದು ನನಗೆ ವ್ಯಸನವಾಯಿತು."

"ಈ ಹುಡುಗಿ ನಿರ್ಮಲಾ ತುಂಬ ಸಭ್ಯಳ ಹಾಗೆ ಕಾಣುತ್ತಾಳೆ."

"ಇದೂ ಒಂದು ಸ್ತ್ರೀಮುಖವ್ಯಾಘ್ರ. ನಿಮ್ಮಂಥ ಗ್ರಹಸ್ಥರಮನೆ ಹೊಸಿಲು ತುಳಿಯುವುದಕ್ಕೂ ಇವಳಿಗೆ ಯೋಗ್ಯತೆಯಿಲ್ಲ – ನೀವು ನನ್ನ ಸ್ನೇಹಿತರಾದುದರಿಂದ ಇಷ್ಟೆಲ್ಲಾ ಹೇಳಬೇಕಾಯಿತು. ಇದರ ಮೇಲೆ ನಿಮ್ಮ ಇಷ್ಟ ಬಂದಂತೆ ಮಾಡಬಹುದು."

ನಿರುತ್ತರನಾಗಿ ಕುಳಿತ ಝೂವೇರಿಯ ಮನಸ್ಸಿನ ಮೇಲೆ ವಶಿಷ್ಠನ ಶಲ್ಯವಾಕ್ಯಗಳು ಪರಿಣಾಮ ಬೀರದೆ ಹೋಗಲಿಲ್ಲ.

## ೨೨

'**ಯುಗವಾಣಿ**'ಯಲ್ಲಿ ರಾಘವಯ್ಯ '**ಕಾಲದೂತ**'ದಲ್ಲಿ ಹುನಗುಂದ ಈಶ್ವರರಾಯ ಸೂಕ್ಷ್ಮವಾಗಿ 'ಅಭಯಾಶ್ರಮ'ದ ಮೇಲೆ ಟೀಕೆ ಟಿಪ್ಪಣಿಗಳ ನ್ನಾರಂಭಿಸಿದರು. ಶಬ್ದಪಲ್ಲಟ ನಿಪುಣನಾದ ರಾಘವಯ್ಯ ಹಾಸ್ಯದ ಹೊದಿಕೆ ಹಾಕಿ ಮರ್ಮಭೇದಕ ಕಟುನುಡಿಗಳ ಸುರಿಮಳೆಯನ್ನಾರಂಭಿಸಿದ.

'ಇದು ಸ್ತ್ರೀಪುರುಷರ ಸಮಾನಾಧಿಕಾರದ ಕಾಲ. ಪುರುಷನಂತೆ ಸ್ತ್ರೀಯೂ ಸ್ವತಂತ್ರಳು – ಸ್ವಚ್ಛಂದ ಜೀವನ ನಡಸುವುದಕ್ಕೆ. ಈ ಬಗ್ಗೆ ಹೆಚ್ಚು ವಿವರ ತಿಳಿಯಬೇಕೆನ್ನುವವರು ಅಭಯಾಶ್ರಮ (ಅಬಲಾಶ್ರಮ – ಭಲಾಶ್ರಮ) ಅಧಿಕಾರಿಗಳಿಗೆ ಬರೆಯಬಹುದು.

'ಸತ್ಯದ **ಮೂರ್ತಿ**ಸ್ವರೂಪನಾದ **ಗಿರಿಜಾ**ಪತಿ, **ಲಲಿತ** ಲಾವಣ್ಯಕ್ಕೆ ಮನಸೋತು ಈಗ **ನಿರ್ಮಲ** ಜೀವನವನ್ನು ಆಶ್ರಯಿಸಿರುವುದನ್ನು ಕೇಳಿ ನಾವು ಸಂತೋಷಿಸುತ್ತೇವೆ.'

'ಪಾಕೀಸ್ತಾನದಲ್ಲಿ ಏಕಪತ್ನೀ ವಿವಾಹ ಕಡ್ಡಾಯದ ಕಾನೂನಾಗುವು ದಂತೆ. ಸದ್ಯ! ಹಿಂದೂಸ್ಥಾನಕ್ಕೆ ಆ ಗ್ರಹಚಾರ ಒದಗಿಲ್ಲ. ಹಿಂದೂಸ್ಥಾನ ದಲ್ಲಿಯೂ ಅಂಥ ಕಾಯಿದೆ ಜಾರಿಗೆ ಬಂದರೆ 'ಅಭಯಾಶ್ರಮ'ವನ್ನು

ಸೆನೋವಾ ದ್ವೀಪಕ್ಕೆ ರವಾನಿಸಲು ಅದರ ಅಧಿಕಾರಿಗಳು ಸಿದ್ಧರಾಗುತ್ತಿರುವಂತೆ!'

'ಜನಕ್ಕೆ ನೀತಿ **ಸಂದೇಶ** ಸಾರುತ್ತಿರುವ ಒಬ್ಬ ಮಹನೀಯರು ಏಕಪತ್ನೀ ವಿವಾಹ ಕಾನೂನು ಜಾರಿಗೆ ಬಂದರೆ ಪ್ರಾಯೋಪವೇಶ ಮಾಡುವುದಾಗಿ ಹೆದರಿಕೆ ಹಾಕಿರುವರಂತೆ!"

ಕೆಂಪುಮಸಿಯಲ್ಲಿ ಗುರುತುಮಾಡಿದ ಯುಗವಾಣಿ - ಕಾಲದೂತ ಪ್ರತಿಗಳು ಕ್ರಮವಾಗಿ ಸುಂದರಮ್ಮನವರು, ಮೂರ್ತಿ, ಲಲಿತ, ರಾಮಚಂದ್ರರಾಯರ ಕೈಸೇರುತ್ತಿದ್ದವು.

ಇವುಗಳ ಬಗ್ಗೆ ಚರ್ಚೆಮಾಡಲು ಯಾರಿಗೂ ಮನಸ್ಸಿಲ್ಲ. ರಾಮಚಂದ್ರರಾಯರು ಒಂದು ದಿನ ಈ ಬಗೆಯ ಟೀಕೆಗಳನ್ನೊಳಗೊಂಡ ಯುಗವಾಣಿ – ಕಾಲದೂತ ಪತ್ರಿಕೆಗಳ ಪ್ರತಿಗಳನ್ನು ಕಿಸೆಯಲ್ಲಿಟ್ಟುಕೊಂಡು ನೇರವಾಗಿ ಯುಗವಾಣಿ ಕಛೇರಿಗೆ ಬಂದು ಸಂಪಾದಕರನ್ನು ನೋಡಬಯಸಿದರು.

ರಾಘವಯ್ಯ ಒಂದು ಗಂಟೆ ಕಾಲ ರಾಮಚಂದ್ರರಾಯರನ್ನು ಕೊಳೆ ಹಾಕಿ, ತರುವಾಯ ಅವರಿಗೆ ಹೇಳಿಕಳಿಸಿದ.

ರಾಯರು ಪತ್ರಿಕೆಗಳನ್ನು ರಾಘವಯ್ಯನ ಮೇಜಿನ ಮೇಲೆ ಹರಡಿ

"ಈ ಟೀಕೆ ಟಿಪ್ಪಣಿಗಳನ್ನು ನಿಮ್ಮ ಪತ್ರಿಕೆಯಲ್ಲಿ ಬರೆಯುತ್ತಿರುವವರು ಯಾರು ಸ್ವಾಮಿ" ಎಂದು ಕೇಳಿದರು.

"ಅದು ಕಛೇರಿಯ ರಹಸ್ಯ. ನಮ್ಮ ಬಾತ್ಮೀದಾರರ ಹೆಸರುಗಳನ್ನೆಲ್ಲಾ ಬಯಲುಮಾಡಲು ಸಾಧ್ಯವೇ ರಾಮಚಂದ್ರರಾಯರೇ?"

"ಅಭಯಾಶ್ರಮ, ಕರುಣಾಶ್ರಮ ಸಂಸ್ಥೆಗಳು ನಡೆದಿರುವುದು ಸಾರ್ವಜನಿಕರ ಅಭಿಮಾನದಿಂದ. ಅವು ಧರ್ಮಸಂಸ್ಥೆಗಳೇ ವಿನಾ ಬಂಡವಳಿಗ ಸಂಸ್ಥೆಗಳಲ್ಲ."

"ಹೌದು."

"ಈ ಸಂಸ್ಥೆಗಳ ಬಗ್ಗೆ ನೀವು ವಿರುದ್ಧ ಪ್ರಚಾರ ಮಾಡುವುದರ ಉದ್ದೇಶವೇನು?"

"ಸಾರ್ವಜನಿಕರ ಶೀಲಸಂರಕ್ಷಣೆ."

"ನಮ್ಮ ಸಂಸ್ಥೆಗಳು ಸಾರ್ವಜನಿಕರ ಶೀಲ ಭಂಗಮಾಡುತ್ತಿವೆಯೋ?"

"ರಾಯರೇ, ನಿಮ್ಮ ಅಭಯಾಶ್ರಮದ ರೀತಿನೀತಿಯ ಬಗ್ಗೆ ನಮ್ಮ ಕಛೇರಿಗೆ ನೂರಾರು ಕಾಗದಗಳು ಬಂದಿವೆ. ಹಿರಿಯರು – ನಿಮ್ಮ ಮುಖ ನೋಡಿಕೊಂಡು ನಾವು ಅವುಗಳನ್ನು ಪ್ರಕಟಿಸಿಲ್ಲ."

"ಅಭಯಾಶ್ರಮ ಮಾಡುತ್ತಿರುವ ಅನ್ಯಾಯವೇನು ?"

"ಮೂರ್ತಿಯವರ ಪ್ರೇಮಪತ್ನಿ ಲಲಿತಮ್ಮನಿಗೂ ನಿಮ್ಮ ಅಭಯಾಶ್ರಮಕ್ಕೂ ಇರುವ ಸಂಬಂಧವೇನು ?"

"ಆಕೆ ಮೂರ್ತಿಯವರ ಪ್ರೇಮಪತ್ನಿಯಲ್ಲ – ವಿಧ್ಯುಕ್ತವಾಗಿ ಆಕೆಗೂ ಮೂರ್ತಿಯವರಿಗೂ ವಿವಾಹವಾಗಿದೆ."

"ಮೂರ್ತಿಯವರ ಮೊದಲನೆಯ ಪತ್ನಿ ಜೀವಂತರಾಗಿರುವರಲ್ಲವೇ ?"

"ಇದ್ದಾರೆ."

"ಮೂರ್ತಿ ಅವರ ಕೈಬಿಟ್ಟುದೇಕೆ ?"

"ಮೂರ್ತಿಯವರ ಗೃಹಕೃತ್ಯ ನಾವೇಕೆ ಚರ್ಚಿಸಬೇಕು."

"ಈ ಲಲಿತಮ್ಮನ ಮೋಹಪಾಶಕ್ಕೆ ಬಿದ್ದಲ್ಲವೇ ಮೂರ್ತಿ ಮದುವೆಯಾದ ಹೆಂಡತಿಯ ಕೈಬಿಟ್ಟುದು ?"

"ಮೂರ್ತಿಯವರಿಗೆ ನೀತಿಭಾವನೆಯೇ ಇಲ್ಲವೆಂದು ಸಿದ್ಧಾಂತಪಡಿಸಲೆತ್ನಿಸುತ್ತಿರುವಿರಾ ?"

"ನಿಸ್ಸಂದೇಹವಾಗಿ."

"ನನಗೊಬ್ಬ ಮಗಳಿದ್ದು ಅವಳು ಲಲಿತಮ್ಮನಷ್ಟು ಶೀಲವತಿಯಾಗಿದ್ದಿದ್ದರೆ ನಾನು ಹೆಮ್ಮೆಪಡುತ್ತಿದ್ದೆ."

"ಅದೂ ಹೋಗಲಿ - ನಿಮ್ಮ ಅಭಯಾಶ್ರಮಕ್ಕೆ ಈಚೆಗೆ ಬಂದಿರುವ ನಿರ್ಮಲಾ ಎನ್ನುವ ಹುಡುಗಿಗೂ ಮೂರ್ತಿಗೂ ಇರುವ ಸಂಬಂಧವೇನು ?"

"ಅಭಯಾಶ್ರಮದಲ್ಲಿರುವ ಇತರ ಹೆಣ್ಣುಮಕ್ಕಳಂತೇ ನಿರ್ಮಲನೂ ಕಷ್ಟ ಸೋಸಿದವಳು. ಮೂರ್ತಿ ಆಕೆಯನ್ನು ಸೋದರಿಯಂತೆ ಕಾಣುತ್ತಾರೆ."

"ಹಗಲೋ ರಾತ್ರಿಯೋ ?"

ವಯಸ್ಸಿನಿಂದ ಶುಷ್ಕವಾಗಿ, ಅಹರ್ನಿಶಿ ಸೇವೆಯಿಂದ ಜೀರ್ಣವಾಗಿದ್ದ ರಾಮಚಂದ್ರರಾಯರ ಮೈಯಲ್ಲಿ ಕಾವೇರಿತು. ಮೇಲ್ದುಟಿಯ ಮೇಲೆ

ದಟ್ಟವಾಗಿ ಬೆಳೆದಿದ್ದ ಅವರ ಬಿಳಿಯ ಮೀಸೆ ಹಂದಿಯ ಮುಳ್ಳುಗಳಂತೆ ಎದ್ದು ನಿಂತವು. ರಾಯರು ಕೈಯಲ್ಲಿ ತಂದಿದ್ದ ಪತ್ರಿಕೆಗಳ ಪ್ರತಿಗಳನ್ನು ಬಾಚಿಕೊಂಡು ಎದ್ದು ನಿಂತು ಗಂಭೀರವಾಗಿ

"ರಾಘವಯ್ಯನವರೇ – ನೀವು ಯೋಗ್ಯರು – ಅಜ್ಞಾನವಶರಾಗಿ ಅಭಯಾಶ್ರಮದ ಬಗ್ಗೆ ಟೀಕೆಗಳನ್ನು ಬರೆಯುತ್ತಿರುವಿರಿ – ನಿಮಗೆ ಸತ್ಯಸ್ಥಿತಿ ತಿಳಿಸಿ ಆಶ್ರಮದ ಬಗ್ಗೆ ಅಭಿಮಾನ, ಗೌರವ ಹುಟ್ಟಿಸಬೇಕೆಂದು ನಾನು ಬಂದೆ. ನನಗೆ ನಿರಾಶೆಯನ್ನುಂಟುಮಾಡಿರುವಿರಿ. ತಪ್ಪುಮಾಡಿ ಅದನ್ನೇ ಸಮರ್ಥಿಸುತ್ತಿರುವಿರಿ. ನಿರಪರಾಧಿಗಳನ್ನು ಬಯಲಿಗೆಳೆದು ಅವರ ಮಾನ ಭಂಗ ಮಾಡಲೆತ್ನಿಸುತ್ತಿರುವಿರಿ. ಇದು ಶುದ್ಧ ಅಯೋಗ್ಯ ವರ್ತನೆ. ದೇಶದ ಹಿತವನ್ನು ಲಕ್ಷ್ಯದಲ್ಲಿಟ್ಟಿರುವ ಯಾವ ವಿವೇಕಿಯೂ ಇಂಥ ಕೆಲಸ ಮಾಡ ಬಾರದು.

ಮೂರ್ತಿಯವರ ಮೇಲೆ ನಿಮಗಿರುವ ವೈಯಕ್ತಿಕ ದ್ವೇಷಕ್ಕೆ ಅಪಪ್ರಚಾರದ ಮೂಲಕ ಪ್ರತೀಕಾರ ಮಾಡಲು ನಿರ್ಧರಿಸಿದ್ದೀರಿ. ಇದು ಸರಿಯಲ್ಲ - ಹೀಗೆ ಮಾಡಬಾರದು ಎಂದು ಮಾತ್ರ ನಾನು ಹೇಳಲು ಸಾಧ್ಯ.

ನಿಮ್ಮ ಅಪಪ್ರಚಾರ ಸಹಿಸುವುದು 'ಅಭಯಾಶ್ರಮ'ಕ್ಕೆ ಸಾಧ್ಯವಾಗ ಬಹುದು - ಸಾಧ್ಯವಾಗದೆಯೂ ಹೋಗಬಹುದು. ಹತ್ತು ಜನಗಳ ವಿಶ್ವಾಸ ಔದಾರ್ಯದ ನೆರವಿನಿಂದ ನಡೆಯುವ ಸಂಸ್ಥೆ ಜನಾಭಿಪ್ರಾಯವನ್ನೆದುರಿಸು ವುದು ದುಸ್ಸಾಧ್ಯವಾಗಬಹುದು.

ಒಂದು ವೇಳೆ ನಾವು 'ಅಭಯಾಶ್ರಮ' ಮುಚ್ಚಬೇಕಾದ ಪ್ರಸಂಗ ಬಂದರೆ, ಹಲವಾರು ನಿರ್ಭಾಗ್ಯ ಹೆಣ್ಣುಮಕ್ಕಳ ಕಣ್ಣೀರು ನಿಮ್ಮನ್ನು ಕೊಚ್ಚಿ ಕೊಂಡು ಹೋಗುತ್ತದೆಂಬುದನ್ನು ಮರೆಯಬೇಡಿ.

ಇಂಥ ಸಂಸ್ಥೆಗಳನ್ನು ಕಟ್ಟುವುದು, ನಡೆಸುವುದು ಬಹಳ ಕಷ್ಟ ರಾಘವಯ್ಯನವರೇ. 'ಕರುಣಾಶ್ರಮ'ವನ್ನು ಒಂದು ಸ್ಥಿತಿಗೆ ತರಬೇಕಾದರೆ, 'ಅಭಯಾಶ್ರಮ' ಸ್ಥಾಪಿಸಬೇಕಾದರೆ ನಾನು ಪಟ್ಟಿರುವ ಪಾಡು ಭಗವಂತ ನೊಬ್ಬನಿಗೆ ಗೊತ್ತು. ಮನೆ ಕಟ್ಟುವುದು ಕಷ್ಟ - ಮುರಿಯುದು ಸುಲಭ. ನನ್ನ ಜೀವಮಾನದ ಕೆಲಸವನ್ನು ನಾಲ್ಕು ಕೆಟ್ಟಮಾತುಗಳು ನಾಶಮಾಡುವು ದಾದರೆ ಮಾಡಲಿ.

ಸತ್ಯಕ್ಕೆ, ಧರ್ಮಕ್ಕೆ ಇನ್ನೂ ಬೆಲೆಯಿದೆ, ಸ್ಥಾನವಿದೆಯೆಂದು ನಾನು ನಂಬಿದ್ದೇನೆ. ಸತ್ಯ, ಧರ್ಮ ಮಣ್ಣುಗೂಡಿದ ಮೇಲೆ ಅಭಯಾಶ್ರಮ ವಿದ್ದೇನು ಸಾರ್ಥಕ – ನಾನಿದ್ದೇನು ಸಾರ್ಥಕ"

ಎಂದು ನುಡಿದವರೇ ರಾಘವಯ್ಯನ ಕಛೇರಿ ಬಿಟ್ಟುಹೋದರು. ಅವರು ಹೋದುದನ್ನೇ ದಿಟ್ಟಿಸಿ ನೋಡಿದ ರಾಘವಯ್ಯ

"ಓಲ್ಡ್ ಫೂಲ್ (Old Fool)" ಎಂದು ಗೊಣಗಿಕೊಂಡ.

೨೩

ಮಧ್ಯಾಹ್ನ, ಒಂದು ಗಂಟೆಯ ಉರಿಬಿಸಿಲಿನಲ್ಲಿ ಬೆಂದು ಬಾಡಿ 'ಅಭಯಾಶ್ರಮ' ಸೇರಿದ ನಿರ್ಮಲಾ ಚಂದಾಪಟ್ಟಿಯ ಪುಸ್ತಕವನ್ನೂ, ತಾನು ಸಂಗ್ರಹಿಸಿದ್ದ ಹಣವನ್ನೂ ಆಫೀಸಿನ ಡ್ರಾಯರಿನಲ್ಲಿ ಒಗೆದು, ತನ್ನ ಹಾಸಿಗೆಯ ಮೇಲೆ ಅಳುತ್ತ ಮಲಗಿದಳು.

ವೀರಮ್ಮ, ಜ್ವಾಲಾ ಬಂದು ನಿರ್ಮಲನನ್ನು ಊಟಕ್ಕೆಬ್ಬಿಸಿದರು. ಅವರ ಕರೆಯನ್ನು ನಿರ್ಮಲಾ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಸುಮಿತ್ರೆ ಬಂದು ನಿರ್ಮಲನನ್ನು ಎಬ್ಬಿಸಲೆತ್ನಿಸಿದಳು. ನಿರ್ಮಲಾ ಅವಳನ್ನು ಬಲವಾಗಿ ಅಪ್ಪಿ ಕಣ್ಣೀರು ಸುರಿಸುತ್ತಾ

"ನಾನು ನಿಮ್ಮನ್ನು ಬಿಟ್ಟು ಹೊರಟುಹೋಗುತ್ತೇನೆ, ಸುಮ್ಮಿ" ಎಂದಳು.

ವೀರಮ್ಮ ಕೂಡಲೆ ಹೋಗಿ ಸುಂದರಮ್ಮನವರನ್ನು ಕರೆತಂದಳು. ಸುಂದರಮ್ಮನವರ ಉಪಚಾರವೂ ಸಾರ್ಥಕವಾಗಲಿಲ್ಲ. ನಿರ್ಮಲಾ ಒಂದೇ ಪಲ್ಲವಿಯನ್ನು ಹಾಡಲಾರಂಭಿಸಿದಳು.

"ನನ್ನನ್ನು ಇವತ್ತೇ ಮುಂಬಯಿಗೆ ಕಳಿಸಿಬಿಡಿ ಮ್ಯಾಡಾಂ."

"ಏನಾಯಿತು ನಿರ್ಮಲಾ."

"ನನ್ನಿಂದ 'ಅಭಯಾಶ್ರಮ'ಕ್ಕೆ ಕೆಟ್ಟ ಹೆಸರು – ಪಾಪಿ ನಾನು ಕಾಲಿಟ್ಟ ಕಡೆಯಲ್ಲೆಲ್ಲಾ ದುಃಖ ವ್ಯಾಪಿಸುತ್ತದೆ. ನಾನು ಆಶ್ರಮದಲ್ಲಿರುವು ದಿಲ್ಲ ಮ್ಯಾಡಾಂ – ದಯೆಯಿಟ್ಟು ನನ್ನನ್ನು ಕಳಿಸಿಬಿಡಿ."

ನಿರ್ಮಲನನ್ನು ಸಂತೈಸುವುದು ಸುಂದರಮ್ಮನವರಿಗೆ ದುಸ್ಸಾಧ್ಯವಾಯಿತು. ಕೂಡಲೆ ಲಲಿತಮ್ಮನನ್ನು ಕರೆತರುವಂತೆ ಹೇಳಿಕಳುಹಿಸಿದರು.

ಲಲಿತಮ್ಮ ಆಶ್ರಮವಾಸಿಗಳೆಲ್ಲರನ್ನೂ ಹೊರಗೆ ಕಳುಹಿಸಿ ಸುಂದರಮ್ಮನವರನ್ನು ಜತೆಯಲ್ಲಿಟ್ಟುಕೊಂಡು

"ಏನಾಯಿತು ನಿರ್ಮಲಾ" ಎಂದು ಕೇಳಿದಳು.

"ಅಕ್ಕಾ – ನನ್ನನ್ನು ಮುಂಬಯಿಗೆ ಕಳಿಸಿಬಿಡಿ."

"ಮುಂಬಯಿಯಲ್ಲಿ ಎಲ್ಲಿಗೆ ಹೋಗುತ್ತೀ ?"

"ಮಾತಾಜಿ ಮನೆಗೆ."

"ಮಾತಾಜಿ ಮನೆಗೆ ಹೋಗಲು ಆಸೆಯಾಗುತ್ತಿದೆಯೇ"

"ಇಲ್ಲಾ ಅಕ್ಕಾ – ನನ್ನಂಥವರಿಗೆ ಅದೇ ದಿಕ್ಕು - ನಾನು ಆಶ್ರಮದಲ್ಲಿ ನಿಂತು ನಿಮ್ಮೆಲ್ಲರಿಗೂ ಕೆಟ್ಟ ಹೆಸರು ತಂದೆ."

"ಕೆಟ್ಟಹೆಸರು ಬರುವ ಯಾವ ಅನಾಚಾರ, ಅತ್ಯಾಚಾರವನ್ನೂ ನೀನು ಮಾಡಿಲ್ಲವಲ್ಲಾ ನಿರ್ಮಲಾ."

"ಝೂವೇರಿಯವರ ಹೆಂಡತಿ ಪೂತಲಿಬಾಯ್ ಏನಂದರು ಬಲ್ಲಿರಾ ?"

"ಏನಂದರು ?"

"ನಾನು ನಿಮ್ಮ ಯಜಮಾನರ ಉಪಪತ್ನಿಯಂತೆ - ಆಶ್ರಮ ಸೂಳೆಗೇರಿಯಂತೆ - ಮ್ಯಾಡಾಂ ಈ ವೇಶ್ಯಾಗೃಹದ ಯಜಮಾನಿಯಂತೆ!"

ಸುಂದರಮ್ಮನವರು, ಲಲಿತ ಪರಸ್ಪರ ದೃಷ್ಟಿ ವಿನಿಮಯಮಾಡಿಕೊಂಡರು.

"ಇನ್ನುಮೇಲೆ ನೀನು ಅವರ ಮನೆಗೆ ಹೋಗದಿದ್ದರಾಯಿತು. ಅದಕ್ಕೇಕಿಷ್ಟು ದುಃಖಪಡಬೇಕು."

"ನಾನು ಕೆಟ್ಟವಳು - ಕುಲಹೀನೆ, ಅದೃಷ್ಟಹೀನೆ. ನಾನು ಇಲ್ಲಿದ್ದುದರಿಂದಲೇ ಅಲ್ಲವೇ ನಿಮಗೆಲ್ಲಾ ಕೆಟ್ಟಹೆಸರು ಬಂದುದು."

"ನಿರ್ಮಲಾ - ನನ್ನ ಯಜಮಾನರ ಬಗ್ಗೆ ನಿನಗೆ ಗೌರವವಿದೆಯಲ್ಲವೇ ?"

"ಏನಕ್ಕಾ - ಹೀಗೆ ಕೇಳುತ್ತಿರುವಿರಿ. ಅವರೂ ನೀವೂ ಮಾಡಿರುವ ಉಪಕಾರ ನಾನು ಮರೆಯಬಲ್ಲೆನೇ ?"

"ನೀನು ಈಗ ಮುಂಬಯಿಗೆ ಹೋಗುವುದರಿಂದ ಅವರಿಗೆ ಹಿಂಸೆಯಾಗುತ್ತದೆ. ಅವರೇ ತಮ್ಮ ಹುಳುಕನ್ನು ಮುಚ್ಚಿಕೊಳ್ಳಲು ನಿನ್ನನ್ನು ಉದ್ದೇಶಪೂರ್ವಕವಾಗಿ ಮುಂಬಯಿಗೆ ಸಾಗಿಸಿದ್ದಾರೆಂದು ಜನ ತಿಳಿಯುತ್ತಾರೆ."

"ನಾನೇನು ಮಾಡಲಕ್ಕಾ ?"

"ಎಂದಿನಂತೆ ಆಶ್ರಮದ ಕೆಲಸ ನೋಡಿಕೊಂಡು ಹೋಗು. ಬೀದಿಯಲ್ಲಿ ನೀನು ಹೋಗುವಾಗ ಜನ ಹೀಯಾಳಿಸಬಹುದು – ಕಲ್ಲು ಒಗೆಯಬಹುದು - ಅಶ್ಲೀಲ ಮಾತುಗಳನ್ನಾಡಬಹುದು. ಅವುಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳಬೇಕು. ನನ್ನ ವಿಷಯ ಜನ ಏನು ತಿಳಿದಿದ್ದಾರೆ ಬಲ್ಲೆಯಾ ?"

"ನಿಮ್ಮ ವಿಷಯದಲ್ಲಿಯೂ ಕೆಟ್ಟಮಾತುಗಳನ್ನಾಡುತ್ತಾರೆಯೇ ?"

"ಅಂದು ಮೈಸೂರಿನಲ್ಲಿ ನೀನೇ ಕೇಳಿದೆಯಲ್ಲಾ ತಂಗೀ - ಹಾಗೇ ಇತರರೂ ನಾನು ಪ್ರಸಾದರ ಸೂಳೆಯೆಂದು ಭಾವಿಸಿಕೊಂಡಿದ್ದಾರೆ."

"ಅಕ್ಕಾ........"

"ಹೌದು ನಿರ್ಮಲಾ - ಗರತಿ ಸೂಳೆಯಾದರೆ ಜನಕ್ಕೆ ಸಂತೋಷ; ಸೂಳೆ ಗರತಿಯಾಗುವುದು ಅವರಿಗೆ ಬೇಡವಾಗಿದೆ. — ನಾನೇ ಕೈಯಾರೆ ನಿನಗೆ ವಿಷವನ್ನಾದರೂ ಕುಡಿಸುತ್ತೇನೆ. ಆದರೆ ಮಾತಾಜಿಯ ಮನೆಗೆ ಕಳಿಸಿಕೊಡಲಾರೆ ನಿರ್ಮಲಾ."

"ಅಕ್ಕಾ - ಯಾವ ಸೌಭಾಗ್ಯಕ್ಕಾಗಿ ನಾನು ಬದುಕಿರಬೇಕು."

"ಯಾವ ಸೌಭಾಗ್ಯಕ್ಕಾಗಿ ಸೂರ್ಯ ಹುಟ್ಟಬೇಕು ತಂಗೀ - ಸಂಜೆಯಾದ ಕೂಡಲೆ ಅವನು ಅಸ್ತಮಿಸಬೇಕಲ್ಲವೇ ?"

"ಇನ್ನು ನಾನು ಮಾತಾಜಿಯ ಮಾತೆತ್ತುವುದಿಲ್ಲಕ್ಕಾ - ಕ್ಷಮಿಸಿ."

ಸುಂದರಮ್ಮನವರ ಮಾತೃಹೃದಯಕ್ಕೆ ಅಪಾರ ವೇದನೆಯಾಗಿತ್ತು. ತಮ್ಮ ದುಃಖ ಅಡಗಿಸಿಕೊಂಡು

"ನಿನ್ನ ಕಣ್ಣೀರು ಬತ್ತಿಹೋಯಿತೇ ಲಲಿತಾ" ಎಂದು ಕೇಳಿದರು.

"ಏಕೆ ಮ್ಯಾಡಾಂ ?"

"ಅಳು ಮಗಳೇ - ಅತ್ತರೆ ನಿನ್ನ ಹೃದಯ ತುಸು ಹಗುರವಾಗ ಬಹುದು."

"ಕಣ್ಣೀರಿನಲ್ಲಿ ಕೈತೊಳೆಯುವುದೇ ಅಲ್ಲವೇ ಹೆಣ್ಣಿನ ಬಾಳು."

"ದೇವರಂಥ ಗಂಡನ ಕೈಹಿಡಿದೂ ನಾನೇಕೆ ಕಣ್ಣೀರಿನಲ್ಲಿ ಕೈತೊಳೆಯ ಬೇಕು ಲಲಿತಾ."

"ದೇವರನ್ನು ಪಾಪಿ ಮನುಷ್ಯ ಕೈಗಳು ಮುಟ್ಟಿ ಅಪವಿತ್ರ ಮಾಡಿತಲ್ಲಾ ಎಂದು."

"ಲಲಿತಾ - ನೀನೂ ಅಧೀರಳಾದರೆ ನನ್ನ ಜಂಘಾಬಲವೇ ಉಡುಗಿ ಹೋಗುತ್ತದೆ. ನಿನ್ನ ಸ್ಥೈರ್ಯವೇ ಆಶ್ರಮದ ಅಡಿಗಲ್ಲೆಂಬುದನ್ನು ಮರೆಯ ಬೇಡ."

"ನಿರ್ಮಲಾ ಹೇಳಿದ ಮಾತನ್ನೇ ನಾನೂ ಹೇಳಬೇಕಾಗಿದೆ."

"ಏನದು."

"ನಾನೂ ಅವರೂ ಮುಂಬಯಿಗೆ ಹೋಗಲು ಅಪ್ಪಣೆಕೊಡಿ. 'ನ್ಯೂಸೆಂಚುರಿ'ಯಲ್ಲಿ ನಮ್ಮ ಸ್ಥಾನ ಮೀಸಲಾಗಿವೆ. ದೇವರು ಹೇಗೋ ಹೊಟ್ಟೆಬಟ್ಟೆಗೆ ಕೊಡುತ್ತಾನೆ."

"ನನ್ನ ಲಲಿತಾ ಮಹಾ ಧೈರ್ಯಶಾಲಿ, ಕ್ಷತ್ರಿಯಾನಿ, ವೀರೆ ಎಂದು ನಾನು ಭಾವಿಸಿದ್ದೆ. ಅವಳೂ ದುರ್ಬಲ ಮನಸ್ಸಿನ ಹೆಂಬೇಡಿ ಎಂದು ಇಂದು ನನಗೆ ತಿಳಿದಂತಾಯಿತು."

"ನೀವೂ ನನ್ನನ್ನು ದೂರಮಾಡುವಿರಾ ಮ್ಯಾಡಾಂ."

"ದೂರಮಾಡುತ್ತಿರುವವಳು ನಾನಲ್ಲ – ನೀನು."

"ನೀವೂ ರಾಮಚಂದ್ರರಾಯರೂ ಒಂದು ಜೀವಮಾನದ ತಪಸ್ಸಿನಿಂದ ಕಟ್ಟಿದ ಸಂಸ್ಥೆಗಳಿಗೆ ನಾನೇ ಮೃತ್ಯುವಾಗಲೇ ?"

"ಸಂಸ್ಥೆಗಳ ಆಯುಷ್ಯ ಮುಗಿದಿದ್ದರೆ ಅವುಗಳನ್ನು ಯಾರು ಉಳಿಸಲು ಸಾಧ್ಯ ? ನೀನು ಹೊರಟ ದಿನವೇ ನಾನೂ 'ಅಭಯಾಶ್ರಮ'ದ ಬಾಗಿಲು ಹಾಕಿ ಹೊರಟುಹೋಗುತ್ತೇನೆ."

"ನನಗಿಂತ 'ಅಭಯಾಶ್ರಮ' ದೊಡ್ಡದು - ಅದರ ಹಿತವೇ ನಮ್ಮ ಹಿತ."

"ನಿನ್ನ ಮಾತು ಸುಳ್ಳು."

"ಏಕೆ?"

"ಆಶ್ರಮದ ಹಿತ ದೊಡ್ಡದೆಂದು ನೀನು ಭಾವಿಸಿದ್ದರೆ ಬೆಂಗಳೂರು ಬಿಡುವ ಯೋಚನೆ ಮಾಡುತ್ತಿರಲಿಲ್ಲ. ನೂರು ಜನ ನೂರು ಮಾತು ಆಡಲಿ – ನಾವು ಕೈಗೊಂಡಿರುವ ಕೆಲಸ ಶ್ರೇಷ್ಠವಾದುದೆಂಬ ನಂಬಿಕೆ ನಮ್ಮಲ್ಲಿರುವವರೆಗೆ ನಮ್ಮನ್ನು ಯಾರು ಅಲುಗಾಡಿಸಲು ಸಾಧ್ಯ. ಒಂದು ಮಹತ್ಕಾರ್ಯ ಕೈಗೊಂಡಾಗ ಸಾವಿರ ಮಾತು ಬರುತ್ತದೆ. ಪಿಶುಣರು, ಆಶಾಬುರುಕರು, ಸ್ವಾರ್ಥಿಗಳು, ಕುಚೋದ್ಯಪ್ರಿಯರು ನಾಯಿಕೊಡೆಗಳಂತೆ ತಲೆಯೆತ್ತುತ್ತಾರೆ. ಅವರ ಭರ್ತ್ಸನೆಗೆ ತಲೆಬಾಗುವುದು ನಮ್ಮ ದೌರ್ಬಲ್ಯದ ಚಿನ್ಹೆ. ನಾಲ್ಕು ಹರಕು ಮಾತಿಗೆ ಅಂಜಿ, ಸೋತು ಕುಳಿತುಕೊಳ್ಳುವವನು ಜಗತ್ತಿನಲ್ಲಿ ಏನನ್ನು ಸಾಧಿಸಬಲ್ಲ. ಈಗ ನಮ್ಮ ಮೇಲೆ ಮುಸುಕಿರುವ ಮೋಡ ನಾಳೆ ತಾನೇ ಚದುರಿಹೋಗುತ್ತದೆ. ಆಶ್ರಮದ ನಿಷ್ಕಾಮ ಸೇವೆಯೇ ಅದಕ್ಕೆ ಎಲ್ಲರ ಗೌರವ, ಪ್ರೇಮ, ಸಹಾನುಭೂತಿಯನ್ನು ದೊರಕಿಸುತ್ತದೆ. ಅಲ್ಲಿಯವರೆಗೆ ನಾವು ಶಾಂತಚಿತ್ತರಾಗಿರಬೇಕು – ಬರುವ ಅಪಘಾತಗಳನ್ನು ಧೈರ್ಯದಿಂದ ಎದುರಿಸಬೇಕು.

"ನಿನ್ನನ್ನು ಬಿಟ್ಟು ನಾನಿರಲಾರೆ ಲಲಿತಾ – ಈ ನನ್ನ ಇಳಿವಯಸ್ಸಿನಲ್ಲಿ ಇಷ್ಟೊಂದು ಹುಮ್ಮಸ್ಸು, ಸೇವಾಕಾಂಕ್ಷೆ ತುಂಬಿರುವವಳೇ ನೀನು. ನೀನು ನನ್ನ ಮಗಳಲ್ಲವೇ – ಮಗಳು ತಾಯಿಯನ್ನು ದೂರಮಾಡುವುದು ನ್ಯಾಯವೇ?"

ಉದ್ವೇಗಗೊಂಡ ಲಲಿತಮ್ಮ ಸುಂದರಮ್ಮನವರ ತೊಡೆಯ ಮೇಲೆ ತಲೆಯಿಟ್ಟು

"ಕ್ಷಮಿಸಿ ಮ್ಯಾಡಾಂ – ನಿಮ್ಮನ್ನು ಬಿಟ್ಟುಹೋಗುವುದಿಲ್ಲ"

ಎಂದು ಮಕ್ಕಳಂತೆ ಅತ್ತುಬಿಟ್ಟಳು.

೨೪

'ಅಭಯಾಶ್ರಮ'ದಲ್ಲಿ ನಡೆದ ಘಟನೆಯನ್ನು ಲಲಿತ ಮೂರ್ತಿಗೆ ಹೇಳಲಿಲ್ಲ.

ಒಂದುದಿನ ಮಧ್ಯಾಹ್ನ ಮೂರ್ತಿ, ಲಲಿತ ಮಾತನಾಡುತ್ತ ಕುಳಿತಿರುವಾಗ.

"ನೀವು ತುಂಬ ಬಡವಾಗಿದ್ದೀರಿ" ಎಂದಳು.

"ಆಫೀಸಿನಲ್ಲಿ ಕೈತುಂಬ ಕೆಲಸ. ಕೆಲಸವಿದೆಯೆಂದು ಬೇಸರವಾಗುವುದಿಲ್ಲ – ಆದರೆ ಮನಸ್ಸಿಗೆ ಹರ್ಷವಿಲ್ಲ."

"ಹೀಗೆ ನೀವು ದುಡಿದರೆ ಕಾಹಿಲೆ ಬೀಳುವಿರಿ."

"ದುಡಿಯದಿದ್ದರೆ ಆಗುತ್ತದೆಯೇ ?"

"ನನ್ನ ಮಾತು ಕೇಳುವಿರಾ ?"

"ನಿನ್ನ ಮಾತು ಯಾವದನ್ನು ಕೇಳಿಲ್ಲ."

"ಒಂದುವಾರ ರಜಾ ತೆಗೆದುಕೊಳ್ಳಿ."

"ರಜಾ ತೆಗೆದುಕೊಂಡೇನು ಮಾಡಲಿ."

"ನನಗೂ ವಿಶ್ರಾಂತಿ ಹವಾ ಬದಲಾವಣೆ ಬೇಕಾಗಿದೆ. ನಾಲ್ಕು ದಿನವಾದರೂ ನಾವು ಬೆಂಗಳೂರು ಬಿಟ್ಟುಹೋಗಿ ಬರಬೇಕಾದುದಗತ್ಯ."

"ಬೆಂಗಳೂರು ನಾವು ಬಿಟ್ಟುಹೋದರೆ, ಬೆಂಗಳೂರಿನ ಚಿಂತೆ ನಮ್ಮನ್ನು ಬಿಡುವುದೇ ?"

"ಒಮ್ಮೆ ಪರೀಕ್ಷೆ ಮಾಡಿ ನೋಡೋಣ."

"ಆಗಬಹುದು – ನಾವೇಕೆ ಒಂದು ಸಣ್ಣ ಪಾರ್ಟಿ ಮಾಡಬಾರದು. ನೀನೂ, ನಾನೂ, ಸುಂದರಮ್ಮನವರು, ನಿಮ್ಮ ತಾಯಿ, ನಿರ್ಮಲಾ – ನಂದೀ ಬೆಟ್ಟಕ್ಕೆ ಹೋಗಿ ನಾಲ್ಕು ದಿನವಿದ್ದು ಬರೋಣ."

"ಅಮ್ಮ ಬರುವುದಿಲ್ಲ. ಅವಳ ಮಡಿಮೈಲಿಗೆ ರಾಮಾಯಣ ಜಾಸ್ತಿ – ನಾವು ಹೋಗೋಣ"

ಎಂದಂದು ಸರಸವಾಗಿ

"ಇದೇನು ದೊರೆ – ಈಚೆಗೆ ನಿರ್ಮಲನ ಧ್ಯಾನ ಬಹಳ ಮಾಡುತ್ತಿರುವಿರಿ?"

"ನಿನ್ನ ರಿಟೈರ್ ಮಾಡಿಸಬೇಕೆಂದು – ರಾಘವಯ್ಯ ನಿರ್ಮಲನನ್ನು ನನಗೆ ಗಂಟುಹಾಕೇ ಇದ್ದಾನಲ್ಲಾ! ಅವನು ನನ್ನಮೇಲೆ ಎಷ್ಟು ಕ್ರೂರವಾಗಿ, ತೀಕ್ಷ್ಣವಾಗಿ ಬರೆದಿದ್ದರೂ ನನಗೆ ವ್ಯಸನವಾಗುತ್ತಿರಲಿಲ್ಲ – ನಿರ್ಮಲನನ್ನು ನನಗೆ ಗಂಟುಹಾಕಿರುವ ವಿಷಯ........."

"ಹೋಗಲಿ ಬಿಡಿ. ಅಲ್ಪರ ಬಾಯಲ್ಲಿ ದೊಡ್ಡ ಮಾತು ಹೇಗೆ ನಿರೀಕ್ಷಿಸಲು ಸಾಧ್ಯ.—ನಮ್ಮ ಟ್ರಿಪ್ (Trip) ಖಂಡಿತ ತಾನೇ?"

"ಅದರಲ್ಲಿ ಸಂದೇಹವೇನು?"

"ದೊಡ್ಡ ಸಂಪಾದಕರು–ಕೊನೆ ಘಳಿಗೆಯಲ್ಲಿ 'ನನಗೆ ವಿಪರೀತ ಕೆಲಸ – ನೀವೇ ಹೋಗಿ ಬನ್ನಿ' ಎಂದೆಲ್ಲಿ ಹೇಳುತ್ತೀರೋ ಎಂದು ಭಯ."

"ಇಲ್ಲ ಲಲಿತಾ – ಖಂಡಿತ ಹೊರಡುತ್ತೇನೆ. ನನಗೂ ಸ್ವಲ್ಪ ಹವಾ ಬದಲಾವಣೆ ಬೇಕು. ಕಛೇರಿಯ ಹೊಲಸು ರಾಜಕೀಯ ನನ್ನ ಶಾಂತಿಯನ್ನು ಕದಡುತ್ತಿದೆ" ಎಂದ.

ಲಲಿತ ಹಸನ್ಮುಖಿಯಾಗಿ

"ನಾನು ಸುಂದರಮ್ಮನವರಿಗೂ ನಿರ್ಮಲನಿಗೂ ಈ ಸುದ್ದಿ ತಿಳಿಸುತ್ತೇನೆ" ಎಂದಳು.

"ಅಗತ್ಯವಾಗಿ ತಿಳಿಸು."

"ಎಂದು ನಾವು ಹೊರಡುವುದು."

"ಇವತ್ತು ಶುಕ್ರವಾರ – ಭಾನುವಾರ ಬೆಳಿಗ್ಗೆ ಪೇಪರ್ ಹೊರಗೆ ಹಾಕಿ ಹೊರಡೋಣ."

ಸಂಜೆ ಮೂರ್ತಿಯ ಅಪೇಕ್ಷೆಯಂತೆ ಗೋಪಾಲಶೆಟ್ಟರು ಅವನ ಹಾದಿ ನೋಡುತ್ತ ಕಛೇರಿಯಲ್ಲಿ ಕುಳಿತರು. ಮೂರ್ತಿ ಬಂದೊಡನೆಯೇ ಶೆಟ್ಟರು ಕಾಫಿ ತರಿಸಿ.

"ನನ್ನನ್ನು ನೋಡಬೇಕೆಂದಿರಂತೆ."

"ಹೌದು."

"ಏನು ಸಮಾಚಾರ."

“ನಾನು ಬೆಂಗಳೂರಿಗೆ ಬಂದ ಮೇಲೆ ಎಲ್ಲಿಯೂ ಹೋಗಿಲ್ಲ. ನಾಲ್ಕು ದಿನ ನನಗೆ ವಿಶ್ರಾಂತಿ ಅಗತ್ಯವಾಗಿದೆ. ಭಾನುವಾರದ ಪೇಪರ್ ನೋಡಿ ಕೊಂಡು ನಾನು ಹೋಗಿಬರಲು ಅಪ್ಪಣೆ ಕೊಡಬೇಕು.”

“ಯಾವಾಗ ಹಿಂದಿರುಗುವಿರಿ?”

“ಪ್ರಾಯಶಃ ಶುಕ್ರವಾರ – ಅಥವಾ ಶನಿವಾರ.”

“ಬಹಳ ದೂರ ಹೋಗುವಿರಾ ?”

“ಇಲ್ಲ – ನಂದೀಬೆಟ್ಟಕ್ಕೆ ಹೋಗಿಬರುತ್ತೇನೆ.”

“ನಿಮ್ಮ ಲೀಡರ್ (Leader) ಸಬ್ – ಲೀಡರ್‌ಗಳನ್ನು ಅಲ್ಲಿಂದಲೇ ಕಳಿಸಿಕೊಡುತ್ತೀರಾ ?”

“ಇಲ್ಲ – ಪುಟ್ಟಣ್ಣ ಹೇಗೂ ಸೀನಿಯರ್ ಸಬ್ – ಎಡಿಟರ್. ಅವರೇ ಲೀಡರ್ ಬರೆಯಲಿ.”

“ಪುಟ್ಟಣ್ಣನಿಗೆ ಇಷ್ಟು ಜವಾಬ್ದಾರಿ ವಹಿಸಬಹುದೇ ?”

“ಪುಟ್ಟಣ್ಣ - ವಿಶ್ವೇಶ್ವರಯ್ಯ ಇಬ್ಬರೂ ದಕ್ಷರು - ಲೀಡರ್ ಬರೆಯಲು ಅವರು ಸಮರ್ಥರಾಗಿದ್ದಾರೆ.”

“ನೀವು ಅವರಿಗೆ ಸರಿಯಾಗಿ ಹೇಳಿ ಹೋಗಬೇಕು.”

“ಆ ಹೊಣೆ ನನಗಿರಲಿ.”

“ಹೋಗಿ ಬನ್ನಿ - ಶನಿವಾರ ಖಂಡಿತ ಬರುವಿರಷ್ಟೆ !”

“ನಿಮ್ಮ ಕೆಲಸಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇನೆ.”

“ಮೂರ್ತಿಯವರೇ - ನಿಮ್ಮಲ್ಲಿ ಇನ್ನೊಂದು ವಿಷಯ ಪ್ರಸ್ತಾಪಿಸ ಬೇಕಾಗಿತ್ತು. ವಿಷಯ ಅತಿ ಸೂಕ್ಷ್ಮ - ನೀವು ಅಪ್ಪಣೆಕೊಟ್ಟರೆ ತಿಳಿಸು ತ್ತೇನೆ.”

“ನನ್ನ ಸಾರ್ವಜನಿಕ ಹಾಗೂ ಖಾಸಗಿ ಜೀವನದಲ್ಲಿ ಮುಚ್ಚುಮರೆ ಯಿಲ್ಲ. ನನ್ನ ಬಗ್ಗೆ ಸಂದೇಹವುಂಟಾಗಿದ್ದರೆ ನನ್ನನ್ನು ಕೇಳಿಯೇ ಪರಿಹರಿಸಿ ಕೊಳ್ಳುವುದು ರಾಜಮಾರ್ಗ.”

“‘ಯುಗವಾಣಿ - ಕಾಲದೂತ’ ಪತ್ರಿಕೆಗಳಲ್ಲಿ ಬಂದಿರುವ ಟೀಕೆ ಗಳನ್ನು ನೋಡಿರುವಿರಾ ?”

“ನೋಡಿದ್ದೇನೆ. ನೀವೂ ನೋಡಿರಬೇಕು.”

"ಸಂಪಾದಕರು ಅವುಗಳನ್ನು ಗುರುತುಮಾಡಿ ನನಗೂ ಕಳಿಸಿಕೊಟ್ಟಿದ್ದಾರೆ.—ಇದರಲ್ಲಿ ಏನಾದರೂ ಸತ್ಯವಿದೆಯೇ?"

"ನನ್ನ ಮೊದಲನೆಯ ವಿವಾಹ ಸಂಬಂಧದ ವಿಷಯ ನಿಮಗೆ ಗೊತ್ತೇ ಇದೆಯಲ್ಲ - ಲಲಿತಮ್ಮನನ್ನು ನಾನು ಶಾಸ್ತ್ರ ವಿಧಿಯಂತೆ ವಿವಾಹವಾಗಿದ್ದೇನೆ - ನಿರ್ಮಲಾ ನನ್ನ ಸೋದರಿ - ಇದು ಸತ್ಯ ಸಂಗತಿ."

"ರಾಘವಯ್ಯ, ವಶಿಷ್ಠ ಏತಕ್ಕೆ ನಿಮ್ಮ ಮೇಲೆ ವಿಷಕಾರುತ್ತಿದಾರೆ?"

"ಅದಕ್ಕೆ ಉತ್ತರ ನಾನು ಹೇಗೆ ಹೇಳಲಿ. ಪ್ರಾಯಶಃ ಅವರು ನನಗಿಂತ ನೀತಿಪರರಾಗಿರಬೇಕು."

"ಅವರ ನೀತಿಯೆಂಥದೆಂಬುದನ್ನು ನಾನು ಚೆನ್ನಾಗಿ ಬಲ್ಲೆ. ಅವರ ಚಲನವಲನಗಳ ವಿಷಯ ರಾಮಚಂದ್ರಶೆಟ್ಟರು ನನಗೆ ಹೇಳಿದ್ದಾರೆ. - ಪ್ರಬಲರನ್ನು ಶತ್ರುಗಳನ್ನಾಗಿ ಮಾಡಿಕೊಳ್ಳಬಾರದು ಮೂರ್ತಿರಾಯರೇ."

"ನಾನು ರಾಘವಯ್ಯನ ಜತೆ ರಾಜೀಸಂಧಾನ ಆರಂಭಿಸಲೇ?"

"ನಿಮ್ಮ ನೀತಿಯನ್ನು ಶಂಕಿಸಿ ಅವನು ಟೀಕೆಮಾಡಿದರೆ ನಮ್ಮ ಪತ್ರಿಕೆಗೆ ಧಕ್ಕೆ ತಗಲುತ್ತದೆ."

"ಅವನು ಹೇಳುತ್ತಿರುವುದು ನಿಜವೆಂದು ನಿಮ್ಮ ಮನಸ್ಸಿಗೆ ನಂಬಿಕೆಯಾಗಿದೆಯೇ?"

"ಇಲ್ಲ."

"ಹಾಗಾದರೇಕೆ ಯೋಚನೆ ಮಾಡಬೇಕು. ನಾಯಿ ಬೊಗಳಿದರೆ ದೇವಲೋಕ ಹಾಳೇ?"

"ಸಂಪಾದಕರ ಬಗ್ಗೆ ಓದುಗರಿಗೆ ದುರಭಿಪ್ರಾಯ ಹುಟ್ಟಿದರೆ ಪತ್ರಿಕೆಗೆ ಬೆಲೆ ಬರುವುದಿಲ್ಲ."

"ನನ್ನಿಂದ ಯಾವತ್ತು ಪತ್ರಿಕೆಗೆ ತೊಂದರೆಯಾಗುತ್ತದೆಂದು ನಿಮ್ಮ ಮನಸ್ಸಿಗೆ ಖಚಿತವಾಗುತ್ತದೋ ತಿಳಿಸಿ. ಅಂದೇ ನಾನು ರಾಜೀನಾಮೆ ಸಲ್ಲಿಸುತ್ತೇನೆ."

"ಅಷ್ಟು ದೂರ ನೀವು ಹೋಗಬೇಕಾಗಿಲ್ಲ. ನಿಮ್ಮನಿಮ್ಮಲ್ಲಿಯೇ ಏನಾದರೂ ಒಪ್ಪಂದ ಮಾಡಿಕೊಂಡರೆ ಒಳ್ಳೆಯದೆಂದು ನನ್ನ ಅಭಿಪ್ರಾಯ."

"ರಾಘವಯ್ಯನಿಂದ ನಾನು ಯಾವ ಪಾಠವನ್ನೂ ಕಲಿಯಲು ಸಿದ್ಧನಾಗಿಲ್ಲ ಶೆಟ್ಟರೇ."

"ಆಗಲಿ – ಊರಿಗೆ ಹೋಗಿ ಬನ್ನಿ. ನೀವು ಹಿಂದಿರುಗಿದ ಮೇಲೆ ಮಿಕ್ಕ ವಿಷಯ ಮಾತಾಡೋಣ"

ಎಂದು ಗೋಪಾಲಶೆಟ್ಟರು ಮಾತು ಕೊನೆಗಾಣಿಸಿದರು.

'ಜನಸಂದೇಶ'ಕ್ಕೂ ತನಗೂ ಇದ್ದ ಋಣಾನುಬಂಧ ಮುಗಿಯುವ ಕಾಲ ಸನ್ನಿಹಿತವಾಯಿತೆಂದು ಮೂರ್ತಿ ಊಹಿಸದಿರಲಿಲ್ಲ.

ಮೂರ್ತಿ, ಲಲಿತಾ, ಸುಂದರಮ್ಮ, ನಿರ್ಮಲಾ ಹೊರಡುವ ದಿನ ಗೌರಮ್ಮನವರು ಬೇಗ ಎದ್ದು ಬಿಸಿಬೇಳೆ ಹುಳಿಯನ್ನ, ಮೊಸರನ್ನ ಮಾಡಿ ಹಪ್ಪಳ ಸಂಡಿಗೆ ಕರೆದು ಬುತ್ತಿ ಕಟ್ಟಿಕೊಟ್ಟರು.

ಎಲ್ಲರೂ ನಂದೀಬೆಟ್ಟ ಸೇರುವ ವೇಳೆಗೆ ಮಧ್ಯಾನ್ಹವಾಯಿತು. 'ಓಕ್‌ಲೆಂಡ್ಸ್' (Oaklands) ಬಂಗಲೆಯಲ್ಲಿ ಮೂರ್ತಿ ಎರಡು ರೂಮು ತೆಗೆದುಕೊಂಡ. ರೂಮಿನಲ್ಲಿ ಸಾಮಾನುಗಳನ್ನಿಟ್ಟೊಡನೆಯೇ ಲಲಿತ

"ನನಗೆ ಕಾಫಿ ಬೇಕು" ಎಂದಳು.

ಮೂರ್ತಿ ನಸುನಗುತ್ತಾ

"ನಿನಗೊಬ್ಬಳಿಗೇ ಏನು – ನನಗೂ ಬೇಕು – ಎಲ್ಲರಿಗೂ ಬೇಕು" ಎಂದ.

ನಂದಿಯ ಬೆಟ್ಟದ ಮೇಲೆ ದೇವರಾಯ ಸಮುದ್ರದ ಶ್ರೀನಿವಾಸ ಅಯ್ಯರ್ ಸೊಗಸಾದ ಹೊಟೇಲ್ ನಡೆಸುತ್ತಿದ್ದ. ಮಿಕ್ಕ ಹೊಟೇಲ್‌ಗಳಿಗಿಂತ ಅವನ ಧಾರಣೆ ಒಂದೆರಡಾಣೆ ಹೆಚ್ಚಾಗಿದ್ದರೂ, ಪದಾರ್ಥಗಳು ಶುಚಿರುಚಿಯಾಗಿರುತ್ತಿದ್ದವು.

ನಂದೀಬೆಟ್ಟಕ್ಕೆ ಬರುತ್ತಿದ್ದ ಅನೇಕ ಪ್ರವಾಸಿಗರು ಅದರ ಅಂದಚೆಂದಗಳಿಗೆ ಆಕರ್ಷಿತರಾಗಿದ್ದಂತೆ ಶ್ರೀನಿವಾಸ ಅಯ್ಯರ್ ಹೊಟೇಲಿಗೂ ಆಕರ್ಷಿತರಾಗಿದ್ದರು. ತಾನು ಹೊಟೇಲ್ ಮಾಲಿಕ ಎಂಬುದನ್ನು ಮರೆತು ಅಯ್ಯರ್ ಅತಿಥಿಗಳನ್ನು ಉಪಚರಿಸುತ್ತಿದ್ದ. ಅವರು ಹೇಳಿದ ಅಡಿಗೆ, ಉಪಹಾರ ಬೇಸರವಿಲ್ಲದೆ ಮಾಡಿಕೊಡುತ್ತಿದ್ದ.

ಇತರ ಹೊಟೇಲ್ ಮಾಲಿಕರಂತೆ ಶ್ರೀನಿವಾಸ ಅಯ್ಯರ್ ತುಪ್ಪದ ಬದಲು ಡಾಲ್ಡಾ ಉಪಯೋಗಿಸಿ, ಹಾಲಿನ ಬದಲು ಹಾಲಿನ ಪುಡಿ ಉಪಯೋಗಿಸಿ, ತೆಂಗಿನಕಾಯಿ ಬದಲು ಕಡಲೆಕಾಯಿ ಉಪಯೋಗಿಸಿ ಹಣ ಗಳಿಸಬಹುದಾಗಿತ್ತು.

"ಅನ್ನ ಮಾರಿಕೊಂಡು ಜೀವನ ಮಾಡುವುದು ಮೊದಲೇ ಇದು ನೀಚವೃತ್ತಿ. ಯಾವ ಜನ್ಮದ ಪಾಪಶೇಷದಿಂದಲೋ ಈ ವೃತ್ತಿ ಗಂಟು ಬಿದ್ದಿದೆ. ಮುಂದಿನ ಜನ್ಮಕ್ಕೂ ನಾನೇಕೆ ಪಾಪ ಸಂಗ್ರಹಿಸಬೇಕು. ಅತಿಥಿಗಳು ಕೊಡುವ ಹಣಕ್ಕೆ ಸರಿಯಾಗಿ ಶುಚಿಯಾದ ಊಟ, ತಿಂಡಿ ಒದಗಿಸುತ್ತೇನೆ. ಇದರಿಂದ ನನ್ನ ಊಟವೂ ಕಳೆದುಹೋಗುತ್ತದೆ– ನ್ಯಾಯವಾಗಿ ನಾಲ್ಕುಕಾಸೂ ಕೈಹತ್ತುತ್ತದೆ"

ಎಂಬುವೇ ಶ್ರೀನಿವಾಸ ಅಯ್ಯರ್ ಸಿದ್ಧಾಂತವಾಗಿತ್ತು.

ಮೂರ್ತಿ ಕಾಫಿಗೆ ಹೇಳಲು ಹೊಟೇಲ್ ಬಳಿ ಹೋದಾಗ ಅಯ್ಯರು ನಾಲ್ವರಿಗೆ ಊಟಕ್ಕಿಕ್ಕುತ್ತಿದ್ದ. ಮೂರ್ತಿಯನ್ನು ಕಂಡೊಡನೆಯೇ

"ಏನು ಬೇಕಾಗಿತ್ತು ಸ್ವಾಮಿ" ಎಂದು ಕೇಳಿದ.

"ನಾವು ಈಗತಾನೆ ಬಂದಿದ್ದೇವೆ. ಓಕಲೆಂಡ್ಸ್ ಬಂಗಲೆಗೆ ನಾಲ್ಕು ಕಪ್ಪು ಕಾಫಿ ಕಳಿಸಲು ಸಾಧ್ಯವೇ?"

"ಕಳಿಸಿಕೊಡುತ್ತೇನೆ ಸ್ವಾಮಿ – ತಮ್ಮದು ಯಾವೂರು?"

"ಬೆಂಗಳೂರು."

"ಮಧ್ಯಾಹ್ನದ ಊಟ?"

"ಇವತ್ತಿಗೆ ಬುತ್ತಿಯಿದೆ. ನಾಳೆಯಿಂದ ಊಟ ಕಳುಹಿಸಿ ಕೊಡುವಿರಂತೆ. ನಾವು ನಾಲ್ಕುದಿನ ಇರಬೇಕೆಂದಿದ್ದೇವೆ.

"ಹಾಗೇ ಆಗಲಿ – ನಿಮಗೆ ಏನು ಬೇಕೋ ಹೇಳಿ ಸ್ವಾಮಿ – ಮಾಡಿಸಿ ಕಳಿಸುತ್ತೇನೆ" ಎಂದ.

ಅಯ್ಯರ್ ಕಳಿಸಿದ್ದ ಕಾಫಿ ಸೇವಿಸುತ್ತ ಸುಂದರಮ್ಮನವರು

"ಎಷ್ಟು ಚೆನ್ನಾಗಿದೆ. ಇಂಥ ಕಾಫಿ ಬೆಂಗಳೂರಿನಲ್ಲಿ ಎಲ್ಲಿಯೂ ಸಿಕ್ಕುವುದಿಲ್ಲ" ಎಂದರು.

ಶ್ರೀನಿವಾಸ ಅಯ್ಯರ್ ವಿಷಯ ವಿವರಿಸುತ್ತಾ ಮೂರ್ತಿ

"ವ್ಯಾಪಾರದಲ್ಲಿಯೂ ಧರ್ಮಮಾರ್ಗ ಅನುಸರಿಸುವುದು ಸಾಧ್ಯವೆನ್ನು ವುದನ್ನು ಶ್ರೀನಿವಾಸ ಅಯ್ಯರ್ ತೋರಿಸಿಕೊಟ್ಟಿದ್ದಾರೆ" ಎಂದ.

ವಿಶ್ರಾಂತಿಯಲ್ಲಿ ಒಂದು ದಿನ ಕಳೆಯಿತು. ಸಂಜೆಗೆ ಮೂರ್ತಿ ಎಲ್ಲರನ್ನೂ ಕರೆದುಕೊಂಡು ನಂದೀಬೆಟ್ಟದ ಪ್ರೇಕ್ಷಣೀಯ ನೋಟಗಳನ್ನು ನೋಡಿ ಬಂದ. ಗಾಂಧೀಜಿ ನಂದೀಬೆಟ್ಟದ ಮೇಲಿದ್ದಾಗ ತಂಗಿದ ಸ್ಥಳ, ಅಭಿಪ್ರಾಯ ಪುಸ್ತಕದಲ್ಲಿ ಅವರು ಬರೆದಿದ್ದ ನಾಲ್ಕು ಪಂಕ್ತಿಗಳನ್ನು ಕಂಡು ಎಲ್ಲರೂ ಪುಲಕಿತರಾದರು.

"ಬಾಪೂ ಪಾದಸ್ಪರ್ಶದಿಂದ ನಂದೀ ಪವಿತ್ರವಾಗಿದೆ"

ಎಂದು ಮೂರ್ತಿ ಭಾವನಾವೇಶದಿಂದ ನುಡಿದ.

ಮಾರನೆಯ ದಿನದಿಂದ ಶ್ರೀನಿವಾಸ ಅಯ್ಯರ್ ಆತಿಥ್ಯ ಸ್ವೀಕರಿಸಲೇ ಬೇಕಾಯಿತು. ಅಯ್ಯರ್ ಕಳಿಸಿದ್ದ ಮೃಷ್ಟಾನ್ನ ಊಟಮಾಡಿ ಎಲ್ಲರೂ ತಾಂಬೂಲ ಚರ್ವಣಕ್ಕೆ ಕುಳಿತಿದ್ದಾಗ ಮೂರ್ತಿ

"ಗೋಪಾಲಶೆಟ್ಟರಿಗೂ ನನ್ನ ಮೇಲೆ ದೂರುಗಳು ಹೋಗಿವೆ ಲಲಿತಾ. ನನ್ನ 'ಯುಗವಾಣಿ - ಕಾಲದೂತ' ಸಂಪಾದಕ ಮಿತ್ರರು ಪ್ರತಿಯೊಂದು ಟೀಕೆ ಟಿಪ್ಪಣಿಯನ್ನೂ ಗುರುತುಮಾಡಿ ಶೆಟ್ಟರಿಗೆ ಕಳಿಸಿಕೊಟ್ಟಿದ್ದಾರೆ."

"ಆ ವಿಷಯ ಶೆಟ್ಟರು ಪ್ರಸ್ತಾಪಿಸಿದರೇ ?"

"ಮೊನ್ನೆ ಅವರ ಅಪ್ಪಣೆ ಪಡೆದು ಬರಲು ನಾನು ಹೋದಾಗ ಮಾತು ಬಂತು. ನಾನು ರಾಘವಯ್ಯ, ವಶಿಷ್ಠರೊಂದಿಗೆ ರಾಜಿಮಾಡಿಕೊಳ್ಳ ಬೇಕೆಂದು ಶೆಟ್ಟರು ಸೂಚಿಸಿದರು."

"ನೀವು ಒಪ್ಪಿದರಾ" ಎಂದು ಸುಂದರಮ್ಮನವರು ಕೇಳಿದರು.

"ಒಪ್ಪಲು ಹೇಗೆ ಸಾಧ್ಯ? ಅವರೊಂದಿಗೆ ಜಗಳ ಕಾಯುವುದಕ್ಕೆ ನನಗೆ ಇಷ್ಟವಿಲ್ಲ. ಆದರೆ ಈಗ ನಾನು ರಾಜೀ ಸಂಧಾನ ಮಾಡಿದರೆ ಅವರ ವಾದವನ್ನೇ ಸಮರ್ಥಿಸಿ ನನ್ನ ದೌರ್ಬಲ್ಯ ಪ್ರಕಟಿಸಿದಂತಾಗುತ್ತದೆ."

"ಪರಿಣಾಮ ಎಷ್ಟು ಘೋರವಾದರೂ ಚಿಂತೆಯಿಲ್ಲ. ನೀವು ಅವರೊಂದಿಗೆ ರಾಜಿಸಂಧಾನ ಮಾಡಕೂಡದು."

ಎಂದು ಲಲಿತಮ್ಮ ನಿರ್ಧಾರದಿಂದ ನುಡಿದಳು.

ಸುಂದರಮ್ಮನವರು ಚಿಂತಾಕುಲರಾಗಿ

"ವಿನಾಕಾರಣ ನಿನ್ನ ಹೆಸರು ಬಯಲಿಗೆಳೆದು ಅಪಮಾನ ಮಾಡುವರಲ್ಲಾ ಲಲಿತಾ!" ಎಂದರು.

"ನೋಡಿಯಮ್ಮ - ನಾನು ಶೀಲವತಿಯೋ ಶೀಲವತಿಯಲ್ಲವೋ ಎನ್ನುವ ವಿಷಯ ನನ್ನ ಸ್ವಾಮಿ ಚೆನ್ನಾಗಿ ಬಲ್ಲರು. ಎಂದಿನವರೆಗೆ ಅವರ ವಿಶ್ವಾಸಕ್ಕೆ ಚ್ಯುತಿಬರುವುದಿಲ್ಲವೋ ಅಂದಿನವರೆಗೆ ನಾನು ಯಾರಿಗೂ ಹೆದರುವ ಕಾರಣವಿಲ್ಲ. ಅಂದು ನೀವೇ ಹೇಳಿದಂತೆ ಈ ಕುತ್ತನ್ನು ನಾವು ಎದುರಿಸಲೇಬೇಕು. ಶೀಲವನ್ನು ರಕ್ಷಿಸಿಕೊಂಡು ಸಾರ್ವಜನಿಕ ಕೆಲಸ ಮಾಡಲು ಸಾಧ್ಯವೆಂಬುದನ್ನು ನಾವು ತೋರಿಸಿಕೊಡಬೇಕು."

"ನನಗೆ ತುಂಬ ಬೇಸರವಾಗಿದೆ ಲಲಿತಾ. ಮುಂಬಯಿ ಬಿಡುವುದೇ ಬೇಡವೆಂದು ನಾನು ಹೇಳಿದೆ - ನೀನು ಕೇಳಲಿಲ್ಲ."

"ಕನ್ನಡಕ್ಕಿಂತ ನಿಮ್ಮ ವೈಯಕ್ತಿಕ ಹಿತ ಹಿರಿಯದೆಂದು ಭಾವಿಸುವಿರಾ?"

"ಇಲ್ಲ - ಕನ್ನಡಸೇವೆ ಮಾಡಬೇಕಾದರೂ ಚೈತನ್ಯ ಬೇಕಲ್ಲ. ಮಾಡಿದ ಕೆಲಸವೆಲ್ಲಾ ಮಣ್ಣುಗೂಡುತ್ತ ಬಂದರೆ, ನಂಬಿದವರೆಲ್ಲಾ ಮೋಸಮಾಡುತ್ತ ಬಂದರೆ, ದುರುದ್ದೇಶದ ಆರೋಪಣೆ ನನ್ನ ಧ್ಯೇಯವನ್ನು ಕಬಳಿಸುತ್ತ ಬಂದರೆ ನನ್ನಲ್ಲಿ ಯಾವ ಉತ್ಸಾಹ, ಯಾವ ಶಕ್ತಿ, ಯಾವ ಸಂಕಲ್ಪ ಉಳಿಯಲು ಸಾಧ್ಯ?"

"ನಿಮ್ಮ ಶಕ್ತಿ ನಿಮ್ಮೊಳಗೇ ಬೆಳೆಯಬೇಕಲ್ಲವೇ? ಹುಯ್ಯಹಾಲಿನಿಂದ ಬೆಳೆದ ಮಗು ದೃಢಕಾಯನಾಗಿರುವುದು ಶಕ್ಯವೇ?"

"ವ್ಯಕ್ತಿಯ ಅಂತರಂಗದಲ್ಲಿಯೇ ಶಕ್ತಿಯ ಪ್ರಚೋದನೆಯಾಗಬೇಕು. ಹೊರಗಿನ ಉತ್ತೇಜನಕ್ಕೆ (Impetus) ಅವನು ಕಾಯಬಾರದು. ನಿಜ. ಆದರೆ ಲಲಿತಕಲೆಗಳು ಸ್ತ್ರೀಕಲೆಗಳು. ಲತೆ, ವನಿತೆ, ವಿತ್ತಕ್ಕೆ ಆಶ್ರಯ ಬೇಕು ಎಂದು ಹೇಳಿರುವ ಸುಭಾಷಿತಕಾರ ಸತ್ಯವನ್ನೇ ನುಡಿದಿದ್ದಾನೆ. ಅವುಗಳ ಜತೆಗೆ ವಿದ್ಯೆಯನ್ನೂ ಸೇರಿಸಿಕೊಳ್ಳಬೇಕು. ಸನ್ಮಾನ, ಸಂಭಾವನೆಗಳಿಂದ ಕಲಾವಿದ ತೃಪ್ತನಾಗುವುದಿಲ್ಲ. ರಸಿಕನ ಸಹೃದಯತೆ, ಸಾಂತಃಕರಣ ಅವನಿಗೂ ಅವನ ಕೃತಿಗೂ ಅತ್ಯವಶ್ಯಕವಾಗಿ ಬೇಕು."

"ಪತ್ರಿಕಾವೃತಿಯನ್ನೂ ಒಂದು ಕಲೆಯೆನ್ನುವಿರಾ?"

ಎಂದು ಸುಂದರಮ್ಮನವರು ಕೇಳಿದರು

"ಶಾಸ್ತ್ರದೃಷ್ಟಿಯಿಂದ ಅದನ್ನು ಲಲಿತಕಲೆಗಳ ವರ್ಗಕ್ಕೆ ಸೇರಿಸಲಾಗದಿದ್ದರೂ, ಪ್ರತಿಭಾವಂತನ ಕೈಯಲ್ಲಿ ಅದು ಲಲಿತಕಲೆಯಾಗಬಹುದು. ಸತ್ಯದರ್ಶನ, ನಿರ್ಮಲಾನಂದವೇ ಲಲಿತಕಲೆಯ ಗುರಿಯೆಂದು ನಾವೊಪ್ಪಿಕೊಂಡರೆ ಪತ್ರಿಕೆಯೂ ಅವುಗಳನ್ನು ಸಾಧಿಸಬಾರದೇಕೆ?"

"ನೀವು ಈ ಪತ್ರಿಕೆಯ ನೊಗಹೊತ್ತಿರುವುದು ಲಲಿತಮ್ಮನಿಗೆ ಸ್ವಲ್ಪವೂ ಸಮಾಧಾನವಿಲ್ಲ ಮೂರ್ತಿರಾಯರೇ!"

"ನಾನು ಬಲ್ಲೆನಮ್ಮ. ಯಾವ ಉದ್ದೇಶದಿಂದ ನಾನು 'ಜನಸಂದೇಶ'ದ ಸಂಪಾದಕತ್ವ ಒಪ್ಪಿಕೊಂಡೆನೋ ಆ ಉದ್ದೇಶ ಸಫಲವಾಗಿಲ್ಲ. ನನಗೆ ಈ ಸಂಸ್ಥೆಯಲ್ಲಿ ವಿಚಾರ ಹಾಗೂ ಲೇಖನ ಸ್ವಾತಂತ್ರ್ಯವೂ ಇಲ್ಲ. ಪತ್ರಿಕೆಗೆ ಕೈಮುಗಿದು ಮುಂಬಯಿಗೆ ಹೋಗೋಣವೆಂದರೆ ಲಲಿತ ಸಮ್ಮತಿಸುವುದಿಲ್ಲ."

"ಈಚೆಗೆ ಲಲಿತಮ್ಮ ಸಮ್ಮತಿಸುವುದರಲ್ಲಿದ್ದಳು. ನಾನೇ ವಿರೋಧಿಸಿದೆ. ನೀವು ಈ ದೇಶ ಬಿಟ್ಟು ಹೋಗುವುದು ನಿಮಗೂ ಒಳ್ಳೆತಲ್ಲ, ದೇಶಕ್ಕೂ ಒಳ್ಳೆತಲ್ಲ"

ಎಂದು ಸುಂದರಮ್ಮನವರು ಖಂಡಿತವಾಗಿ ನುಡಿದರು.

ನಾಲ್ಕುದಿನಗಳು ಆಟವಾಡಿದಂತೆ ಕಳೆದುಹೋದವು. ಐದನೆಯದಿನ ಮೂರ್ತಿ 'ಓಕಲೆಂಡ್ಸ್' (Oaklands) ಆಳುಗಳಿಗೆ ಸಂಭಾವನೆಯಿತ್ತು, ಶ್ರೀನಿವಾಸ ಅಯ್ಯರಿಗೆ ಕೃತಜ್ಞತೆ ಅರ್ಪಿಸಿ ತನ್ನ ಪರಿವಾರದೊಂದಿಗೆ ಬೆಂಗಳೂರಿಗೆ ಹಿಂದಿರುಗಿದ.

೨೮

ಬೆಳಿಗ್ಗೆ ನಂದೀಬೆಟ್ಟ ಬಿಟ್ಟು ಹೊರಡುತ್ತಿದ್ದ ಬಸ್ ಹನ್ನೊಂದು ಗಂಟೆಗೆ ಸರಿಯಾಗಿ ಬೆಂಗಳೂರು ಸೇರುತ್ತಿತ್ತು. ಮನೆಗೆ ಬಂದವನೇ ಮೂರ್ತಿ ವೇಳೆಗೆ ಕಛೇರಿಗೆ ಹೊರಡಲನುವಾದ.

"ಹೇಗೂ ಹೊತ್ತಾಗಿದೆ. ಸ್ನಾನ, ಊಟ ಮುಗಿಸಿಕೊಂಡು ಒಂದೇ ಸಲ ಕಛೇರಿಗೆ ಹೋಗಬಾರದೇ ?"

ಎಂದು ಲಲಿತಮ್ಮ ಕೇಳಿದಳು.

ಲಲಿತಮ್ಮನ ಸಲಹೆಯನ್ನಂಗೀಕರಿಸಿ ಮೂರ್ತಿ ಎರಡು ಗಂಟೆಯ ವೇಳೆಗೆ ಕಛೇರಿಗೆ ಬಂದ.

ಮೂರ್ತಿ ತನ್ನ ಕಾರ್ಯಾಲಯಕ್ಕೆ ಬಂದಕೂಡಲೆ ಪುಟ್ಟಣ್ಣ ಎದ್ದು ನಿಂತು ಅವನ ಕುರ್ಚಿ ಬಿಟ್ಟುಕೊಟ್ಟ.

"ಇವತ್ತಿನ ಲೀಡರ್ (Leader) ಮುಗಿಯಿತೇ ಪುಟ್ಟಣ್ಣ."

"ಬರೆದು ಕಂಪೋಸಿಂಗಿಗೆ (Composing) ಕಳಿಸಿದ್ದೇನೆ ಸರ್."

"ಪೇಪರ್ ಫೈಲ್ (File) ಕೊಡಿ."

ಪುಟ್ಟಣ್ಣ ಕೊಟ್ಟ 'ಜನಸಂದೇಶ'ದ ಫೈಲ್ ಕೈಗೆತ್ತಿಕೊಂಡು ಕಳೆದ ನಾಲ್ಕು ದಿನಗಳ ಪತ್ರಿಕಾ ಪ್ರತಿಗಳನ್ನು ಓದುತ್ತ ಕುಳಿತ.

ಪತ್ರಿಕೆಯ ಪ್ರತಿಗಳನ್ನೋದುತ್ತಿರುವಂತೆ ಮೂರ್ತಿಯ ಮುಖ ವಿವರ್ಣವಾಗುತ್ತ ಬಂದಿತು. ಫೈಲ್ ನೋಡಿದ್ದು ಮುಗಿಯಲು ಮೂರ್ತಿ ವಿಶ್ವೇಶ್ವರಯ್ಯ, ಬಸಪ್ಪ, ಸೂರ್ಯನಾರಾಯಣ, ನಂಜಪ್ಪನಿಗೂ ಹೇಳಿಕಳಿಸಿದ.

ಪುಟ್ಟಣ್ಣನ ಹಣೆಯ ಮೇಲೆ ಬೆವರು ಸಾಲುನಿಂತಿತು. ಅವನ ಕೈಕಾಲುಗಳು ನಡುಗಲಾರಂಭಿಸಿದವು. ಮೂರ್ತಿ ಗಂಭೀರವಾಗಿ

"ನಾನು ರಜಾದ ಮೇಲೆ ಹೋಗಿದ್ದಾಗ ಪತ್ರಿಕೆಯ ಜವಾಬ್ದಾರಿ ನಿರ್ವಹಿಸಿದ ನಿಮ್ಮನ್ನು ಅಭಿವಂದಿಸುತ್ತೇನೆ ಪುಟ್ಟಣ್ಣ."

"ಎಲ್ಲಾ ತಮ್ಮ ವಿಶ್ವಾಸ ಸರ್."

"ಈ ಪತ್ರಿಕೆಗೆ ನೀವು ನನ್ನಷ್ಟೇ ಹಳಬರು."

"ಹೌದು ಸರ್."

"ಪತ್ರಿಕೆಯ ಧ್ಯೇಯ ನನಗೆಷ್ಟು ಚೆನ್ನಾಗಿ ಗೊತ್ತಿದೆಯೋ ಅಷ್ಟೇ ಚೆನ್ನಾಗಿ ನಿಮಗೆ ಗೊತ್ತಿದೆ."

"................................................................"

ಮಿಂಚು ಸುಳಿಯುತ್ತಿದ್ದುದನ್ನು ಕಂಡ ಪುಟ್ಟಣ್ಣ ಸಿಡಿಲಿನ ಹೊಡೆತಕೆ ಸಿದ್ಧನಾದ.

"ಸಂಪಾದಕರು ಯಾರೇ ಆಗಿರಲಿ, ಪತ್ರಿಕೆಯ ಧ್ಯೇಯ ಸ್ಥಿರವಾಗಿರ ಬೇಕಾದುದು ಅಗತ್ಯವಲ್ಲವೇ ?"

"ಹೌದು ಸರ್."

"ಈ ನಾಲ್ಕು ದಿನಗಳ ಲೀಡರ್, ಸಬ್‌ಲೀಡರ್‌ಗಳನ್ನು ನೋಡಿದೆ. ಇದುವರೆಗೆ ಪತ್ರಿಕೆ ಅನುಸರಿಸಿದ ನೀತಿಗೆ ತದ್ವಿರುದ್ಧವಾಗಿ ನೀವು ಲೇಖನ ಗಳನ್ನು ಬರೆದಿರುವಿರಿ. ಕಾಗೋಡು ಸತ್ಯಾಗ್ರಹದ ಬಗ್ಗೆ ನಾನು ಬರೆದಿರುವ ಲೇಖನಕ್ಕೂ ನಿಮ್ಮ ಲೇಖನಕ್ಕೂ ಇರುವ ವ್ಯತ್ಯಾಸ ಗಮನಿಸಿ. ಒಂದೇ ಪತ್ರಿಕೆಯಲ್ಲಿ ನಾಲ್ಕು ದಿವಸಗಳ ಅಂತರದಲ್ಲಿ ಎರಡು ಬಗೆಯ ಅಭಿಪ್ರಾಯ ಗಳು ವ್ಯಕ್ತವಾಗುವುದು ಹಾಸ್ಯಾಸ್ಪದ. ಹೊಟೇಲ್ ಕೆಲಸಗಾರರ ಸಂಘ– ಮಹಾರಾಜಾ ಮಿಲ್ಸ್ ಲೇಬರ್ ಯೂನಿಯನ್ ಬಗ್ಗೆಯೂ ನೀವು ಇದೇ ನೀತಿ ಅನುಸರಿಸಿರುವಿರಿ. ಯಾವ ಕಾರಣಕ್ಕೂ ನಮ್ಮ ಪತ್ರಿಕೆ ಬಂಡವಾಳ ಗಾರರ ಕೈಗೊಂಬೆಯಾಗಬಾರದೆಂಬುದೇ ನನ್ನ ಮಹದಾಕಾಂಕ್ಷೆಯಾಗಿತ್ತು."

"ನಾನು ಯಾವ ಸ್ವಾತಂತ್ರ್ಯವನ್ನೂ ವಹಿಸಿಲ್ಲ ಸರ್. ಸಾಹುಕಾರರು ಹೇಳಿದಂತೆ ಬರೆದಿದ್ದೇನೆ."

"ಸಾಹುಕಾರರು ಹೀಗೆ ಅಭಿಪ್ರಾಯ ಬದಲಾಯಿಸಿದ್ದಾರೆಂದು ನೀವು ಫೋನ್ ಮೂಲಕ ನನಗೆ ನಂದೀಗೆ ತಿಳಿಸಬಹುದಾಗಿತ್ತು."

ವಿಶ್ವೇಶ್ವರಯ್ಯ ಕಸಿವಿಸಿಗೊಂಡು

"ಸಾಹುಕಾರರ ಪ್ರೇರಣೆಯಿಂದ ಪುಟ್ಟಣ್ಣ ಈ ಲೇಖನಗಳನ್ನು ಬರೆದಿದ್ದಾನೆಂದು ನಾನು ನಂಬುವುದಿಲ್ಲ ಸರ್."

"ಹಾಗಾದರೆ ನಾನು ಸುಳ್ಳು ಹೇಳುತ್ತಿದ್ದೇನೆಯೋ ?"

"ಹೊಸದರಲ್ಲಿ ಅಗಸ ಗೋಣಿ ಎತ್ತಿ ಎತ್ತಿ ಒಗೆದನಂತೆ! ಆದಷ್ಟು ಬೇಗ, ಶತಾಯುಗತಾಯ ನಿಮ್ಮನ್ನು ಸ್ಥಾನಭ್ರಷ್ಟರನ್ನಾಗಿ ಮಾಡಿ ಸಂಪಾದಕೀಯ ಗಾದಿ ಏರಬೇಕೆಂದು ಪುಟ್ಟಣ್ಣ ಬಯಸುತ್ತಿದ್ದ; ಅನಾಯಾಸವಾಗಿ ಪತ್ರಿಕೆ ಅವನ ಕೈಗೆ ಸಿಕ್ಕಿತು. ಬಂಡವಾಳ ಮನೋಭಾವದ ಮಾಲಿಕರ ಮನಸ್ಸಿಗೆ ಮೆಚ್ಚುಗೆಯಾಗುವಂತೆ ನಿಮ್ಮ ಅಭಿಪ್ರಾಯಗಳನ್ನು ತೀವ್ರವಾಗಿ ಖಂಡಿಸಿ ಲೇಖನಗಳನ್ನೂ ಬರೆದಿದ್ದಾನೆ."

"ಹಲ್ಲು ಹಿಡಿದು ಮಾತನಾಡು ವಿಶ್ವೇಶ್ವರಯ್ಯ"

ಎಂದು ಪುಟ್ಟಣ್ಣ ಪುಟಹಾಕಿದ ಚಂಡಿನಂತೆ ಎದ್ದು ನಿಂತ.

"ನಿನ್ನ ದುಷ್ಟಮನೋಭಾವ ನಾನು ಮೊದಲಿನಿಂದಲೂ ಬಲ್ಲೆ ಪುಟ್ಟಣ್ಣ. ರಾಘವಯ್ಯ, ಈಶ್ವರರಾಯ, ವಶಿಷ್ಠರ ಜತೆ ಸೇರಿಕೊಂಡು ನೀನು ಮಾಡುತ್ತಿದ್ದ ಒಳಸಂಚನ್ನೂ ಬಲ್ಲೆ - ಮೂರ್ತಿರಾಯರ ಬಗ್ಗೆ 'ಕಾಲ ದೂತ - ಯುಗವಾಣಿ' ಪತ್ರಿಕೆಗಳಲ್ಲಿ ಪ್ರಕಟವಾದ ಹೊಲಸು ಟೀಕೆಗಳಿಗೆ ನಿನ್ನ ಸಹಾಯವಿದ್ದುದನ್ನೂ ಬಲ್ಲೆ. 'ಜನಸಂದೇಶ' ಬಿಟ್ಟುಹೋದರೆ ಮೂರ್ತಿರಾಯರು ಉಪವಾಸವಿರುವುದಿಲ್ಲ. ಪತ್ರಿಕೆ ನಿನ್ನ ಕೈಸೇರಿದ ಕೆಲವು ದಿನಗಳಲ್ಲಿ ಭರತವಾಕ್ಯ ಹೇಳುತ್ತದೆಂಬುದನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೋ. ಹೊಟ್ಟೆಯ ಪಾಡಿಗಾಗಿ ಎಲ್ಲರೂ ದುಡಿಯಬೇಕು. ಆದರೆ ಮೂರ್ತಿರಾಯ ರಂಥ ಸಾತ್ವಿಕರ ವಿರುದ್ಧ ಪಿತೂರಿಮಾಡಿ ಹೊಟ್ಟೆ ಹೊರೆಯುವುದು ಪರಮ ನೀಚತನ."

"ಹೋಗಲಿ ಬಿಡಿ ವಿಶ್ವೇಶ್ವರಯ್ಯ. ಪುಟ್ಟಣ್ಣನವರದಾದರೂ ಏನು ತಪ್ಪು - ಮಾಲಿಕರ ಸಲಹೆಯನ್ನು ಅವರು ನಿರಾಕರಿಸಲು ಹೇಗೆ ಸಾಧ್ಯ?"

ಎಂದು ಎದ್ದಿದ್ದ ಬಿರುಗಾಳಿಯನ್ನು ಮೂರ್ತಿ ತಾತ್ಕಾಲಿಕವಾಗಿ ಉಪಶಮನ ಮಾಡಿದ.

ಮೂರ್ತಿಯ ಮನಸ್ಸಿಗೆ ಅತುಲ ವೇದನೆಯಾಗಿತ್ತು. ತಾನು ಕಟ್ಟಿದ ಸಂಸ್ಥೆಗೆ ಒದಗಿದ್ದ ಪಾಡು – ತನ್ನ ಕನಸಿಗೆ ಒದಗಿದ್ದ ಚಿಂತೆಯ ಜತೆಗೆ ಪುಟ್ಟಣ್ಣನಂಥವರ ನಡೆವಳಿಕೆ - ಮನೋಭಾವ ಅವನ ಹೃದಯವನ್ನು ಹಿಂಡಿತ್ತು.

ಪುಟ್ಟಣ್ಣ ಅನುಸರಿಸಿದ್ದ ನೀತಿಯಿಂದ ಮೂರ್ತಿಯ ಮುಂದೆ ಎರಡು ಪ್ರಮೇಯಗಳು ನಿಂತವು.

ಇನ್ನುಮೇಲೆ ಸಾಹುಕಾರರ ಅಭಿಮತವನ್ನನುಸರಿಸಿ ಪತ್ರಿಕೆ ನಡೆಸ ಬೇಕು - ಇಲ್ಲಿ ಬಾಳಬೇಕೆಂಬ ಇಚ್ಛೆಯಿದ್ದರೆ!

ಅದು ಸಾಧ್ಯವಿಲ್ಲದಿದ್ದರೆ ಪತ್ರಿಕೆಗೆ ಕೈಮುಗಿದುಬಿಡಬೇಕು.

ಮನಸ್ಸಿನ ಪ್ರಚಂಡ ಉಮ್ಮಳ ಸಹಿಸಲಾರದೆ ಮೂರ್ತಿಯೆದ್ದು ಗೋಪಾಲಶೆಟ್ಟರನ್ನು ಕಾಣಲು ಅವರ ರೂಮಿಗೆ ಹೋದ. ಮೂರ್ತಿ

ತಮ್ಮನ್ನು ಕಾಣಲು ಬರಬಹುದೆಂದು ನಿರೀಕ್ಷಿಸಿದ ಶೆಟ್ಟರು ಮೆಲ್ಲನೆ ಕಛೇರಿ ಬಿಟ್ಟು ಹೊರಟುಹೋಗಿದ್ದರು.

ಶೆಟ್ಟರನ್ನು ಕಾಣುವುದಕ್ಕೆ ಮೂರ್ತಿ ಮಾರನೆಯ ಬೆಳಿಗ್ಗೆ ಹತ್ತು ಗಂಟೆಯವರೆಗೆ ಕಾಯಬೇಕಾಗಿ ಬಂತು. ಹತ್ತು ಗಂಟೆಗೆ ಕಛೇರಿಗೆ ಬಂದವನೇ ನೇರವಾಗಿ ಶೆಟ್ಟರ ರೂಮಿಗೆ ಹೋದ.

ಶೆಟ್ಟರು ದೇಶಾವಾರದ ನಗೆ ಬೀರುತ್ತಾ

"ಬನ್ನಿ ಸ್ವಾಮಿ - ಕೂಡಿ - ಯಾವಾಗ ಬಂದಿರಿ - ನಿಮ್ಮ ಪ್ರವಾಸ ಹೇಗಾಯಿತು?"

ಎಂದು ಕುಶಲಪ್ರಶ್ನೆ ಮಾಡಿದರು.

ಶೆಟ್ಟರ ಪ್ರಶ್ನೆಗಳಿಗೆ ಉತ್ತರ ಕೊಡದೆ ಮೂರ್ತಿ

"ಶೆಟ್ಟರೇ, ಈ ನಾಲ್ಕು ದಿನಗಳ 'ಜನಸಂದೇಶ' ಓದಿರುವಿರಾ?" ಎಂದು ಕೇಳಿದ.

"ನಮ್ಮ ಪತ್ರಿಕೆ ನಾನು ಓದದೆ ಉಂಟೇ?"

"ಲೀಡರ್, ಸಬ್‌ಲೀಡರ್‌ಗಳನ್ನು ಪರಾಮರ್ಶಿಸಿರುವಿರಾ?"

"ಅವುಗಳನ್ನೂ ಓದಿದ್ದೇನೆ."

"ಅವುಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ನಿಮ್ಮದೆಂದು ಪುಟ್ಟಣ್ಣ ಹೇಳಿದರು."

"ಪುಟ್ಟಣ್ಣ ಹಾಗೆ ಹೇಳಿದರೇ?"

"ಅವರನ್ನೇ ಕರೆದು ಕೇಳಿ."

"ಅಗತ್ಯವಿಲ್ಲ"

"ನನ್ನ ಅಭಿಪ್ರಾಯಗಳಿಗೂ ಈಚೆಗೆ ಪ್ರಕಟವಾಗಿರುವ ಅಭಿಪ್ರಾಯಗಳಿಗೂ ತಾಳಮೇಳವಿಲ್ಲವಾಗಿದೆ."

"ಹಾಗೇಕೆ ಮಾಡಿದರು ಪುಟ್ಟಣ್ಣ"

"ನಿಮ್ಮನ್ನು ಮೆಚ್ಚಿಸಲು........ಈಗ ನಾನೇನು ಮಾಡಬೇಕು."

"ಪತ್ರಿಕೆ ಜವಾಬ್ದಾರಿ ವಹಿಸಿಕೊಳ್ಳಿ ಸ್ವಾಮಿ."

"ಪ್ರತಿಗಾಮಿ ಪತ್ರಿಕೆಗೆ ನಾನು ಮತ್ತೆ ಸಂಪಾದಕನಾಗುವುದೇ?"

"ಪುಟ್ಟಣ್ಣನ ಅವಿವೇಕಕ್ಕೆ ನಾನು ಹೊಣೆಯೇ?"

"ನಿಮ್ಮ ಹೊಣೆಗಾರಿಕೆ ಇಲ್ಲದಿದ್ದ ಪಕ್ಷದಲ್ಲಿ ನಾನು ಪುಟ್ಟಣ್ಣನ ಕೈಯಲ್ಲಿ ಕ್ಷಮಾಪತ್ರ ಬರೆಸುತ್ತೇನೆ. ಹಿಂದಿನ ನನ್ನ ಧೋರಣೆಯನ್ನೇ ಮುಂದುವರಿಸುತ್ತೇನೆ."

"ಕ್ಷಣಕ್ಷಣಕ್ಕೆ ಪತ್ರಿಕೆಯ ಧ್ಯೇಯ ಬದಲಾಯಿಸುವುದು ಒಳ್ಳೆಯದಲ್ಲ.

"ಹಾಗಾದರೆ......."

"ಈಗಿನ ನೀತಿಯನ್ನೇ ನೀವೂ ಅನುಸರಿಸಬೇಕು."

"ಸಾಧ್ಯವಿಲ್ಲವೆಂದರೆ!"

"ನಿಮ್ಮ ಇಷ್ಟ."

"ಮುಂಬಯಿಯಲ್ಲಿ ನೀವು ನನಗಿತ್ತ ವಾಗ್ದಾನ ಮರೆತಂತೆ ಕಾಣುತ್ತದೆ."

"ನೋಡಿ ಸ್ವಾಮಿ – ನಾನು ಪತ್ರಿಕೆ ಸ್ಥಾಪಿಸಿ, ಅದರ ಮೇಲೆ ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿರುವುದು ನಿಮ್ಮನ್ನು ಮೆಚ್ಚಿಸುವುದಕ್ಕಲ್ಲ. ಪತ್ರಿಕೆ ನನ್ನ ಕೆಲಸ ಕಾರ್ಯಗಳಿಗೆ ನೆರವಾಗಬೇಕೇ ವಿನಾ ನಿಮ್ಮ ತತ್ತ್ವ ಪ್ರತಿಪಾದನೆಗಲ್ಲ. ನಿಮ್ಮ ಮೇಲಿನ ಗೌರವದಿಂದ ನಾನು ಈವರೆಗೆ ಸುಮ್ಮನಿದ್ದೆ. ಇನ್ನುಮೇಲೆ ನೀವು ನನ್ನ ಧ್ಯೇಯವನ್ನೇ ಅನುಸರಿಸಬೇಕು."

"ಕ್ಷಮಿಸಬೇಕು ಶೆಟ್ಟರೇ – ನಾಲ್ಕು ಕಾಸಿನ ಆಸೆಗೆ ನಾನು ಆ ಮಟ್ಟಕ್ಕೆ ಇಳಿಯುವುದಕ್ಕೆ ಸಿದ್ಧವಾಗಿಲ್ಲ. ನನ್ನ ರಾಜೀನಾಮೆ ಅಂಗೀಕರಿಸಿ ನನ್ನನ್ನು ಬಿಡುಗಡೆ ಮಾಡಿ"

ಎಂದು ಹೇಳಿದವನೇ ಅಲ್ಲಿಂದೆದ್ದ.

ಗೋಪಾಲಶೆಟ್ಟರ ರೂಮು ಮೂರ್ತಿ ಬಿಟ್ಟುಬರುವುದನ್ನೇ ಕಾಯುತ್ತಿದ್ದ ವಿಶ್ವೇಶ್ವರಯ್ಯ, ಬಸಪ್ಪ, ಸಾಲಿಕ, ನಂಜಪ್ಪ ಅವನ್ನು ಸುತ್ತುಗಟ್ಟಿ

"ಏನಾಯಿತು ಸಾರ್" ಎಂದು ಕೇಳಿದರು.

"ನಾನು ರಾಜೀನಾಮೆ ಕೊಡುತ್ತೇನೆ. ಮಾಲಿಕರಿಗೂ ನನಗೂ ತೀವ್ರ ಭಿನ್ನಾಭಿಪ್ರಾಯ ಬಂದಿದೆ."

"ನಾವು ಮುಷ್ಕರ (Strike) ಹೂಡುತ್ತೇವೆ"

ಎಂದು ವಿಶ್ವೇಶ್ವರಯ್ಯ ಕೋಪದಿಂದ ನುಡಿದ.

"ಮಾಲಿಕರು ಹೇಳುವುದು ನ್ಯಾಯ ವಿಶ್ವೇಶ್ವರಯ್ಯ. ಪತ್ರಿಕೆಯ ಧ್ಯೇಯ ಮಾಲಿಕರನ್ನು ಅನುಸರಿಸುತ್ತದೆ. ಆ ಬಗ್ಗೆ ನಮಗೆ ಸಹಾನುಭೂತಿಯಿಲ್ಲದಿದ್ದರೆ ನಾವು ಪತ್ರಿಕೆ ಬಿಟ್ಟುಹೋಗುವುದೇ ಶ್ರೇಯಸ್ಕರ. ದಯೆಯಿಟ್ಟು ಮುಷ್ಕರದ ಯೋಜನೆ ಬಿಟ್ಟುಬಿಡಿ.—ಪುಟ್ಟಣ್ಣನವರಿಗೆ ಎಲ್ಲ ಸಹಕಾರ ನೀಡಿ ಪತ್ರಿಕೆ ನಡೆಸಿಕೊಂಡು ಬನ್ನಿ."

ಎಂದು ಹೇಳಿದವನೇ ಕಛೇರಿ ಬಿಟ್ಟು ಮನೆಗೆ ಬಂದ.

'ಜನಸಂದೇಶ'ಕ್ಕೂ ಮೂರ್ತಿಗೂ ಇದ್ದ ಋಣಾನುಬಂಧ ಕೊನೆಗಂಡಿತ್ತು.

ಮೂರ್ತಿ ಒಮ್ಮೆ ಕಛೇರಿಯನ್ನು ದಿಟ್ಟಿಸಿ ನೋಡಿ ನಿಟ್ಟುಸಿರುಬಿಡುತ್ತಾ

'ನನ್ನ ಕನಸು ಒಡೆಯಿತು.'

'ಜನಸಂದೇಶ – ಹಣಸಂದೇಶವಾಯಿತು.'

'ಇನ್ನು ಮುಂದೆ............'

'ಮುಂದಿನ ಯೋಜನೆ ಏತಕ್ಕೆ ? ತಾಯಿಯ ಸಂಕಲ್ಪವಿದ್ದಂತಾಗಲಿ'

ಎಂದು ಮನಸ್ಸು ಗಟ್ಟಿಮಾಡಿಕೊಂಡು ಮನೆ ಪ್ರವೇಶಿಸಿದ.

★

# ಗಾಜಿನಮನೆ

ವಿಚಾರಪ್ರಚೋದನವನ್ನೇ ಹೆಗ್ಗುರಿಯಾಗಿಟ್ಟುಕೊಂಡು ಶ್ರೀ **ಅ. ನ. ಕೃ** ಬರೆದ 'ಸಾಹಿತ್ಯರತ್ನ' ಕಾದಂಬರಿಯ ಮುಂದಿನ ಭಾಗವೇ **'ಗಾಜಿನಮನೆ'.** ಕನ್ನಡಸೇವೆ ಮಾಡಬೇಕೆಂಬ ಆಕಾಂಕ್ಷೆಯಿಂದ ಮುಂಬಯಿ ಬಿಟ್ಟು ಬಂದ ಮೂರ್ತಿ ಪಡುವ ಅವಸ್ಥೆ, ವೇದನೆಯ ಹೃದಯಂಗಮ ಚಿತ್ರವೇ 'ಗಾಜಿನಮನೆ'. ಈ ನಾಲ್ಕು ದಶಕಗಳಲ್ಲಿ ಕನ್ನಡ ಪತ್ರಿಕಾಪ್ರಪಂಚದಲ್ಲಿ ಆಗಿರುವ ಮಾರ್ಪಾಟು, ಸುಧಾರಣೆ; ಕನ್ನಡ ಪತ್ರಿಕೆಗಳ ರೀತಿನೀತಿ; ಅವುಗಳ ಮೇಲೆ ಪ್ರಭಾವ ಬೀರುವ ಹಲವು ಶಕ್ತಿಗಳ ಸಮಗ್ರಚಿತ್ರ 'ಗಾಜಿನಮನೆ'ಯಲ್ಲಿ ನಿರೂಪಿತವಾಗಿದೆ.

ಇತಿಹಾಸ, ಜೀವನವಿಮರ್ಶೆ, ಮನೋವಿಶ್ಲೇಷಣೆಗಳೆಲ್ಲ ದೃಷ್ಟಿಯಿಂದಲೂ 'ಗಾಜಿನಮನೆ' ಅ. ನ. ಕೃ ಅವರ ಕೃತಿರತ್ನಗಳಲ್ಲೊಂದೆಂದು ನಿಸ್ಸಂದೇಹವಾಗಿ ಹೇಳಬಹುದು.

ಸಮಕಾಲೀನ ಜೀವನದ ವಿವಿಧಪ್ರಕಾರ, ಪ್ರಭಾವಗಳನ್ನರಿಯಲಿಚ್ಛಿಸುವವರಿಗೆ 'ಗಾಜಿನಮನೆ' ರಸಗನ್ನಡಿಯಂತಿದೆ. ಅ. ನ. ಕೃ ಅವರ ಸಹಜಸುಂದರ ಸರಳಶೈಲಿ 'ಗಾಜಿನಮನೆ'ಯಲ್ಲಿ ನವನವೋನ್ಮೇಷಶಾಲಿನಿಯಾಗಿ ವಿರಾಜಿಸಿದೆ.

**ಅಶೋಕ ಸಾಹಿತ್ಯ, ಬೆಂಗಳೂರು-2**

ಮಾರಾಟದ ಪೂರ್ಣ ಹಕ್ಕುದಾರರು:

**ಸ್ಟ್ಯಾಂಡರ್ಡ್ ಬುಕ್ ಡಿಪೋ**

ಅವೆನ್ಯೂರೋಡ್, ಬೆಂಗಳೂರು-2

★